ಕಸ್ತೂರಿ

ಅಗಸ್ಟ್ 1991 ಬೆಲೆ: ರೂ. 3-00



ಚರ್ಚೆಯಂಗಳದಲ್ಲಿ 'ಕುಸುಮಬಾಲೆ'



ಲೋಕ ಶಿಕ್ಷಣ ಟ್ರಸ್ಟ್
ಗ್ರಂಥಮಾಲೆಯ ಪ್ರಕಟಣೆಗಳು
ಹುಬ್ಬಳ್ಳಿ-ಬೆಂಗಳೂರು

			ಬೆಲೆ
1.	ಶ್ರೀ ರಾಮದಾಸರು ಹೇಳಿದ ಕಥೆಗಳು	ಶ್ರೀ ಬಸಪ್ಪ ದಾನಪ್ಪ ಜತ್ತಿ	ರೂ. 12-00
2.	ಅಂತರಾತ್ಮನಿಗೆ	ಶ್ರೀ ರಂಗನಾಥ ದಿವಾಕರ	ರೂ. 5-00
3.	ಗೀತೆಯ ಗುಟ್ಟು	ಶ್ರೀ ರಂಗನಾಥ ದಿವಾಕರ	ರೂ. 15-00
4.	ಪುಟಾಣಿಗೆ ಶರಣರ ಕಥೆಗಳು	ಶ್ರೀಮತಿ ಜೆ.ವಿ.ಜಯಾ ರಾಜಶೇಖರ	ರೂ. 3-50
5.	ಮರಳಿ ಬಂದ ಮಧುರ ಮಾಸ	ಶ್ರೀಮತಿ ಜೆ.ವಿ.ಜಯಾ ರಾಜಶೇಖರ	ರೂ. 12-00
6.	ವಿಚಾರ ಜ್ಯೋತಿ	ಶ್ರೀ ಕೆ.ಟಿ.ಪಾಂಡುರಂಗಿ	ರೂ. 10-00
7.	ವಚನಗಳಲ್ಲಿ ಪ್ರತಿಮೆಗಳು	ಶ್ರೀಮತಿ ಉಷಾಕಿರಣ್	ರೂ. 25-00
8.	ಶಿಶುನಾಳ ಶರೀಫ ಸಾಹೇಬರು	ಶ್ರೀ ಶಿವಾನಂದ ಗುಬ್ಬಣ್ಣವರ	ರೂ. 15-00
9.	ನನಗೆ ನಾನೇ ಮಾದರಿ (ಆತ್ಮಕಥನ)	ಶ್ರೀ ಬಿ.ಡಿ.ಜತ್ತಿ	ರೂ. 40-00
10.	ಕೋಟ್ಯಧೀಶ್ವರರ ಪ್ರಪಂಚದಲ್ಲಿ 60 ದಿನ	ಶ್ರೀ ಎಸ್.ಪಿ.ಭಟ್ಟ	ರೂ. 20-00

ಪುಸ್ತಕ ದೊರೆಯುವ ಸ್ಥಳ:

ಸಂಯುಕ್ತ ಕರ್ನಾಟಕ ಪ್ರೆಸ್,
ಕೊಪ್ಪಿಕರ ರೋಡ್, ಹುಬ್ಬಳ್ಳಿ

ವಿ.ಸೂ:- ಒಂದೊಂದು ಪುಸ್ತಕದ ಕನಿಷ್ಠ 10 ಪ್ರತಿ, ಅದಕ್ಕಿಂತಲೂ ಹೆಚ್ಚು ಖರೀದಿಸಿದಲ್ಲಿ ಶೇ. 15ರಂತೆ ಕಮೀಶನ್ ಕೊಡಲಾಗುವುದು. ಅಂಚೆ ವೆಚ್ಚ ಪ್ರತ್ಯೇಕ.

'ಕಸ್ತೂರಿ'ಯ ಅರ್ಧವಾರ್ಷಿಕ ಪರಿವಿಡಿ

ಮಾರ್ಚ್ 1991ರಿಂದ ಅಗಸ್ಟ್ 1991ರವರೆಗೆ

ಕ್ರಮ: ಲೇಖನದ ಹೆಸರು, ಲೇಖಕರ ಹೆಸರು, ತಿಂಗಳು, ಪುಟ ಸಂಖ್ಯೆ

ಮಾ - ಮಾರ್ಚ್, ಎ - ಎಪ್ರಿಲ್, ಮೆ - ಮೇ, ಜೂ - ಜೂನ್,

ಜು - ಜುಲೈ, ಅ - ಅಗಸ್ಟ್

ಹರಟೆ-ನಾಟಕ-ಲಘುಬರಹ

ಕಸ್ತೂರಿ

ಕನ್ನಡ ಡೈಜೆಸ್ಟ್

ವರ್ಷ: 35

ಸಂಚಿಕೆ: 12

ಅಗಸ್ಟ್ 1991

ವ್ಯವಸ್ಥಾಪಕ ಸಂಪಾದಕ

ಕೆ. ಶಾಮರಾವ್

ಸಂಪಾದಕ

ಆರ್.ಎ. ಉಪಾಧ್ಯ

ನಿರ್ವಹಣೆ

ರವಿ ಬೆಳಗೆರೆ

ಮುಖಪುಟ ಚಿತ್ರ:

ಶ್ರೀರಾಮ ಸ್ಟುಡಿಯೊ, ಶಿರಸಿ

ಎಸ್. ತಿಪ್ಪೇಸ್ವಾಮಿ

ಕಸ್ತೂರಿ ಕಾರ್ಯಾಲಯ

ಕೊಪ್ಪೀಕರ ರಸ್ತೆ

ಹುಬ್ಬಳ್ಳಿ - 580 020

ಬೆಳಕಿಂಡಿ

★ *ದೇಹಕ್ಕೆ ತಲೆಯಿರಬೇಕು, ಮನೆಗೆ ಒಲೆಯಿರಬೇಕು, ಮಾತಿಗೆ ಬೆಲೆಯಿರಬೇಕು, ಜೀವಕ್ಕೆ ಕಲೆಯಿರಬೇಕು.*

- ಲೋಕೋಕ್ತಿ

★ *ಬಳಲಿದವರಿಗೆ ಕಲ್ಲಿನ ಮೇಲೆ ಮಲಗಿಸಿದರೂ ನಿದ್ರೆ ಬರುವುದು. ಆದರೆ ಕೆಲಸವಿಲ್ಲದ ಸೋಮಾರಿಗಳಿಗೆ ಮೃದುವಾದ ದಿಂಬು ಸಹ ಕಲ್ಲಾಗುತ್ತದೆ.*

- ವಿವೇಕಾನಂದ

★ *ಬುದ್ಧಿವಂತರು ಕೆಲವೇ ಮಾತುಗಳಲ್ಲಿ ಹೆಚ್ಚು ವಿಷಯವನ್ನು ತಿಳಿಸಿದರೆ, ಬುದ್ಧಿವಂತರಲ್ಲದವರು ಹೆಚ್ಚು ಮಾತುಗಳನ್ನಾಡಿಯೂ ಏನನ್ನೂ ಹೇಳರು.*

- ಡಿಸ್ರೇಲಿ

★ *ಸುಖವು ನೀರಿನ ಗುಳ್ಳೆಯಿದ್ದಂತೆ ನಾಜೂಕಾಗಿದೆ. ನಗು ನಗುತ್ತಿದ್ದಂತೆ ಒಡೆದುಹೋಗುತ್ತದೆ. ಆದರೆ ದುಃಖವು ಭದ್ರವೂ ಬಹುಕಾಲ ಬಾಳುವಂಥದೂ ಆಗಿದೆ.*

- ಟ್ಯಾಗೋರ

ಚಂದಾ ದರಗಳು

ಬಿಡಿ ಸಂಚಿಕೆ	.....	ರೂ.3-00
1 ವರ್ಷಕ್ಕೆ	ಅಂಚೆ ಸೇರಿ	ರೂ.34-00
2 ವರ್ಷಕ್ಕೆ	ಅಂಚೆ ಸೇರಿ	ರೂ.65-00
3 ವರ್ಷಕ್ಕೆ	ಅಂಚೆ ಸೇರಿ	ರೂ.100-00

ಚಂದಾದಾರರಿಗೆ ಸೂಚನೆ

'ಕಸ್ತೂರಿ' ತಿಂಗಳ 1ನೇ ದಿನಾಂಕದೊಳಗೆ ಪ್ರಕಟವಾಗುವುದು. ತಿಂಗಳ 5ನೇ ದಿನಾಂಕದೊಳಗೆ ತಲುಪದೇ ಹೋದರೆ ಚಂದಾದಾರರು ತಮ್ಮ ಟಪಾಲು ಕಟ್ಟೆಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು. ಪತ್ರ ವ್ಯವಹಾರ ಮಾಡುವಾಗ ಚಂದಾ ನಂಬರು ಹಾಕಿರಬೇಕು.

KASTURI

AUGUST 1991

ಓದುಗ ಚಿಂತನ

ಮಕರಂದ ಬಿಂದು

'ಆನಂದಕ್ಕೊಂದು ಮಕರಂದ ಬಿಂದು' ಲೇಖನದಲ್ಲಿ ನುಸುಳಿದ ಒಂದೆರಡು ತಪ್ಪು ಶಬ್ದಗಳ ಬಗೆಗೆ ಗಮನ ಸೆಳೆಯ ಬಯಸುತ್ತೇನೆ. ಜೀವದ್ರವ್ಯದ ಸರಿಯಾದ ಪದ ಆಂಗ್ಲ ಭಾಷೆಯಲ್ಲಿ Metabolism ಎಂದು ಬರೆದಿದೆ. ಆದರೆ Metabolismನ ಕನ್ನಡ ಪದ ಛಯಾಪಚಯ ಕ್ರಿಯೆ ಇಲ್ಲವೇ ಶರೀರಾಂತಃಪರಿವರ್ತನೆ ಎಂದಾಗಬೇಕು. ಬಟ್ಟಿ ಇಳಿಸುವುದು ಎಂಬ ಪದವು Fermentationಗೆ ಸಮನಾದ ಪದವಲ್ಲ. ಅದು 'ಹುಳಿಯುವಿಕೆ'ಗೆ ಸಮನಾದ ಪದ. ಬಟ್ಟಿ ಇಳಿಸುವುದಕ್ಕೆ ಸರಿಯಾದ ಪದ Distillation ಎಂದಾಗಬೇಕು. Food constituentಗೆ Metabolism ಎಂದು ತಪ್ಪಾಗಿ ಬರೆದಿರಬಹುದೇ?

ಮಣಿಪಾಲ — ಎ.ನಾಗಪ್ಪಯ್ಯ

ಪದಾರ್ಥ ಚಿಂತಾಮಣಿ

ಪಾಪಂ ಅವರು ತಮ್ಮ ಪದಾರ್ಥ ಚಿಂತಾಮಣಿ ಅಂಕಣದಲ್ಲಿ ತುಸು, ಚೂರು ಶಬ್ದಗಳನ್ನು ನಮ್ಮ ಬೃಹತ್ ಪರಿಷ್ಕೃತ ಕೋಶವೂ ಲಕ್ಷಿಸಿಲ್ಲ ಎಂದು ಬರೆದಿರುವರು. ಆದರೆ ಕ್ರಿಸ್ತವಾಸಿ ಆರ್.ಎಫ್.ಕಿಟ್ಟೆಲ್ ಅವರ ಕನ್ನಡ-ಇಂಗ್ಲೀಷ್ ನಿಘಂಟಿನಲ್ಲಿ ಈ ಎರಡೂ ಶಬ್ದಗಳಿವೆ. ಅವುಗಳಿಗೆ ಸ್ಪಷ್ಟ ಅರ್ಥಗಳನ್ನು ಈಗ್ಗೆ 95 ವರ್ಷಗಳ ಹಿಂದೆಯೇ ಬರೆದಿದ್ದಾರೆ. ಗೌರವಾನ್ವಿತ ಪಾಪಂ ಇದನ್ನು ಗಮನಿಸಬೇಕಿತ್ತು.

ವಿ.ಆರ್.ಪ್ರೊಜೆಕ್ಟ್ — ಶ್ರೀನಿವಾಸಶೆಡ್ಡಿ

ಕರ್ನಾಟಕದ ಪ್ರಸಿದ್ಧಿ?

'ಕರ್ನಾಟಕ ಎಂದರೇನು?' ಲೇಖನಕ್ಕೆ ಪೂರಕವಾಗಿ ನನ್ನದೊಂದು ಅನ್ನಿಸಿಕೆ: ಕರ್ಣ+ಎಟಕು=ಕರ್ನಾಟಕ. ಈ ಬಿಡಿ ಪದಗಳಲ್ಲಿ ಕರ್ಣ ಎಂದರೆ ಕಿವಿಯ ತಮಟೆ (ಶಬ್ದ ಕೇಳಿಸಿಕೊಳ್ಳುವಂತಹ ಸಾಧನ), ಎಟಕು ಎಂದರೆ ಒತ್ತು, ತಲುಪು, ಕೇಳಿಸಿಕೊಳ್ಳು ಎಂದಾಗುತ್ತದೆ. ಹೀಗೆ 'ಕರ್ನಾಟಕ' ಒಟ್ಟು ಪದದ ಅರ್ಥ ಕಿವಿಗೆ ಬೀಳು, ಕಿವಿಗೆ ಕೇಳು (ಪ್ರಸಿದ್ಧಿ ಪಡೆದ) ಎಂದಾಗುತ್ತದೆ.

ಕಿವಿಗೆ ಬೀಳು (ಪ್ರಸಿದ್ಧಿ ಪಡೆದ) ಎಂಬ ಅರ್ಥವನ್ನು ಇಲ್ಲಿ ಒತ್ತಿ ಹೇಳಲು ಕಾರಣವೇನೆಂದರೆ, 'ಶಬ್ದಾನುಶಾಸನ' ಗ್ರಂಥದಲ್ಲಿ ಕರ್ನಾಟಕ ಬಹಳ ಪ್ರಸಿದ್ಧಿ ಪಡೆದಿತ್ತು ಎಂಬುದನ್ನು ಉಲ್ಲೇಖಿಸಲಾಗಿದೆ. ಆದ್ದರಿಂದ 'ಕರ್ನಾಟಕ'ದ ಅರ್ಥ ಪ್ರಸಿದ್ಧಿ ಪಡೆದ ಎಂದಿರಬಹುದೇ?

ಕೆರೂರ — ಮಹಾಲಿಂಗಪ್ಪ ಯಂಡಿಗೇರಿ

ಕಸ್ತೂರಿ ಏಪ್ರಿಲ್ 1991ರ ಸಂಚಿಕೆಯಲ್ಲಿ ಲಂಬಾಣಿ ಜನಾಂಗದ ಕುರಿತಾದ ಲೇಖನದಲ್ಲಿ ('ಕಾಡಲೆದವರೀಗ ನಾಡಿಗೆ ಬಂದಿದ್ದಾರೆ') ಈ ಜನಾಂಗದ ಭಾಷೆಗೆ ಲಿಪಿ ಇಲ್ಲದಿರುವುದನ್ನು ಉಲ್ಲೇಖಿಸಲಾಗಿತ್ತು. ಬಣಜಾರ ಭಾಷೆಗೆ ಲಿಪಿ ಕಂಡುಹಿಡಿಯುವುದರಲ್ಲಿ ಅಪಾರ ಪರಿಶ್ರಮ ವಹಿಸಿರುವ ಎಚ್.ವಿಠಲಾನಾಯ್ಕ ಅವರು ನಮ್ಮನ್ನು ಸಂಪರ್ಕಿಸಿ ಲಿಪಿಯ ಮಾದರಿಯನ್ನು ಒದಗಿಸಿದ್ದಾರೆ. ಕನ್ನಡ ಅಕ್ಷರಗಳನ್ನು ಮೂಲವಾಗಿಟ್ಟುಕೊಂಡಿದ್ದರೂ ಇವರು ರಚಿಸಿರುವ ಲಿಪಿಯ ಸ್ವರೂಪ ಸಾಕಷ್ಟು ಭಿನ್ನವಾಗಿದೆ. ಈಗಾಗಲೇ ಕನ್ನಡದ ಪೂರ್ಣ ವರ್ಣಮಾಲೆ ಹಾಗೂ ಅಂಕೆಗಳನ್ನು ಬಣಜಾರ ಲಿಪಿಯಲ್ಲಿ ರೂಪಿಸಿರುವ ಇವರು ಇದೀಗ ಪತ್ರ ಪುಸ್ತಕಗಳನ್ನು ರಚಿಸುವುದರಲ್ಲಿ ತೊಡಗಿದ್ದಾರೆ. ಚಿತ್ರದುರ್ಗ ಜಿಲ್ಲೆಯ ವಿಠಲಾನಾಯ್ಕರಿಗೆ ತಾವು ಸೃಷ್ಟಿಸಿದ ಲಿಪಿಯನ್ನು ಬಳಕೆಗೆ ತರುವುದು ಹೇಗೆಂಬುದೇ ಒಂದು ಸಮಸ್ಯೆ! ಅವರ ವಿಳಾಸ: ಹ.ವಿಠಲಾನಾಯ್ಕ, ಪ್ರಾಥಮಿಕ ಆರೋಗ್ಯ ಕೇಂದ್ರ, ಸಿರಿಗೆರೆ - 577 541.

ಸ್ತುತ್ಯಾರ್ಹ ಡಾಕ್ಟರ್

ಜೂನ್ ಸಂಚಿಕೆಯಲ್ಲಿ ಬಂದ 'ರಾಷ್ಟ್ರೀಯ ದಾಖಲೆ ಸ್ಥಾಪಿಸಿದ ಕರ್ನಾಟಕದ ವೈದ್ಯ' ಲೇಖನ ವಿಸ್ಮಯಕಾರಿಯಾಗಿತ್ತು. ಶಸ್ತ್ರ ಚಿಕಿತ್ಸೆಯ ಕೊರತೆ

ಇದ್ದ ಗ್ರಾಮಾಂತರ ಭಾಗದಲ್ಲಿ ಅಮೋಘ ಸಾಧನೆ ಸಾಧಿಸಿದ ಡಾ. ಟೇಕಪ್ಪ ಅವರ ಕಾರ್ಯ ಸ್ತುತ್ಯಾರ್ಹವಾದುದು.

ಚಿಟಗುಪ್ಪಾ **ಅಂಬಲೆ ಬಾಬು**

(ಪಾವೆಂ ಅವರ ವಿಶ್ಲೇಷಣೆಯನ್ನು ಪೂರ್ಣ ಗ್ರಹಿಸದೆ ಶ್ರೀನಿವಾಸರೆಡ್ಡಿಯವರು ಅವಸರದಲ್ಲಿ ಪ್ರತಿಕ್ರಿಯಿಸಿದ್ದಾರೆಂದು ತೋರುತ್ತದೆ. ತುಸು, ಚೂರು ಪದಗಳಿಗೆ 'ಸ್ವಲ್ಪ' ಎಂಬ ಅರ್ಥವನ್ನು ಎಲ್ಲ ನಿಘಂಟುಗಳೂ ನೀಡುತ್ತವೆ. ಆದರೆ ಈ ಪದಗಳಿಗಿರುವ ದಯವಿಟ್ಟು (Please) ಎಂಬ ಅರ್ಥಛಾಯೆಯನ್ನು 'ಬೃಹತ್ ಪರಿಷ್ಕೃತ ಕೋಶವೂ ಲಕ್ಷಿಸಿಲ್ಲ' ಎಂಬುದು ಪಾವೆಂ ಅವರ ಅಭಿಪ್ರಾಯ. **- ಸಂ.**)

ಸೊಸೆಯಲ್ಲ ಮಗಳು!

ಜೂನ್ ಸಂಚಿಕೆಯ 'ಇದುವೆ ಜೀವ ಇದು ಜೀವನ' ಅಂಕಣದಲ್ಲಿ ಪ್ರಕಟವಾದ ಪತ್ರವೊಂದರ ಅಂತ್ಯದಲ್ಲಿ 'ಸೊಸೆ ಮೊಮ್ಮಗನನ್ನು ನೋಡಿದ ಮುದುಕಿ ....' ಎಂದಿದೆ. ಆದರೆ ಅದು 'ಮಗಳು ಮೊಮ್ಮಗ' ಎಂದಿರಬೇಕಿತ್ತು.

ತುಮಕೂರು **ಡಿ.ಎಸ್.ಅಶ್ವತ್ಥನಾರಾಯಣ**

'ಕಸ್ತೂರಿಯ'ಯ ಮೇ 1970ರ ಸಂಚಿಕೆಯಲ್ಲಿ ಪ್ರಕಟವಾಗಿದ್ದ ಪಿ.ಲಂಕೇಶರ 'ಸಿದ್ಧತೆ' ನಾಟಕವನ್ನು ಜೂನ್ 1991ರ ಸಂಚಿಕೆಯಲ್ಲಿ 'ಕಸ್ತೂರಿ ನಡೆದು ಬಂದ ದಾರಿ' ಅಂಕಣದಡಿ ಪುನರುದ್ಧರಿಸಲಾಗಿತ್ತು. ಪುನರ್ಮುದ್ರಣಕ್ಕೆ ಲೇಖಕರ ಪೂರ್ವಾನುಮತಿಯನ್ನು ಪಡೆಯಲಾಗದ್ದಕ್ಕೆ ವಿಷಾದಿಸುತ್ತೇವೆ. - ಸಂ

ಏಡ್ಸ್ ಬಗೆಗಿನ ಲೇಖನದ ಶೈಲಿಗೆ 'ವಾಹವ್ವಾ' ಎಂದು ಹೇಳಬೇಕೆನಿಸಿತು. ಕಸ್ತೂರಿಯ ಸಂಚಿಕೆ ಬಂದರೆ, ಈ ಹಿಂದೆ ತಿರುವಿ ಹಾಕುವುದಷ್ಟೆ ಆಗುತ್ತಿತ್ತು. ಈಗೀಗ ಸಾಕಷ್ಟು ಲೇಖನಗಳನ್ನು ಓದುತ್ತಿದ್ದೇನೆ.

ಹಳೆಯ ಸಂಚಿಕೆಗಳಿಂದ ಆಯುತ್ತಿದ್ದೀರಷ್ಟೆ. 'ಇದುವೆ ಜೀವ ಇದು ಜೀವನ'ದಿಂದ ಹಾಗೆ ಯಾಕೆ ಎತ್ತಿಕೊಳ್ಳಬಾರದು? ಅವು ಹೆಚ್ಚು ರುಚಿಕರ.

ಪುಣೆ **ಡಾ.ಶ್ರೀನಿವಾಸ ಹಾವನೂರ**

ಲೇಖಕರಿಗೆ ಸೂಚನೆ

ಕಸ್ತೂರಿಯಲ್ಲಿ ಪ್ರಕಟಣೆಗಾಗಿ ಕಳುಹಿಸುವ ಬರಹಗಳನ್ನು ಫುಲ್‌ಸ್ಕೇಪ್ ಹಾಳೆಯಲ್ಲಿ ಒಂದೇ ಮಗ್ಗುಲಿಗೆ ಸ್ಫುಟವಾಗಿ ಬರೆದಿರಬೇಕು. ಲೇಖಕರು ತಮ್ಮ ಹೆಸರು, ವಿಳಾಸಗಳನ್ನು ಸ್ಪಷ್ಟವಾಗಿ ತಿಳಿಸಬೇಕಲ್ಲದೆ, ಅನುವಾದ ರೂಪಾಂತರ ಇಲ್ಲವೆ ಸಾಧಾರ ಲೇಖನಗಳಾದರೆ ಅವುಗಳ ಮೂಲ ಲೇಖಕ ಹಾಗೂ ಪ್ರಕಾಶಕರ ಹೆಸರು, ವಿಳಾಸಗಳನ್ನೂ ಒದಗಿಸಬೇಕು. ಮೂಲ ಲೇಖಕರ ಅನುಮತಿ ಪಡೆದೇ ಲೇಖನಗಳನ್ನು ಕಳಿಸಿದರೆ ಅವುಗಳ ಬಗೆಗೆ ಬೇಗನೆ ನಿರ್ಣಯಕ್ಕೆ ಬರಲು ಸಾಧ್ಯವಾಗುತ್ತದೆ.

ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಲೇಖನಗಳ ಸಂಗಡವೇ ಅಗತ್ಯ ಅಂಚೆ ಚೀಟಿಯನ್ನೊಳಗೊಂಡ ಸ್ವವಿಳಾಸದ ಲಕೋಟೆಯನ್ನು ಕಳಿಸಿರಬೇಕು. ಲೇಖನ ಸ್ವೀಕೃತವಾದರೆ ಯಥಾವಕಾಶ ಪ್ರಕಟಿಸಿ ಸೂಕ್ತ ಸಂಭಾವನೆಯನ್ನು ನೀಡಲಾಗುವುದು.

''ಇದುವೆ ಜೀವ .....'' ಮೊದಲಾದ ಕಿರು ಬರಹಗಳನ್ನು ತಿರುಗಿ ಕಳಿಸಲು ಅಥವಾ ಆ ಬಗ್ಗೆ ಪತ್ರ ವ್ಯವಹಾರ ಮಾಡಲು ಸಾಧ್ಯವಿಲ್ಲ. 'ಸಹ ಚಿಂತನ' ವಿಭಾಗಕ್ಕಾಗಿ ಓದುಗರು ಬರೆದ ಪತ್ರಗಳು ಚಿಂತನಾರ್ಹ ಅಂಶವನ್ನೊಳಗೊಂಡಿರುವುದು ಅಗತ್ಯ.

- ಸಂಪಾದಕರು

ಈ ಸಂಚಿಕೆಯಲ್ಲಿ

ಪುಸ್ತಕ ವಿಭಾಗ

'ಕುಸುಮ ಬಾಲೆ'

ಡಾ. ಬಿ.ಎನ್. ಮಂಜುಳಾದೇವಿ

'ಕುಸುಮ ಬಾಲೆ' ಚರ್ಚೆಯಂಗಳದಲ್ಲಿ ನಲಿದಾಡಿದ ಅವಧಿಯನ್ನು ಎರಡು ಹಂತಗಳಾಗಿ ವಿಂಗಡಿಸಿಕೊಳ್ಳಬಹುದು. ಬಾಲೆಗೆ 'ಪ್ರಶಸ್ತಿ ಬರುವ ಮುನ್ನ' ಮತ್ತು 'ಬಂದ ನಂತರ'ದ ಹಂತಗಳು ಎಂದು. ಪ್ರಶಸ್ತಿಗೆ ಮುಂಚೆ ನಡೆದ ಚರ್ಚೆಯಲ್ಲಿ ವಸ್ತುನಿಷ್ಠತೆ, ಸಹೃದಯತೆ ಮತ್ತು ಎಚ್ಚರಗಳಿದ್ದವು. ಆನಂತರ ಶುರುವಾದದ್ದು ವಿಪರೀತ 'ಅಸಿದಿಟ'ಯಿಂದ ಕೂಡಿದ ವಾಗ್ವಾದ. ಬಾಲೆಯ ಪರ ಮತ್ತು ವಿರೋಧವಾಗಿ ನಿಂತ ಎರಡೂ ಬಣಗಳಲ್ಲಿ ಅತಿರೇಕಗಳಿದ್ದವು. ಚರ್ಚೆ ವಾಚಾಮಗೋಚರವಾದದ್ದು ಆಗಲೇ !

ಇಷ್ಟೆಲ್ಲ ನಡೆದ ನಂತರ 'ಬಾಲೆ' ಯ ಸೃಷ್ಟಿಕರ್ತ ದೇವನೂರ ಮಹಾದೇವ ತಮ್ಮ ಎಂದಿನ ಸಂಕೋಚ, ಸ್ಥಿತಪ್ರಜ್ಞತೆ ಮತ್ತು ಎಚ್ಚರಗಳನ್ನು ಉಳಿಸಿಕೊಂಡೇ ನಾಲ್ಕು ಮಾತು ಬರೆದರು ('ಶೂದ್ರ' ಮಾಸಿಕದಲ್ಲಿ). ಬಾಲೆಯ ಕಟ್ಟಾ 'ಕ್ರಿಟಿಕ್ಕು'ಗಳಾದ ಇಬ್ಬರು ಹಿರಿಯ ಲೇಖಕರಿಗೆ 'ಆ್ಯನ್ ಓಪನ್ ಲವ್ ಲೆಟರ್ ಟುಟು ಡಾರ್ಲಿಂಗ್ಸ್' ಎಂಬ ಹೆಸರಿಟ್ಟು ಪತ್ರವೊಂದನ್ನು ಬರೆದು ಅವರ ವಿಮರ್ಶೆಗಳನ್ನು ಒಪ್ಪಿಕೊಳ್ಳುತ್ತಲೇ ಅದರ ಹಿಂದಿನ ಎಳಸುತನ, ಕಕ್ಕುಲಾತಿಗಳನ್ನು ತಿರಸ್ಕರಿಸಿದರು.

ಬಿಡಿ, ಇವೆಲ್ಲ ಸಾಹಿತ್ಯ ಲೋಕದ ತಕರಾರುಗಳು. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಬಾಲೆಯ ಸೃಷ್ಟಿಕರ್ತ ದೇವನೂರರನ್ನು ಅವರ ಸಾಹಿತ್ಯಾಭ್ಯಾಸಿಯಾಗಿ, ಅದಕ್ಕಿಂತ ಹೆಚ್ಚು ಒಬ್ಬ ಮನಶ್ಶಾಸ್ತ್ರ ತಜ್ಞೆಯಾಗಿ ಮಾತಿಗೆಳೆದ ಡಾ. ಬಿ.ಎನ್. ಮಂಜುಳಾದೇವಿ ಅವರು 'ಕಸ್ತೂರಿ'ಗಾಗಿ ನಡೆಸಿದ ಸಂದರ್ಶನ ಇಲ್ಲಿದೆ.

ನಾನು ಮೊದಲ ಬಾರಿಗೆ 'ಕುಸುಮ ಬಾಲೆ' ಓದಿದಾಗ ಎಷ್ಟೋ ವಿಷಯಗಳು ಅರ್ಥವಾಗಿರಲಿಲ್ಲ. ವಿಮರ್ಶೆಗಳನ್ನೋದಿದ ನಂತರವೂ ಸಂದೇಹಗಳು ಉಳಿದವು. ಲೇಖಕನನ್ನೇ ಈ ಬಗ್ಗೆ ಕೇಳುವುದು ಸರಿ ಎನ್ನಿಸಿ ಮೈಸೂರಿನ ನವಿಲು ರಸ್ತೆಯ ಮಹಾದೇವರ ಮನೆಗೆ ಹೋದಾಗ ಎದುರಾದ ಅದೇ ಏರುಪೇರುಗಳಿಲ್ಲದ ಮುಗುಳ್ನಗೆಯ ಸ್ವಾಗತ. ಒಂದು ಕೃತಿಯ ಕುರಿತಾದ ವಿಮರ್ಶೆಯ ದೃಷ್ಟಿಕೋನಗಳು ಅದು ಗಳಿಸಿ ಪ್ರಶಸ್ತಿಯ ಹಿನ್ನೆಲೆಯಲ್ಲಿ ಹೇಗೆ ಏರುಪೇರಾಗುತ್ತವೆ ಎಂಬ ವಿಷಯ ನನ್ನ ಅರಿವಿ

ಬಂದದ್ದು 'ಬಾಲೆ' ಪ್ರಶಸ್ತಿ ಬಾಚಿಕೊಂಡ ನಂತರವೇ.

ಆದರ ಮಹಾದೇವ ವಿಮರ್ಶೆ, ಟೀಕೆ, ಹೊಗಳಿಕೆ, ಸನ್ಮಾನಗಳಿಂದ ಎಷ್ಟೂ ಬದಲಾಗದೆ ಹಾಗೇ ಇದ್ದರು. ಅದು ಅವರ ಮನಸ್ತತ್ವ. ಪ್ರಶಸ್ತಿ ಬಂದೊಡನೆ ಸಂಘ ಸಂಸ್ಥೆಗಳು ಸನ್ಮಾನ ಮಾಡಲು ನೀಡಿದ ಕರೆಗಳನ್ನು ನಯವಾಗಿ ತಿರಸ್ಕರಿಸಿದ್ದರು. ಆದರೆ ಚರ್ಚೆಗಳಿಗೆ ಸಿದ್ಧವಿದ್ದರು.

ಮೂಲತಃ ವಾಚಾಳಿಯಾದ ನಾನು ಮಿತಭಾಷಿಯಾದ ದೇವನೂರರನ್ನು ಮಾತಿಗೆ, ಚರ್ಚೆಗೆ, ಜಗಳಕ್ಕೆ ಎಳೆದುದನ್ನು ನಿಮ್ಮೆದುರಿಗಿಡುತ್ತಿದ್ದೇನೆ.

ನಾನು: ಪ್ರಶಸ್ತಿ ದೊರೆತಾಗ ಏನನ್ನಿಸಿತು?

ಮಹಾದೇವ: ನನಗಿಂತ ಹಿರಿಯ ಲೇಖಕರಿಗೆ ಬಾರದ್ದು ನನಗೆ ಬಂದಿದೆ. ಸಂಕೋಚಕ್ಕೆ ಈಡುಮಾಡಿದೆ.

ನಾನು: 'ಬಾಲೆ'ಗೆ ಪ್ರಶಸ್ತಿ ಬಂದ ನಂತರದ ವಿಮರ್ಶೆಗಳಿಗಿಂತ, ಅದಕ್ಕೆ ಮುಂಚೆ ಬಂದ ವಿಮರ್ಶೆಗಳೇ ನನಗೆ ಹೆಚ್ಚು ಹಿಡಿಸಿದವು. ನಿಮಗೆ?

ಮಹಾದೇವ: ಹೌದು, ನಂತರದ್ದವು ಪೂರ್ವಾಗ್ರಹಪೀಡಿತವಾಗಿ ಬಿಡುತ್ತವೆ. ಅನೇಕರು ತಮ್ಮ ಅನಿಸಿಕೆಗಳನ್ನು ಹತ್ಯೆ ಮಾಡಿಕೊಳ್ಳುತ್ತಾರೆ. ಅದು ಕೃತಿಗೂ ನನಗೂ ಆಗುವ ಅವಮಾನ. ಕುಸುಮಬಾಲೆಯು ಒಡಲಾಳಕ್ಕಿಂತ ಉತ್ತಮ ಇರಬಹುದೇನೋ ಎಂಬ ಅಂದಾಜಷ್ಟೆ ನನಗೂ ಇರುವುದು, ಅದಷ್ಟೆ.

ನಾನು: 'ಬಾಲೆ'ಯ ಬಗ್ಗೆ, ನಿಮ್ಮ ಬರವಣಿಗೆಯ ಬಗ್ಗೆ ಸಲ್ಲದ್ದನ್ನು ಆರೋಪಿಸಿ ಕೆಲವರು ಬರೆದರು. ನೀವು ಸಿಡಿಯುವುದಿಲ್ಲ ವೇಕೆ?

ಮಹಾದೇವ: (ಮುಗುಳ್ನಗೆ) ಸಿಡಿಯಬೇಕೇಕೆ? ಯಾರೋ ಅಂದರೆಂದು ನಾನೇಕೆ ನೊಂದುಕೊಳ್ಳಬೇಕು. ಏನೋ ಬರೆದರೆಂದು ಪ್ರತಿಕ್ರಿಯೆ ತೋರುತ್ತಾ ಕುಳಿತರೆ ಬೆಳವಣಿಗೆಗೆ ಅವಕಾಶವಿಲ್ಲ ಅಲ್ಲವೆ?


ನಾನು: ಏನೋಪ್ಪಾ, ನಾನಾಗಿದ್ದಿದ್ರೆ, ಖಂಡಿತಾ ಸುಮ್ನಿರ್ತಿರ್ಲಿಲ್ಲ. (ಜಗಳಕ್ಕೆಳೆದು ಸೋತದನಿ) ಇರ್ಲಿ, ದೂರದರ್ಶನದ ಸಂದರ್ಶನ ನಿಮಗೇನನ್ನಿಸಿತು?

ಮಹಾದೇವ: ಸ್ಟುಡಿಯೋದ ನಾಲ್ಕು ಗೋಡೆಗಳಿಂದಾಚೆಗೆ ನಡೆದ ಸಂದರ್ಶನವಾದ್ದರಿಂದ ಸಮಾಧಾನಕರ ಅನ್ನಿಸಿತು (ಮಾತು ಅಲ್ಲಿಗೇ ಮುಕ್ತಾಯಗೊಳಿಸುವ ದನಿ.)

ನಾನು: (ಛಲಬಿಡದೆ) ಅಲ್ಲ, 'ಬಾಲೆ' ಓದಿದ ನಂತರ ಉಂಟಾಗಬಲ್ಲ ಸಹಜ ಸಂದೇಹಗಳನ್ನು ಸಂದರ್ಶನ ನಿವಾರಿಸಲಾಗಲಿಲ್ಲ. ಅದು ಪ್ರಶಸ್ತಿ ವಿಜೇತ ಲೇಖಕನ ಸಂದರ್ಶನದಂತಿರದೆ ಒಬ್ಬ ದಲಿತಕವಿಯನ್ನೇ ಮನಸ್ಸಿನಲ್ಲಿಟ್ಟುಕೊಂಡು ನಡೆಸಿದಂತಿತ್ತು. ಒಬ್ಬ ಹಿಂದುಳಿದ ಜನಾಂಗದ ವ್ಯಕ್ತಿಯಾಗಿ ನೀವು ಮೂವತ್ತು ವರ್ಷಗಳ ಹಿಂದೆ ಬಹಳ ಕಹಿಯನ್ನೇನೂ ಉಂಡಿರಲಾರಿರಿ. ನಮ್ಮಪ್ಪ, ನಿಮ್ಮಪ್ಪನ ಬಾಲ್ಯದ ಬಗ್ಗೆ ಕೇಳುವಂತಹ ಪ್ರಶ್ನೆಗಳನ್ನು ನಿಮಗೆ ಕೇಳಿದರು ಅನ್ನಿಸ್ತು. ಇನ್ನೂ ಏನನ್ನಿಸ್ತು ಹೇಳ್ಲಾ?

ಮಹಾದೇವ: ಹೇಳಿ.

ನಾನು: ದೇವನೂರರ ಸಂದರ್ಶನ ಅನ್ನಿಸದೆ, ಅದು 'ಕುಸುಮ ಬಾಲೆ'ಯ ಪೆದ್ದಮಗು ಪರ್ಲಾದನ ಸಂದರ್ಶನವೋ, ದಲಿತ ಸಂಘದ ನಾಗರಾಜು ಸಂದರ್ಶನವೋ ಅನ್ನಿ



ಸಿತು. (ಅಂದುಬಿಟ್ಟೆ. ದೇವನೂರು ನಕ್ಕರು) ಅಷ್ಟೇ ಅಲ್ಲ, ಸಂದರ್ಶನದ ನಡುನಡುವೆ ತೋರಿಸಿದ 'ಕುಸುಮ ಬಾಲೆ' ನಾಟಕದ ದೃಶ್ಯಗಳು ಅನ್ವರ್ಥ ಪಾತ್ರಗಳಿಂದ ಕೂಡಿರಲಿಲ್ಲ. ಕತೆಯ ಪಾತ್ರಗಳಾದ ಕುಸುಮಾ, ಮಲ್ಲಾಜಮ್ಮ, ಗಾರೆಸಿದ್ದಾವ ಇವರೆಲ್ಲ ನೈಜವಾಗಿ ನಾಟಕದಲ್ಲಿ ಮೂಡಿ ಬರಲಿಲ್ಲ.

ಮಹಾದೇವ: (ತಡೆದರು) ಕಲ್ಪನೆ ಅಗಾಧವಾದ್ದು, ಅದರ ಸಮಕ್ಕೆ ಯಾವ ಮಾಧ್ಯಮವೂ ಯಶಸ್ವಿಯಾಗಲಾರದು ಅಲ್ವೆ?

ನಾನು: (ದನಿ ಏರಿತ್ತು) ಇಲ್ಲ, ಇಡೀ ಕಾದಂಬರಿಯ ಕೇಂದ್ರವೇ ಎನ್ನಬಹುದಾದ ಈರಿಯ ರೋಗಗ್ರಸ್ತ ಮಗುವಿನ ಭೂತತೃಪ್ತಿಗಾಗಿ ನಡೆಸುವ ಆಚರಣೆಯ ದೃಶ್ಯವಿದೆ ನೋಡಿ, ಅದನ್ನು ನೀವು ಮೂಡಿಸಿದಷ್ಟೇ ನೈಜವಾಗಿ ದೃಶ್ಯ ಮಾಧ್ಯಮದಲ್ಲಿ ಪ್ರತಿಫಲಿಸುವುದು ಕಷ್ಟ ಎಂದು ನಾನೊಪ್ಪುವುದಿಲ್ಲ (ಒಪ್ಪಲೇ ಬಾರದೆಂಬ ನಿರ್ಣಯದಲ್ಲಿ.)

ಮತ್ತೆ ನಾನು: ಅಂದ್ಹಾಗೆ, ಮಗುವಿನ ಭೂತತೃಪ್ತಿಯ ಆಚರಣೆಯ ದೃಶ್ಯ ಅಷ್ಟೊಂದು ನೈಜವಾಗಿ ಮೂಡಿಸಿದ್ದಿರಲ್ಲಾ, ಎಷ್ಟು ಸಲ ಅಂಥ ಆಚರಣೆಯನ್ನು ನೋಡಿದ್ದೀರಿ? ತುಂಬ ಗಮನಿಸಿದ್ದೀರಲ್ಲ?

ಮಹಾದೇವ: ಇಲ್ಲ, ಅದನ್ನ ನಾನು ನೋಡಿಯೇ ಇಲ್ಲ. ಕೇಳಿ ತಿಳಿದದ್ದು, ಅಷ್ಟೆ

ನಾನು: ಅಧ್ಸರಿ, ಮಗು ಸತ್ತ ಕೂಡಲೆ 'ನಗುಲೇಪಿಸಿದ ಈರಿಯ ಮೊಕ' ಅಂತ ಬರೆದಿದ್ದೀರಲ್ಲ? ಇದು ಎಂಥ ನಗು?

ಮಹಾದೇವ: ಅದು ಅರೆ ಹುಚ್ಚು. ಇರ ಒಂದೇ ನಂಬಿಕೆಯ ಬುಡ ಕಳೆದು ನಿರಾ ಯಿಂದ ಉಕ್ಕುವ ಹುಚ್ಚುನಗು.

ನಾನು: ಹಾಂ, ಮನೋರೋಗದ ಆರಂಭದಲ್ಲಿ ಇಂಥ ನಗು, ಶೂನ್ಯನೋಟ ತಲೆದೋರುತ್ತೆ. ಇದು ಮತ್ತು ಕುಸುಮಳ ಹುಚ್ಚು ತುಂಬ ನೈಜವಾಗಿ ಚಿತ್ರಿಸಿದ್ದೀರಿ. ಬರೆಯೋ ಮುಂಚೆ ಮನೋರೋಗ ಶಾಸ್ತ್ರದ ಪುಸ್ತ ಓದಿದ್ದೀರಾ? (ಚರ್ಚೆ ನನ್ನ ಸಬ್ಜೆಕ್ಟಿಗೆ ತಿರುಗಿದ ಖುಷಿಯಲ್ಲಿ)

ಮಹಾದೇವ: ಇಲ್ಲ, ನನಗೆ ಗೊತ್ತಿರುವ ಬರೆದೆ.

ನಾನು: 'I want to be in my hous ಅಂತಾಳಲ್ಲ, ಅದನ್ನ ಹೇಳಿ?

ಮಹಾದೇವ: ಆವಾಹನೆ ಆದವರು ಪ ಭಾಷೆಯಲ್ಲಿ ಮಾತಾಡುವುದನ್ನು ಕೇಳಿದ್ದೇ ಇದಕ್ಕೆ ನೀವು ಡಾಕ್ಟರುಗಳು ವಿವರ ಕೊಡ್ತೀರಿ. ಆದರೆ ಕಾದಂಬರಿಯಲ್ಲಿ ನಾ ಹೇಳಬಯಸಿದ್ದು ಇಷ್ಟೆ, ಅವಳ ಸು ಮನಕ್ಕೆ ಇದು ನನ್ನ ಮನೆಯಲ್ಲ ಎನ್ನಿಸಿತ

ಅದಕ್ಕೇ ಹಾಗನ್ನಿಸಿದೆ.

ನಾನು: ಕರೆಕ್ಟ. ಹಿಸ್ಟೀರಿಕಲ್ ಸೈಕೋಸಿಸ್ ವ್ಯಕ್ತಿಯ ಜೀವನದಲ್ಲಿ ತಡೆಯಲಾಗದ ಮಾನಸಿಕ ಒತ್ತಡ ಉಂಟಾದಾಗ ಆಗುವ ಮನೋವಿಕಲ್ಪ. ಇಂಥ ಪರಭಾಷೆಯ ಮಾತು, ಕಾಣದ ವ್ಯಕ್ತಿಯ ವರ್ಣನೆ ಮುಂತಾದವುಗಳಿಂದಲೇ ಆ ರೋಗಿ ದೆವ್ವವೋ ದೇವರೋ ಆಗಿ ಚಿಕಿತ್ಸೆಯಿಂದ ವಂಚಿತಳಾಗುತ್ತಾಳೆ. ಅಂತೆಯೇ ಕೆಂಪಿಯ ಗರ್ಭ ಮೂರು ತಿಂಗಳಿಗಿಂತ ಹೆಚ್ಚು ಉಳಿ ದುದ್ದನ್ನು ಅವಳಮ್ಮನಾದ ತೂರಮ್ಮ ಯಾವುದೋ ಗಾಳಿದೆವ್ವ ತನ್ನ ಮಗಳ ಗರ್ಭ ವನ್ನು ನುಂಗಿ ನೀರು ಕುಡಿತಿದೆಯೆಂದು ನಂಬುತ್ತಾಳೆ. ಇಂಥದನ್ನು ಬಹಳ ಮನೋ ಜ್ಞವಾಗಿ ಬರೆದಿದ್ದೀರಿ.

ಮಹಾದೇವ: ನಾನು ಅಷ್ಟೇನೂ ಆಳವಾಗಿ ಈ ಬಗ್ಗೆ ಯೋಚಿಸಿ ಬರೆಯಲಿಲ್ಲ. ಒಟ್ಟಾರೆ ಮದುವೆಯಾಚೆಗಿನ ಸಂತಾನಗಳ ಸೃಷ್ಟಿ ಯಲ್ಲಿ ಕಿಟ್ಟಯ್ಯ, ಕೆಂಪಿ, ಚೆನ್ನ, ಕುಸುಮಾ, ಅವಳ ಗಂಡ ಅದಕ್ಕೂ ಮೂಲದಲ್ಲಿ ಅಕ್ಕ ಮಹಾದೇವಮ್ಮ ಇವರುಗಳ ಪಾತ್ರವಿದೆ.

ನಾನು: ಮಹಾದೇವ, ಕುಸುಮ-ಮಲ್ಲಾ ಮ್ಮ ಮುಂತಾದ ತರುಣಿಯರ ಪಾತ್ರಗಳಿ ಗಂತ ಮುದುಕಿ ತೂರಮ್ಮನ ಪಾತ್ರದ ವರ್ಣನೆಗೆ ನಿಂತಾಗ ನೀವು ಹೆಚ್ಚು ಕಲಾತ್ಮ ಕರಾಗುತ್ತೀರಿ. ಯುವ ಲೇಖಕನ ಲೇಖನಿ ಯಿಂದ ಮೂಡಿಬಂದ ಈ ಚಿತ್ರಣ ಅವನಿ ರುವ ವಿಶೇಷ ಒಲವಿನ ಕಾರಣವೆನಿಸು ದೆ. ಅಲ್ಲವೆ?

ಮಹಾದೇವ: ನಿಜ. ಒಳ್ಳೆ ಅಂಶ ಕಂಡು ಹಿಡಿದಿದ್ದೀರಿ. ಎಳೆಯ ಪ್ರಾಯದವರಿಗಿಂತ ವೃದ್ಧ ವೃದ್ಧೆಯರ ಬದುಕುಗಳು ನನ್ನನ್ನು ಹೆಚ್ಚು ತಟ್ಟುತ್ತವೆ. ಅತೀವ ಉತ್ಸಾಹದಿಂದ



ಅವರನ್ನು ಬರೆಯುತ್ತೇನೆ.

ನಾನು: ಉಳಿದ ಪಾತ್ರಗಳಾದರೂ ಅಷ್ಟೇ ಜೀವಂತವಾಗಿ ಮೂಡಿ ಬಂದಿವೆ. ಆ ಪಾತ್ರ ಗಳಲ್ಲಿ ಕಲ್ಪನೆಗಳ್ಯಾರು? ನೀವು ಕಂಡವ ರ್‍ಯಾರು ಹೇಳ್ತೀರಾ?

ಮಹಾದೇವ: ಹೀರೋ ಗಾರೆಸಿದ್ದಾವ ಇದ್ದಾನೆ. ದಲಿತ ಸಂಘದ ನಾಗರಾಜು ನಮ್ಮ ನಡುವೆ ಇದಾರೆ. ಉಳಿದವು ನನ್ನ ಸೃಷ್ಟಿಗಳು.

ನಾನು:ನಿಮ್ಮ ಕಾದಂಬರಿಯಲ್ಲಿ ನಿಮಗೆ

ತುಂಬ ಇಷ್ಟವಾದ ಪ್ರಸಂಗ ಯಾವುದು?

ಮಹಾದೇವ: ಅದೇ.... ನೀವು ಈ ಮುಂಚೆ ಕೇಳಿದ ಮಗುವಿನ ಭೂತ ತೃಪ್ತಿಯ ಆಚರಣೆಯ ದೃಶ್ಯ. ಅದಲ್ದೆ ಅಕ್ಕ ಮಹಮಹಾದೇವಮ್ಮ ಯಾದರು ಗೋಮಾಳದಲ್ಲಿ ಬಿಸುಡಲ್ಪಟ್ಟಾಗ ಮಾನವರೆಲ್ಲ ಕಡೆಗಣಿಸಿದರೂ ಭೂಮಿತಾಯಿ ತನ್ನೆರಡು ರೆಕ್ಕೆಗಳನ್ನು ತೆಂಗಿನಗರಿಯ ರೂಪದಲ್ಲಿ ತರುವಂತಾಗಿ ಅವರಿಗೆ ನೆರಳು ನೀಡಿದಳು ಎನ್ನುವ ವರ್ಣನೆ ನನಗೆ ಬಹಳವಾಗಿ ಹಿಡಿಸಿತು.

ನಾನು: ನಿಮ್ಮ ಬರವಣಿಗೆಯಲ್ಲಿ ನಂಜನಗೂಡಿನ ದಲಿತ ಭಾಷೆ ಬಳಸುವ ಬದಲು ಸರಳಗನ್ನಡದಲ್ಲೇ ಬರೀಬೇಕಾಗಿತ್ತು ಎಂಬ ಭಾವನೆ (ಕೆಲವು ವಿಮರ್ಶೆಗಳನ್ನು ಕಂಡನಂತರ) ಏನಾದರೂ ಬಂದಿತ್ತೆ?

ಮಹಾದೇವ:ಖಂಡಿತ ಇಲ್ಲ. ನಾನು ಮನಸೊಪ್ಪಿದ ರೀತಿಯಲ್ಲಿ ಬರೆದೆ. ಅದಕ್ಕಾಗಿ ಪಶ್ಚಾತ್ತಾಪವಾಗಲೀ ವ್ಯಥೆಯಾಗಲೀ ಇಲ್ಲ.

ನಾನು: ಸಂತೋಷ. ಆ ಭಾಷೆ ಬಳಸದೆ ಇದ್ದಿದ್ರೆ ನಿಮ್ಮ ಕಾದಂಬರಿ ಇಷ್ಟೊಂದು ಯಶಸ್ವಿಯಾಗ್ತಿರ್ಲಿಲ್ಲ ಅಂತ ನಂಗೂ ಅನ್ನಿಸ್ದೆ. ಅಂಥ ಆಡುಭಾಷೆಯಲ್ಲೇ ನವರಸಗಳು ಉಕ್ಕಿವೆ. ನಿಮ್ಮನ್ನ ನೀವೇ ಜೋಕು ಮಾಡಿಕೊಳ್ಳುವದೂ ಅದ್ಭುತವಾಗಿ ಒಡಮೂಡಿದೆ. (ಸುಮ್ಮನಿದ್ದರು)

ಹೊಗಳಿಕೆ ಬಂದ ಕೂಡಲೆ ಮಾತು ಬದಲಿಸುವ ಸ್ವಭಾವದ ಮಹಾದೇವರನ್ನು ಮತ್ತೆ ನನ್ನ ಸಬ್ಜೆಕ್ಟಾದ ಮನೋರೋಗ ಶಾಸ್ತ್ರದ ಕಡೆ ತಿರುಗಿಸಿದೆ. 'ಬಾಲೆ'ಯ ಪಾತ್ರಗಳ ನಡುವೆ ಮೂಡಿ ಬಂದ 'ಪರ್ಸಾದ' ಎಂಬ ಬುದ್ಧಿಮಾಂದ್ಯ ಹುಡುಗನ ಬಗ್ಗೆ ಮಾತಾಡಿದೆ.

ಬಹಳ ವಯಸ್ಸಾದ ದಂಪತಿಗಳಿಗೆ ಏಳನೆಯದಾಗಿಯೋ ಎಂಟನೆಯದಾಗಿಯೋ ಹುಟ್ಟುವ ಮಗು ಬುದ್ಧಿ ಮಾಂದ್ಯತೆಗೊಳಗಾಗುವ ಸಾಧ್ಯತೆಯುಂಟು. ಅಂತೆಯೇ ಒಲ್ಲದ ಗರ್ಭ ಕೆಡವಿಕೊಳ್ಳಲು ತೆಗೆದುಕೊಳ್ಳುವ ವಿವಿಧ ಔಷಧಿಗಳು ದುಷ್ಪರಿಣಾಮ ಬೀರಿ, ಅಷ್ಟಾದರೂ ನಾಶವಾಗದೆ ಉಳಿದು ಹುಟ್ಟಿಬಿಡುವ ಮಗು ಬುದ್ಧಿ ಮಾಂದ್ಯಕ್ಕೊಳಗಾಗುತ್ತದೆ. ಈ ಎಲ್ಲ ಸಾಧ್ಯತೆಗಳೂ ಏಕೀಭವಿಸಿ ಪ್ರಕೃತಿಯ ವರಪ್ರಸಾದವಾಗಿ ಮೂಡಿ ಬಂದ 'ಪರ್ಸಾದ' ಉಣ್ಣುವ ಫಲದಲ್ಲಿ 'ಒಡೆ'ಯಾಗಿ (ಬಲಿಯಲಾಗದ ಎಳೆಯ ಹೀಚುತೆನೆ) ನಿಂತ ಎಂಬ ವರ್ಣನೆ ತುಂಬ ನೈಜವಾಗಿದೆ. ಇಂಥ ಮಕ್ಕಳ ನಾಲಿಗೆ ಕಣ್ಣು ಬಾಯಿ ಮತ್ತು ರೆಪ್ಪೆಗಳು ಅಳತೆಗಿಂತ ದೊಡ್ಡವಾಗಿದ್ದು ಕಣ್ಣು, ಬಾಯಿ ಸದಾ ತೆರೆದುಕೊಂಡಿರುತ್ತವೆ. ಅವ್ಯಾಹತವಾಗಿ ಜೊಲ್ಲು ಸುರಿಯುತ್ತದೆ. ಕಣ್ಣು ಮಿಳುಕಿಸಲಾಗದ ದುರ್ಬಲತೆಯಿರುತ್ತದೆ. ಆ ಬೆಳೆಯದ ಬುದ್ಧಿಗೆ ತಾನು ಕಂಡ ದೃಶ್ಯಗಳೇ ಪ್ರಪಂಚವಾಗುತ್ತವೆ. ಅಂತಹ ಮಗುವಾದ ಪರ್ಸಾದ ಅಕ್ಕನ ಮಗು, ಅಕ್ಕ, ಸೀರೆ, ಮರ ಇತ್ಯಾದಿಗಳದೇ ಆದ ಸೀಮಿತ ಜಗತ್ತಿನಲ್ಲಿ ಓಲಾಡುತ್ತಾನೆ. ಇವೆಲ್ಲ ವಿವರಗಳನ್ನು ಗರ್ಭಿಸಿಕೊಂಡು ಬೆಳೆಯುವ ಪಾತ್ರ ಓದುಗರಲ್ಲಿ ಕರುಣೆ ಹುಟ್ಟಿಸುತ್ತದೆ. ಅದೊಂದು ಮೂಕ ಜೀವದ ಪ್ರತಿನಿಧಿ!

ಮತ್ತೆ ಕೆಲವು ಕಡೆ ದೇವನೂರರ ಬರವಣಿಗೆ ಫ್ರಾಯ್ಡ್‌ನ ಮನೋ ವಿಶ್ಲೇಷಣೆಗೆ ಹತ್ತಿರವಾಗುತ್ತದೆ. ಮನುಷ್ಯ ಸಂಬಂಧ ಮತ್ತು ಸ್ವಭಾವಗಳ ಸಂಕೀರ್ಣತೆಯನ್ನು ಚೆನ್ನಾಗಿ ಬಲ್ಲವನು ಮಾತ್ರ ಈ ತೆರನಾದ ಪಾತ್ರ, ಘಟನೆಗಳ ಸೃಷ್ಟಿಕರ್ತನಾಗಬಲ್ಲ.

ಇದೆಲ್ಲ ಮಹಾದೇವರಿಗೆ ಹೇಳಿದೆ. ಮತ್ತೆ ನಕ್ಕರು. •

ಮಹಾದೇವ: ನೋಡಿ, ಇಷ್ಟೆಲ್ಲಾ ನಾನು ತಿಳಿದುಕೊಂಡು ಬರೆಯಲಿಲ್ಲ. ಆದರೂ ಇದನ್ನೆಲ್ಲ ಕೇಳಿದ ಮೇಲೆ ಬರವಣಿಗೆಯ ಬಗ್ಗೆ ಮತ್ತಷ್ಟು ಸಮಾಧಾನವಾಗಿದೆ.

ನಾನು: ಕಾದಂಬರಿಯ ಕೇಂದ್ರ ವಸ್ತು ವಿಶಿಷ್ಟ ಹಾಗೂ ಸುಂದರವಾದದ್ದು. ಎಷ್ಟು ಸರಳವೋ ಅಷ್ಟೇ ಸಂಕೀರ್ಣ, ಎಷ್ಟು ಸಹಜವೋ ಅಷ್ಟೇ ಪ್ರಬುದ್ಧ. ಇದಕ್ಕೆ ಕಾರಣ ನಿಮ್ಮ ಸಮತೋಲನ ಕಳೆದುಕೊಳ್ಳದ ಪ್ರಾಮಾಣಿಕತೆ ಮತ್ತು ಎಲ್ಲೆ ಮೀರದ ಚಿಂತನ ಧಾರೆ. ಹೌದೆ?

ಮಹಾದೇವ: ನೀವು ನನ್ನ ಪುಸ್ತಕವನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದೀರಿ. ಅಷ್ಟೇ ಚೆನ್ನಾಗಿ ಅದರ ಬಗ್ಗೆ ಮಾತಾಡಿದಿರಿ. ಒಬ್ಬ ಲೇಖಕನಿಗೆ ಇದಕ್ಕಿಂತ ಸನ್ಮಾನ, ತೃಪ್ತಿ ಬೇಕೆ? ಅಂದು ಮಾತು ಮುಗಿಸಿದರು.

35 ವರ್ಷಗಳ ನಂತರ ಕಂಡ ಮಗಳು

ಭಾರತದ ವಿಭಜನೆಯು ಕೇವಲ ದೇಶನ್ನಷ್ಟೇ ಅಲ್ಲ; ಬಹಳಷ್ಟು ಕುಟುಂಬಗಳನ್ನೂ ವಿಭಜಿಸಿತು. ಮಕ್ಕಳು ಭಾರತದಲ್ಲಿ ಉಳಿದರೆ, ತಂದೆ ತಾಯಿಗಳು ಪಾಕಿಸ್ತಾನದಲ್ಲಿ ಉಳಿದುಕೊಂಡರು. ಅದೇ ರೀತಿಯಾಗಿ ಅಮಾಯಕ ಮಕ್ಕಳು ಪಾಕಿಸ್ತಾನದಲ್ಲಿ ಉಳಿದಿದ್ದರೆ ದುರ್ದೈವೀ ತಂದೆ ತಾಯಿಗಳು ಭಾರತದಲ್ಲಿ ಉಳಿದರು. ಹಾಗೆ ದೂರಾಗಿದ್ದ 72 ವರ್ಷ ವಯಸ್ಸಿನ ಹೋತಾರಾಮ್ ಮತ್ತು ಅವನ 65 ವರ್ಷ ವಯಸ್ಸಿನ ಪತ್ನಿ ಶ್ರೀಮತಿ ಲಾಜೋ ಸಚದೇವರು 35 ವರ್ಷಗಳ ಹಿಂದೆ ಕಳೆದುಕೊಂಡಿದ್ದ 12 ವರ್ಷದ ಮಗಳು ರಾಜಕುಮಾರಿಯನ್ನು ಆಕೆಯ 47ನೇಯ ವಯಸ್ಸಿನಲ್ಲಿ ಭೆಟ್ಟಿಯಾದರು.

ಮಗಳನ್ನು ತಂದೆ ತಾಯಿಗಳಿಗೆ ಭೆಟ್ಟಿ ಮಾಡಿಸಿದ ಶ್ರೇಯಸ್ಸು ಇಂಡೋಪಾಕ್ ಪ್ರೇಮ್ ಲೀಗಿನ ಜಮ್ನಾದಾಸ್ ಅಖ್ತರ್‌ರಿಗೆ ಸೇರಬೇಕು. ಈ ರಾಜಕುಮಾರಿಯು ತನ್ನ ಹನ್ನೆರಡನೆಯ ವಯಸ್ಸಿನಲ್ಲಿ ತಂದೆ ತಾಯಿಗಳಿಂದ ಅಗಲಿದಳು. ಆಗ ಓರ್ವ ತರುಣನು ಆ ಬಾಲೆಯನ್ನು ತನ್ನ ಶಿಕ್ಷಕನ ವಶಕ್ಕೆ ಒಪ್ಪಿಸಿದ. ಆ ಶಿಕ್ಷಕನು ಅವಳನ್ನು ತನ್ನ ಮಗಳಂತೆಯೇ ಜೋಪಾನ ಮಾಡಿದ. ವಾರಸುದಾರರ ಸುಳಿವು ಸಿಗದಿದ್ದಕ್ಕೆ ಆಕೆಗೆ ಗುಲಾಂ ಫಾತಿಮಾ ಎಂದು ನಾಮಕರಣ ಮಾಡಿದ. ಆ ನಂತರ, ಹಾಫೀಜ್ ಅಹ್ಮದ್‌ಖಾನ್ ಎಂಬವನೊಂದಿಗೆ ಮದುವೆ ಮಾಡಿದ.

ಈಗ ಫಾತಿಮಾ ಮೂರು ಗಂಡು ಹಾಗೂ ಮೂರು ಹೆಣ್ಣು ಮಕ್ಕಳ ತಾಯಿಯಾಗಿದ್ದಾಳೆ. ಆಕೆಯ ಕಿರಿಯ ಮಗ ಯುಸೂಫ್ ಎಂ.ಬಿ.ಬಿ.ಎಸ್. ವಿದ್ಯಾರ್ಥಿ. ಅವನು ತನ್ನ ಸತತ ಪ್ರಯತ್ನ ಹಾಗೂ ಇಂಡೋಪಾಕ್ ಪ್ರೇಯ್ ಲೀಗಿನ ಜಮ್ನಾದಾಸರ ಸಹಾಯದಿಂದ ಅಜ್ಜ-ಅಜ್ಜಿಯನ್ನು ಶೋಧಿಸುವಲ್ಲಿ ಕೊನೆಗೂ ಯಶಸ್ವಿಯಾದ.

ಹನ್ನೆರಡನೆಯ ವಯಸ್ಸಿನಲ್ಲಿ ಕಣ್ಮರೆಯಾಗಿದ್ದ ಮಗಳು ತನ್ನ 47ನೇಯ ವಯಸ್ಸಿನಲ್ಲಿ ತನ್ನ ಆರು ಜನ ಮಕ್ಕಳೊಂದಿಗೆ ಭೆಟ್ಟಿಯಾದಾಗ ಆ ತಂದೆ-ತಾಯಿಗಳಿಗೆ ಹಾಗೂ ಆ ಮಗಳಿಗೆ ಆದ ಆನಂದ ಯಾವ ಅಳತೆಗೆ ದಕ್ಕೀತು?


ಎಮ್.ವಿ.ಎಸ್.ಕುಮಾರ್

ಜಲಪ್ರಾಣಿಯ ವೈಶಿಷ್ಟ್ಯಗಳು


ಆಜಾದ್ ಇಸ್ಮಾಯಿಲ್ ಸಾಹೇಬ್

ಇಲಿಗೆ ಬೆಕ್ಕು, ಕಪ್ಪೆಗೆ ಹಾವು, ಹಾವಿಗೆ ಮುಂಗುಸಿ ಮುಂತಾದ ಜೀವಕ್ಕೆ ಜೀವದ ವೈಮನಸ್ಯದ ಉದಾಹರಣೆಗಳು ಹಲವಾರು ಸಿಗುತ್ತವೆ. ಅದರಂತೆಯೇ ಜಲಚರಗಳಲ್ಲೂ ಒಂದನ್ನೊಂದು ತಿಂದು ಬದುಕುವ ನಿದರ್ಶನಗಳೂ ಇಲ್ಲದಿಲ್ಲ. ಸಸ್ಯಾಹಾರಿ ಅತಿ ಸಣ್ಣ ಮೀನನ್ನು ಮಾಂಸಾಹಾರಿ ಮೀನೊಂದು ಕಬಳಿಸಿದರೆ ಇಂತಹ ಮಾಂಸಾಹಾರಿ ಮೀನುಗಳನ್ನು ಗುಳುಂ ಎನಿಸಲು ಭಕ್ಷಕ, ದೈತ್ಯ ಮೀನುಗಳು ಕಾದಿರುತ್ತವೆ. ಜೀವರಾಶಿಯ ವೈವಿಧ್ಯಮಯ ಪರಿಸರದಲ್ಲಿ ಇಂತಹ ಘಟನಾವಳಿಗಳು ಸಹಜ. ಕಡಿಮೆ ನೀರಿನ ಕೊಳಕುಂಟೆಗಳಿಂದ ಮೊದಲುಗೊಂಡು ಅಗಾಧ ಜಲರಾಶಿಯ ಸಮುದ್ರ, ಮಹಾಸಾಗರಗಳ ತನಕ ಈ ರೀತಿಯ ನೈಸರ್ಗಿಕ ಜೀವನ ಚಕ್ರ ವರ್ಣನಾತೀತ ಮೇರೆಗಳನ್ನು ಮುಟ್ಟಿರುತ್ತದೆ.


ಜೀವ ವಿಕಾಸ ಸರಣಿಯ ಕಶೇರುಕಗಳ ಮೊದಲ ಜೀವಿಗಳೇ ಮೀನುಗಳು. ಮಾನವನ ಆದಿವಾಸಿ ಜೀವನ ವಿಕಸನಗೊಳ್ಳುವುದಕ್ಕೂ ಮುಂಚೆ, ಸುಮಾರು 500 ದಶಲಕ್ಷ ವರ್ಷಗಳ ಕಾಲದಿಂದಲೇ ಮೀನು ಭೂ ಪರಿಸರದಲ್ಲಿ ಇರಲಾರಂಭಿಸಿದೆ. ಇಷ್ಟು ಅತಿ ಪ್ರಾಚೀನ ಹಿನ್ನೆಲೆಯಿರುವ ಮೀನು ಇಂದಿಗೂ ನಶಿಸಿ ಹೋಗದಂತೆ ಬಲವಾಗಿ ಬೇರೂರಿರಲು ಹಲವಾರು ಕಾರಣಗಳಿವೆ. ಬದಲಾಗುತ್ತಿರುವ ಪರಿಸರಕ್ಕೆ ಹೊಂದುವಂತೆ ತಮ್ಮ ಜೀವವಿಕಾಸವನ್ನು ಮಾರ್ಪಡಿಸಿಕೊಂಡು ಉಳಿದಿವೆ. ಇಂತಹ ಮಾರ್ಪಾಡುಗಳಲ್ಲಿ ಬಣ್ಣಗಳ ಉಪಯೋಗ, ಜಾಹೀರಾತುಗೊಳಿಸುವ ಗುಣ, ಮಾರುವೇಷದಿಂದ ವಿರೋಧಿಯ ಗಮನಕ್ಕೆ ಬಾರದಂತೆ ಬಚಾವಾಗುವ ಶಕ್ತಿ, ಕತ್ತಲಲ್ಲಿ ಬೆಳಕನ್ನು ಉತ್ಪಾದಿಸುವ ಸಾಮರ್ಥ್ಯ ಹಾಗೂ ವಿಷಯುಕ್ತ ಗ್ರಂಥಿಗಳ ಮೂಲಕ ಸ್ವರಕ್ಷಣೆ ಮುಂತಾದವು ಇಂತಹ ಹೊಂದಾಣಿಕೆಗಳಲ್ಲಿ ಪ್ರಮುಖವಾದವು.




ಚಿತ್ರ:೧ ಕಪ್ಪು ಮೇಲ್ಭಾಗ ಹೊಂದಿರುವ ಶಾರ್ಕ




ಚಿತ್ರ: ೧. ಸಮುದ್ರ ಸಸ್ಯಗಳ ನಡುವೆ ಅಡಗಿರುವ ಏಂಜಲ್ ಮೀನು.




ಚಿತ್ರ: ೨ಎ. ಕಪ್ಪು-ಬಿಳುಪುಗಳ ಹೊಂದಾಣಿಕೆ ತೋರುವ ಪರ್ಚ್ ಮತ್ತು ಜಾಕ್‌ನೈಫ್ ಮೀನು



ಚಿತ್ರ: ೨ ವಿನ್ಯಾಸಯುಕ್ತ ಏಂಜಲ್‌ನ ಮತ್ತೊಂದು ರೂಪ



ಚಿತ್ರ: ೪ ವಿಷಕೊಂಡಿಯಿರುವ 'ರೇ' ಮೀನು



ಚಿತ್ರ: ೫ ವಿಷಪ್ರಧಾನ ಪಾಂಶು ಮಾಂಸದ ಚಿತ್ರಮೀನ್


ಬಣ್ಣಗಳ ಹೊಂದಾಣಿಕೆ

ಮೀನು ತಾನು ವಾಸಿಸುವ ಜಲಮಾಧ್ಯಮದ ಮತ್ತು ಆ ಪರಿಸರದ ಹಿನ್ನೆಲೆಯನ್ನು ಅವಲಂಬಿಸಿ ಬಣ್ಣಗಳ ವಿನ್ಯಾಸ ಹೊಂದಿರುತ್ತದೆ. ಕೆಲವೊಮ್ಮೆ ಈ ವಿನ್ಯಾಸಗಳು ಅಪಾಯ ಸೂಚಕಗಳಾದರೆ ಕೆಲವು ಪ್ರಭೇಧಗಳ ವಿನ್ಯಾಸಗಳು ಹಿನ್ನೆಲೆಯ ವಿನ್ಯಾಸವನ್ನು ನಿರ್ದಿಷ್ಟವಾಗಿ ಹೋಲುವ ಮೂಲಕ ಇತರ ಜೀವಿಗಳಿಗೆ ಗೋಚರವಾಗುವುದಿಲ್ಲ. ಬಣ್ಣಗಳ ಹೊಂದಾಣಿಕೆಗಳಲ್ಲಿ ಸಾಮಾನ್ಯವಾದ ಬಣ್ಣಗಳ ಹೋಲುವಿಕೆ, ಬದಲಾಗಬಲ್ಲ ಬಣ್ಣಗಳ ಹೋಲುವಿಕೆ, ಅಗೋಚರಗೊಳ್ಳಬಲ್ಲ ಬಣ್ಣಗಳ ಹೊಂದಾಣಿಕೆ, ಧ್ಯಾನ ಭಂಗಿ ಬಣ್ಣಗಳ ಹೊಂದಾಣಿಕೆ ಮೋಸಗೊಳಿಸಬಲ್ಲ ಬಣ್ಣಗಳ ಹೊಂದಾಣಿಕೆ ಮುಂತಾದವು ಮುಖ್ಯವಾದವು.



ಚಿತ್ರ: ೨. ಲ್ಯಾಂಟರ್ನ್ ಮೀನು ಬೆಳಕು ಕೋಶಗಳೊಂದಿಗೆ

ಬಣ್ಣ ಮತ್ತು ಅವುಗಳ ತೀಕ್ಷ್ಣತೆಗಳನ್ನು ಅನುಸರಿಸಿ ಮೀನಿನ ಬಣ್ಣದಲ್ಲೂ ವೈವಿಧ್ಯತೆ ಕಂಡು ಬರುವುದು ಸಹಜ. ಸಮುದ್ರ ತಳದ ವಿವಿಧ ಬಣ್ಣಗಳ ಗಿಡಗಳು, ಕೋರಲ್‌ಗಳು ಮುಂತಾದವುಗಳಂತೆಯೇ ಬಣ್ಣ ಹೊಂದಿರುವ ಮೀನುಗಳು ಪ್ರಥಮ ಗುಂಪಿನ ಉದಾಹರಣೆಗಳಾಗಿವೆ. ಪ್ರಥಮ ಗುಂಪಿನ ಉದಾಹರಣೆಗಳಾಗಿವೆ. ಯಾವುದೇ ಒಂದು ಪ್ರಬೇಧ ಕಡಿಮೆ ಆಳದ ನೀರಿನಲ್ಲಿ ವಾಸಿಸಿದರೆ ಅತಿ ಕಡಿಮೆ ತೀಕ್ಷ್ಣ ಬಣ್ಣ ಹೊಂದಿರುತ್ತದೆ. ಅದೇ ಪ್ರಬೇಧ ಕತ್ತಲಾವರಿಸಿರುವ ಆಳ ಪ್ರದೇಶಗಳಲ್ಲಿ ಅತಿ ಕಪ್ಪು ಅಥವಾ ತೀಕ್ಷ್ಣ ಬಣ್ಣ ಹೊಂದಿರುತ್ತದೆ. ಇದನ್ನು ಪ್ರಯೋಗದ ಮೂಲಕ ತೋರಿಸಲು ತಿಲಾಪಿಯಾ ಮೀನನ್ನು ಉಪಯೋಗಿಸಬಹುದು. ಒಂದು ಗಾಜಿನ ಬೀಕರ್‌ನಲ್ಲಿ ನೀರನ್ನು ಹಾಕಿ ಮೀನು ಬಿಟ್ಟರೆ ಅದರ ಬಣ್ಣ ಬಿಳುಪಿರುವುದು. ಅದೇ ಬೀಕರ್‌ನ ಸುತ್ತ ಕಪ್ಪು ಕಾಗದವನ್ನು ಸುತ್ತಿ ಕೆಲ ಸಮಯ ಬಿಟ್ಟು ಗಮನಿಸಿದರೆ ಮೀನಿನ ಬಣ್ಣ ಕಪ್ಪಾಗಿರುತ್ತದೆ. ಇವುಗಳಿಗೆ ಕಾರಣ ''ಮೆಲಾನೋ ಫೋರ್ಸ್'' ಎಂಬ ಕಪ್ಪು ಬಣ್ಣ ನಿಯಂತ್ರಿಸಬಲ್ಲ ಕೋಶಗಳು. ಅಂತೆಯೇ ''ಎರಿತ್ರೋ-



ಚಿತ್ರ: ೨ಬಿ ಆಲ್ಗಾಗಳಲ್ಲಿ ಸುಲಭವಾಗಿ ಬಚ್ಚಿಟ್ಟುಕೊಳ್ಳಬಲ್ಲ
ಸಮುದ್ರಸ್ವತ್ತ್ಯ ಮತ್ತು ಗಿಡದ ಎಲೆಯನ್ನು ಹೋಲುವ ಮೊನೋಸಿರಸ್

ಫೋರ್''ಗಳು ಕಿತ್ತಳೆ ಬಣ್ಣವನ್ನು, ''ಕ್ಸ್ಯಾಂತೋ ಫೋರ್''ಗಳು ಹಳದಿ ಬಣ್ಣವನ್ನೂ ಮತ್ತು ''ಲ್ಯೂಕೋ ಫೋರ್''ಗಳು ಬಿಳುಪನ್ನೂ ನಿಯಂತ್ರಿಸುತ್ತವೆ.

ಬದಲಾಗಬಲ್ಲ ಬಣ್ಣಗಳ ಹೊಂದಾಣಿಕೆ ಮತ್ಸ್ಯ ಪ್ರಬೇಧದ ಜೀವನ ಕ್ರಮಕ್ಕನುಗುಣವಾಗಿ ಮಂದ ಅಥವಾ ತೀವ್ರಗತಿಯಲ್ಲಿ ತನ್ನ ಬಣ್ಣವನ್ನು ಬದಲಾಯಿಸಬಲ್ಲ ಸಾಮರ್ಥ್ಯವನ್ನು ಅವಲಂಬಿಸಿದೆ. ಟ್ರಾಟ್‌ಗಳು (ಕಾಮನ ಬಿಲ್ಲು ಟ್ರಾಟ್) ಬಾಲಾವಸ್ಥೆಯಲ್ಲಿ ವರ್ಣಮಯ ವಿನ್ಯಾಸ ಹೊಂದಿದ್ದರೆ ಪ್ರೌಢಾವಸ್ಥೆಯಲ್ಲಿ ಗುಲಾಬಿ ಪಾರ್ಶ್ವಗಳನ್ನು ಹೊಂದಿರುತ್ತವೆ. ಇನ್ನೊಂದು ರೀತಿಯ ಬದಲಾಗಬಲ್ಲ ಬಣ್ಣಗಳ ಹೊಂದಾಣಿಕೆಯೆಂದರೆ ದೇಹಾಕೃತಿ ಮಾರ್ಪಾಡಿನೊಂದಿಗೆ ಬದಲಾಗಬಲ್ಲ ಬಣ್ಣವುಳ್ಳ ಪ್ರಭೇದಗಳದು. ಗಾಜಿನಂತಹ ಪಾರದರ್ಶಿ ದೇಹ ಹೊಂದಿದ ಈಲ್ ಲಾರ್ವ (ಲೆಪ್ಟೋಸಿಪಾಲೈ) ಗಳು ಬೆಳೆದು ''ಎಲ್ವರ್'' ಹಂತದಲ್ಲಿ ಅಪಾರದರ್ಶಿ ದೇಹ ಹೊಂದಿರುತ್ತವೆ.

ಅಗೋಚರಗೊಳ್ಳಬಲ್ಲ ಬಣ್ಣ ವಿನ್ಯಾಸದ ಹೊಂದಾಣಿಕೆ ಎಲ್ಲ ಜೀವಿಗಳಲ್ಲೂ ಕಂಡು ಬರುವ ಹೊಂದಾಣಿಕೆ ಎನ್ನಬಹುದು. ಯುದ್ಧ ವಾಹನಗಳು ವರ್ಣವಿನ್ಯಾಸ ಹೊಂದಿರುವುದು ಇಂತಹ ಹೊಂದಾಣಿಕೆಯ ಉದಾಹರಣೆ. ಎಲ್ಲ ಪಕ್ಷಿಗಳು, ಸಸ್ತನಿಗಳು, ಉಭಯಜೀವಿಗಳು ಮತ್ತು ಸರೀಸೃಪಗಳು ಕಪ್ಪು ಮೇಲ್ಭಾಗ ಮತ್ತು ಬಿಳಿಯ ಕೆಳಭಾಗ ಹೊಂದಿದ್ದು ನೆರಳಿನಂತೆ ಚಪ್ಪಟೆ ಕಂಡುಬರುವುದೂ ಈ ವಿಧದ ಹೊಂದಾಣಿಕೆಯ ನಮೂನೆಯೇ. ಶಾರ್ಕ್ ಮೀನುಗಳು ಇಂತಹ ಹೊಂದಾಣಿಕೆಯನ್ನು ತೋರುವ ಉತ್ತಮ ನಿದರ್ಶನಗಳು. (ಚಿತ್ರ: 1)

ಧ್ಯಾನಭಂಗಿ ಬಣ್ಣಗಳ ಹೊಂದಾಣಿಕೆ ವೀಕ್ಷಕರನ್ನು ಮೀನಿನ ಹಾಜರಿಯಿಂದ ಅದರ ಬಣ್ಣ ವಿನ್ಯಾಸದ ಕಡೆಗೆ ಗಮನ ಸೆಳೆಯುವಲ್ಲಿ ಸಫಲವಾಗುತ್ತದೆ. ಆ ಮೂಲಕ ಸಿಗುವ ಕ್ಷಣ ಮಾತ್ರದ ಸಮಯದಲ್ಲಿ ಮೀನು ತಪ್ಪಿಸಿಕೊಂಡು ಪಾರಾಗುತ್ತದೆ. ನಿಸರ್ಗದ ವೈವಿಧ್ಯಗಳಿಗೆ ಎಣೆಯುಂಟೆ?! ತನ್ನ ದೇಹಾಕೃತಿಯನ್ನು ವಿವಿಧ ಬಣ್ಣಗಳ ವಿನ್ಯಾಸ ಹೊಂದಿದ ದೇಹಭಾಗಗಳ ಮೂಲಕ ಬೇಗ ಗುರುತಿಸಲಾಗದಂತೆ ಮಾಡುವ ಸಾಮರ್ಥ್ಯವುಳ್ಳ ಹೊಂದಾಣಿಕೆಯಿದು. ಈ ವಿನ್ಯಾಸಗಳು ಗಮನ ಸೆಳೆಯುವಂತಹ ವರ್ಣಗಳಿಂದ ಕೂಡಿರುತ್ತವೆ. ಉದಾ: ಬಂಡೆ ಪರ್ಚ್‌ಗಳು, ಏಂಜಲ್ ಮೀನುಗಳು ಇತ್ಯಾದಿ. (ಚಿತ್ರ: 2)

ಮೋಸಗೊಳಿಸಬಲ್ಲ ಬಣ್ಣಗಳ ಹೊಂದಾಣಿಕೆ ಧ್ಯಾನಭಂಗಿಯಂತಹುದೇ ಆಗಿದ್ದು ಒಂದು ರೀತಿಯ ವಿಶಿಷ್ಟತೆಯಿಂದ ಕೂಡಿದೆ. ದೇಹದ ವಿವಿಧ ಅಂಗಗಳನ್ನು ಅಸಂಬದ್ಧ ರೀತಿಯಲ್ಲಿ ವಿನ್ಯಾಸಗೊಳಿಸಿ ಪರಿಚಯಗೊಳ್ಳದಂತೆ ಮೋಸಗೊಳಿಸುತ್ತದೆ. ಕಣ್ಣಿನ ಕಪ್ಪು, ದೇಹದ ಕಪ್ಪು ಬಣ್ಣದೊಡನೆ ಕೂಡಿರುವುದು, ರೆಕ್ಕೆಗಳ ವಿನ್ಯಾಸ ದೇಹದ ಮೇಲೂ ಹಬ್ಬಿರುವುದು ಮುಂತಾದ ಲಕ್ಷಣಗಳು (ಚಿತ್ರ: 2.ಎ) ಈ ವಿಧದ ಹೊಂದಾಣಿಕೆಯ ಉದಾಹರಣೆಗಳಾಗಿವೆ.

ಮಾರುವೇಷ

ಈ ವಿಧದ ಹೊಂದಾಣಿಕೆಯ ಪ್ರಮುಖ ಲಕ್ಷಣವೆಂದರೆ ಹಿನ್ನೆಲೆಯಂತೆಯೇ ದೇಹಾಕೃತಿ ಮತ್ತು ವಿನ್ಯಾಸ ಹೊಂದಿರುವುದು. ಓತಿಕ್ಯಾತದ ಬಣ್ಣ ಬದಲಾವಣೆ ಎಲ್ಲರಿಗೂ ತಿಳಿದದ್ದೇ. ತನ್ನ ಪರಿಸರಕ್ಕನುಗುಣವಾಗಿ ಕಪ್ಪುಸಾಧ್ಯವೆನಿಸುವುದು. ಹಸಿರು ಹಾವು ಗಿಡದ ಮೇಲಿರುವಾಗ ಕೊಂಬೆಯೆಂದು ಭಾವಿಸಿ ಕೈಯಲ್ಲಿ ಹಿಡಿದಿರುವವರ ಸಂಖ್ಯೆಯೇನೂ ಕಡಿಮೆಯಿಲ್ಲ! ಗಾರ್ ಜಾತಿಯ ಮೀನು ನೀರಿನ ಮೇಲ್ಭಾಗದಲ್ಲಿ ಅಚಲಗೊಂಡು ಸೂರ್ಯನ ರಶ್ಮಿಯ ಕಾವು ಆಸ್ವಾದಿಸುವಾಗ ತೇಲುವ ಕಾಂಡ ಅಥವಾ ಮರದ ತುಂಡಿನಂತೆ ಕಾಣುತ್ತದೆ. ಸೂಜಿ ಮೀನು (ಬೆಲೋನಿಡೇ-ಕುಟುಂಬ) ಗಳು ತನ್ನ ಪರಿಸರದ ಗಿಡದ ಕೊಂಬೆಗಳಂತೆ ಕಂಡರೆ ಗಿಡಗಳ ಎಲೆಗಳಂತೆ ಕಾಣುವ ''ಲೆದರ್ ಜಾಕೆಟ್'', ''ಮೂರು ಬಾಲದ ಮೀನು'', ''ಫೈಲ್ ಮೀನು'', ''ಸಲಿಕೆ ಮೀನು'' ಇತ್ಯಾದಿ ಜಾತಿಗಳು ಮಾರುವೇ

ಷದಲ್ಲಿ ಅದ್ವಿತೀಯವೆನಿಸಿವೆ. (ಚಿತ್ರ: 2.ಬಿ)

ಜಾಹೀರಾತು

ಮೊದಲು ವಿವರಿಸಿದ ಮಾರ್ಪಾಡು ಮತ್ತು ಹೊಂದಾಣಿಕೆಗಳ ಪ್ರಾಥಮಿಕ ಅವಶ್ಯಕತೆ ಅಗೋಚರಗೊಳ್ಳುವುದಕ್ಕಾದರೆ ಜಾಹೀರಾತು ಹೆಸರೇ ಸೂಚಿಸುವಂತೆ ತನ್ನ ಇರುವಿಕೆಯನ್ನು ಪ್ರಚುರಪಡಿಸುವ ಹೊಂದಾಣಿಕೆಯಾಗಿದೆ. ತನ್ನ ಪರಿಸರದ ಹಿನ್ನೆಲೆಯಲ್ಲಿ ಸ್ಪಷ್ಟವಾಗಿ ಕಂಡುಬರುವಂತೆ ಬಣ್ಣ ವಿನ್ಯಾಸ ಹೊಂದಿರುವ ಅಥವಾ ಚಟುವಟಿಕೆಯಿರುವ ಮೀನುಗಳೂ ಇವೆ. ಅಮೆರಿಕೆಯ ನದಿಗಳ ಡಾರ್ಟರ್ ಮೀನುಗಳು ಮತ್ತು ಅತಿ ಪ್ರಖರ ಬಣ್ಣಗಳಿಂದ ಕೂಡಿದ ಪರ್ಚ್ ಮೀನುಗಳು ಜಾಹೀರಾತಿನ ಉದಾಹರಣೆಗಳಾಗಿವೆ. ಕೆಲವು ಮೀನುಗಳಲ್ಲಿ ಲಿಂಗಾಧಾರಿತ ವರ್ಣ ವಿನ್ಯಾಸ ಕಂಡುಬರುತ್ತದೆ. ಮೂರು ಮುಳ್ಳಿನ ಸ್ಟಿಕಲ್ ಬ್ಯಾಕ್‌ಗಳು ಇಂತಹ ವಿನ್ಯಾಸ ಹೊಂದಿವೆ. ಕೆಲವೊಮ್ಮೆ ಗಂಡು ಮೀನು ವರ್ಣಮಯವಿದ್ದರೆ ಕೆಲವು ಹೆಣ್ಣು ಮೀನುಗಳು ಆಕರ್ಷಕ ಬಣ್ಣಗಳಿಂದ ಕೂಡಿರುತ್ತವೆ. ಇವು ಪರಸ್ಪರ ಆಕರ್ಷಣೆಗಾಗಿ ಕಂಡು ಬರುವ ಹೊಂದಾಣಿಕೆಗಳು.

ಬೆಳಕನ್ನು ಉತ್ಪಾದಿಸುವ ಗುಣ

ಸ್ವಯಂ ಪ್ರಕಾಶಕ ಜೀವಿಗಳಲ್ಲಿ ಸ್ವಯಂ ಪ್ರಕಾಶಿ ಕೀಟ ಎಲ್ಲರೂ ನೋಡಿರುವ ಜೀವಿ. ಆಳ ಸಮುದ್ರಗಳಲ್ಲಿ ವಾಸಿಸುವ ಮೀನಿನಲ್ಲಿ ಇಂತಹ ಪ್ರಕಾಶೋತ್ಪಾದಕ ಕೋಶಗಳು ಇರುತ್ತವೆ. ಸ್ವಯಂ ಪ್ರಕಾಶಿ ಮೀನುಗಳು ಕೆಲವು ತಮ್ಮ ಪ್ರಕಾಶವನ್ನು ಬೇಟೆಯಾಡಲು ಉಪಯೋಗಿಸಿದರೆ ಕೆಲವು ಈ ಬೆಳಕಿನ ಮೂಲಕ ಆಕರ್ಷಿಸುವ ಗುಣ ಹೊಂದಿರುತ್ತವೆ. ಮೀನುಗಳಲ್ಲಿನ ಈ ಬೆಳಕು ಉತ್ಪಾದಿಸುವ ಗುಣ ಎರಡು ರೀತಿಯಲ್ಲಿ ಸಾಧ್ಯವಾಗುತ್ತದೆ. ಮೊದಲನೆಯದಾಗಿ ಮೀನಿನೊಡನೆ ಸಹಜೀವನ ನಡೆಸುವ ಸ್ವಯಂ ಪ್ರಕಾಶಿ ಬ್ಯಾಕ್ಟೀರಿಯಾಗಳ ಮೂಲಕ ಮತ್ತು ಎರಡನೆಯದಾಗಿ ತನ್ನಲ್ಲಿನ ಸ್ವಯಂ ಪ್ರಕಾಶಿ ಕೋಶಗಳ ಮೂಲಕ.

ಬ್ಯಾಕ್ಟೀರಿಯಾಗಳ ಮೂಲಕ ಬೆಳಕನ್ನು

ಉತ್ಪಾದಿಸುವ, ಮೀನುಗಳಲ್ಲಿ ''ಕಾಡ್'', ''ಪೈನ್-ಕೋನ್'', ''ಅನೋಮ್ಯಾಲೋಪಿಡ್'' ಮುಂತಾದವು ಪ್ರಮುಖ. ಸ್ವಯಂ ಪ್ರಕಾಶಿ ಮೀನುಗಳೆಂದರೆ ಕೆಲವು ಶಾರ್ಕ್‌ಗಳು, ವಿದ್ಯುತ್ ರೇಗಳು, ಡ್ರಾಗನ್ ಮೀನುಗಳು ಮತ್ತು ಲ್ಯಾಂಟರ್ನ್ ಮೀನುಗಳು. (ಚಿತ್ರ: 3)

ವಿಷವುಳ್ಳ ಮತ್ತು ನಂಜುಕಾರಕ ಮೀನುಗಳು

ಮೀನುಗಳಲ್ಲಿ ವಿಷಗ್ರಂಥಿ ಮತ್ತು ನಂಜುಕಾರಕ ಮಾಂಸದ ಉದ್ಭವ ಬಹುಶಃ ಜೀವ ವಿಕಾಸ ಸರಣಿಯಲ್ಲಿ ಉಳಿಯಲು ಮಾಡಿಕೊಂಡ ಮಾರ್ಪಾಡು ಅಥವಾ ಹೊಂದಾಣಿಕೆ ಎನ್ನಬಹುದು. ಕೆಲವು ಮೀನುಗಳ ಮಾಂಸ ಸೇವನೆಯಿಂದ ನಂಜುಂಟಾದರೆ ಕೆಲವೊಂದು ಮೀನುಗಳ ವಿಷಗ್ರಂಥಿಗಳು ಮುಳ್ಳುಗಳ ಮೂಲಕ ಇತರ ಜೀವಿಗಳಿಗೆ ವಿಷವನ್ನು ಚುಚ್ಚುತ್ತವೆ. ಹಲವು ಪ್ರಕಾರ ಮತ್ತು ತೀಕ್ಷ್ಣತೆಯ ವಿಷ ಈ ಮೀನುಗಳಲ್ಲಿ ಕಂಡುಬರುತ್ತದೆ. ಕೆಳಕಂಡ ಉದಾಹರಣೆಗಳು ವಿವಿಧ ರೀತಿಯ ವಿಷ ಅಥವಾ ನಂಜುಕಾರಕ ಮೀನುಗಳ ವಿವರಣೆಗಳನ್ನು ಹೊಂದಿವೆ.

★ 'ಶಾರ್ಕ್' ಮತ್ತು 'ರೇ'ಗಳಲ್ಲಿ ವಿಷವುಳ್ಳ ಕೊಂಡಿಯಿರುತ್ತದೆ. (ಚಿತ್ರ: 4)

★ ಚೇಳು ಮೀನು (ಮುಗುಡು ಮೀನಿನಂತಹ) ತನ್ನ ಈಜು ರೆಕ್ಕೆಗಳಲ್ಲಿನ ಬಲವಾದ ಮುಳ್ಳಿನ ಮೂಲಕ ವಿಷವನ್ನು ಚುಚ್ಚುತ್ತದೆ. ಹಲವೊಮ್ಮೆ ಇದರ ವಿಷದಿಂದ ಮೂರ್ಛೆಯೂ ಬರಬಹುದು.

★ ಕಿವಿರು ಮುಚ್ಚಳ ಮತ್ತು ಬೆನ್ನು ರೆಕ್ಕೆಯಲ್ಲಿನ ಮುಳ್ಳುಗಳ ಮೂಲಕ ವಿಷವನ್ನು ಕಾರಬಲ್ಲ ಮೀನುಗಳೆಂದರೆ ವೀವರ್ ಮತ್ತು ಟೋಡ್ ಮೀನುಗಳು.

★ ಸರ್ಜನ್ ಮೀನಿನಲ್ಲಿ ಬಾಲದ ಬುಡದ ಇಕ್ಕೆಡೆಗಳಲ್ಲಿ ವಿಷಯುಕ್ತ ಮುಳ್ಳುಗಳಿರುತ್ತವೆ.

★ ಕೆಲವು ಆಳ ಅಥವಾ ತಳಭಾಗದ ಸಮುದ್ರ ಮೀನುಗಳ ಮಾಂಸ ನಂಜುಕಾರಕವಾಗಿದ್ದು ಇತರ ಮತ್ಸ್ಯ ಭಕ್ಷಿಗಳಿಂದ ಸುರಕ್ಷಿತಗೊಂಡಿವೆ. ಉದಾ: ಟೆಟ್ರಡಾನ್, ಡೈಯಾಡಾನ್ ಮತ್ತು ಪಫರ್ ಮೀನು (ಚಿತ್ರ: 5)

ಇಂತಹ ಅತಿ ಪರಿಣಾಮಕಾರಿ ಮಾರ್ಪಾಡುಗಳ ಮೂಲಕ ಬದಲಾಗುವ ಪರಿಸರಕ್ಕೆ ಹೊಂದಾಣಿಕೆ ತೋರುವ ಸಾಮರ್ಥ್ಯದ ಮೂಲಕವೇ ಮತ್ಸ್ಯ ಪ್ರಭೇಧಗಳು ಜೀವ ವಿಕಾಸ ಸರಣಿಯಲ್ಲಿ ಬಲವಾಗಿ ಬೇರು ಬಿಟ್ಟಿವೆ. ಈ ರೀತಿಯ ಪ್ರಕೃತಿಯ ನ್ಯೂನತೆಗಳು ಅಗಣ್ಯ. ●

ಸಂಬಂಧ!

ಭಾರತ ಸಂವಿಧಾನದ ಶಿಲ್ಪಿ, ಹರಿಜನೋದ್ಧಾರಕ ಡಾ. ಅಂಬೇಡ್ಕರ್‌ರವರನ್ನು ಕಾಂಗ್ರೆಸ್ ಕಾರ್ಯಕರ್ತನೊಬ್ಬ ಕೇಳಿದ, ''ಹರಿಜನರ ಉದ್ಧಾರಕ್ಕಾಗಿ ನಾವೆಷ್ಟು ದುಡಿಯುತ್ತಿದ್ದೇವೆ. ಅವರಿಗಾಗಿ ಏನೆಲ್ಲ ಸೌಲಭ್ಯ ಸೌಕರ್ಯಗಳನ್ನು ಒದಗಿಸಿದ್ದೇವೆ. ಅವರ ಜೀವನಮಟ್ಟವನ್ನು ಏರಿಸುವುದೇ ನಮ್ಮ ಗುರಿ. ಹಾಗಾದರೂ ನಮ್ಮ ಸಭೆ, ಸಮಾರಂಭಗಳಿಗೆ ಅವರಿಂದ ಹೆಚ್ಚಿನ ಪ್ರೋತ್ಸಾಹ ಸಿಗುತ್ತಿಲ್ಲ. ಅದೇ ನೀವು ಹೋದಡೆ ಎಲ್ಲಾ ಸಭೆಗಳು ತುಂಬಿ ತುಳುಕುತ್ತವೆ. ನಾವು ಮಾಡದುದನ್ನು ನೀವೇನು ಮಾಡುತ್ತೀರಿ? ಏನಿದರ ರಹಸ್ಯ?'' ಎಂದ.

''ರಹಸ್ಯವೇನೂ ಇಲ್ಲ. ವ್ಯತ್ಯಾಸವಿಷ್ಟೆ, ನಿಮ್ಮ ಹಾಗೂ ನಿಮ್ಮ ಅನುಯಾಯಿಗಳ ಸಂಬಂಧ, ದಾದಿ-ಮಕ್ಕಳ ಸಂಬಂಧವಾದರೆ ನನ್ನ ಹಾಗೂ ನನ್ನ ಅನುಯಾಯಿಗಳ ಸಂಬಂಧ ತಾಯಿ-ಮಕ್ಕಳ ಸಂಬಂಧ,'' ಎಂದರು ಅಂಬೇಡ್ಕರ್.

(ಸಂಗ್ರಹ) ಟಿ.ಎಸ್. ಲಲಿತ



ರಾಜೀವ್‌ರ ಮಕ್ಕಳ ಪ್ರೇಮ

ಜವಾಹರಲಾಲ್ ನೆಹರೂ ಅವರ ಮಕ್ಕಳ ಪ್ರೇಮ ಎಲ್ಲರಿಗೂ ಗೊತ್ತಿರುವುದೇ. ಅವರ ಮೊಮ್ಮಗ ದಿ. ರಾಜೀವ್‌ಗಾಂಧಿಯವರ ಇದೇ ಗುಣ ಅವರ ರಾಜಕೀಯ ಜಂಜಡಗಳ ನಡುವೆ ಎಲ್ಲೋ ಕಳೆದಂತೆನಿಸುತ್ತದೆ. ಬಹುಶಃ ಅವರ ನಿಷ್ಕಲ್ಮಶವಾದ ಮುಗ್ಧ ನಗುವಿನಲ್ಲೇ 'ಮಗುತನ' ವಿತ್ತೇನೋ.

ರಾಜೀವ್‌ಗೆ ಮಕ್ಕಳೆಂದರೆ ಪ್ರಾಣ. ಮಕ್ಕಳೊಂದಿಗೆ ಬೆರೆಯುವ ಸ್ಪಂದಿಸುವ ಸಂದರ್ಭಗಳಿಂದ ರಾಜೀವ್ ಎಂದೂ ತಪ್ಪಿಸಿಕೊಂಡವರಲ್ಲ. I run for my Country ಎಂಬ ಓಟದ ಕಾರ್ಯಕ್ರಮದಲ್ಲಿ ಸ್ವತಃ ರಾಜೀವ್‌ರೇ ಪಾಲ್ಗೊಂಡು ಲವಲವಿಕೆಯಿಂದ ಓಡಿದರು. ಅವರ ಮಕ್ಕಳೊಂದಿಗಿನ ಮತ್ತೊಂದು ಸಂವಹನ ಸೇತುವೆಂದರೆ ಪತ್ರಗಳು. ಭಾರತದಂತಹ ಬೃಹತ್ ದೇಶದ ಪ್ರಧಾನಿಯಾಗಿದ್ದುಕೊಂಡೇ ಅವರು ಪುಟಾಣಿ ಮಕ್ಕಳೊಂದಿಗೆ ಪತ್ರಮುಖೇನ ಸಂಭಾಷಿಸುತ್ತಿದ್ದರು. ಅದಕ್ಕಾಗಿ ವೇಳೆಯ ಅಭಾವವೆಂದೂ ಬಾಯ್ದೆರೆಯುತ್ತಿರಲಿಲ್ಲ. ದೇಶದ ಸಮಸ್ಯೆಗಳ ಸಿಕ್ಕುಗಳನ್ನೆಲ್ಲ ಮಿದುಳಿನಲ್ಲಿ ಹುದುಗಿಸಿಕೊಂಡಿದ್ದರೂ ರಾಜೀವ್‌ರ ಮನಸ್ಸು ಮಕ್ಕಳ ವಿಷಯದಲ್ಲಿ ಎಂದೂ ಮುಸುಕೆಳೆದುಕೊಳ್ಳುತ್ತಿರಲಿಲ್ಲ. ಪತ್ರ ಬರೆದ ಪ್ರತಿ ಮಗುವಿಗೂ ತಪ್ಪದೇ ಉತ್ತರಿಸುತ್ತಿದ್ದರು.

ಒಮ್ಮೆ ರಾಜೀವ್‌ಗಾಂಧಿಯವರು ನೀರಾವರಿ ಕಾರ್ಯಕ್ರಮ ಕುರಿತು ಮಾತನಾಡುತ್ತ 'ನಮ್ಮ ನದಿ ನೀರೆಲ್ಲಾ ವ್ಯರ್ಥವಾಗಿ ಸಮುದ್ರ ಸೇರುತ್ತಿದೆ' ಎಂದು ಅಭಿಪ್ರಾಯಿಸಿದ್ದರು. ದೆಹಲಿಯ ಆಂಧ್ರ ಸ್ಕೂಲಿನ 8ನೇ ತರಗತಿಯ ವಿದ್ಯಾರ್ಥಿನಿಯಾಗಿದ್ದ ಕು. ಟಿ.ಜಿ. ಐಶ್ವರ್ಯಲಕ್ಷ್ಮಿ ಆಗ (1985ರಲ್ಲಿ) ಪ್ರಧಾನಿಗೆ ಪತ್ರವೊಂದನ್ನು ಬರೆದು ''ಸಮುದ್ರ ಸೇರುವ ನೀರೆಲ್ಲ ವ್ಯರ್ಥ ಎನ್ನುವುದಾದರೆ ಮಳೆ ಎಲ್ಲಿಂದ ಬರಬೇಕು, ಮೀನುಗಳು ಎಲ್ಲಿ ಬದುಕಬೇಕು, ಹಡಗುಗಳು ಎಲ್ಲಿ ತೇಲಬೇಕು .....'' ಮುಂತಾಗಿ ಮುಗ್ಧ ಪ್ರಶ್ನೆಗಳನ್ನು ಮುಂದಿಟ್ಟಳು. ಎಷ್ಟೋ ಪ್ರೌಢ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿದ್ದ ರಾಜೀವ್ ಯಾವುದೋ ಮಗುವಿನ ಎಳಸು ಪತ್ರವೆಂದು ನಿರ್ಲಕ್ಷಿಸಲಿಲ್ಲ. ತಕ್ಷಣ ಉತ್ತರ ಬರೆದ ರಾಜೀವ್ ತಮ್ಮ ಹೇಳಿಕೆಯನ್ನು ಅತ್ಯಂತ ಸರಳವಾಗಿ ವಿವರಿಸುವ ಸಹನೆ ತೋರಿದರು. ಮಗುವಿನಂತಹ ಮೃದು ಹೃದಯ ಅವರೊಳಗೆ ಇಲ್ಲದಿದ್ದರೆ ಇಂತಹ ಸಹನೆ ಸಾಧ್ಯವಾಗುತ್ತಿರಲಿಲ್ಲವೇನೋ! ●

ಟೇಕಲ್ ಗೋಪಾಲಕೃಷ್ಣ

ಡಾ. ಆನಂದ ದೇಶಪಾಂಡೆ (ಇಂಗ್ಲಂಡ್)

ಬುದ್ಧಿಶಕ್ತಿಗೊಂದು ಮಾಪನ

ತಮ್ಮ ಮಕ್ಕಳು ಪರೀಕ್ಷೆಯಲ್ಲಿ ಪಾಸಾದೊಡನೆ ಇಲ್ಲವೆ ಹೆಚ್ಚಿನ ಅಂಕಗಳನ್ನು ಪಡೆದಾಗ, ಯಾವುದಾದರೂ ಪದ್ಯವನ್ನು, ಗದ್ಯಪಾಠವನ್ನು ಕಂಠಪಾಠಮಾಡಿದೊಡನೆ ಅವರು ಬಹಳ ಬುದ್ಧಿಶಾಲಿಗಳೆಂದು ಪಾಲಕರು ಹಾಗೂ ಶಿಕ್ಷಕರು ಸ್ತುತಿಸುವುದನ್ನು ನಾವೆಲ್ಲ ಕಂಡಿದ್ದೇವೆ. ನಮ್ಮ ಮೆಚ್ಚಿಕೆ ವ್ಯಕ್ತಪಡಿಸಲು ಜ್ಞಾನಿಗಳನ್ನು ಹಲವಾರು ಬಾರಿ ನಾವು ಅವರೊಬ್ಬ 'ಜೀನಿಯಸ್' (Genius) ಎಂದು ಉದ್ಗರಿಸುತ್ತೇವೆ. ಬುದ್ಧಿವಂತ, ಪ್ರತಿಭಾನ್ವಿತ, ಅಸಾಧಾರಣ ಪ್ರತಿಭಾಶಾಲಿ (Genius) ಇತ್ಯಾದಿ ಪದಗಳನ್ನು ನಾವು ಬಹಳ ಲಘುವಾಗಿ ಬಳಸುತ್ತೇವೆ. ಬುದ್ಧಿಶಕ್ತಿಯ ಬಗೆಗೆ ಹೆಚ್ಚಿನ ಅರಿವಾದಾಗ ನಾವು ಹೀಗೆ ಬಳಸುವ ಪದಗಳನ್ನು ಗಂಭೀರವಾಗಿ ಪರಿಗಣಿಸುವುದು ಸಾಧ್ಯ.

ಬುದ್ಧಿಶಕ್ತಿ (Intelligence) ಎಂದರೆ ಏನು ಎಂದು ವ್ಯಾಖ್ಯೆ ಕೊಡುವುದು ಬಹಳ ಕಠಿಣ. ಜ್ಞಾನ, ಸ್ಮರಣೆಗಳು ಎಷ್ಟೇ ಅಗಾಧವಾಗಿದ್ದರೂ ಬುದ್ಧಿಶಕ್ತಿ ಎನಿಸಿಕೊಳ್ಳಲಾರವು. ಬುದ್ಧಿಶಕ್ತಿಯು ವಿವಿಧ ಗುಣ ವಿಶೇಷಗಳನ್ನು ಹೊಂದಿದೆ. ಕಲ್ಪನೆ, ನವೀನತೆ, ಶಬ್ದ, ಸಂಖ್ಯೆಗಳ ನೈಪುಣ್ಯ, ಸ್ವತಂತ್ರವಾಗಿ ಹಾಗೂ ಬಲು ಶೀಘ್ರವಾಗಿ ಆಲೋಚಿಸುವ ಮತ್ತು ಸೃಷ್ಟಿಸುವ; ನಿರ್ದಿಷ್ಟವಾದ ವಿಷಯಗಳನ್ನು ಊಹಿಸುವುದು, ಪರಿಣಾಮಗಳನ್ನು ತರ್ಕಿಸುವುದು, ಪಡೆದಿರುವ ಜ್ಞಾನ, ಅನುಭವಗಳನ್ನು ಹೊಸ ಸಂದರ್ಭಗಳಲ್ಲಿ ಉಪಯೋಗಿಸಿಕೊಳ್ಳುವುದು ಮಾರ್ಪಾಟು ಮಾಡಿಕೊಳ್ಳುವುದು, ಸಮಂಜಸ ತತ್ವಗಳನ್ನು ತರ್ಕಿಸುವುದು ಮುಂತಾದ ಕ್ಲಿಷ್ಟವಾದ ಸಾಮರ್ಥ್ಯಗಳಿಂದ ಮಾನಸಿಕ ಪ್ರತಿಕ್ರಿಯೆ ಮಾಡುವುದೇ ಬುದ್ಧಿಶಕ್ತಿ.

ತಲೆಬುರುಡೆಯಲ್ಲಿರುವ ನಮ್ಮ ಮಿದುಳು ಮುಖ್ಯವಾಗಿ ದೊಡ್ಡ ಮಿದುಳು, ಸಣ್ಣ ಮಿದುಳು, ಪಾನ್ಸ್, ಹಾಗೂ ಮಧ್ಯ ಮಿದುಳು ಎಂಬ ಭಾಗಗಳನ್ನು ಹೊಂದಿದೆ. ನರಸಂವೇದನೆಯ ಅರಿವು, ನಮ್ಮ ಬುದ್ಧಿಶಕ್ತಿಯ ಭಾಗಗಳಾದ ಸ್ಮರಣೆ, ತರ್ಕ, ಭಾಷೆ, ಅಂಕಿಸಂಖ್ಯೆಗಳ ಬಳಕೆಗಳನ್ನು ದೊಡ್ಡ ಮಿದುಳು ನಿರ್ವಹಿಸುತ್ತದೆ. ದೊಡ್ಡ ಮಿದುಳು ಅರೆಗೋಳಗಳಂತಿರುವ ಎಡ ಮತ್ತು ಬಲಭಾಗಗಳನ್ನು ಹೊಂದಿದೆ. (ಚಿತ್ರ ನೋಡಿರಿ) ದೊಡ್ಡ ಮಿದುಳಿನ, ಎಡ ಅರೆಗೋಳದಲ್ಲಿರುವ ವಿಶಿಷ್ಟವಾದ ನರಕೋಶಗಳ ಸಮೂಹವು - ಭಾಷೆ (ಬರೆಯುವ ಹಾಗೂ ಮಾತನಾಡುವ), ಸ್ಮರಣೆ, ಪಾಂಡಿತ್ಯ, ತರ್ಕಬುದ್ಧಿ, ಅಂಕಿಸಂಖ್ಯೆಗಳ ಬಳಕೆ, ಗಣಿತ ನೈಪುಣ್ಯಗಳನ್ನು ನಿಯಂತ್ರಿಸುತ್ತದೆ. ದೊಡ್ಡ ಮಿದುಳಿನ ಬಲ ಅರೆಗೋಳದಲ್ಲಿ ವಿಶಿಷ್ಟ ನರಕೋಶಗಳ ಸಮೂಹವು ಅಂತರ್ಜ್ಞಾನ, ಭಾವನೆಗಳು, ರಚನಾತ್ಮಕ ಕಲ್ಪನೆಗಳು, ದೃಷ್ಟಿಜನ್ಯ ಸ್ಮರಣೆ (ಭಾಷಾಜನ್ಯ ಸ್ಮರಣೆ - ಎಡ ಅರೆಗೋಳ), ಆಕೃತಿ

ರಚನೆ, ಸ್ಥಳಾವಕಾಶ ಗ್ರಹಿಸುವಿಕೆಗಳನ್ನು ನಿಯಂತ್ರಿಸುವುದು. ಈ ಎರಡೂ ಅರೆಗೋಳಗಳು ಮಧ್ಯದಲ್ಲಿ ಕೋಟ್ಯಾವಧಿ ನರತಂತುಗಳಿಂದ ಒಂದಕ್ಕೊಂದು ಕೂಡಿಕೊಂಡಿದ್ದು ಎರಡೂ ಭಾಗಗಳು ಒಮ್ಮತದಿಂದ ಸಹಕಾರದಿಂದ ಕಾರ್ಯ ಮಾಡುತ್ತವೆ. ಪಾನ್ಸ್, ಸಣ್ಣ ಮಿದುಳು, ಮಧ್ಯ ಮಿದುಳುಗಳಲ್ಲಿ ಇಂಥ ಉಚ್ಚಕಾರ್ಯಗಳು ಜರಗುವುದಿಲ್ಲ. ಆದರೆ ನರಸಂವೇದನೆಯ ಹಾಗೂ ನಮ್ಮ ಅಸ್ತಿತ್ವಕ್ಕೆ ಅತ್ಯವಶ್ಯವಿರುವ .ಬೇರೆ ಕಾರ್ಯಗಳನ್ನು ಈ ಅಂಗಗಳು ನೆರವೇರಿಸುತ್ತವೆ. ಈ ಎಲ್ಲ ಅಂಗಗಳೂ ಕೋಟ್ಯಾವಧಿ ನರತಂತುಗಳಿಂದ ಒಂದಕ್ಕೊಂದು ಅಂಟಿಕೊಂಡಿವೆ.


ಮಗುವಿನ ಬುದ್ಧಿಶಕ್ತಿಯು ಬೆಳವಣಿಗೆಯ ಹಂತವನ್ನವಲಂಬಿಸಿದೆ. ಉದಾಹರಣೆಗೆ ಅಂಬೆಗಾಲಿಡುವ ಮಗುವು ಕೈಗಳಿಂದ ವಿವಿಧ ಬಗೆಯ ಸ್ಪರ್ಶ ಜ್ಞಾನಗಳನ್ನು ಪಡೆಯುತ್ತದೆ. ಬಿಸಿಯಾದ ವಸ್ತುವನ್ನು ಮುಟ್ಟಿದಾಗ ಅನುಭವಿಸಿದ ನೋವಿನಿಂದ ಉಷ್ಣತೆಯ ಬಗೆಗೆ ಜ್ಞಾನ ಪಡೆಯುತ್ತದೆ. ದೃಷ್ಟಿ, ಶ್ರವಣ ಹಾಗೂ ನಾಲಗೆಯ ರುಚಿಗಳೂ ನಮ್ಮ ಬುದ್ಧಿಶಕ್ತಿಯನ್ನು ಹೆಚ್ಚಿಸುತ್ತವೆ. ಕ್ರಮೇಣ ಆಕಾರ, ಗಾತ್ರ, ವೇಳೆ, ಪ್ರಮಾಣಗಳು ಮಗುವಿಗೆ ಅರ್ಥವಾಗುತ್ತವೆ.

ವ್ಯಕ್ತಿಗಳ ಎತ್ತರ, ತೂಕಗಳನ್ನಳೆದು ತುಲನಾತ್ಮಕವಾಗಿ ಯಾರು ಹೆಚ್ಚು ಎತ್ತರವಾಗಿದ್ದಾರೆ, ಯಾರು ಹೆಚ್ಚು ಭಾರವಾಗಿದ್ದಾರೆ ಎಂದು ಹೇಳಬಹುದು. ಆದರೆ ಬುದ್ಧಿಶಕ್ತಿಯಲ್ಲಿ ಯಾರು ಹೆಚ್ಚು ಬುದ್ಧಿವಂತರೆಂದು ಹೇಳಲು ಸುಲಭವಾದ ಮಾಪನಗಳಿಲ್ಲ. ಮನೋವಿಜ್ಞಾನಿಗಳು ನಮ್ಮ ಬುದ್ಧಿಶಕ್ತಿಯನ್ನಳೆಯುವ ವಿಶೇಷವಾದ ಪರೀಕ್ಷೆಗಳನ್ನು ಸೃಷ್ಟಿಸಿದ್ದಾರೆ. ಇಂಥ ವಿಶಿಷ್ಟ ಪರೀಕ್ಷೆಗಳಲ್ಲಿ ಪಡೆದ ಅಂಕಗಳ ಸಹಾಯದಿಂದ ಆ ವ್ಯಕ್ತಿಯ ಮಾನಸಿಕ ವಯಸ್ಸೆಷ್ಟೆಂದು ತಿಳಿಯಬಹುದು. ಆತನ ಮಾನಸಿಕ ವಯಸ್ಸು ಆತನ ದೈಹಿಕ ವಯಸ್ಸಿಗೆ ಯಾವ ಪ್ರಮಾಣದಲ್ಲಿದೆಯೆಂದು ಲೆಕ್ಕ ಹಾಕಿ ದೊರೆತ ಉತ್ತರವನ್ನು 100 ರಿಂದ ಗುಣಿಸಿದಾಗ ಸಿಗುವ ಶುದ್ಧ ಸಂಖ್ಯೆಗೆ ಆ ವ್ಯಕ್ತಿಯ ಐ.ಕ್ಯೂ. (Intelligence Quotient) ಎಂದು ಕರೆಯಲಾಗುತ್ತದೆ.


ಐ.ಕ್ಯೂ. = (ಮಾನಸಿಕ ವಯಸ್ಸು - ದೈಹಿಕ ವಯಸ್ಸು) X 100. ಉದಾಹರಣೆಗೆ ಆರು ವರ್ಷದ ಬಾಲಕಿಯ ಮಾನಸಿಕ ವಯಸ್ಸು ಒಂಬತ್ತು ವರ್ಷಗಳಾಗಿದ್ದಲ್ಲಿ ಅವಳ ಐ.ಕ್ಯೂ. 150 ಆಗಿರುತ್ತದೆ. ಒಬ್ಬ ಎಂಟು ವರ್ಷದ ಬಾಲಕನ ಮಾನಸಿಕ ವಯಸ್ಸು ಹನ್ನೆರಡು ವರ್ಷವಾಗಿದ್ದಲ್ಲಿ ಆತನ ಐ.ಕ್ಯೂ. ಸಹ 150 ಆಗಿರುವುದು. ತುಲನಾತ್ಮಕವಾಗಿ ಈ ಆರು ವರ್ಷದ ಬಾಲಿಕೆ ಹಾಗೂ ಎಂಟು ವರ್ಷದ ಬಾಲಕನ ಬುದ್ಧಿಶಕ್ತಿ ಒಂದೇ ಆಗಿದೆ. ಆದರೆ ಅವರಿಬ್ಬರೂ ಅತಿ ಹೆಚ್ಚಿನ ಪ್ರತಿಭಾಶಾಲಿಗಳಾಗಿದ್ದಾರೆ. ಐ.ಕ್ಯೂ. ಪರೀಕ್ಷೆಗಳ ಪ್ರಶ್ನೆಗಳು ವ್ಯಕ್ತಿಯ ಬುದ್ಧಿಶಕ್ತಿಯ ಸಾಮರ್ಥ್ಯವನ್ನು ಅಳೆಯುತ್ತವೆ. ಇಂಥ ಪರೀಕ್ಷೆಗೆ ಮೊದಲು ಸ್ವಲ್ಪ ಜ್ಞಾನ ಹಾಗೂ ಅನುಭವಗಳಿರುವುದವಶ್ಯ. ಇಪ್ಪತ್ತನೆಯ ಶತಮಾನದ ಮೊದಲ ದಶಕದಲ್ಲಿ ಐ.ಕ್ಯೂ. ಪರೀಕ್ಷೆಗಳ ಬಳಕೆ ಪ್ರಾರಂಭವಾಯಿತು. 1950ರವರೆಗೆ ಈ ಪರೀಕ್ಷೆಗಳ ಬಗೆಗೆ ತುರುಸಿನ ವಾದವಿವಾದಗಳೆದ್ದವು. ಬುದ್ಧಿಶಕ್ತಿಯು ಒಂದೇ ರೂಪದಲ್ಲಿಲ್ಲ. ಕೆಲವು ವಿಜ್ಞಾನಿಗಳು ಬುದ್ಧಿಶಕ್ತಿಯ ಕಲ್ಪನೆಯಲ್ಲಿ ವಿವಿಧ ಘಟಕಗಳನ್ನು ಗುರುತಿಸಿದರು. ಅಂಕಿಸಂಖ್ಯೆ ಬಳಕೆ, ಸ್ಥಳಾವಕಾಶದ ಕಲ್ಪನೆ (Spatial Concept), ಶಬ್ದಗಳ, ಭಾಷೆಯ ಬಳಕೆ, ತಾರ್ಕಿಕ ಅನುಗಮನದ ಸಾಮರ್ಥ್ಯಗಳು ಐ.ಕ್ಯೂ. ಪರೀಕ್ಷೆಗಳಲ್ಲಿ ಅಳವಡಿಸಲ್ಪಟ್ಟವು. ಮತ್ತೆ ಕೆಲವು ಮನೋವಿಜ್ಞಾನಿಗಳು ಬುದ್ಧಿಶಕ್ತಿಯಲ್ಲಿ ಒಂದು ನೂರಕ್ಕಿಂತಲೂ ಹೆಚ್ಚಿನ ವಿವಿಧ ಘಟಕಗಳನ್ನು ಪ್ರತಿಪಾದಿಸಿದ್ದಾರೆ! ಐ.ಕ್ಯೂ. ಪರೀಕ್ಷೆಗಳಿಂದ ಬುದ್ಧಿಶಕ್ತಿಯನ್ನಳೆದು ಅಂಥ ವಿದ್ಯಾರ್ಥಿಯು ತನ್ನ ಶಾಲಾ, ಕಾಲೇಜು ಪರೀಕ್ಷೆಗಳಲ್ಲಿ ಎಂಥ ಮಟ್ಟವನ್ನು ಸಾಧಿಸಬಹುದೆಂದು ನಾವು ಹೇಳಲು ಸಾಧ್ಯ. ಆದರೆ ಆ ವ್ಯಕ್ತಿಯು ಜೀವನದಲ್ಲಿ ಎಂಥ ಸಾಧನೆಗಳನ್ನು ಮಾಡಬಲ್ಲ ಎಂದು ಭವಿಷ್ಯ ನುಡಿಯಲು ಸಾಧ್ಯವಿಲ್ಲ. ಮೊದಲನೆಯ ಮಹಾಯು

ಧ್ಧದ ಸಮಯದಲ್ಲಿ ಅಮೆರಿಕೆಯಲ್ಲಿ ಪ್ರಥಮ ಬಾರಿಗೆ ಐ.ಕ್ಯೂ. ಪರೀಕ್ಷೆಗಳನ್ನು ಉಪಯೋಗಿಸಿ ಸೈನ್ಯ ಪಡೆಯಲ್ಲಿನ ಉತ್ತಮ ಬುದ್ಧಿಶಕ್ತಿಯ ಸೈನಿಕರನ್ನು ಸಾಮಾನ್ಯ ಬುದ್ಧಿಶಕ್ತಿಯವರಿಂದ ಬೇರ್ಪಡಿಸಿ, ಅವರಿಗೆ ವಿಶೇಷ ತರಬೇತಿ, ವಿಶಿಷ್ಟ ಹಾಗೂ ಕ್ಲಿಷ್ಟವಾದ ಕೆಲಸ, ಬಡತಿಯನ್ನು ಕೊಟ್ಟರು. ಅದರ ಯಶಸ್ಸಿನಿಂದಾಗಿ ಈಗ ಐ.ಕ್ಯೂ. ಪರೀಕ್ಷೆಗಳನ್ನು ಅನೇಕ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಸೈನ್ಯ, ಪೊಲೀಸು ವಿಭಾಗ ಮುಂತಾದವುಗಳನ್ನು ಸೇರಬಯಸುವ ಅಭ್ಯರ್ಥಿಗಳಿಗೆ ಕೊಡುವ ಏರ್ಪಾಡು ಇದೆ. ಬ್ರಿಟಿಶ್ ಲೇಲಂಡ್ ಕಂಪನಿಯಲ್ಲಿ ಕೆಲಸಕ್ಕೆ ಅರ್ಜಿ ಹಾಕಿದವರನ್ನು ಇಂಥ ಬಗೆಯ ಪರೀಕ್ಷೆಗೆ ಮೊದಲು ಗುರಿ ಮಾಡುತ್ತಾರೆಂದು ಆ ಕಂಪನಿಯ ಹಿರಿಯ ಅಧಿಕಾರಿಗಳೊಬ್ಬರು ನನಗೆ ತಿಳಿಸಿದ್ದರು. (ಬೇರೆ ಕಂಪನಿಗಳೂ ಬೇರೊಂದು ರೂಪದಲ್ಲಿ ಬಳಸಿರಬಹುದು.)

ಸುಮಾರು ಆರು ವರ್ಷಗಳ ಮಕ್ಕಳ ಬುದ್ಧಿಶಕ್ತಿಯನ್ನಳೆದು ಅವರು ವಯಸ್ಕರಾದಾಗ ಯಾವ ಮಟ್ಟದ ಐ.ಕ್ಯೂ. ಹೊಂದಲು ಸಾಧ್ಯ ಎಂದು ಹೇಳಬಹುದು. ಸುಮಾರು ಇಪ್ಪತ್ತೈದು ವರ್ಷದವರಾದಾಗ ಐ.ಕ್ಯೂ. ಸ್ಥಿರವಾಗುಳಿಯುವುದು. ಆದರೆ ನಲವತ್ತು ವರ್ಷದಿಂದ ಅದು ಕ್ರಮೇಣ ಕಡಿಮೆಯಾಗುತ್ತ ಸಾಗುವುದು. ಹೆಚ್ಚಿನ ಬುದ್ಧಿಶಾಲಿಗಳಲ್ಲಿ ಕಡಿಮೆಯಾಗುವ ವೇಗವೂ ನಿಧಾನವಾಗಿರುತ್ತದೆ. ಆದರೆ ಈ ಐ.ಕ್ಯೂ. ಪರೀಕ್ಷೆಗಳ ಬಗೆಗೆ ಹಲವರು ಟೀಕೆ ಮಾಡಿದ್ದಾರೆ. ಈ ಶತಮಾನದ ಆದಿಯಲ್ಲಿ ರಚಿತವಾದ ಇಂಥ ಪರೀಕ್ಷೆಗಳಲ್ಲಿ ಇಂದಿನ ಸ್ಥಿತಿಗತಿಗನುಗುಣವಾಗಿ ಮಾರ್ಪಾಟು ಮಾಡಿಲ್ಲವೆಂದೂ, ಪುನರ್ ಪ್ರಮಾಣೀಕರಿಸಿಲ್ಲವೆಂದೂ ಆಕ್ಷೇಪಿಸಿದ್ದಾರೆ. ಸಮಾಜದಲ್ಲಿ ಬಡವರನ್ನು, ಕೆಳವರ್ಗದವರನ್ನು ಹತ್ತಿಕ್ಕಲು ಇಂಥ ಪರೀಕ್ಷೆಗಳನ್ನು ಮನೋವಿಜ್ಞಾನಿಗಳು ರೂಪಿಸಿದ್ದಾರೆ ಎಂದು ಪ್ರೊ. ಕಾಮಿನ್ ಟೀಕೆ ಮಾಡಿದ್ದಾರೆ. ತರಬೇತಿಯಿಂದ ಹಾಗೂ ಪದೇ ಪದೇ ಐ.ಕ್ಯೂ. ಪರೀಕ್ಷೆಯ ಪ್ರಶ್ನೆಗಳನ್ನು ಬಿಡಿಸುವುದರಿಂದ ಮತ್ತೊಮ್ಮೆ ಐ.ಕ್ಯೂ. ಪರೀಕ್ಷೆ ಮಾಡಿದಲ್ಲಿ ಹೆಚ್ಚಿನ ಐ.ಕ್ಯೂ. ಪಡೆಯಲು ಸಾಧ್ಯ. ಆದರೆ ಮೂರನೆಯ ಸಲ ಪರೀಕ್ಷೆಗೊಳಗಾದ ನಂತರ ಈ ತರಹದ ಐ.ಕ್ಯೂ. ಹೆಚ್ಚಳವಾಗದೆಂದು ಮನೋವಿಜ್ಞಾನಿಗಳು ಸಂಶೋಧನೆಯಿಂದ ಕಂಡುಕೊಂಡಿದ್ದಾರೆ. ಪರೀಕ್ಷಾ ಪದ್ಧತಿಯ ಪರಿಚಯ, ಅದರ ಬಗೆಗಿನ ಕಾತರ ಕಡಿಮೆ ಮಾಡುವದು ಕೆಲವೇ ಅಂಕಗಳನ್ನು ಹೆಚ್ಚಿಸಲು ಸಾಧ್ಯ. ನಿಜವಾಗಿಯೂ ವ್ಯಕ್ತಿಯ ಐ.ಕ್ಯೂ.ದಲ್ಲಿ ಹೆಚ್ಚಳ



ದೊಡ್ಡ ಮಿದುಳಿನ ಎಡ ಅರೆಗೋಳ.



ಮಧ್ಯದಲ್ಲಿ ದೊಡ್ಡ ಮಿದುಳನ್ನು ಕತ್ತರಿಸಿ ಮುಂದುಗಡೆಯಿಂದ ನೋಡಿದಾಗ.

ಹಾಗದು. ಮೇಲೆ ತಿಳಿಸಿದಂತೆ ಐ.ಕ್ಯೂ. ಒಂದು ನಿರ್ದಿಷ್ಟವಾದ ಸಂಖ್ಯೆ. ಐ.ಕ್ಯೂ. ಗಣನೆಗೆ ತೆಗೆದುಕೊಂಡು ವ್ಯಕ್ತಿಯ ಬುದ್ಧಿಶಕ್ತಿಯನ್ನು ವಿಜ್ಞಾನಿಗಳು ಕೆಳಗಿನಂತೆ ವಿಂಗಡಿಸಿದ್ದಾರೆ.

ಐ.ಕ್ಯೂ. ಸಂಖ್ಯೆ	ಬುದ್ಧಿಶಕ್ತಿ
90-110	ಸಾಮಾನ್ಯ ಬುದ್ಧಿಶಕ್ತಿ
110-120	ಸಾಮಾನ್ಯ ಪ್ರತಿಭಾಶಾಲಿಗಳು
120-130	ಹೆಚ್ಚಿನ ಪ್ರತಿಭಾಶಾಲಿಗಳು
130ಕ್ಕಿಂತ ಹೆಚ್ಚಿಗೆ	ಅತಿ ಹೆಚ್ಚಿನ ಪ್ರತಿಭಾಶಾಲಿಗಳು

(70ಕ್ಕಿಂತ ಕಡಿಮೆ ಇದ್ದಲ್ಲಿ ಮಂದ ಬುದ್ಧಿಯವರಾಗಿರುತ್ತಾರೆ.)

ಬುದ್ಧಿಶಕ್ತಿಯು ಸ್ವಭಾವ ಜನ್ಯವಾದುದೋ ಅಥವಾ ನಾವು ಅದನ್ನು ಜೀವನದಲ್ಲಿ ಕ್ರಮೇಣವಾಗಿ ದೊರಕಿಸಿಕೊಂಡಿರುವುದೋ ಎಂದು ಕೇಳುವುದು ಸ್ವಾಭಾವಿಕ. ಈ ಬಗೆಗೂ ವಿಜ್ಞಾನಿಗಳು ವಾದವಿವಾದಗಳನ್ನು ಮಾಡಿದ್ದರು. ಆನುವಂಶಿಕತೆ ಹಾಗೂ ಪರಿಸರದ ಪ್ರಭಾವಗಳು ವ್ಯಕ್ತಿಯ ಬುದ್ಧಿಶಕ್ತಿಯನ್ನು ನಿರ್ಧರಿಸುತ್ತವೆ. ಆದರೆ ಯಾವುದು ಪ್ರಮುಖವಾದದ್ದು? ಬುದ್ಧಿಶಕ್ತಿಯು ''ಹುಟ್ಟಿನಿಂದ ಬಂದ ಸಾಮಾನ್ಯ ಅರಿವಿನ ಸಾಮರ್ಥ್ಯ'' ಎಂದು ಪ್ರೊ.ಬರ್ಟ್ ವ್ಯಾಖ್ಯೆ ಕೊಟ್ಟಿದ್ದಾರೆ. ಆದರೆ ಬುದ್ಧಿಶಕ್ತಿಯನ್ನಳೆಯುವಾಗ ಸಮಾಜದಲ್ಲಿ ಆ ವ್ಯಕ್ತಿಯ ಬೆಳವಣಿಗೆ, ಅನುಭವ, ಶಿಕ್ಷಣದ ಪ್ರಭಾವಗಳನ್ನು ನಾವು ಬೇರ್ಪಡಿಸಲು ಸಾಧ್ಯವಿಲ್ಲ! ಆರ್ಥಿಕ ಹಾಗೂ ಸಾಮಾಜಿಕ ವರ್ಗಗಳೂ ನಮ್ಮ ಬುದ್ಧಿಶಕ್ತಿಯ ಮೇಲೆ ತಮ್ಮ ಪ್ರಭಾವ ಬೀರುತ್ತವೆ ಎಂದು ವಿವಿಧ ತಜ್ಞರು ತೋರಿಸಿದ್ದಾರೆ. ಸ್ವತಃ ಅತ್ಯಂತ ಪ್ರತಿಭಾಶಾಲಿಯಾದ ಸರ್ ಫ್ರಾನ್ಸಿಸ್ ಗಾಲ್ಟನ್ (ಈತ ಚಾರ್ಲ್ಸ್ ಡಾರ್ವಿನ್, ಇರ್ಯಾಸ್ಮಸ್ ಡಾರ್ವಿನ್‌ರಿಗೆ ಸಂಬಂಧಿಕ) 1869ರಲ್ಲಿ ಪ್ರಕಟಿಸಿದ ಪುಸ್ತಕದಲ್ಲಿ, ಬ್ರಿಟನ್ನಿನಲ್ಲಿ ಕೆಲವು ವಿಶಿಷ್ಟವಾದ ಮನೆತನಗಳಲ್ಲಿ ಅನೇಕರು ಗಮನಾರ್ಹವಾದ ಸಾಮಾಜಿಕ ಸಾಧನೆಗಳನ್ನು ನಿರ್ವಹಿಸಿರುವದನ್ನು ತೋರಿಸಿ, ಇಂಥ ನಿರೀಕ್ಷಣೆಯನ್ನು ಬಳಸಿ ಬುದ್ಧಿಶಕ್ತಿಯು ಆನುವಂಶಿಕವೆಂದು ವಾದಿಸಿದ. ಆದರೆ ಇಂಥ ಮನೆತನಗಳ ವ್ಯಕ್ತಿಗಳ ಬೌದ್ಧಿಕ ಸಾಧನೆಗಳು ಬುದ್ಧಿಶಕ್ತಿಯ ಆನುವಂಶಿಕತೆಯನ್ನು ಪ್ರತಿಬಿಂಬಿಸುತ್ತವೆಯೋ ಇಲ್ಲವೇ ಆ ವ್ಯಕ್ತಿಗಳ ಸಾಂಸ್ಕೃತಿಕ ಪ್ರಭಾವ, ಸಾಮಾಜಿಕ ಸ್ಥಿತಿ, ಪರಿಸರದ ಪ್ರಭಾವಗಳು ಕಾರಣವೋ ತಿಳಿಯದು. ಮಾನವನ ಗ್ರಹಿಕೆ ಹಾಗೂ ಬುದ್ಧಿಶಕ್ತಿಯ ಬಗೆಗೆ ವಿವರವಾಗಿ ಫ್ರಾನ್ಸಿಸ್ ಗಾಲ್ಟನ್ ಮೊದಲ ಬಾರಿ ಆಲೋಚಿಸಿದನೆಂದೂ ಇವನೇ ಆಧುನಿಕ ಮನೋವಿಜ್ಞಾನದ ಅಡಿಗಲ್ಲು ಹಾಕಿದನೆಂದೂ ಕೆಲವರು ಹೇಳಿದ್ದಾರೆ.

ಮಕ್ಕಳು ಬುದ್ಧಿಶಕ್ತಿಯಲ್ಲಿ ತಮ್ಮ ತಂದೆತಾಯಿಗಳನ್ನು ಹೋಲುತ್ತಾರೆ ಎಂದು ಈಗ ಒಪ್ಪಿಕೊಳ್ಳಲಾಗಿದೆ. ತದ್ರೂಪಿ ಅವಳಿಗಳು (Identical Twins) ಮತ್ತು ಭ್ರಾತ್ರೀಯ ಅವಳಿಗಳ (Fraternal Twins) ಮೇಲೆ ನಡೆಸಿದ ಪ್ರಯೋಗಗಳು ಆನುವಂಶಿಕತೆಯ ವಾದಕ್ಕೆ ಪುಷ್ಟಿ ಕೊಡುತ್ತವೆ. ತಂದೆತಾಯಿಗಳಿಂದ ಪಡೆದ ಆನುವಂಶಿಕತೆಯಲ್ಲಿ ತದ್ರೂಪಿ ಅವಳಿಗಳು ನೂರಕ್ಕೆ ನೂರು ಪಾಲು ಒಬ್ಬರನ್ನೊಬ್ಬರು ಹೋಲುತ್ತಾರೆ. ಆನುವಂಶಿಕತೆಯ ದೃಷ್ಟಿಯಲ್ಲಿ ತದ್ರೂಪಿ ಅವಳಿಗಳು ಒಂದೇ ಜೀವ ಎಂದು ಬಗೆಯಬಹುದು. ಆದರೆ ಅವಳಿಗಳಾಗಿ ಜನಿಸಿದ್ದರೂ ಕೂಡ ಭ್ರಾತ್ರೀಯ ಅವಳಿಗಳು ಆನುವಂಶಿಕತೆ ದೃಷ್ಟಿಯಿಂದ ಭಿನ್ನವಾಗಿರುವರು. ಚಿಕ್ಕ ವಯಸ್ಸಿನಲ್ಲೇ ಬೇರ್ಪಟ್ಟು ವಿಭಿನ್ನವಾದ ಪರಿಸರಗಳಲ್ಲಿ ಬೆಳೆದ ತದ್ರೂಪಿ ಅವಳಿಗಳ ಬುದ್ಧಿಶಕ್ತಿಯಲ್ಲಿ ಏಕರೂಪತೆ ಕಂಡುಬರುತ್ತದೆ. ಇಂಥ ನಿರೀಕ್ಷಣೆ ಆನುವಂಶಿಕತೆಯ ಮಹತ್ವವನ್ನು ತೋರಿಸುತ್ತದೆ. ಈ ತರಹದ ಪ್ರಯೋಗದಲ್ಲಿ ಒಂದೇ ಆನುವಂಶಿಕತೆಯು ವಿಭಿನ್ನ ಪರಿಸರದಲ್ಲಿ ಬೆಳೆದದ್ದನ್ನು ಗಮನಿಸಬಹುದು. ಇದಕ್ಕೆ ತದ್ವಿರುದ್ಧವಾದ ಪ್ರಯೋಗವೆಂದರೆ, ಆನುವಂಶಿಕತೆಯನ್ನು ವಿಭಿನ್ನವಾಗಿರಿಸಿ ಪರಿಸರವನ್ನು ಒಂದೇ ಬಗೆಯದಾಗಿ ಮಾಡುವುದು. ಇಂಥ ಪರಿಸ್ಥಿತಿ, ಪ್ರಯೋಗ ಅನಾಥಾಶ್ರಮಗಳಲ್ಲಿ ಸಾಧ್ಯ. ಹುಟ್ಟಿದೊಡನೆಯೇ ಪಾಲಕರಿಂದ ದೂರವಾಗಿ, ಅನಾಥಾಶ್ರಮಗಳಲ್ಲಿ ಬೆಳೆದ ಮಕ್ಕಳ ಐ.ಕ್ಯೂ.



ನನ್ನ ತಲೆಗೆ ಸಖತ್ ಹೊಡೆತ ಬಿದ್ದಿದೆ
... ಅದಕ್ಕೆ ನಾನಿವತ್ತು ಸ್ಕೂಲ್‌ಗೆ
ಬರಲ್ಲ... ಸಾ....

ಪರೀಕ್ಷಿಸಿದಾಗ ಅವರ ಬುದ್ಧಿಶಕ್ತಿಯಲ್ಲಿ ಭಿನ್ನತೆ ಕಂಡುಬಂದಿದೆ. ಪರಿಸರವೇ ಪ್ರಮುಖ ಪಾತ್ರವಹಿಸಿದ್ದರೆ ಅನಾಥಾಶ್ರಮದ ಎಲ್ಲ ಮಕ್ಕಳ ಐ.ಕ್ಯೂ. ಒಂದೇ ಬಗೆಯದಾಗಿರಬೇಕು. ವಾಸ್ತವದಲ್ಲಿ ಅದು ಬೇರೆಯಾಗಿದೆ. ಆನುವಂಶಿಕತೆ ಪರಿಸರಕ್ಕಿಂತ ಹೆಚ್ಚಿನ ಪಾತ್ರವಹಿಸುವುದೇ ಅದಕ್ಕೆ ಕಾರಣ. ಪ್ರಯೋಗಶಾಲೆಗಳಲ್ಲಿ ಪ್ರಾಣಿಗಳ ವಿವಿಧ ತಳಿಗಳ ಮೇಲೆ ಪ್ರಯೋಗ ಮಾಡಿ ಮನೋವಿಜ್ಞಾನಿಗಳು ಆನುವಂಶಿಕತೆಯ ಮಹತ್ವವನ್ನು ಕಂಡುಕೊಂಡಿದ್ದಾರೆ. ಆನುವಂಶಿಕತೆಯು 80% ಮತ್ತು ಪರಿಸರವು 20% ಕಾರಣೀಭೂತವಾಗಿ ನಮ್ಮ ಬುದ್ಧಿಶಕ್ತಿಯನ್ನು ನಿರ್ಧರಿಸುತ್ತವೆಯೆಂದು ಮನೋವಿಜ್ಞಾನಿಗಳು ಬಗೆದಿದ್ದಾರೆ. ಆದರೆ ಇಂಥ ಹೇಳಿಕೆ ಮುಂಬರುವ ಐದಾರು ದಶಕಗಳಲ್ಲಿ ಬೇರೆಯಾಗಿರುವುದೆಂದು ಲಂಡನ್ನಿನ ಮನೋವಿಜ್ಞಾನಿ ಪ್ರೊ. ಐಜೆಂಕ್ ವಾದಿಸುತ್ತಾರೆ. ಬರಲಿರುವ ಸಮಾಜದಲ್ಲಿ ಜನರಿಗೆ ಆಹಾರ, ಶಿಕ್ಷಣ ಮತ್ತಿತರ ಸೌಲಭ್ಯಗಳು ಸರಿಸಮಾನವಾಗಿ ದೊರೆಯುವುದು ಸಾಧ್ಯ. ಇದರಿಂದಾಗಿ ಪರಿಸರದ ಪ್ರಭಾವಕ್ಕಿಂತಲೂ ಆಗ ಆನುವಂಶಿಕತೆಯು ವ್ಯಕ್ತಿಯ ಬುದ್ಧಿಶಕ್ತಿಯನ್ನು ನಿರ್ಧರಿಸುವಲ್ಲಿ ಇನ್ನೂ ಹೆಚ್ಚಿನ ಪಾತ್ರವಹಿಸುತ್ತದೆ.

''ಹೆಂಗಸರ ಬುದ್ಧಿ ಮೊಳಕಾಲ ಕೆಳಗೆ'' ಎಂದು ಹೇಳುವುದು ಕೇವಲ ಗಾದೆ ಮಾತಿಗಾಗಿ ಎಂದು ನಾವು ಅರಿತಿರುವುದು ಅವಶ್ಯವಾಗಿದೆ. ಪುರುಷ ಹಾಗೂ ಸ್ತ್ರೀಯರ ಸಾಮಾನ್ಯ ಬುದ್ಧಿಶಕ್ತಿಯಲ್ಲಿ ಅಂತರವಿಲ್ಲವೆಂದು ತಿಳಿದಿದೆ. ಆದಾಗ್ಯೂ ಕೆಲವು ವಿಭಾಗಗಳಲ್ಲಿ ಪುರುಷರು ಸ್ತ್ರೀಯರಿಗಿಂತ ಹೆಚ್ಚಿನ ಐ.ಕ್ಯೂ. ಹೊಂದಿರುವುದು ತಿಳಿದಿದೆ. ಉದಾ: ತಾಂತ್ರಿಕ ಸಾಮರ್ಥ್ಯದ ಬುದ್ಧಿಶಕ್ತಿ, ಸ್ಥಳಾವಕಾಶದ ಕಲ್ಪನೆಯಲ್ಲಿ ಅಂಕಿಸಂಖ್ಯೆಗಳ ತರ್ಕಣೆಯ ಬುದ್ಧಿಶಕ್ತಿಯಲ್ಲಿ. ಆದರೆ, ಸ್ತ್ರೀಯರು ವಿವರಗಳನ್ನರಿಯುವ ಬುದ್ಧಿಶಕ್ತಿ, ಶಬ್ದ ಬಳಕೆಯ ಹಾಗೂ ಸ್ಮರಣೆಯ ಬುದ್ಧಿಶಕ್ತಿಯಲ್ಲಿ ಹೆಚ್ಚಿನ ಅಂಕಗಳನ್ನು ಪಡೆಯುತ್ತಾರೆ.

ಶಾಲಾ, ಕಾಲೇಜು ಪರೀಕ್ಷೆಗಳಲ್ಲಿ ಹೆಚ್ಚು ಗುಣಗಳನ್ನು ಪಡೆದು ಪಾಸಾದಾಕ್ಷಣ ಆ ವಿದ್ಯಾರ್ಥಿ-ವಿದ್ಯಾರ್ಥಿನಿಯ ಬುದ್ಧಿಶಕ್ತಿ ಹೆಚ್ಚಿನದೆಂದೂ, ಅದೇ ಪರೀಕ್ಷೆಯಲ್ಲಿ ಕಡಿಮೆ ಅಂಕ ಪಡೆದ ವಿದ್ಯಾರ್ಥಿ-ವಿದ್ಯಾರ್ಥಿನಿಯ ಬುದ್ಧಿಶಕ್ತಿ ಕಡಿಮೆ ಎಂದೂ ಹೇಳಲು ಸಾಧ್ಯವಿಲ್ಲ. ಕೆಲವರಿಗೆ ಪರೀಕ್ಷೆಗಾಗಿ ಓದುವ ಜಿಗುಟುತನ, ಏಕಾಗ್ರತೆ, ಪ್ರೇರಣೆ, ಹಂಬಲಗಳಿಲ್ಲದೇ ಇರಬಹುದು. ಕೆಲವರಿಗೆ ಪಠ್ಯಪುಸ್ತಕಗಳು ಬಲು ನೀರಸವಾಗಿ ತೋರಬಹುದು. ಅಂಥವರು ಕಡಿಮೆ ಅಂಕ ಪಡೆಯಬಹುದು! ಜಗತ್ಪ್ರಸಿದ್ಧ ಗಣಿತಜ್ಞ, ವಿಜ್ಞಾನಿ ಸರ್ ಐಸಾಕ್ ನ್ಯೂಟನ್ ಶಾಲೆಯ ಗಣಿತ ಪರೀಕ್ಷೆಯಲ್ಲಿ ನಪಾಸು ಆಗಿದ್ದನಂತೆ! ಐನ್‌ಸ್ಟೀನ್ ಕೂಡ ಎಂಟ್ರನ್ಸ್ ಪರೀಕ್ಷೆಯಲ್ಲಿ ನಾಪಾಸು ಆಗಿದ್ದನ್ನು ಪದೇ ಪದೇ ಉದಾಹರಿಸಲಾಗುತ್ತದೆ.

ಸಾಮಾನ್ಯವಾಗಿ ಕಡಿಮೆ ಐ.ಕ್ಯೂ. ಇರುವಂಥವರು ಬೌದ್ಧಿಕ ಹಾಗೂ ಪಾಂಡಿತ್ಯವನ್ನರಸಿಕೊಂಡು ಹೋಗುವಂಥ ಕಾರ್ಯಗಳಲ್ಲಿ ಹೆಚ್ಚು ಸಫಲತೆ ಹೊಂದಲಾರರು. ನಮ್ಮ ಸಾಧನೆಗಳಿಗೆ ಬುದ್ಧಿಶಕ್ತಿಯು ಅತ್ಯವಶ್ಯ. ಆದರೆ ಅದೊಂದೇ ನಮ್ಮ ಯಶಸ್ಸಿಗೆ ಕಾರಣವಾಗದು. ಒಂದೇ

ಬಗೆಯ ಬುದ್ಧಿಶಕ್ತಿಯನ್ನು ಹೊಂದಿದ ಇಬ್ಬರಲ್ಲಿ ಹಂಬಲಗಳು, ಆದರ್ಶಗಳು, ಧ್ಯೇಯ ಗುರಿಗಳು, ಪ್ರೇರಣೆ, ಜಿಗುಟುತನಗಳು ಭಿನ್ನವಾದಲ್ಲಿ ಅವರಿಬ್ಬರ ಸಾಧನೆಗಳೂ ಭಿನ್ನವಾಗಿರುವುದರಲ್ಲಿ ಸಂದೇಹವಿಲ್ಲ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಪದವಿ ಪರೀಕ್ಷೆಗಳಲ್ಲಿ ಪ್ರಥಮ ವರ್ಗದಲ್ಲಿ ತೇರ್ಗಡೆಯಾಗುವ ವಿದ್ಯಾರ್ಥಿ ವಿದ್ಯಾರ್ಥಿನಿಯರು ಐ.ಕ್ಯೂ. ಪರೀಕ್ಷೆಗಳಲ್ಲಿ ಇತರ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗಿಂತ ಹತ್ತು ಅಂಕಗಳನ್ನು ಹೆಚ್ಚು ಪಡೆದಿರುತ್ತಾರೆ. (ನಮ್ಮ ದೇಶದಲ್ಲಿ ಪರೀಕ್ಷಾ ಪದ್ಧತಿಯು ಅವಹೇಳನಕರವಾದ ಒಂದು ನಾಟಕವಾಗಿದ್ದು ಇಂಥ ನಿರೀಕ್ಷಣೆ ಮಾಡಲು ಸಾಧ್ಯವಿಲ್ಲ. ಆ ಮಾತು ಬೇರೆ! ಪ್ರಥಮ ವರ್ಗದಲ್ಲಿ ತೇರ್ಗಡೆಯಾದ ವಿದ್ಯಾರ್ಥಿ ವಿದ್ಯಾರ್ಥಿನಿಯರೂ ಅಶುದ್ಧವಾಗಿಯೂ ಅಸಂಬದ್ಧವಾಗಿಯೂ ಭಾಷೆಯ ಬಳಕೆ ಮಾಡುತ್ತಿರುವುದನ್ನು ನಾವೆಲ್ಲ ಕಂಡು ಕಣ್ಣು ಮುಚ್ಚಿಕೊಂಡಿದ್ದೇವೆ!) ಜ್ಞಾನ ಹಾಗೂ ಬುದ್ಧಿಶಕ್ತಿಯಲ್ಲಿ ಭೇದವಿದೆ. ಹಾಗೆ ನೋಡಿದರೆ ನಮ್ಮ ಶಾಲಾಕಾಲೇಜು ಪರೀಕ್ಷೆಗಳು ಸ್ಮರಣೆಯನ್ನೇ ಹೆಚ್ಚು ಹೆಚ್ಚಾಗಿ ಪರೀಕ್ಷಿಸುತ್ತಿವೆ. ಪರೀಕ್ಷೆಗೆ ಮುನ್ನ ಕೇವಲ ಆರೆಂಟು ವಾರಗಳಲ್ಲಿ ಪುಸ್ತಕಗಳನ್ನೋ ಇಲ್ಲವೇ 'ಗೈಡು' ಪುಸ್ತಕಗಳನ್ನೋ ಓದಿ ಪದೇ ಪದೇ ಅದೇ ರೂಪದಲ್ಲಿ ಬರುವ ಪ್ರಶ್ನೆಗಳಿಗೆ ಉತ್ತರ ಬಾಯಿಪಾಠ ಮಾಡಿ ಉತ್ತಮ ಅಂಕಗಳನ್ನು ಪಡೆಯುವ ವಿದ್ಯಾರ್ಥಿಗಳನ್ನು ನಾವೆಲ್ಲ ಕಂಡಿದ್ದೇವೆ. ಅದು ನಮ್ಮ ಶಿಕ್ಷಣದ, ಪರೀಕ್ಷಾ ಪದ್ಧತಿಯ ಕೊರತೆಯಾಗಿದೆಯೇ ವಿನಹ ವಿದ್ಯಾರ್ಥಿಯ ಜ್ಞಾನ ಹಾಗೂ ಬುದ್ಧಿಶಕ್ತಿಯ ಸಾಮರ್ಥ್ಯವನ್ನು ಪರೀಕ್ಷಿಸುವುದಿಲ್ಲ.

ಸುಮಾರು 140ಕ್ಕಿಂತ ಹೆಚ್ಚಿನ ಐ.ಕ್ಯೂ. ಹೊಂದಿರುವ ವ್ಯಕ್ತಿ ಬೌದ್ಧಿಕವಾಗಿ ಬಹಳ ಬಲವಂತದಿಂದ ಬೆಂಬತ್ತಿ ಸಾಧಿಸಬೇಕಾದ ಕೆಲಸಗಳಲ್ಲಿ ಕೂಡ ತನ್ನ ಅತ್ಯುತ್ತಮ ಕೌಶಲವನ್ನು ಪ್ರತಿಭೆಯನ್ನು ತೋರಿದಾಗ ಅಂಥವರಿಗೆ ಜೀನಿಯಸ್ ಎಂದು ಕರೆಯುತ್ತಾರೆ. ಕೇವಲ 140ಕ್ಕಿಂತ ಹೆಚ್ಚಿಗೆ ಐ.ಕ್ಯೂ. ಇದ್ದವರೆಲ್ಲರಿಗೂ 'ಜೀನಿಯಸ್' ಎನ್ನಲಾಗದು. ಅಂತೆಯೇ ಕಾಲೇಜಿನಲ್ಲಿ ವರ್ಷಂಪ್ರತಿ ಅದೇ ಪಾಠ ಕೊಡುವ ಪ್ರಾಧ್ಯಾಪಕರು ಬೇಂದ್ರೆ, ಕುವೆಂಪು, ಕುಮಾರವ್ಯಾಸ, ರತ್ನಾಕರವರ್ಣಿಗಳ ಎಲ್ಲ ಪದ್ಯಗಳನ್ನೂ ಕಂಠಪಾಠದಿಂದ ಉಸುರುತ್ತಿದ್ದರೂ ಅವರುಗಳಿಗೆ ಜೀನಿಯಸ್ ಎನ್ನಲಾಗದು. ಅವರ ಸ್ಮರಣೆ ಮೆಚ್ಚುವಂಥದ್ದು. ಸಾವಿರಾರು ಶ್ಲೋಕ ಮಂತ್ರಗಳನ್ನು ಬಾಯಿಪಾಠ ಮಾಡಿರುವ ಭಟ್ಟರು ಆಚಾರ್ಯರುಗಳನ್ನು ನೀವು ಕಂಡಿಲ್ಲವೇ? ●

ತುಲಾಭಾರ

1965ನೇ ಇಸವಿಯಲ್ಲಿ ಇಂಡಿಯಾ ಪಾಕಿಸ್ತಾನಗಳಿಗೆ ಯುದ್ಧ ನಡೆಯುತ್ತಿದ್ದಾಗ, ರಕ್ಷಣಾ ಪ್ರಯತ್ನಗಳಿಗೆ ನಿಧಿ ಕೂಡಿಸುವ ಸಲುವಾಗಿ ಅನೇಕ ವ್ಯಕ್ತಿಗಳೂ ಸಂಸ್ಥೆಗಳೂ ಪ್ರಧಾನಿಯವರ ತೂಕಕ್ಕೆ ಸಮನಾದ ಚಿನ್ನ ಕೊಡಲು ಮುಂದೆ ಬಂದವು. ಆಗ ಪ್ರಧಾನಿಯಾಗಿದ್ದ ಲಾಲ್ ಬಹದ್ದೂರ್ ಶಾಸ್ತ್ರಿಯವರು, ''ಬೇಡ ಇದರಿಂದ ದೇಶಕ್ಕೆ ನಷ್ಟ. ನಾನೊಪ್ಪುವುದಿಲ್ಲ'' ಎಂದರು. ಸಂಬಂಧಪಟ್ಟವರಿಗೆ ಇದರಿಂದ ತುಂಬ ನಿರಾಸೆಯಾಯಿತು. ಆಗ ಪ್ರಧಾನಿಯವರು ತಮ್ಮ ನಕಾರಾತ್ಮಕವಾದ ಧೋರಣೆಯನ್ನು ವಿವರಿಸುತ್ತ ''ನಾನು ಪೀಚು ನನ್ನ ದೇಹಕ್ಕೆ ಹೆಚ್ಚು ತೂಕವಿಲ್ಲ'' ಎಂದರು ಪ್ರಧಾನಿಗಳು.

(ಸಂಗ್ರಹ) ಡಿ.ಗುಂಡೂರಾವ್

ಕೆ.ಟಿ. ಪಾಂಡುರಂಗಿ

ವ್ಯಕ್ತಿ-ಸಮಾಜ

ಜೀವನದಲ್ಲಿ ಯಾವ ವ್ಯಕ್ತಿಯೂ ಸಮಾಜವನ್ನು ಬಿಟ್ಟು ಇರುವದು ಸಾಧ್ಯವಿಲ್ಲ. ಇದರಂತೆಯೇ ಸಮಾಜವೂ ಒಂದೇ ಆಸಕ್ತಿಯಿರುವ ಒಂದೇ ಕಡೆಗೆ ನೆಲೆಸಿದ ಅಥವಾ ಬೇರೆ ಯಾವುದಾದರೂ ರೀತಿಯಲ್ಲಿ ಒಂದಾಗಿ ನಡೆದುಕೊಳ್ಳುವ ವ್ಯಕ್ತಿಗಳ ಗುಂಪೇ ಆಗಿದೆ.

ಪ್ರತಿಯೊಬ್ಬ ವ್ಯಕ್ತಿಗೂ ಸಮಾಜದ ಅನೇಕ ಸ್ತರಗಳಿರುತ್ತವೆ. ಅವನು ಜನಿಸಿದ ಕುಟುಂಬವೇ ಅವನಿಗೆ ಸಮಾಜದ ಮೊದಲನೆಯ ಸ್ತರ. ಈ ಕುಟುಂಬದಲ್ಲಿಯ ತಂದೆ ತಾಯಿಗಳು ಅಣ್ಣತಮ್ಮಂದಿರು ಅಕ್ಕತಂಗಿಯರು ಮಾತ್ರವಲ್ಲದೆ ಈ ಕುಟುಂಬದೊಡನೆ ಸಂಬಂಧಪಡದ ನಾನಾ ಬಂಧುಗಳು ಮಿತ್ರರು ಅಕ್ಕಪಕ್ಕದವರು ಇವರೆಲ್ಲ ಅವನ ಸಮಾಜದ ಮೊದಲನೆಯ ಸ್ತರ. ಅವನ ಸಮಾಜದ ಎರಡನೆಯ ಸ್ತರದ ತಳಹದಿ ಅನೇಕ ವಿಧವಾಗಿರುತ್ತವೆ. ವೃತ್ತಿಬಾಂಧವರು ಜಾತಿ-ಬಾಂಧವರು ಭಾಷಾಬಾಂಧವರು ವಿದ್ಯೆ ಕಾರ್ಯಕ್ಷೇತ್ರ ವಿಚಾರಕ್ಷೇತ್ರ ಜೀವನದ ಆದರ್ಶ ಗುರಿ ಇವುಗಳಲ್ಲಿ ಸಹೋದ್ಯೋಗಿಗಳಾದವರು ಇವರೆಲ್ಲ ಅವನ ಸಮಾಜದ ಎರಡನೆಯ ಸ್ತರ. ಇವರೆಲ್ಲ ಒಂದೇ ಸ್ಥಳದಲ್ಲಿ ಅಥವಾ ಒಂದೇ ಊರಲ್ಲಿ ಇರಬೇಕೆಂಬ ನಿಯಮವಿಲ್ಲ. ನಿತ್ಯವೂ ಸಂಪರ್ಕವುಳ್ಳವರಾಗಿರಬೇಕೆಂಬ ನಿಯಮವೂ ಇಲ್ಲ. ಆದರೆ ಮಾನಸಿಕವಾಗಿ ಮತ್ತು ಕಾರ್ಯತಃ ಒಂದು ಸಮಾಜ ಎನಿಸುವರು. ಇದಕ್ಕೂ ಹೆಚ್ಚು ವಿಸ್ತಾರವಾದ ಸಾಮಾಜಿಕ ಸ್ತರವು ಸಮಗ್ರರಾಷ್ಟ್ರ, ಸಮಗ್ರ ಮಾನವ ಸಮಾಜ, ಸಮಗ್ರಜೀವ ಜಾತ. ಈ ಮೂರನೆಯ ಸ್ತರವು ಕೇವಲ ಭಾವನಾತ್ಮಕವಾದರೂ ಕೆಲವು ಸಂದರ್ಭಗಳಲ್ಲಿ ಪ್ರತ್ಯಕ್ಷವಾಗಿಯೂ ಅನುಭವಕ್ಕೆ ಬರುತ್ತದೆ. ನಮ್ಮ ರಾಷ್ಟ್ರದವರನ್ನು ಬೇರೆ ದೇಶದಲ್ಲಿ ಕಂಡಾಗ ಅಥವಾ ರಾಷ್ಟ್ರದ ಬೇರೆ ಬೇರೆ ಭಾಗಗಳಲ್ಲಿ ಸಂಚರಿಸುವಾಗ ಸಮಗ್ರ ರಾಷ್ಟ್ರ ಸಮಾಜದ ಅರಿವಾಗುತ್ತದೆ.

ಈ ಎಲ್ಲ ಸ್ತರಗಳೊಡನೆಯೂ ವ್ಯಕ್ತಿಯು ಹೊಂದಿಕೊಂಡು ನಡೆದರೆ ಅವನ ವ್ಯಕ್ತಿತ್ವದ ವಿಕಾಸಕ್ಕೆ ಆಶೋತ್ತರಗಳ ಪೂರೈಕೆಗೆ ಹೆಚ್ಚು ಅವಕಾಶವು ದೊರೆಯುತ್ತದೆ. ಜೀವನದಲ್ಲಿ ಹೆಚ್ಚು ತೃಪ್ತಿ ಮತ್ತು ಉಲ್ಲಾಸಗಳು ದೊರೆಯುತ್ತವೆ.

ಹೀಗೆ ಹೊಂದಿಕೊಳ್ಳಬೇಕಾದರೆ ವ್ಯಕ್ತಿ ಪ್ರತಿಷ್ಠೆಯ ಅಭಿಮಾನವನ್ನು ಬಿಡಬೇಕು. ಸಂಕುಚಿತ ಸ್ವಾರ್ಥ ಲೋಭ ಬಿಡಬೇಕು. ಅಸೂಯೆ ದ್ರೋಹ ಬಿಡಬೇಕು. ಶುಚಿಯಾದ ಮತ್ತು ಪ್ರಾಮಾಣಿಕವಾದ ಜೀವನವನ್ನು ರೂಪಿಸಿಕೊಳ್ಳಬೇಕು. ಮೇಲೆ ಹೇಳಿದ ಸಮಾಜದ ಸ್ತರಗಳಲ್ಲಿ ಮೊದಲಿನ ಎರಡು ಸ್ತರಗಳಿಗೆ ಮಾತ್ರ ಹೊಂದಿಕೊಳ್ಳುವುದನ್ನು ಸೀಮಿತಗೊಳಿಸದೆ ವಿಶಾಲ ದೃಷ್ಟಿಯನ್ನು ತಾಳಬೇಕು. ಜೀವನದ ಎಲ್ಲ ಹಂತ ಮತ್ತು ಸಂದರ್ಭಗಳಲ್ಲಿಯೂ ಸಂಘರ್ಷವನ್ನು ತಪ್ಪಿಸಬೇಕು. ವೈಯಕ್ತಿಕ ಜೀವನ ಸಾಮಾಜಿಕ ಜೀವನದ ಒಂದು ಅಂಗವೆಂದು ಭಾವಿಸಬೇಕು.

ಭಾವಚಿತ್ರ :

ವ್ಯಕ್ತಿತ್ವದ ಪ್ರತಿಬಿಂಬ

ಇಂಗ್ಲೀಷ್ ಮೂಲ : ಯೂಸುಫ್ ಆರಕ್ಕಲ್

ಕನ್ನಡಕ್ಕೆ : ಪ್ರತಿಭಾ ನಂದಕುಮಾರ್

ಪ್ರತಿಯೊಬ್ಬ ವ್ಯಕ್ತಿಯ ಮುಖದ ಮೇಲೆ ಅವನ ವ್ಯಕ್ತಿತ್ವ ಪ್ರತಿಬಿಂಬಿಸುತ್ತದೆ. ಅನಾದಿ ಕಾಲದಿಂದಲೂ ಇದನ್ನು ತಿಳಿದ ಕಲಾವಿದ ಮಾನವನ ಭಾವನೆಗಳು ಮತ್ತು ಮನಸ್ಥಿತಿಯನ್ನು ಮುಖದಲ್ಲಿ ಚಿತ್ರಿಸಲು ಯತ್ನಿಸಿದ್ದಾನೆ. ಸಾಮಾನ್ಯ ಜನರೂ ಕೂಡಾ ಇತರರ ಮುಖಭಾವಗಳನ್ನು ಗಮನಿಸಿ ಅವರ ನಡೆ-ನುಡಿಯನ್ನು ತಿಳಿಯಲು ಹಾಗೂ ಅವರ ವ್ಯಕ್ತಿತ್ವವನ್ನು ಗ್ರಹಿಸಲು ಯತ್ನಿಸುತ್ತಾರೆ.

ಕಲಾವಿದ ಈ ಭಾವನೆಗಳನ್ನು ರೇಖಾಚಿತ್ರ, ಬಣ್ಣ ಹಾಗೂ ಶಿಲ್ಪಗಳ ಮೂಲಕ ದೃಶ್ಯಗಳಾಗಿ ಮಾರ್ಪಡಿಸುತ್ತಾನೆ.

ವ್ಯಕ್ತಿಗಳ ಭಾವಚಿತ್ರವನ್ನು ರಚಿಸುವ (ಪೋರ್ಟ್‌ರೇಟ್) ಅಭ್ಯಾಸ ಪೂರ್ವ ಈಜಿಪ್ಟ್ ಮತ್ತು ರೋಮನ್ನರ ಕಾಲದಲ್ಲೇ ಬಳಕೆಗೆ ಬಂದಿತ್ತು. ರೋಮಿನಲ್ಲಿ ಹೆಚ್ಚಾಗಿ ಶಿಲ್ಪಗಳು ಕಂಡು ಬಂದರೆ ಈಜಿಪ್ಟಿನಲ್ಲಿ ಶವ ಯಾತ್ರೆಯ ಭಾವಚಿತ್ರಗಳು ರಚಿತವಾಗಿವೆ.

ರೋಮ್ ನಂತರದ ಯುರೋಪಿನಲ್ಲಿ ಹದಿನೈದನೆಯ ಶತಮಾನದ ಕಾಲಕ್ಕೆ ಭಾವಚಿತ್ರ ರಚನೆ ಸಾರ್ವಜನಿಕವಾಗಿ ಬಳಕೆಯಲ್ಲಿತ್ತು. ರೆನೈಸಾನ್ಸ್‌ನ ಸಮಯಕ್ಕೆ ಭಾವಚಿತ್ರ ರಚನೆಯ ಕಲೆಯು ಒಂದು ಪ್ರತ್ಯೇಕ ವಿಭಾಗವೆಂದು ಮನ್ನಣೆ ಪಡೆದು ಅಭಿವೃದ್ಧಿ ಗಳಿಸಿತು. ಡಾವಿಂಚಿಯು ಈ ಸಮಯದಲ್ಲೇ ತನ್ನ ಜಗತ್ಪ್ರಸಿದ್ಧ ಮೊನಾಲಿಸಾಳನ್ನು ರಚಿಸಿದ.

ಹದಿನೇಳನೆಯ ಶತಮಾನದಲ್ಲಿ ಭಾವಚಿತ್ರ ರಚನೆಯು ಅತ್ಯಂತ ಜನಪ್ರಿಯವಾಯಿತು. ತಮ್ಮ ಚಿತ್ರಗಳು ಶಾಶ್ವತವಾಗಿರಬೇಕೆಂದು ಬಯಸಿದ ಜನರು ಭಾವಚಿತ್ರಗಳ ಪ್ರಾಮುಖ್ಯತೆಯನ್ನು ಗ್ರಹಿಸಿದರು. ಅನೇಕ ಕಲಾವಿದರು ಭಾವಚಿತ್ರ ರಚನೆಯನ್ನೇ ಸಂಪೂರ್ಣವಾಗಿ ತಮ್ಮ ಉದ್ಯಮವಾಗಿ ಮಾಡಿಕೊಂಡರು.

ಛಾಯಾಗ್ರಹಣ ಬಂದ ಮೇಲೆ ಭಾವಚಿತ್ರಗಳು ಜನಪ್ರಿಯತೆಯನ್ನು ಕಳೆದುಕೊಂಡರೂ,



ವ್ಯಾನ್‌ಗೋ

ಈಗಲೂ ಅತ್ಯುತ್ತಮ ಭಾವಚಿತ್ರಗಳ ರಚನೆ ನಿಂತು ಹೋಗಿಲ್ಲ. ಭಾವಚಿತ್ರ ರಚನೆಯ ಕಲೆ ಇಂದಿಗೂ ಉಳಿದು ಬಂದಿದೆ.

ರಾಂಬ್ರಾಂಡ್ಟ್ ವಾನ್ ರಿಜನ್, ಡಚ್ ಕಲಾವಿದ, ಅಸಂಖ್ಯಾತ ಸ್ವವ್ಯಕ್ತಿಚಿತ್ರ ರಚನೆ ಮಾಡಿ, ವ್ಯಕ್ತಿಯ ಭಾವನೆ ಮನೋಧರ್ಮ ಮತ್ತು ವ್ಯಕ್ತಿತ್ವವನ್ನು ಸೂಚಿಸಲು ಬೆಳಕಿನ ಬಳಕೆಯಲ್ಲಿ ಉತ್ಕೃಷ್ಟತೆಯನ್ನು ಸಾಧಿಸಿದ್ದಾನೆ.

ಫ್ಲೆಮಿಶ್ ಕಲಾವಿದ ಜಾನ್‌ವಾನ್ ಐಕ್ ಒಂದೇ ರೀತಿ ಕಾಣುವ ಅನೇಕ ಭಾವಚಿತ್ರಗಳನ್ನು ರಚಿಸಿ, ನೋಡುವವರಲ್ಲಿ ಒಂದು ರೀತಿಯ ಶೂನ್ಯತಾ ಭಾವವನ್ನು ಯಶಸ್ವಿಯಾಗಿ ಉಂಟುಮಾಡಿದ್ದಾನೆ.

ಇಂಪ್ರೆಷನಿಸ್ಟ್‌ಗಳು ಕೂಡಾ ಅನೇಕ ಮಹತ್ವದ ಭಾವಚಿತ್ರಗಳನ್ನು ರಚಿಸಿದ್ದಾರೆ. ಎಡ್ವರ್ಡ್ ಮನೆಟ್ ರಚಿಸಿದ ಪ್ರಖ್ಯಾತ ಕಾದಂಬರಿಕಾರ ಎಮಿಲಿ ಜೋಲಾಯನ ಭಾವಚಿತ್ರ ವ್ಯಕ್ತಿಯ ಮೂಡ್ ಅನ್ನು ಅತ್ಯಂತ ಸಮರ್ಥವಾಗಿ ಸೆರೆಹಿಡಿಯುವ ಅತ್ಯುತ್ತಮ ಉದಾಹರಣೆಯಾಗದ.

ವ್ಯಾನ್‌ಕಾಫ್, ಮೈನವಿರೇಳಿಸುವ ಬಣ್ಣಗಳು ಮತ್ತು ಉತ್ಕೃಷ್ಟ ಗೆರೆಗಳಲ್ಲಿ ಸ್ವಚಿತ್ರಗಳನ್ನು ರಚಿಸಿದ್ದಾನೆ. ಪಿಕಾಸೋ ಸ್ಫೂರ್ತಿಯುತ, ವ್ಯಕ್ತಿನಿಷ್ಟ ಶೈಲಿಯಲ್ಲಿ ಅನೇಕ ಭಾವಚಿತ್ರಗಳನ್ನು ರಚಿಸಿದ.



ರೆಂಬ್ರಾಂಡ್ಟ್

ಅನೇಕ ಸಲ ಸಾಂಪ್ರದಾಯಿಕ ಶೈಲಿಯಲ್ಲೂ ಉತ್ತಮ ಭಾವಚಿತ್ರಗಳನ್ನು ರಚಿಸಿದ್ದಾನೆ.

ಭಾರತ :


ಭಾರತದಲ್ಲಿ ಹರಪ್ಪ ಮೊಹೆಂಜೋದಾರೋ ಕಾಲದಲ್ಲಿಯೇ ಭಾವಚಿತ್ರ ರಚನೆಯನ್ನು ಗುರುತಿಸಬಹುದು. ನರ್ತಿಸುತ್ತಿರುವ ಹುಡುಗಿಯ ತಾಮ್ರದ ಒಂದು ಶಿಲ್ಪ, ಆ ಕಾಲದಲ್ಲೇ ಕ್ರಿಯಾಶೀಲವಾದ ವ್ಯಕ್ತಿಯನ್ನು ಕಲೆಯ ರೂಪದಲ್ಲಿ ಹಿಡಿದಿಡುವ ಪ್ರಯತ್ನಕ್ಕೆ ಸಾಕ್ಷಿಯಾಗಿದೆ. ಇದನ್ನೂ ಸ್ಥೂಲವಾಗಿ ಭಾವಚಿತ್ರ ರಚನೆ ಎಂದು ಪರಿಗಣಿಸಬಹುದು.

ಗ್ರೀಸ್ ಹಾಗೂ ರೋಮನ್ ಪ್ರಭಾವವುಳ್ಳ ಗಾಂಧಾರ ಚಿತ್ರಕಲೆಯಲ್ಲಿ ಶಿಲ್ಪ ಹಾಗೂ ನಾಣ್ಯಗಳಲ್ಲಿ ಭಾವಚಿತ್ರಗಳನ್ನು ಮೂಡಿಸಿರುವ ಅನೇಕ ಉದಾಹರಣೆಗಳಿವೆ.

ಬುದ್ಧನನ್ನು ಪ್ರತಿನಿಧಿಸುವ ಶಿಲ್ಪ ಮತ್ತು ಚಿತ್ರಗಳು ಖಂಡಿತವಾಗಿ ಉತ್ಕೃಷ್ಟ ಭಾವಚಿತ್ರಗಳೆನಿಸಿಕೊಳ್ಳುತ್ತವೆ.

ಮೊಗಲ್ ಮತ್ತು ರಜಪೂತ ಅವಧಿಯ ಮಿನಿಯೇಚರ್ ಚಿತ್ರಗಳು ಅನೇಕ ರಾಜರಾಣಿಯರು ಹಾಗೂ ಪ್ರತಿಷ್ಠಿತ ವ್ಯಕ್ತಿಗಳ ಪ್ರತಿರೂಪಗಳಾಗಿವೆ. ಬ್ರಿಟಿಷರ ಕಾಲದಲ್ಲಿ ಭಾರತದ ಚಿತ್ರಕಲೆಯ ಮೇಲೆ ಯುರೋಪಿಯನ್ ಭಾವಚಿತ್ರ ರಚನೆಯ ಪ್ರಭಾವ ದಟ್ಟವಾಗಿ ಕವಿಯಿತು. ತೈಲವರ್ಣಗಳು ಮತ್ತು ಕ್ಯಾನ್‌ವಾಸ್‌ಗಳ ಬಳಕೆ ಈ ಕಾಲದಲ್ಲಿ ಭಾರತಕ್ಕೆ ಯುರೋಪಿನವರಿಂದ ಪರಿಚಯವಾಯಿತು. ರವಿವರ್ಮ ಈ ಶೈಲಿಯ ಹಾಗೂ ಮಾಧ್ಯಮದ ಅತ್ಯುತ್ಕೃಷ್ಟ ಕಲಾವಿದನೆಂದು ಜಗತ್ಪ್ರಸಿದ್ಧಿ ಪಡೆದಿದ್ದಾನೆ.

ಬ್ರಿಟಿಷರ ಕಾಲದಲ್ಲಿ ಅನೇಕ ಭಾರತೀಯ ಕಲಾವಿದರು ಯುರೋಪಿಯನ್ ಶೈಲಿಯಲ್ಲಿ ಭಾವಚಿತ್ರ ರಚನೆಗೆ ತೊಡಗಿದರು. ಅದಕ್ಕೆ ತಕ್ಕ ಉತ್ತೇಜನವೂ ಅವರಿಗೆ ದೊರಕಿತು. ಯುರೋಪಿಯನ್ನರನ್ನು ಅನುಕರಿಸುತ್ತಿದ್ದ ಅನೇಕ ರಾಜಮಹಾರಾಜರು, ಜಮೀನ್ದಾರರು ಈ ಶೈಲಿಗೆ ಆಶ್ರಯ ನೀಡಿ ಬೆಳೆಸಿದರು.



ಪಿಕಾಸೋ

ಇಂತಹ ಅಸಂಖ್ಯಾತ ಚಿತ್ರಗಳು; ಒಳ್ಳೆಯ, ಕೆಟ್ಟ ಕಳಪೆ ದರ್ಜೆಯವೂ ಸೇರಿ, ಭಾರತದಾದ್ಯಂತ ಎಲ್ಲ ಅರಮನೆ ಹಾಗೂ ವ್ಯಕ್ತಿ ಸಂಗ್ರಹಾಲಯಗಳಲ್ಲಿ ಕಾಣಸಿಗುತ್ತವೆ.

ಸ್ವಾತಂತ್ರ್ಯಾನಂತರ ರಾಜರು, ಪ್ರತಿಷ್ಠಿತರ ಆಶ್ರಯ ಕಡಿಮೆಯಾದಂತೆ ಕಲಾವಿದರು ಹೊಟ್ಟೆ ಪಾಡಿಗಾಗಿ ಇತರ ವಿಷಯಗಳನ್ನು ಆರಿಸಿಕೊಂಡು ಚಿತ್ರಿಸತೊಡಗಿದರು. ಅವರ ಸಂಖ್ಯೆಯೂ ಸಾಕಷ್ಟು ಕಡಿಮೆಯಾಯಿತು. ಜೊತೆಗೇ ಛಾಯಾಗ್ರಹಣ ಜನಪ್ರಿಯವಾಗಿ ಭಾವಚಿತ್ರಗಳ ಕಡೆಗೆ ಗಮನ ಇಳಿಮುಖವಾಗತೊಡಗಿತು.

ಕೊನೆಗೆ ಭಾವಚಿತ್ರ ರಚನೆ ಕಲಾಶಾಲೆಗಳಲ್ಲಿ ವಿದ್ಯಾರ್ಥಿಗಳು ಆರಿಸಿಕೊಳ್ಳುವ ಒಂದು ವಿಷಯವಾಗಿ ಮಾತ್ರ ಸೀಮಿತವಾಯಿತು.

ಭಾವಚಿತ್ರದ ಲಕ್ಷಣ :

ಉತ್ತಮವಾದ ಒಂದು ಭಾವಚಿತ್ರದಲ್ಲಿ ರೂಪದರ್ಶಿಯ ಮನೋಭಾವ ಮತ್ತು ಮನಸ್ಥಿತಿ(ಮೂಡ್)ಗಳನ್ನು ಸೂಕ್ತ ಸಮತೋಲನದಲ್ಲಿ ಸೆರೆ ಹಿಡಿದಿಡಲಾಗುತ್ತದೆ. ಇದಕ್ಕೆ ಅತ್ಯಂತ ಉನ್ನತ ಮಟ್ಟದ ತಾಂತ್ರಿಕ ನೈಪುಣ್ಯ ಹಾಗೂ ಸೂಕ್ತ ಬಣ್ಣಗಳ ಆಯ್ಕೆ, ಅನುಭವ ಅತಿ ಮುಖ್ಯವಾದುದು.

ಸಾಮಾನ್ಯವಾಗಿ ಭಾವಚಿತ್ರ ರಚನೆ ರೂಪದರ್ಶಿಯ ರೇಖಾಚಿತ್ರವನ್ನು ಬರೆಯುವುದರಿಂದ ಪ್ರಾರಂಭವಾಗುತ್ತದೆ. ಅದರಲ್ಲೂ ಮುಖ್ಯವಾಗಿ ಮುಖದಿಂದ ಮಾನವ ದೇಹದ ಅಳತೆಯನ್ನು ಗಮನದಲ್ಲಿಟ್ಟುಕೊಂಡು ರೇಖಾಚಿತ್ರವನ್ನು ರಚಿಸಿದ ನಂತರ ವಿಶಿಷ್ಟವಾಗಿ ಆಯಾ ರೂಪದರ್ಶಿಯ ವ್ಯಕ್ತಿನಿಷ್ಠ ಅಂಶಗಳನ್ನು ಅರಸುವುದು ಪ್ರಧಾನವಾಗುತ್ತದೆ. ಉದಾಹರಣೆಗೆ ಮೂಗು, ತುಟಿ ಅಥವಾ ಕಣ್ಣು.

ಅನೇಕರು ಭಾವಚಿತ್ರ ರಚನೆಯಲ್ಲಿ ಕಣ್ಣುಗಳೇ ಅತ್ಯಂತ ಪ್ರಧಾನವೆಂದು ತಿಳಿದಿದ್ದಾರೆ. ಆದರೆ ವ್ಯಕ್ತಿಯ ದೇಹದಲ್ಲಿ ಯಾವ ಅಂಗವೂ ಕಡಿಮೆಯಲ್ಲ ಎನ್ನುವುದನ್ನು ಕಲಾವಿದ ಅರಿತಿರಬೇಕಾಗುತ್ತದೆ. ಕಣ್ಣಿನಷ್ಟೇ ಕಿವಿಯೂ ಮುಖ್ಯ. ಕಣ್ಣಿನ ರಚನೆಯಲ್ಲಿ ಅದರ ಸ್ಥಾನ, ಆಕೃತಿ ಮತ್ತು ರೂಪ ಕಣ್ಣಿನ ಗುಡ್ಡೆಯನ್ನು ಬರೆಯುವಷ್ಟೇ ಮಹತ್ವದ್ದು.

ಇವೆಲ್ಲವುಗಳ ಸಮಷ್ಟಿಯಿಂದ ಉತ್ತಮವಾದ ಭಾವಚಿತ್ರ ರೂಪಿತವಾಗುತ್ತದೆ.

ಮುಂದಿನ ಹಂತ ಆಕೃತಿಯ ನಿರ್ಮಾಣ ಅಥವಾ ಮುಖ್ಯ ಅಂಗಗಳನ್ನು ಸೂಚಿಸುವುದು. ಕಲಾವಿದ ಯಾವ ಮಾಧ್ಯಮದಲ್ಲಿ ಚಿತ್ರವನ್ನು ರಚಿಸಲು ನಿರ್ಧರಿಸುತ್ತಾನೋ ಅದಕ್ಕೆ ಅನುಗುಣವಾಗಿ ಸ್ಥೂಲವಾಗಿ, ಬಣ್ಣವನ್ನೇ ಸೀಸಕಡ್ಡಿಯಂತೆ ಬಳಸಿಕೊಂಡು ಆಕೃತಿಯ ಹೆಗ್ಗುರುತು ರಚಿಸುತ್ತಾನೆ.

ಇದು ನೆರಳು ಬೆಳಕು ಸಾಮಾನ್ಯ ಆಕೃತಿ ಹಾಗೂ ರೂಪವನ್ನು ಗುರುತಿಸುತ್ತದೆ. ಇದರ ನಂತರ ಮಧ್ಯದ ಭಾಗಗಳನ್ನು ಬಣ್ಣ ಮತ್ತು ಸ್ತರಗಳನ್ನು ತೆಳುವಾಗಿ ಲೇಪಿಸಿ ರಚಿಸಲಾಗುತ್ತದೆ. ವಿಶೇಷ ಅಂಶಗಳು ಮತ್ತು ಗಾಢ ಬಣ್ಣಗಳು ಸಾಮಾನ್ಯವಾಗಿ ಕೊನೆಯಲ್ಲಿ ಬರುತ್ತವೆ.

ಭಾವಚಿತ್ರಕ್ಕೆ ಹಿನ್ನೆಲೆಯೂ ಒಂದು ಪ್ರಮುಖವಾದ ಅಂಶ. ಸಾಮಾನ್ಯವಾಗಿ ಪರದೆ ಇಲ್ಲವೇ ಸಾದಾ ಗೋಡೆ ಹಿನ್ನೆಲೆಯಾಗಿರುತ್ತದೆ. ಆದರೆ ಅನೇಕ ವೇಳೆ ಕಲಾವಿದರು ಹಿನ್ನೆಲೆಯನ್ನು ಅಲಕ್ಷಿಸುತ್ತಾರೆ. ಒಂದು ಭಾವಚಿತ್ರವು ಅದರ ಹಿನ್ನೆಲೆಯಿಂದ ಉತ್ತಮಗೊಳ್ಳಬಹುದು ಇಲ್ಲವೇ


ವೆಂಕಟಪ್ಪ

ಹಾಳಾಗಬಹುದು.

ಪ್ರಧಾನವಾಗಿ ಹಿನ್ನೆಲೆಯು ಆನಂತರದ ಜೋಡಣೆಯಂತೆ ಕಾಣಬಾರದು. ಅದು ಭಾವಚಿತ್ರದ ಜೊತೆಗೇ ಸಮಗ್ರತೆಯ ಅಂಗವಾಗಿ ಮೂಡಬೇಕು. ತೇಪೆ ಹಾಕಿದಂತೆ ಇರದೇ, ವಸ್ತು ಆಕೃತಿ ಮತ್ತು ಬಣ್ಣದ ಜೊತೆಗೇ ಸಮ್ಮಿಳನಗೊಂಡಿರಬೇಕು.

ಹಿನ್ನೆಲೆಯನ್ನು ವ್ಯಕ್ತಿಯ ಹಿಂದಿನ ಮತ್ತು ಸುತ್ತಲಿನ ಪರಿಸರದಂತೆ ಬಳಸಬೇಕು. ಸೂಕ್ತ ಬಣ್ಣ, ಸಾಮಾನ್ಯವಾಗಿ ಕಲ್ಲಿದ್ದಲು ಬಣ್ಣ ಆರಿಸಬೇಕು.

ನೆರಳು ಬೆಳಕು ಭಾವಚಿತ್ರ ರಚನೆಯ ಅತ್ಯಂತ ಮುಖ್ಯವಾದ ಅಂಶ. ನೆರಳನ್ನು ಗಾಢವಾದ ಮತ್ತು ತಾಜಾ ಬಣ್ಣಗಳನ್ನು ತೆಳುವಾಗಿ ಲೇಪಿಸಿ ಉಂಟುಮಾಡುತ್ತಾರೆ.

ಇವೆಲ್ಲ ಭಾವಚಿತ್ರ ರಚನೆಗೆ ಕಲಾವಿದರು ಬಳಸುವ ಶಾಸ್ತ್ರೀಯ ವಿಧಾನದ ಅಂಶಗಳು. ಇಂದಿನ ಕಲಾವಿದರು ಈ ವಿಧಾನದಿಂದ ತುಂಬ ಮುಂದುವರಿದು ತೀರ ವ್ಯಕ್ತಿಗತ ಶೈಲಿ ಹಾಗೂ ದೃಷ್ಟಿಯನ್ನು ರೂಢಿಸಿಕೊಂಡಿದ್ದಾರೆ.

ಸಾಮಾನ್ಯವಾಗಿ ಭಾವಚಿತ್ರ ರಚನೆಗೆ ರೂಪದರ್ಶಿಗಳನ್ನು ಇಟ್ಟುಕೊಂಡರೂ ಕೆಲವರು ಸ್ಮರಣೆಯಿಂದಲೇ ಚಿತ್ರಿಸುತ್ತಾರೆ. ಕೆಲವರು ಛಾಯಾಚಿತ್ರಗಳನ್ನು ಆಧರಿಸಿ ನಿರ್ಮಿಸುತ್ತಾರೆ.

ಪ್ರಖ್ಯಾತ ಕಲಾವಿದರಾದ ಸೆಜೋಮ್, ಐಹಿಲ್ ಗೋರ್ಕಿ, ವಿಲಿಯಮ್ ಡಿ ಕೂನಿಂಗ್ ಮತ್ತು 'ಪಾಪ್ ಕಲಾವಿದ' ಆ್ಯಂಡಿ ವಾರ್‌ಹೋಲ್ ಎಲ್ಲರೂ ಛಾಯಾಚಿತ್ರಗಳನ್ನೇ ಆಧರಿಸಿ ಚಿತ್ರ ರಚಿಸಿದರು.

ಖ್ಯಾತ ಕಲಾವಿದ ಪಿಕಾಸೋ ಛಾಯಾಚಿತ್ರದ ಅನೇಕ ಅಂಶಗಳನ್ನು ಬಳಸಿಕೊಂಡ ರೆನೋಯಿಸ್‌ನ ಜನಪ್ರಿಯ ರೇಖಾಚಿತ್ರವೂ ಛಾಯಾಚಿತ್ರದ ಆಧಾರದ ಮೇಲೇ ರಚಿತವಾದದ್ದು.

ಮಾನವ ದೇಹದ ಆಕೃತಿ ಮತ್ತು ಅಂಗಗಳನ್ನು ಛಿದ್ರಗೊಳಿಸಿ ಮತ್ತು ಸ್ಥಾನಪಲ್ಲಟಗೊಳಿಸಿ ಚಿತ್ರ ರಚಿಸುವುದನ್ನು ಬಹುಶಃ ಪಿಕಾಸೋ ಪ್ರಾರಂಭಿಸಿರಬೇಕು. ಪಿಕಾಸೋ ರೂಪದರ್ಶಿಯ ಮುಖ್ಯ ಅಂಶಗಳನ್ನು ಮಾತ್ರ ತೆಗೆದುಕೊಂಡು ತನಗೆ ಬೇಕೆನಿಸಿದ ರೀತಿಯಲ್ಲಿ ಅವನ್ನು ಜೋಡಿಸಿ, ರೂಪದರ್ಶಿಯ ಬರಿಯ ನಕಲು ಮಾಡುವ ಬದಲು, ಮನಸ್ಥಿತಿಯ ಚಿತ್ರಣ ಮಾಡುತ್ತಿದ್ದ. ಇವನ ''ಕ್ಯೂಬಿಸ್ಟ್'' ಭಾವಚಿತ್ರಗಳು ಇದಕ್ಕೆ ಉತ್ತಮ ಉದಾಹರಣೆಯಾಗಿವೆ.

ವ್ಯಂಗ್ಯ ಚಿತ್ರಗಳು ಮತ್ತು ನಗೆ ಚಿತ್ರಗಳು ಭಾವಚಿತ್ರದ ಪರಿಷ್ಕೃತ ಶಾಖೆಯಾಗಿವೆ. ಇಲ್ಲಿ ತೀರ ಅವಶ್ಯವಾದ ಅಂಶಗಳನ್ನು ಕೆಲವು ಗೆರೆಗಳನ್ನು ಮಾತ್ರ ಬಳಸಿ ಹಿಡಿದಿಡಲಾಗುತ್ತದೆ. ವ್ಯಕ್ತಿಯ ಮುಖಭಾವ ಮತ್ತು ಮನಸ್ಥಿತಿ ಇದರಲ್ಲಿ ತುಂಬ ಪರಿಣಾಮಕಾರಿಯಾಗಿ ಚಿತ್ರಿತವಾಗುತ್ತದೆ.

ಹೆಚ್ಚಿನ ಕಲಾವಿದರು ಒಂದಲ್ಲ ಒಂದು ಸಮಯದಲ್ಲಿ ಭಾವಚಿತ್ರ ರಚನೆ ಮಾಡಿಯೇ ಇರುತ್ತಾರೆ. ಕೆಲವರು ತಮ್ಮ ಜೀವನದುದ್ದಕ್ಕೂ ತಮ್ಮನ್ನೇ ರೂಪದರ್ಶಿಯಾಗಿಸಿಕೊಂಡು ಸ್ವಚಿತ್ರಗಳನ್ನೇ ರಚಿಸಿದ್ದಾರೆ. ಸ್ಫೂರ್ತಿಗೆ ವಸ್ತು ಯಾವುದಾದರೂ, ಯಾರಾದರೂ ಸರಿ. ●

ನಿಮ್ಮ ಶಬ್ದ ಭಾಂಡಾರ ಬೆಳೆಯಲಿ

ಶಬ್ದಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಪ್ರತಿ ತಿಂಗಳೂ ಇಲ್ಲಿ ಕೆಲವು ಶಬ್ದಗಳ ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆಮೇಲೆ ಆದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥವನ್ನು ವಿವರಿಸಿದೆ.

1. ಪಿಣುಕು
   (ಅ) ಹೊಳೆ
   (ಆ) ತಂಪಾಗು
   (ಇ) ಬುಕ್ಕು
   (ಈ) ಉರಿ

2. ಧಾಂಡಿಗ
   (ಅ) ಬಡಕಲು ಮನುಷ್ಯ
   (ಆ) ತಂಡದ ನಾಯಕ
   (ಇ) ಗಟ್ಟಿಮುಟ್ಟು ಮನುಷ್ಯ
   (ಈ) ಘಟಿಂಗ

3. ಚುಂಗಡಿ
   (ಅ) ಚಿಲ್ಲರೆ
   (ಆ) ಬಟ್ಟೆಯ ತುದಿ
   (ಇ) ತಲೆಗೆ ಹಾಕಿಕೊಳ್ಳುವ ಮುಸುಕು
   (ಈ) ಬಿರುಕು

4. ಪಿಂಚಣಿ
   (ಅ) ಚಿವುಟುವಿಕೆ
   (ಆ) ಚೀನಿ ಮಣ್ಣಿನ ಪಾತ್ರೆ
   (ಇ) ಲೇಪ ಹಾಕಿದ ಪಾತ್ರೆ
   (ಈ) ನಿವೃತ್ತಿ ವೇತನ

5. ಪಂಜೀಕರಣ
   (ಅ) ನೋಂದಣಿ
   (ಆ) ಪಂಚೆ ಉಡುವಿಕೆ
   (ಇ) ಬಟ್ಟೆಗೆ ಬೆಂಕಿ ಹಚ್ಚಿ ಉರಿಸುವುದು
   (ಈ) ಬಿಗಿ ಮುಷ್ಟಿ

6. ಸಂಗ್ರಾಮ
   (ಅ) ಕೂಡಿಡುವುದು
   (ಆ) ಹಳ್ಳಿಗಳ ಸಮೂಹ
   (ಇ) ಯುದ್ಧ
   (ಈ) ಹಾಡಿನ ಆರಂಭ

7. ಸಾಮರಸ್ಯ
   (ಅ) ಕಪ್ಪು ಬಟ್ಟೆ
   (ಆ) ಹೊಂದಾಣಿಕೆ
   (ಇ) ಕೃಷ್ಣ ಭಕ್ತಿ
   (ಈ) ಸಾಮವೇದದ ಹಾಡುವಿಕೆ

8. ಸಾರಾಸಗಟು
   (ಅ) ಹೆಂಡದ ಪಾತ್ರ
   (ಆ) ರಖಂ ಖರೀದಿ
   (ಇ) ಹಳ್ಳ ದಾಟಲು ಹಾಕಿದ ಮರದ ದಿಮ್ಮಿ
   (ಈ) ಎಲ್ಲಾ ಒಟ್ಟು

9. ಶುಶ್ರೂಷೆ
   (ಅ) ನೀರಡಿಕೆ
   (ಆ) ಆರೈಕೆ
   (ಇ) ಸೊಸೆಯ ಸೊಸೆ
   (ಈ) ಚುರುಕಾದ ಕಿವಿ

10. ಕಲ್ಯಾಣಿ
   (ಅ) ನಾಳೆಯ ಚಿಂತೆ
   (ಆ) ಕಲ್ಲಿನ ತೊಟ್ಟಿ
   (ಇ) ಕಾಲಿನಲ್ಲಿ ಆಗುವ ಆಣಿ
   (ಈ) ಸುತ್ತ ಮೆಟ್ಟಿಲಿರುವ ಕೆರೆ

11. ಚರ್ಚಾಸ್ಪದ
   (ಅ) ವಾದಕ್ಕೆ ಆಸ್ಪದವುಳ್ಳ
   (ಆ) ಕ್ರೈಸ್ತ ಮಂದಿರದ ಅಂಗಳ
   (ಇ) ಸುಗಂಧ ತೊಡೆದುಕೊಳ್ಳುವಿಕೆ
   (ಈ) ಬಹಳ ಚೊಗಟೆಯುಳ್ಳ

12. ವಿಸ್ತೀರ್ಣ
   (ಅ) ದಾಟಿ ಹೋದದ್ದು
   (ಆ) ಆಚೆ ದಡ ಸೇರಿದವ
   (ಇ) ಅಗಾಧ
   (ಈ) ಹರಡುವಿಕೆ

ಶಬ್ದ ಭಾಂಡಾರದ ಸರಿಯಾದ ಅರ್ಥಗಳು

1. ತಿಣುಕು
(ಇ) ಬುಕ್ಕು, ನರಳು, ಹೊತ್ತ ಭಾರಕ್ಕೆ ಮುಲುಕು, ಕಷ್ಟಪಡು. ಉದಾ: ತಿಣುಕಿ ತಿಣುಕಿ ಬರೆದ ಕವಿತೆ. (ದೇಶ್ಯ)

2. ಧಾಂಡಿಗ
(ಇ) ಗಟ್ಟಿಮುಟ್ಟಾದ ಮನುಷ್ಯ ದಡಿಗ. ಉದಾ: ಧಾಂಡಿಗರಾದ ಕಾವಲುಗಾರರು. (ಮರಾಠಿ- ದಾಂಡ್‌ಗಾ)

3. ಚುಂಗಡಿ
(ಅ) ಚಿಲ್ಲರೆ ನಾಣ್ಯ, ಚಿಕ್ಕದು, ಕ್ಷುಲ್ಲಕ. ಉದಾ: ರೂಪಾಯಿಗೆ ಚುಂಗಡಿ ಸಿಗಲಿಲ್ಲ. (ದೇಶ್ಯ)

4. ಪಿಂಚಣಿ
(ಈ) ನಿವೃತ್ತಿ ವೇತನ, ಕೆಲಸದಿಂದ ನಿವೃತ್ತನಾದ ಮೇಲೆ ಪಡೆಯುವ ಪ್ರತಿ ತಿಂಗಳು ಸಂಬಳದ ಅಂಶ. ಉದಾ: ಪಿಂಚಣಿದಾರರಿಗೆಬಲುಕಷ್ಟ. (ಇಂಗ್ಲೀಷ್- Pensionನ ಕನ್ನಡೀಕರಣ)

5. ಪಂಜೀಕರಣ
(ಅ) ನೋಂದಣಿ, ರಿಜಿಸ್ಟ್ರೇಶನ್, ಯಾವುದಾದರೂ ದಾಖಲೆಯನ್ನು ತಕ್ಕ ಅಧಿಕಾರಿಯ ಪುಸ್ತಕದಲ್ಲಿ ದಾಖಲಿಸುವುದು. ಉದಾ: ಜನನದ ಪಂಜೀಕರಣ. (ಸಂ. ಪಂಜೀ= ದಾಖಲೆ ಪುಸ್ತಕ+ ಕರಣ= ಮಾಡುವಿಕೆ)

6. ಸಂಗ್ರಾಮ
(ಇ) ಯುದ್ಧ, ಸಮರ, ಕಾಳಗ. ಉದಾ: ಸಂಗ್ರಾಮದಿಂದ ಹಿಂದೆ ಸರಿಯಲಿಲ್ಲ. (ಸಂ.)

7. ಸಾಮರಸ್ಯ
(ಅ) ಹೊಂದಾಣಿಕೆ ಚೆನ್ನಾಗಿ ಸೇರಿಕೊಳ್ಳುವಿಕೆ, ಬೆರೆಯುವಿಕೆ. ಉದಾ: ಗಂಡಹೆಂಡಿರಲ್ಲಿ ಸಾಮರಸ್ಯವಿಲ್ಲ. (ಸಂ. ಸಮರಸ- ದಿಂದ)

8. ಸಾರಾಸಗಟು
(ಈ) ಎಲ್ಲವನ್ನೂ ಒಟ್ಟಾಗಿ ರಾಶಿಯಾಗಿ, ಬೇರೆ ಬೇರೆ ಭಾಗಗಳನ್ನು ಪರಿಶೀಲಿಸದೆ ಇಡಿಯಾಗಿ. ಉದಾ: ಸಾರಾಸಗಟಾಗಿ ಸೂಚನೆಯನ್ನು ತಿರಸ್ಕರಿಸಿದರು. (ಹಿಂದಿ, ಮರಾಠಿ- ಸಾರಾ= ಎಲ್ಲ + ಸಗಟು= ಸಕಲ?)

9. ಶುಶ್ರೂಷೆ
(ಅ) ಆರೈಕೆ, ಸೇವೆ, ಉಪಚಾರ. ಗುರುವಿನಲ್ಲಿ ವಿಧೇಯತೆ, ವಿದ್ಯೆಗಾಗಿ ಗುರುವನ್ನು ಸೇವಿಸುವುದು. ಉದಾ: ರೋಗಿಗಳ ಶುಶ್ರೂಷೆ. (ಸಂ.)

10. ಕಲ್ಯಾಣಿ
(ಈ) ಸುತ್ತ ಕಲ್ಲಿನ ಮೆಟ್ಟಿಲುಗಳುಳ್ಳ ಚಿಕ್ಕ ಕೆರೆ. ಉದಾ: ದೇಗುಲದ ಬಳಿ ತಿಳಿ ನೀರಿನ ಕಲ್ಯಾಣಿ ಇತ್ತು. (ದೇಶ್ಯ?)

11. ಚರ್ಚಾಸ್ಪದ
(ಅ) ವಾದಕ್ಕೆ ಆಸ್ಪದವುಳ್ಳ, ವಿವಾದಕ್ಕೆ ಎಡೆಯುಳ್ಳ, ನಿಶ್ಚಿತಪಡದ. ಉದಾ: ಚರ್ಚಾಸ್ಪದ ನೀತಿ ತತ್ವಗಳು. (ಸಂ. ಚರ್ಚಾ= ವಿವಾದ+ ಆಸ್ಪದ= ಅವಕಾಶ)

12. ವಿಸ್ತೀರ್ಣ
(ಈ) ಹರಡುವಿಕೆ, ಹರಹು, ವಿಸ್ತಾರ, ಉದ್ದಗಲಗಳ ಗುಣಲಬ್ಧ. ಉದಾ: ಆಸ್ತಿಯ ವಿಸ್ತೀರ್ಣ. (ಸಂ.)

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಅರಿತಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

6- 8	ಸರಿಯಿದ್ದರೆ	... ಸಾಧಾರಣ
9-10	"	... ಉತ್ತಮ
11-12	"	... ಅತ್ಯುತ್ತಮ

ನರ್ತಕ ಮಿಹ್ರಾ ನಿಗೂಢ ಭೂತ

ಮೂಲ: ಡಾ. ಕೋವೂರ್ ಅನು : ಒಡೆಯರ್ ಡಿ.ಹೆಗ್ಗಡೆ

ನಾನು ಓದುತ್ತಾ ವಿರಮಿಸುತ್ತಿದ್ದಾಗ ನನ್ನ ರೂಮಿನಲ್ಲಿ ಟೆಲಿಫೋನಿನ ಶಬ್ದ. ''ಈ ವಿಶ್ರಾಂತಿಯ ಸಮಯದಲ್ಲಿ ಯಾರು ಕರೆಯುತ್ತಿರಬಹುದು'' ಎಂದು ಆಶ್ಚರ್ಯಗೊಂಡೆ. ನಾನು ಟೆಲಿಫೋನಿನ ಹೊರತಾಗಿ ಬೇರೆ ಯಾವುದರಿಂದಲೂ ಸಂದೇಶಗಳನ್ನು ಪಡೆಯಲು ಯತ್ನಿಸುತ್ತಿರಲಿಲ್ಲ. ಆದರೆ ನಾನು ಲೆಕ್ಕಾಚಾರದ ಊಹೆಗಳನ್ನು ತಡೆದುಕೊಳ್ಳುತ್ತಿರಲಿಲ್ಲ. ''ಇದು ಯಾವುದಾದರೂ ತೊಂದರೆಗೊಳಗಾದ ಜೀವವಿರಬೇಕು'' ಎಂದು ಯೋಚಿಸಿ ಟೆಲಿಫೋನಿನೆಡೆಗೆ ನಡೆದೆ.

ಅದು ತೊಂದರೆಗೊಳಗಾದ ಜೀವವಾಗಿತ್ತು!

ಕೇಳಿ ಬಂದ ಸ್ವರ ಏದುಸಿರಿನಿಂದ ಕೂಡಿದ್ದು ಆವೇಶವಿತ್ತು.

''ನಾನು ಮಿಹ್ರ'' ಎಂದು ಹೇಳಿತು. ''ನನ್ನ ಮನೆಯಲ್ಲಿ ಹಲವು ನಿಗೂಢ ಘಟನೆಗಳು ನಡೆಯುತ್ತಿವೆ. ನಿಮ್ಮೊಡನೆ ಆ ಬಗ್ಗೆ ಚರ್ಚಿಸುವುದು ಒಳ್ಳೆಯದೆಂದು ನನ್ನ ಮಾವ ಸಲಹೆ ನೀಡಿದರು.''

''ಯಾವ ರೀತಿಯ ನಿಗೂಢ ಘಟನೆಗಳು?'' ನಾನು ಕೇಳಿದೆ.

''ಸುಮಾರು ಒಂದೂವರೆ ವರ್ಷದಿಂದ ಮನೆಯಲ್ಲಿ ಸಾಕಷ್ಟು ಹಣ ಕಳೆದುಕೊಂಡಿದ್ದೇನೆ.''

ಆ ಕಡೆಯಿಂದ ಮಾತನಾಡುತ್ತಿದ್ದ ವ್ಯಕ್ತಿಗೆ ಸರಿಯಾದ ಟೆಲಿಫೋನ್ ನಂಬರ್ ದೊರಕಿದೆಯೋ ಇಲ್ಲವೋ ಎಂಬುದು ನನಗೆ ತಿಳಿಯದು. ಅವನಿಗೆ ಬೇಕಿರುವುದು ಪೊಲೀಸ್ ಇರಬಹುದು. ಆದರೆ ಮಿಹ್ರ ಮುಂದುವರಿಸಿದಂತೆ, ''ಇದು ಕಳ್ಳರ ಕೆಲಸವಲ್ಲ ಎಂಬ ತೀರ್ಮಾನಕ್ಕೆ ನಾನು ಬಂದೆ. ... ಅಂದರೆ ಇದರರ್ಥ ಇದು ಮನುಷ್ಯರ ಕೆಲಸವಲ್ಲ'' ನಾವಿಬ್ಬರೂ ಸರಿಯಾದ ದಿಕ್ಕಿನಲ್ಲಿದ್ದೇವೆ ಎಂಬುದಾಗಿ ನಾನು ತಿಳಿದುಕೊಂಡೆ.

ಉದ್ರಿಕ್ತ ಮಿಹ್ರಾ

ಆ ದಿನವೇ (ನವೆಂಬರ್ 26, 1966) ಕಾರೊಂದು ''ತಿರುವಲ್ಲಾ''ದ ನನ್ನ ವಾಸಸ್ಥಳಕ್ಕೆ ಬಂತು. ಉದ್ರಿಕ್ತ ಮಿಹ್ರಾ ಅವನ ಮಾವನ ಜತೆಗೆ ನನ್ನ ಸಹಾಯ ಯಾಚಿಸಿದ. ಹಾಗೂ ನಾನು ಅವನ ಮನೆಗೆ ಕೂಡಲೇ ಭೇಟಿ ಕೊಡಬೇಕು ಎಂದು ಕೇಳಲು ಬಂದಿದ್ದ. ಇದು ಜೀವನ್ಮರಣ ಪ್ರಶ್ನೆಯಾಗಿತ್ತು.

ಅವರನ್ನೆಲ್ಲಾ ಕೋಣೆಗೆ ಕರೆದುಕೊಂಡು ಬಂದು ''ಬನ್ನಿ, ಒಳಗೆ ಬನ್ನಿ ಮಿಹ್ರಾ, ಕುಳಿತು ಸುಧಾರಿಸಿಕೊಂಡು, ನಡೆದ ಘಟನೆಗಳ ಬಗ್ಗೆ ನಮಗೆ ಹೇಳಿ'' ಎಂದು ನುಡಿದು ಕೋಣೆಯಲ್ಲಿರುವಂತೆ ಅವರಿಗೆ ಸಂಜ್ಞೆ ಮಾಡಿದೆ. ಆಗ ಮಿಹ್ರಾ ತನ್ನ ದುಡುಕನ್ನು ಅರ್ಥ ಮಾಡಿಕೊಂಡನು.

ಆತ ಮುವತ್ಮೂರು ವರ್ಷ ಪ್ರಾಯದ ಪಾಕಿಸ್ತಾನದ ಬಟ್ಟೆ ವ್ಯಾಪಾರಿ. ಒಂದೂವರೆ ವರ್ಷದ ಹಿಂದೆ ತನ್ನ ಕಪಾಟಿನಲ್ಲಿಟ್ಟ ಮೂರು ಸಾವಿರ ರೂಪಾಯಿಗಳ ಕಟ್ಟಿನಿಂದ ಮುನ್ನೂರು ರೂಪಾಯಿಗಳನ್ನು ಕಳೆದುಕೊಂಡಿದ್ದ. ಭವಿಷ್ಯ ಹೇಳುವ

ವನನ್ನು ವಿಚಾರಿಸುವುದೊಳ್ಳೆಯದು ಎನ್ನುವ ನಿರ್ಧಾರಕ್ಕೆ ಆತ ಬರುವ ವೇಳೆಗೆ ಹಲವಾರು ಕಳ್ಳತನಗಳು ಆಗಿದ್ದವು.

ಮಾಂತ್ರಿಕನಿಂದ ಪೂಜೆ ಮತ್ತು ಇತರ ಹಲವು ವಿಧಿವಿಧಾನಗಳನ್ನು ನಡೆಸಲಾಯಿತು. ಆಮೇಲೆ ಆ ಘಟನೆಯ ಹಿಂದುಮುಂದಿನ ಬಗ್ಗೆ ಮಾಂತ್ರಿಕನೇ ಹೇಳಿದನು. ಮಿಹ್ರಾನ ವೃತ್ತಿಬಾಂಧವರು ಅವನಿಗೆ ಕಿರುಕುಳ ಕೊಡುವುದಕ್ಕೋಸ್ಕರ ಭೂತಗಳನ್ನು ಕಳಿಸುತ್ತಿದ್ದಾರೆ ಎನ್ನುವ ತೀರ್ಮಾನಕ್ಕೆ ಬಂದು ಮಾಂತ್ರಿಕನು, ಆತನ ಕೈಗೆ ಮಂತ್ರಿಸಿದ ದಾರ ಕಟ್ಟಿ, ಎಲ್ಲವೂ ಒಳ್ಳೆಯದಾಗುವುದೆಂದು ಅಭಯ ನೀಡಿದನು.

ಕಳೆದು ಹೋದ ಆಭರಣಗಳು

ಆಮೇಲೆ ಮೂರು ತಿಂಗಳುಗಳ ಕಾಲ ಎಲ್ಲವೂ ಸರಿಯಾಗಿದ್ದವು. ಆದರೆ ನಾಲ್ಕನೆಯ ತಿಂಗಳ ಆರಂಭದಲ್ಲೇ ಹಣದ ಕಪಾಟಿನಿಂದ ಪುನಃ ಇನ್ನೂರು ರೂಪಾಯಿಗಳು ಕಾಣೆಯಾದವು. ಸ್ವಲ್ಪ ದಿನಗಳ ನಂತರ ಒಂದು ದಿನ ಬೆಳಿಗ್ಗೆಯೇ ಆಭರಣಗಳ ಸೆಟ್ ಕಾಣೆಯಾಗಿದೆಯೆಂದು ಮಿಹ್ರಾನ ಹೆಂಡತಿ ದೂರಿತ್ತಳು. ಅದರ

ಸವಾಲು ಸ್ವೀಕರಿಸದ

ಪ್ರಖ್ಯಾತ ವಿಚಾರವಾದಿ ಡಾ. ಕೋವೂರ್ ಅವರು ಅತೀಂದ್ರಿಯ ಶಕ್ತಿಯನ್ನು ಸಾಬೀತು ಮಾಡುವವರಿಗೆ ಒಂದು ಲಕ್ಷ ರೂಪಾಯಿಯನ್ನು ಕೊಡುವುದಾಗಿ ಘೋಷಿಸಿದ್ದರು. ಈ ಬಹಿರಂಗ ಸವಾಲಿಗೆ ಜಗತ್ತಿನಾದ್ಯಂತ ವ್ಯಾಪಕ ಪ್ರಚಾರ ನೀಡಿ 'ಅವತಾರ ಪುರುಷ'ರಿಗೆಲ್ಲ ಪ್ರತಿಗಳನ್ನು ಕಳುಹಿಸಲಾಯಿತು. ಭಾರತದ ಬೇರೆ ಬೇರೆ ಭಾಷೆಗಳಲ್ಲಿ ಪ್ರಚುರ ಪಡಿಸಲಾಯಿತು. ಆದರೂ ಡಾ. ಕೋವೂರ್ ಸಾಯುವವರೆಗೆ (1978) ಯಾರೂ ಸವಾಲನ್ನು ಸ್ವೀಕರಿಸಿ ಯಶಸ್ವಿಯಾಗಿ, ಹಣ ಪಡೆಯಲಿಲ್ಲ. ಅವರ ಸವಾಲು ಈ ಕೆಳಗಿನಂತಿದೆ:

"ಜಗತ್ತಿನ ಯಾವುದೇ ಭಾಗದ ಯಾರೇ ಆದರೂ ವಂಚನೆಯಿಲ್ಲದ ರೀತಿಯಲ್ಲಿ ಅತಿಮಾನುಷ ಅಥವಾ ಪವಾಡ ಶಕ್ತಿಯನ್ನು ಪ್ರದರ್ಶಿಸಲು ಸಮರ್ಥರಾದರೆ ಅಂಥವನಿಗೆ ತಿರುವಳ್ಳದ ಪಾಮನ್‌ಕಡ ಲೇನ್, ಕೊಲಂಬೋ-6 ಎಂಬಲ್ಲಿ ವಾಸಿಸುತ್ತಿರುವ ಅಬ್ರಾಹಂ ಟಿ. ಕೋವೂರ್ ಎಂಬ ನಾನು ಶ್ರೀಲಂಕಾದ ಒಂದು ಲಕ್ಷ ರೂಪಾಯಿಗಳನ್ನು ಕೊಡಲು ಸಿದ್ಧನಿದ್ದೇನೆ. ಈ ಸವಾಲು ನಾನು ಜೀವಂತ ಇರುವವರೆಗೆ ಅಥವಾ ಮೊದಲನೇ ಜಯಶಾಲಿ ದೊರೆಯುವವರೆಗೆ ಅಸ್ತಿತ್ವದಲ್ಲಿರುತ್ತದೆ.

ದೇವಮಾನವರು (ಅವತಾರ ಪುರುಷರು), ಯೋಗಿಗಳು, ಸಾಧಕರು, ಜ್ಯೋತಿಷಿಗಳು ಅಥವಾ ಯಾರೇ ಆಗಲಿ ಈ ಕೆಳಗಿನ ಯಾವುದಾದರೂ ಒಂದು ಪವಾಡವನ್ನು ಮಾಡಿದರೂ ಸಾಕು, ಮೇಲಿನ ಬಹುಮಾನ ಅವರಿಗೆ ದಕ್ಕುತ್ತದೆ-

1. ಮೊಹರು ಮಾಡಿದ ಕರೆನ್ಸಿ ಕ್ರಮಾಂಕವನ್ನು ಓದುವುದು.
2. ಒಂದು ಕರೆನ್ಸಿ ನೋಟಿನ ಅಂಥದ್ದೇ ಪ್ರತಿಯನ್ನು ಸೃಷ್ಟಿ ಮಾಡುವುದು.
3. ಅಂಗಾಲಿನಲ್ಲಿ ಗುಳ್ಳೆಗಳು ಏಳದಂತೆ ಉರಿಯುವ ಕೆಂಡಗಳ ಮೇಲೆ ಅರ್ಧ ನಿಮಿಷ ನಿಲ್ಲುವುದು.
4. ಶೂನ್ಯದಿಂದ ನಾನು ಕೇಳಿದ ವಸ್ತುವನ್ನು ಸೃಷ್ಟಿಸುವುದು.
5. ಕೇವಲ ಮನಃಶಕ್ತಿಯನ್ನು ಉಪಯೋಗಿಸಿಕೊಂಡು ಘನವಸ್ತುವನ್ನು ಬಗ್ಗಿಸುವುದು ಇಲ್ಲವೇ ಚಲಿಸುವಂತೆ ಮಾಡುವುದು.
6. ಇನ್ನೊಬ್ಬನ ಮನಸ್ಸಿನಲ್ಲಿ ಏನಿದೆಯೆಂಬುದನ್ನು ತಿಳಿಸುವುದು.

ಬೆಲೆ ಸುಮಾರು ಮೂರು ಸಾವಿರ ರೂಪಾಯಿಗಳಾಗಿದ್ದವು.

ಮೂರು ತಿಂಗಳುಗಳ ಕಾಲ ಮಿಹ್ರಾನ ಹಣಕಾಸಿಗೆ ಒಂದು ಮಂತ್ರಿಸಿದ ದಾರ ರಕ್ಷಣೆಯೊದಗಿಸಲಾಯಿತು. ಆದರೆ ಈಗ ಅದನ್ನು ತೆಗೆದು ಹಾಕಲಾಗಿತ್ತು. ಎಲ್ಲ ಮಾಂತ್ರಿಕರ ದಾರಗಳೂ ಸ್ವಲ್ಪ ಸಮಯ ಮಾತ್ರ ಕೆಲಸ ಮಾಡುವವು!

ಸರಿಯಾದ ರಕ್ಷಣೆ ಇಲ್ಲದೆ ತನ್ನ ವೃತ್ತಿಬಾಂಧವರೊಡನೆ ಈ ವಿಷಯ ಮಾತನಾಡುವ ಧೈರ್ಯ ಮಿಹ್ರಾನಿಗಿರಲಿಲ್ಲ. ಆದರೆ ಆತ ತುಂಬಾ ಸಮಯ ಕಾಯಬೇಕಾಗಲಿಲ್ಲ. ಅವನಿಗೆ ರಕ್ಷಣೆ ಒದಗಿಸಬಹುದಾದಂತಹ ಹಲವಾರು ಹೆಸರುಗಳನ್ನೂ ಸೂಚಿಸಲಾಯಿತು. ಆ ಪೈಕಿ ಅತಿ ಶಕ್ತಿಶಾಲಿಯಾದ ಅಂಬಲನ್ ಗೋಡಾ ಮಾಂತ್ರಿಕನನ್ನು ಭೇಟಿಯಾಗಲು ಮಿಹ್ರಾ ನಿರ್ಧರಿಸಿದ.

ಆದರೆ ಈ ಮಾಂತ್ರಿಕನಾಗಲಿ ಅವನ ಕುಟುಂಬದವರಾಗಲಿ ಮಿಹ್ರಾನ ವ್ಯಾಪಾರಿ ವೈರಿಗಳು ಕಳುಹಿಸುತ್ತಿದ್ದಂತಹ ದುಷ್ಟ ಶಕ್ತಿಯ ವಿರುದ್ಧ ಹೋರಾಡಲು ಸಿದ್ಧರಿರಲಿಲ್ಲ.

ಅವನು ಈ ಘಟನೆಯನ್ನು ಕೂಲಂಕಷವಾಗಿ

'ಅವತಾರ ಪುರುಷರು'!

7. ಪ್ರಾರ್ಥನೆ, ಆಧ್ಯಾತ್ಮಿಕ ಶಕ್ತಿ, ಭಸ್ಮ, ತೀರ್ಥ, ಆಶೀರ್ವಾದವೇ ಮೊದಲಾದ ಶಕ್ತಿಗಳಿಂದ ಕತ್ತರಿಸಿದ ಕೈಯನ್ನು ಒಂದು ಇಂಚಿನಷ್ಟಾದರೂ ಬೆಳೆಸುವುದು.
8. ಯೋಗ ಶಕ್ತಿಯಿಂದ ಗಾಳಿಯಲ್ಲಿ ತೇಲುವುದು.
9. ಯೋಗ ಶಕ್ತಿಯಿಂದ ಎದೆ ಬಡಿತವನ್ನು ಕೇವಲ ಐದು ನಿಮಿಷ ನಿಲ್ಲಿಸುವುದು.
10. ನೀರಿನ ಮೇಲೆ ನಡೆಯುವುದು.
11. ದೇಹವನ್ನು ಒಂದು ಸ್ಥಳದಲ್ಲಿ ಬಿಟ್ಟು ಇನ್ನೊಂದು ಸ್ಥಳದಲ್ಲಿ ಅದನ್ನು ಉಂಟು ಮಾಡುವುದು.
12. ಯೋಗ ಶಕ್ತಿಯಿಂದ 30 ನಿಮಿಷ ಉಸಿರಾಡದಿರುವುದು.
13. ಯಾವುದೇ ರೀತಿಯ ಧ್ಯಾನದಿಂದ ಬುದ್ಧಿಯ ಸೃಜನಶೀಲತೆಯನ್ನು ಬೆಳೆಸುವುದು ಅಥವಾ ವಿಶೇಷ ಜ್ಞಾನ ಪಡೆಯುವುದು.
14. ಪುನರ್ಜನ್ಮ ಅಥವಾ ದೆವ್ವ ಹಿಡಿದ ಪರಿಣಾಮವಾಗಿ ವ್ಯಕ್ತಿ ತನಗೆ ಗೊತ್ತಿರದ ಭಾಷೆಯಲ್ಲಿ ಮಾತನಾಡುವುದು.
15. ದೆವ್ವ ಅಥವಾ ಭೂತವನ್ನು ಫೋಟೋ ತೆಗೆಯಲು ಸಾಧ್ಯವಾಗುವಂತೆ ತೋರಿಸಿಕೊಡುವುದು.
16. ದೆವ್ವ ಅಥವಾ ಭೂತವನ್ನು ಫೋಟೋ ತೆಗೆದಾದ ಮೇಲೆ ಅದು ಫಿಲ್ಮಿನಿಂದ ಕಾಣೆಯಾಗಿ ಬಿಡುವುದು.
17. ದೈವಿಕ ಶಕ್ತಿಯ ಸಹಾಯದಿಂದ ಬೀಗ ಹಾಕಿದ ಕೊಠಡಿಯ ಒಳಗಿನಿಂದ ಹೊರ ಬರುವುದು.
18. ಒಂದು ವಸ್ತುವಿನ ತೂಕವನ್ನು ಹೆಚ್ಚು ಮಾಡುವುದು.
19. ಅಡಗಿಸಿಟ್ಟ ವಸ್ತುವನ್ನು ಕಂಡು ಹಿಡಿಯುವುದು.
20. ನೀರನ್ನು ಪೆಟ್ರೋಲ್ ಅಥವಾ ವೈನ್ ಆಗಿ ಪರಿವರ್ತಿಸುವುದು.
21. ವೈನನ್ನು ರಕ್ತವನ್ನಾಗಿ ಮಾರ್ಪಡಿಸುವುದು.
22. ಹತ್ತು ಜನರ ಕುಂಡಲಿ ಅಥವಾ ಅಂಗೈ ಗುರುತುಗಳನ್ನು ಮತ್ತು ಅವರು ಹುಟ್ಟಿದ ಕಾಲ ಹಾಗೂ ಸ್ಥಳಗಳನ್ನು ಸರಿಯಾಗಿ ತಿಳಿಸಿದಾಗ ಅವರಲ್ಲಿ ಸತ್ತವರ್ಯಾರು, ಬದುಕಿದವರ್ಯಾರು, ಗಂಡಸರ್ಯಾರು ಮತ್ತು ಹೆಂಗಸರ್ಯಾರು ಎಂಬುದನ್ನು ಶೇಕಡಾ 5ಕ್ಕೆ ಹೆಚ್ಚು ತಪ್ಪಿಲ್ಲದಂತೆ ತಿಳಿಸುವುದು.

ಪರಿಶೀಲಿಸಿ ಆ ತೊಂದರೆಯ ಬಗೆಗೆ ಬೇರೆಯೇ ಆದ ತನ್ನ ಅಭಿಪ್ರಾಯ ತಿಳಿಸಿದ. ''ಹೌದು ಅಲ್ಲಿ ಒಂದು ಪ್ರೇತಾತ್ಮ ಶಕ್ತಿಯಿದೆ'' ಎಂದು. ಇದು ವೃತ್ತಿಬಾಂಧವರು ಕಳುಹಿಸಿದ ಪ್ರೇತಾತ್ಮ ಶಕ್ತಿಯಲ್ಲ; ಮಿಹ್ರಾನ ಕುಟುಂಬದ ಓರ್ವ ಗೌರವಾನ್ವಿತ ವ್ಯಕ್ತಿಯ ಪ್ರೇತ. ಜೀವಿಸಿದ್ದಾಗ ಅವನಿಗೆ ಸಲ್ಲಬೇಕಾದ ಸಾಲ ಸಂದಿರಲಿಲ್ಲ. ಆದ್ದರಿಂದ ಅವನು ಆ ವೈರವನ್ನು ಗೋರಿಯ ಒಳಗಡೆಗೂ ಕೊಂಡೊಯ್ದಿದ್ದಾನೆ ಎನ್ನುವ ಅಭಿಪ್ರಾಯಕ್ಕೆ ಮಾಂತ್ರಿಕ ಬಂದನು.

ಶಮನ

ಭೂತವನ್ನು ಖಂಡಿತವಾಗಿಯೂ ಶಮನಗೊಳಿಸಬಹುದು ಎಂದು ಆಶಾಭಾವನೆಯನ್ನು ಮಾಂತ್ರಿಕನು ತೋರಿಸಿದನು. ಅದನ್ನು ಶಾಂತಗೊಳಿಸಲು ಭರ್ಜರಿಯಾದೊಂದು ಸಮಾರಂಭ ವೇರ್ಪಡಿಸುವಂತೆ ಹಾಗೂ ಪ್ರತ್ಯೇಕವಾದೊಂದು ಕೋಣೆಯಲ್ಲಿ ನಿರ್ದಿಷ್ಟ ಅವಧಿಯವರೆಗೆ ಆ ಪ್ರೇತಾತ್ಮಕ್ಕೆ ಆಹಾರ ಮತ್ತು ಇತರ ಕಾಣಿಕೆಗಳನ್ನು ಇಡುವಂತೆ ಮಾಂತ್ರಿಕ ತಿಳಿಸಿದನು.

ಆ ಶಮನ ಸಮಾರಂಭವನ್ನೂ ಈ ದೊಡ್ಡ ಮೀಸೆಯ ಮಾಂತ್ರಿಕನೇ ಏರ್ಪಡಿಸಿದ. ಭೂತ ನೃತ್ಯ ತುಂಬಾ ಜಿರುಸಿನಿಂದ ನಡೆಯಿತು. ಇಂತಹ ನೃತ್ಯ ಮೊದಲೆಂದೂ ಆ ಪ್ರದೇಶದಲ್ಲಿ ನಡೆದಿರಲಿಲ್ಲ ಎನ್ನುವ ಹೆಗ್ಗಳಿಕೆಗೆ ಪಾತ್ರವಾಯಿತು. ನೃತ್ಯ ಮುಗಿದಾಗ ಮಿಹ್ರಾನಿಗೆ ನಿರಂಬಳವೆನಿಸಿತು. ಆದರೂ ಮಾಂತ್ರಿಕನು ಸಂದರ್ಭವನ್ನು ಸರಿಯಾಗಿ ಅರ್ಥ ಮಾಡಿಕೊಂಡಿದ್ದಾನೋ ಇಲ್ಲವೋ, ಪ್ರತ್ಯೇಕ ಕೊಠಡಿಯಲ್ಲಿರಿಸಿದ ಆಹಾರವನ್ನು ತನ್ನ ವೃತ್ತಿ ಬಾಂಧವರ ದುಷ್ಟಶಕ್ತಿಗಳು ತಿಂದು ಬಿಟ್ಟರೋ, ಮುಂತಾದ ಸಂಶಯಗಳು ಮಿಹ್ರಾನನ್ನು ಕಾಡುತ್ತಿದ್ದವು.

ಈ ಸಂಶಯಗಳು ಮಿಹ್ರಾನ ಮನಸ್ಸಿನಲ್ಲಿದ್ದಾಗಳೇ ಆತನ ಪತ್ನಿ ಸ್ಮೃತಿ ತಪ್ಪಿ ಬೀಳತೊಡಗಿದಳು. ಇದು ಅವನ ಹೆದರಿಕೆಗೆ ಇನ್ನಷ್ಟು ಜೀವ ಕೊಟ್ಟಿತು.

ಆಕೆ ಪ್ರಜ್ಞೆ ತಪ್ಪಿ ಬೀಳುವುದು ದಿನದಿಂದ ದಿನಕ್ಕೆ ಹೆಚ್ಚುತ್ತಾ ಹೋಯಿತು. ಆದರೆ ಆ ಸಮಯದಲ್ಲಿ ನಡೆದ ಇನ್ನೊಂದು ಘಟನೆ ಅವನ ಭಯವನ್ನು ಶಮನಗೊಳಿಸಲು ಸಹಕಾರಿಯಾಯಿತು. ಹಾಗೂ ಅವನ ಮನಸ್ಸನ್ನು ಬೇರೆಡೆಗೆ ಸೆಳೆಯಿತು.

ನಿಗೂಢ ಪ್ರೇಮಪತ್ರಗಳು

ಮಿಹ್ರಾನ ಮನೆಯವರು ಈಗ ಮನೆಯ ಮೂಲೆಗಳಲ್ಲಿ ಎಲುಬು, ಮನುಷ್ಯರ ಕೂದಲು, ಸುಣ್ಣ, ತಾಮ್ರದ ನಾಣ್ಯ ಇತ್ಯಾದಿಗಳಿಂದ ತುಂಬಿದ ಹಳೆಯ ಸಿಗರೇಟು ಪೆಟ್ಟಿಗೆಗಳನ್ನು ಕಾಣತೊಡಗಿದರು. ಮಿಹ್ರಾ ಸ್ವತಃ ಕಂಡ ವಿಷಯಗಳು ತುಂಬಾ ಸೋಜಿಗವುಂಟು ಮಾಡುವಂಥವುಗಳು - ಆತನ ಕೋಟು ಮತ್ತು ಪ್ಯಾಂಟುಗಳ ಜೇಬುಗಳಲ್ಲಿ ಪ್ರೇಮಪತ್ರಗಳನ್ನಿಡಲಾಗಿತ್ತು. ಅದೊಂದು ಸಂದರ್ಭದಲ್ಲಿ ಅವನ ಲೆಕ್ಕ ಪುಸ್ತಕಗಳಲ್ಲೂ ಪ್ರೇಮಪತ್ರಗಳನ್ನಿಡಲಾಗಿತ್ತು. ಹಲವಾರು ತಿಂಗಳುಗಳಲ್ಲಿ ಒಟ್ಟಿಗೆ ಅವನಿಗೆ ಇಂಗ್ಲೀಷ್‌ನಲ್ಲಿ ಬರೆದ ಹತ್ತು, ಹಾಗೂ ತಮಿಳಿನಲ್ಲಿ ಬರೆದ ಒಂದು, ಪ್ರೇಮಪತ್ರ ದೊರಕಿದವು.

ಈ ಪ್ರೇಮಪತ್ರಗಳ ಸಾರಾಂಶ ಮಿಹ್ರಾನು ಪತ್ರ ಬರೆದವರೊಂದಿಗೆ ಭಾರತಕ್ಕೆ ಹೋಗಬೇಕೆಂಬುದಾಗಿತ್ತು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಓಡಿಹೋಗುವುದು. ಇಲ್ಲಿ ಪತ್ರದ ಕೆಲವು ಅಂಶಗಳನ್ನು ಕೊಡಲಾಗಿದೆ.

''ಪ್ರೀತಿಯ ಮಿಹ್ರಾ, ನೀನು ಹೆದರಬಾರದು ... ನಾನು ನಿನಗೋಸ್ಕರ ಏನನ್ನಾದರೂ ಮಾಡಿಯೇನು ... ಜೂನ್ ತಿಂಗಳ ಹದಿನಾಲ್ಕನ್ನು ಮರೆಯಬೇಡ ... ನಾವು ವಿಮಾನದಲ್ಲಿ ಹಾರಬಹುದು ... ನಿನ್ನ ಹೆಸರನ್ನು ಪತ್ರದಲ್ಲಿ ಬರೆಯಬೇಡ ... ನೀನು ಹಾಡುವುದನ್ನು ನಾನು ಇಷ್ಟಪಡುತ್ತೇನೆ. ನಾಳೆ ರಾತ್ರಿ ಬಾ ... ಮಿಹ್ರಾ, ಮತ್ತು ಸ್ಯಾರಿ.''

ಈ ಪತ್ರದಲ್ಲಿ ಗಮನ ಸೆಳೆದ ಅಂಶವೆಂದರೆ ಆಗಾಗ್ಗೆ ಉಲ್ಲೇಖಿಸಿದ ಜೂನ್ 14 ಮತ್ತು ಮಿಹ್ರಾ ಸ್ಯಾರಿಯ (ಸ್ಯಾರಿ ಹೆಸರಿನ ಒಬ್ಬಳು ನರ್ತಕಿ) ವಿವರಣೆ.


ಪತ್ರ ಬರೆದವರ ಪ್ರೇಮ ನೋಡಿ ಮಿಹ್ರಾನಿಗೆ ಸ್ವಲ್ಪ ದಿಗ್ಭ್ರಮೆಯಾಗಿರಬೇಕು. ಆದರೆ ಖಂಡಿತ ವಾಗಿಯೂ ಇದು ಆತನ ದಿವಂಗತ ಪುರುಷ ಸಂಬಂಧಿಯದ್ದಲ್ಲ; ಆಗಿದ್ದಿದ್ದರೆ ಅವನು ಮರಣ ಹೊಂದಿದ ಮೇಲೆ ಲಿಂಗ ಬದಲಾಯಿಸಿ ಕೊಂಡಿರಬೇಕು! ಅಥವಾ ಯಾವಾಗಲೂ ಪ್ರತ್ಯೇಕ ಕೊಠಡಿಯಲ್ಲಿ ಆಹಾರವಿತ್ತು ಪೂಜಿಸಿದ ಅವನ ಸಂಬಂಧಿಗೆ ಈಗ ಹೊಸದಾಗಿ ಈ ಅಸ್ವಾಭಾವಿಕ ಆಸೆ ಹುಟ್ಟಿಕೊಂಡಿದೆಯೋ? ಮೂರನೆಯ ಸಾಧ್ಯತೆ ತುಂಬಾ ಅಪಾಯಕಾರಿಯಾದುದು; ಅದೇನೆಂದರೆ ಮಿಹ್ರಾನ ವ್ಯಾಪಾರಿ ವೈರಿಗಳು ಈಗ ಅವರ ತಂತ್ರಗಳನ್ನು ಬದಲಾಯಿಸಿ ಪ್ರೇಮಿಯ ರೂಪದಲ್ಲಿ ಅವನನ್ನು ಕಾಡುತ್ತಿರಬೇಕು.

ಹೆಚ್ಚಿನ ಗಡಿಬಿಡಿಯಿಲ್ಲದೆ ಮಿಹ್ರಾ ಮೂರನೆಯ ಒಬ್ಬ ಪ್ರಸಿದ್ಧ ಮುಸ್ಲಿಂ ಮಾಂತ್ರಿಕನನ್ನು ಭೇಟಿ ಮಾಡಿದನು. ಅವನೂ ದಾರ ಮಂತ್ರಿಸುವುದರಲ್ಲಿ ಪ್ರವೀಣ; ಅವನು ಮನೆಮಂದಿಗೆಲ್ಲಾ, ಅಂದರೆ ಶ್ರೀಮತಿ ಮತ್ತು ಶ್ರೀಯುತ ಮಿಹ್ರಾ ಹಾಗೂ ಅವರ ಎರಡು ಮಕ್ಕಳಿಗೆ ಶ್ರೀಮತಿ ಮಿಹ್ರಾಳ ತಾಯಿ ಮತ್ತು ಶ್ರೀಮತಿ ಮಿಹ್ರಾಳ ನಾಲ್ಕು ಜನ ಸಹೋದರರು ಮತ್ತೆ ನಾಲ್ಕು ಜನ ಸಹೋದರಿಯರಿಗೆ ಮಂತ್ರಿಸಿದ ದಾರವನ್ನು ಕಟ್ಟಿದನು.

ಈ ದಾರಗಳ ಶಕ್ತಿಯ ಬಗ್ಗೆ ಮಿಹ್ರಾನಿಗೆ ಸಂಶಯವಿತ್ತು. ಅವನ ಪತ್ನಿಯ ಆತಂಕಕಾರಿ ಪರಿಸ್ಥಿತಿ ಮಿಹ್ರಾನ ಈ ಸಂಶಯವನ್ನು ದೃಢೀಕರಿಸಿತು. ಆಗಾಗ್ಗೆ ಅವನ ಪತ್ನಿ ಪ್ರಜ್ಞೆ ಕಳೆದು ಕೊಂಡು ಬೀಳತೊಡಗಿದಳು. ಅವಳು ಎಷ್ಟು ಸಾರಿ ಈ ರೀತಿ ಬೀಳುತ್ತಿದ್ದಳೆಂದರೆ ಶ್ರೀಮತಿ ಮಿಹ್ರಾಳ ಮೇಲೆ ಈ ದುಷ್ಟ ಶಕ್ತಿಯ ಸಂಪೂರ್ಣ ಹಿಡಿತವಿದೆಯೋ ಎನ್ನುವ ಸಂಶಯ ಮಿಹ್ರಾನಿಗುಂಟಾಗುತ್ತಿತ್ತು.

ಕನಸಿನ ರೂಪದಲ್ಲಿ ಆಸೆಗಳು

ಈಗ ಶೀಘ್ರವಾಗಿ ಪರಿಣಾಮ ಬೀರುವಂತಹುದೇನನ್ನಾದರೂ ಮಾಡಬೇಕಿತ್ತು. ಅವನ ಸ್ನೇಹಿ



ತರು ಮತ್ತು ಸಂಬಂಧಿಕರು ಅವನ ಮನೆಯ ಪರಿಸ್ಥಿತಿ ಕುರಿತು ಭಯಪಡತೊಡಗಿದರು. ಹೀಗಾಗಿ ಅವರು ನಾಲ್ಕನೆಯ ಮಾಂತ್ರಿಕನನ್ನು ಕರೆದು ತಂದರು. ಆದರೆ ಆತ ಅಷ್ಟೇನೂ ಸ್ಪಷ್ಟವಲ್ಲದ ಹಾಗೂ ಕಲ್ಪನಾ ಪ್ರಧಾನ ಪರಿಹಾರ ಸೂಚಿಸಿದನು. ಹಲವಾರು ರೀತಿಯ ಪೂಜೆಗಳನ್ನೇರ್ಪಡಿಸಿದರೆ ಕುಟುಂಬದ ಯಾರಾದರೊಬ್ಬರಿಗೆ ಈ ಸಮಸ್ಯೆಗಳಿಗೆ ಕಾರಣ ಮತ್ತು ಪರಿಹಾರ ಕನಸಿನ ರೂಪದಲ್ಲಿ ತಿಳಿಯಬಹುದು ಎಂದು ಆತ ಹೇಳಿದನು.

ತಿಂಗಳುಗಳು ಕಳೆದರೂ ಯಾರಿಗೂ ಹೇಳಿಕೊಳ್ಳುವಂತಹ ಕನಸು ಬೀಳಲಿಲ್ಲ. ಏತನ್ಮಧ್ಯೆ ತುಂಬಾ ಹಣ ಕಳೆದುಹೋಯಿತು. ಹಲವಾರು ಪ್ರೇಮಪತ್ರಗಳೂ ಮಂತ್ರಿಸಿದ ವಸ್ತುಗಳೂ ಕಂಡುಬಂದವು. ಶ್ರೀಮತಿ ಮಿಹ್ರಾ ಸ್ಮೃತಿ ತಪ್ಪಿ ಬೀಳುವುದು ಇನ್ನೂ ಹೆಚ್ಚಿತು.

ನಾಲ್ಕನೆಯ ಮಾಂತ್ರಿಕನ ಮಂತ್ರ ಪ್ರಯೋಗವಾದ ಮೂರನೆಯ ತಿಂಗಳಿನಲ್ಲಿ ಒಂದು ಬೆಳಗ್ಗೆ ಮಿಹ್ರಾನ ಅತ್ತೆ ಅದೊಂದು ಅರ್ಥಪೂರ್ಣ ಕನಸಿ

ಸೊಂದಿಗೆ ಮೇಲೆದ್ದಳು. ಇಬ್ಬರು ಠಕ್ಕರು ಒಬ್ಬ ಹುಡುಗನೊಂದಿಗೆ ಒಳಗೆ ಬರಲು ಪ್ರಯತ್ನಿಸುತ್ತಿರುವುದನ್ನೂ ಹಾಗೂ ಅವಳ ಅಳಿಯ ಅದನ್ನು ತೀವ್ರವಾಗಿ ಪ್ರತಿಭಟಿಸಿ ಜಗಳವಾಡುವುದನ್ನೂ ಹಾಗೂ ಕೊನೆಗೆ ತಾನು ತನ್ನ ಅಳಿಯನನ್ನು ಬದಿಗೆ ನಿಲ್ಲುವಂತೆ ಹೇಳಿ ಆ ಠಕ್ಕರು ಮತ್ತು ಹುಡುಗನಿಗೆ ಮನೆಯಿಂದ ಬೇಕಾದುದನ್ನು ಕೊಂಡೊಯ್ಯಲು ಹೇಳಿದುದನ್ನು ಕನಸು ಕಂಡುದಾಗಿ ಆಕೆ ತಿಳಿಸಿದಳು.

ಮಾಂತ್ರಿಕನು ಶೀಘ್ರದಲ್ಲೇ ಈ ಕನಸಿನ ಬಗ್ಗೆ ಒಂದು ತೀರ್ಮಾನಕ್ಕೆ ಬಂದರೂ, ಕನಸಿನ ಸಾರ ಸಂಗ್ರಹಿಸುವಲ್ಲಿ ಗಲಿಬಿಲಿಗೊಂಡಂತೆ ಕಂಡು ಬರುತ್ತಿತ್ತು. ಆದರೂ ಈ ಕನಸಿನ ಸಮಸ್ಯೆಯ ಪರಿಹಾರಕ್ಕಾಗಿ ಸಮಾರಂಭವೊಂದನ್ನು ನಡೆಸಿ ಆತ ಕಣ್ಮರೆಯಾದನು.

ಓರ್ವ ಜ್ಯೋತಿಷಿ

ತಿಂಗಳುಗಳು ಕಳೆದಂತೆ ಈ ಉಪಟಳವನ್ನು ತಡೆಯುವುದು ಅಸಾಧ್ಯವಾಯಿತು. ಮಿಹ್ರಾನ ಪತ್ನಿ ಯಾವಾಗಲೆಂದರೆ ಆಗ ಸ್ಮೃತಿ ತಪ್ಪಿ ಬೀಳ ತೊಡಗಿದಳು. ಇನ್ನಷ್ಟು ಮಾಟ, ನಿಗೂಢ ಹಾಗೂ ನಾಚಿಕೆಗೇಡಿನ ಪ್ರೇಮಪತ್ರಗಳು ಕಂಡು ಬರತೊಡಗಿದವು. ಜತೆಗೆ ಹೆಚ್ಚು ಹೆಚ್ಚು ಹಣ ಕಾಣೆಯಾಗತೊಡಗಿತು.

ಇಷ್ಟೇ ಅಲ್ಲದೆ ಮಿಹ್ರಾನಿಗೆ ಮಾಂತ್ರಿಕರ ಮೇಲೆ ನಂಬಿಕೆ ಕಡಿಮೆಯಾಗಿ ಅವನು ಸಮಸ್ಯೆಯ ಪರಿಹಾರಕ್ಕಾಗಿ ಜ್ಯೋತಿಷಿಯೊಬ್ಬನನ್ನು ಭೇಟಿಯಾದ. ಅವನು ಅಲ್ಲಿಗೆ ಬಂದ ಐದನೆಯ ಮಾಂತ್ರಿಕ.

ಮೊದಲಿನ ಮಾಂತ್ರಿಕನಂತೆ ಇವನೂ ತನ್ನ ಕಾರ್ಯ ನೆರವೇರಿಸಲು ಒಂದು ಪ್ರತ್ಯೇಕ ಕೊಠಡಿಯನ್ನು ಕೇಳಿದ. ಕೊಠಡಿಯನ್ನು ಒದಗಿಸಿದ ತಕ್ಷಣ ಅವನು ಅದರ ನೆಲದ ಮಧ್ಯಭಾಗದಲ್ಲಿ ಮೋಂಬತ್ತಿಯೊಂದನ್ನಿಟ್ಟು ಎಳೆಯ ಹುಡುಗಿಯಾ ಹುಡುಗ ಆ ಬೆಳಕನ್ನು ನೋಡಬೇಕು ಎಂದು ಕೇಳಿಕೊಂಡ.

ಈ ಬೆಳಕನ್ನು ನೋಡಲು ಶ್ರೀಮತಿ ಮಿಹ್ರಾಳ ಹನ್ನೆರಡು ವರ್ಷದ ಸಹೋದರಿಯನ್ನು ಆರಿಸಲಾಯಿತು. ಮೋಂಬತ್ತಿಯ ಜ್ವಾಲೆಯು ಇಬ್ಭಾಗವಾಗಿ ಕಾಣಿಸುವತನಕ ಅದನ್ನೇ ತೀಕ್ಷ್ಣವಾಗಿ ನೋಡಬೇಕು ಎಂದು ಜ್ಯೋತಿಷಿ ಆಜ್ಞೆ ಮಾಡಿದ. ಹಲವು ನಿಮಿಷಗಳ ನಂತರ ಹುಡುಗಿ ಎರಡು ಜ್ವಾಲೆ ಕಾಣಿಸುತ್ತದೆ ಎಂದು ಉದ್ಗರಿಸಿದಳು; ಹತ್ತು ಜ್ವಾಲೆ ಕಾಣುವ ತನಕ ನೋಡುತ್ತಿರು ಎಂದು ಜ್ಯೋತಿಷಿ ಪುನಃ ಅಪ್ಪಣೆ ಮಾಡಿದ. ಹೇಳಿದಂತೆ ಕೇಳಿದ ಹುಡುಗಿಯು ನನಗೆ ಹಲವಾರು ಜ್ವಾಲೆಗಳು ಕಾಣಿಸುತ್ತಿವೆ ಎಂದು ಆವೇಶಭರಿತಳಾಗಿ ಕೂಗಿದಳು.

ಈಗ ಹುಡುಗಿಯು ಚಾಚೂ ತಪ್ಪದೆ ಅವನ ಆಜ್ಞೆಯನ್ನು ಪಾಲಿಸುತ್ತಿದ್ದಳು; ಪೂರ್ತಿ ಅವರಣವೇ ಅದೊಂದು ರೀತಿಯ ಮೋಡಿಗೊಳಗಾಗಿತ್ತು. ಜನರು ಹೀಗೆ ಮೋಡಿಗೊಳಗಾದವರಂತೆ ಇರುವಾಗಲೇ ಜ್ಯೋತಿಷಿಯು ''ಈಗ ಜ್ವಾಲೆಯಲ್ಲಿ ನಿನ್ನ ಅಜ್ಜನ ಮುಖ ಕಾಣಿಸುತ್ತಿದೆಯಲ್ಲ'' ಎಂದು ಕೇಳಿದ. ಹುಡುಗಿಯು ಮೇಲಿಂದ ಮೇಲೆ ಪರೀಕ್ಷಿಸಿದಳು. ಆಮೇಲೆ ''ನಾನು ಅವನನ್ನು ಕಾಣುತ್ತಿದ್ದೇನೆ; ನಾನು ಅವನನ್ನು ಕಾಣುತ್ತಿದ್ದೇನೆ'' ಎಂದು ಗೊಣಗುಟ್ಟಿದಳು. ಮೋಡಿಗಾರನು ಆಗ ''ನೀನು ನಿನ್ನ ಅಜ್ಜನನ್ನು ಅಪರಾಧಿ ಯಾರು ಎಂದು ಕೇಳು'' ಎಂದನು.

ಅಷ್ಟರಲ್ಲಿ ಹುಡುಗಿಯು ''ನನಗೆ ಇಬ್ಬರು ಕೊಲೆಗಡುಕ ಠಕ್ಕರು ಹಾಗೂ ಓರ್ವ ಸಣ್ಣ ಹುಡುಗ ಕಾಣಿಸುತ್ತಿದ್ದಾನೆ. ಅವರು ನಮ್ಮ ಮನೆಯ ಕಡೆಗೆ ಬರುತ್ತಿದ್ದಾರೆ!'' ಎಂದು ಬೊಬ್ಬಿಡತೊಡಗಿದಳು.

ಸ್ಥೈರ್ಯಗೆಡಿಸಿದ ಖರ್ಚು

ಮೋಡಿ ಮಾಡುವವನು ಸಂತುಷ್ಟಗೊಂಡ. ಶ್ರೀಮತಿ ಮಿಹ್ರಾಳ ತಾಯಿಯ ಕನಸಿಗೂ ಹುಡುಗಿ ಕಂಡ ದೃಶ್ಯಕ್ಕೂ ಸಾಮ್ಯ ಇದೆ ಎನ್ನುವ ಅಂಶ ಮೋಡಿ ಮಾಡುವವನಿಗೆ ತಿಳಿದಿರಲಿಲ್ಲ. ಅವನ ವಿವರಣೆಯಲ್ಲಿ ನಿಶ್ಚಯವಿತ್ತು; ''ಈ ಕೊಲೆಗಡುಕರು ದೆವ್ವಗಳು; ಅವು ಕೆಟ್ಟದ್ದನ್ನೆಲ್ಲಾ

ಮಾಡುತ್ತಿವೆ. ಅವುಗಳನ್ನು ನಿನ್ನ ವೈರಿಗಳು ನಿನಗೆ ಕೆಡಕನ್ನುಂಟು ಮಾಡಲು ಕಳುಹಿಸುತ್ತಾರೆ. ಅವರ ಮಾಯಮಾಟ ವಿರೋಧಿಸಲು ನಾವು ಪ್ರಬಲವಾದ ಪೂಜೆಯನ್ನು ಮಾಡಬೇಕು'' ಎಂದನು.

ಮಿಹ್ರಾನಿಗೆ ಈ ಪೂಜೆಪುನಸ್ಕಾರ, ಮಾಟ, ದಾರ ಕಟ್ಟುವುದು, ಜ್ಯೋತಿಷ್ಯ ನೋಡುವುದು, ನಿಂಬೆಹಣ್ಣು ತುಂಡು ಮಾಡುವುದು, ಮುಂತಾದವು ಬೇಸರ ತರಿಸಿದ್ದವು. ಈಗ ಈ ಮನುಷ್ಯನ ಮಾತನ್ನು ತಳ್ಳಿ ಹಾಕಿದನು.

ಮಂತ್ರವಾದಿಗಳಿಗೋಸ್ಕರ ಮಾಡಿದ ವೆಚ್ಚವನ್ನು ಮಿಹ್ರಾ ಲೆಕ್ಕ ಹಾಕಿದಾಗ ಸ್ಮೃತಿ ತಪ್ಪಿ ಬೀಳುವುದೊಂದು ಬಾಕಿ ಇತ್ತು.

ಒಟ್ಟು ಮೊತ್ತ ಹದಿನೈದು ಸಾವಿರ ರೂಪಾಯಿಗಳಾಗಿದ್ದವು!

ಒಂದೂವರೆ ವರ್ಷ ದುಃಖದಲ್ಲೆ ಕಳೆದಿತ್ತು. ಪ್ರತಿತಿಂಗಳೂ ಸರಾಸರಿ 900 ರೂಪಾಯಿಗಳಷ್ಟು ಹಣವನ್ನು ಮಾಂತ್ರಿಕರ ಮೇಲೆ ವೆಚ್ಚ ಮಾಡಿದರೂ ಭೂತ ಮತ್ತು ಮಿಹ್ರಾರ ನಡುವಿನ ಸಂಬಂಧ ಇನ್ನಷ್ಟು ನಿಕಟವಾಯಿತು.

ಸ್ತಂಭಿತರನ್ನಾಗಿಸುವ ದೃಶ್ಯ!

ಆಯ-ವ್ಯಯ ಲೆಕ್ಕ ಮಾಡುವ ದಿನ ಶ್ರೀಯುತ ಮಿಹ್ರಾ ತನ್ನ ವಿಶೇಷ ವೆಚ್ಚವನ್ನು ಲೆಕ್ಕ ಮಾಡಿದ. ಸಹಜವಾಗಿಯೇ ಅವನಿಗೆ ಆ ದಿವಸ ನಿದ್ರೆ ಬರಲಿಲ್ಲ. ಮಾರನೆಯ ದಿನ ಬೆಳಿಗ್ಗೆ - ನವೆಂಬರ್ 25, 1966ರಂದು - ಎದ್ದು ಕೆಲಸಕ್ಕೆ ಹೋದ.

ಈ ಮಧ್ಯೆ ಒಂದು ದಿನ ಬೆಳಿಗ್ಗೆ ಶ್ರೀಮತಿ ಮಿಹ್ರಾ ಸ್ನಾನ ಮಾಡಲು ನಿರ್ಧರಿಸಿದಳು. ಸ್ನಾನದ ಮನೆಯಲ್ಲಿ ತನ್ನ ಮೇಲು ಹೊದಿಕೆ ಇಲ್ಲದಿರುವುದನ್ನು ನೋಡಿದಳು. ಹೀಗಾಗಿ ಅವಳು ಮಲಗುವ ಮನೆಗೆ ಹೋದಳು. ಅಲ್ಲಿಯ ದೃಶ್ಯ ಅವಳನ್ನು ಸ್ತಂಭೀಭೂತಗೊಳಿಸಿತು. ಅವಳ ಕಪಾಟಿನೊಳಗಿನಿಂದ ಹೊಗೆಯಂತಹ ಒಂದು ವಸ್ತು ಎಲ್ಲೆಡೆಯಲ್ಲೂ ಹರಡಿಕೊಂಡು ಹೊರ ಬರುತ್ತಿದೆ. ಆದರೆ ಇದು ನಿಜವಾದ ಹೊಗೆಯೋ ಭೂತಚೇಷ್ಟೆಯೋ? ಶ್ರೀಮತಿ ಮಿಹ್ರಾಳ ಮನಸ್ಸು ಭಯದಿಂದ ತತ್ತರಿಸಿತು. ಅವಳು ಬೊಬ್ಬಿಡತೊಡಗಿದಳು.

ಅವಳ ತಾಯಿ, ಸಹೋದರ-ಸಹೋದರಿಯರು ಹಾಗೂ ನೆರೆಕರೆಯವರೆಲ್ಲಾ ಅವಳ ಗಲಾಟೆ ಕೇಳಿ ಕ್ಷಣದಲ್ಲಿ ಅಲ್ಲಿ ನೆರೆದರು. ಕಪಾಟು ಒಂದೆಡೆ ಹಾಳಾಗಿತ್ತು. ಬೆಂಕಿಯಿಲ್ಲದೆ ಹೊಗೆ ಬಾರದು ಎಂಬ ನಾಣ್ಣುಡಿ ಇಲ್ಲಿ ಅನ್ವಯವಾಗುತ್ತಿತ್ತು. ಅಂದರೆ ಅವಳ ಕಪಾಟು ಹಾಗೂ ಬಟ್ಟೆಗಳೆಲ್ಲಾ ಬೆಂಕಿಗಾಹುತಿಯಾಗಿದ್ದವು.

ಅವಳ ಎಲ್ಲಾ ಬಟ್ಟೆಗಳು ಆ ಕಪಾಟಿನಲ್ಲಿದ್ದವು. ಅವುಗಳಲ್ಲಿ ಹೆಚ್ಚಿನವು ಟೆರಿಲಿನ್, ನೈಲಾನ್, ಕಾಶ್ಮೀರಿ ಸಿಲ್ಕ್ ಹಾಗೂ ತುಂಬಾ ಆಡಂಬರದ ಬನಾರಸ್ ಮತ್ತು ಕಾಂಜೀಪುರಂ ಸೀರೆಗಳಾಗಿದ್ದವು. ಅವೆಲ್ಲಾ ಈಗ ಸುಟ್ಟುಬಿದ್ದಿದ್ದವು.

ಮಿಹ್ರಾನ ಮಾವನ ಆಗಮನ

ಭೂತ ರೂಪದ ದರೋಡೆಕೋರರು ಈಗ ವಿಧ್ವಂಸಕ ಕಾರ್ಯಗಳಿಗೆ ತೊಡಗಿದುದು ಮನೆಯವರಿಗೆ ತೀವ್ರ ಆಘಾತವೆನಿಸಿತು. ಹಾಗೂ ಪ್ರತಿಯೊಬ್ಬರಲ್ಲೂ ಇದು ಹೆದರಿಕೆಯನ್ನು ಹುಟ್ಟಿಸಿತ್ತು. ಆದರೆ ಈ ಬಗ್ಗೆ ಮಾತನಾಡುವಂತಹ ಶಕ್ತಿ ಯಾರಲ್ಲೂ ಇರಲಿಲ್ಲ.

ಈಗ ಒಬ್ಬಾತ ಆಗಮಿಸಿ ಅಲ್ಲಿಯ ಸಂದರ್ಭವನ್ನು ಪೂರ್ತಿ ಹಿಡಿತಕ್ಕೆ ತಂದ. ಆತ ಮಿಹ್ರಾರ ಮಾವ; ತನ್ನ ಅಳಿಯನ ಮನೆಯಲ್ಲಿ ಸಂಭವಿಸಿದ ಘಟನೆಗಳನ್ನು ಮತ್ತು ಅವುಗಳ ಶಾಂತಿಗಾಗಿ ನಡೆಸಿದ ಕಾರ್ಯವಿಧಾನಗಳನ್ನು ಆತ ವಿಶೇಷ ಆಸಕ್ತಿಯಿಂದ ವಿಚಾರಿಸಿದ. ಅವನ ಸಂಬಂಧಿಕರ ಹಾಗೂ ಮುಖ್ಯವಾಗಿ ಮಿಹ್ರಾನ ಮೂಢನಂಬಿಕೆ ಅವನನ್ನು ಸಿಟ್ಟಿಗೆಬ್ಬಿಸಿತು; ಮತ್ತು ಅವನ ವಿಶ್ವಾಸವನ್ನೇ ಕೆಡಿಸಿತು. ಸುಮಾರು ಒಂದೂವರೆ ವರ್ಷಗಳ ಕಾಲ ತನ್ನ ವ್ಯವಹಾರದಲ್ಲೇ ತೊಡಗಿದ್ದ. ಈಗ ಮಿಹ್ರಾನ ಗೃಹಕೃತ್ಯಕ್ಕೆ ಸಂಬಂಧಪಟ್ಟಂತೆ ಕೆಲವು ಒಳ್ಳೆಯ ಕೆಲಸಗಳನ್ನು ಮಾಡಬೇಕಾದಂಥ ಸಂದರ್ಭ ಒದಗಿ ಬಂದಿತ್ತು.

ಬೆಂಕಿ ಕಂಡುಬಂದ ಕೂಡಲೇ ಮಿಹ್ರಾನ ಬಟ್ಟೆಯ ಅಂಗಡಿಗೆ ಹೆದರಿಕೆಯಿಂದ ಟೆಲಿಫೋನ್ ಮಾಡಲಾಯಿತು. ಭಯವಿಹ್ವಲವಾಗಿ ಆತ ತಕ್ಷಣವೇ ಬಂದ. ತಾನು ಎಲ್ಲವನ್ನೂ ನೋಡಿಕೊಳ್ಳುವುದಾಗಿ ಮಾವ ಸಮಾಧಾನ ಹೇಳಿದ. ನಾವು ಈಗಲೇ ಡಾ। ಕೋವೂರರನ್ನು ಭೇಟಿಯಾಗಿ ನಮ್ಮ ಕೆಲಸ ಆರಂಭಿಸೋಣ ಎಂದನು. ಭಯವಿಹ್ವಲಿತನಾದ ಮಿಹ್ರಾನಿಗೆ ನನ್ನನ್ನು ಫೋನ್ ಮೂಲಕ ಸಂಪರ್ಕಿಸುವಂತೆ ಅಪ್ಪಣೆ ಮಾಡಲಾಯಿತು. ಸ್ವಲ್ಪ ಸಮಯದ ನಂತರ ಅಳಿಯ ಮತ್ತು ಮಾವ ನನ್ನ ಮನೆಗೆ ಆಗಮಿಸಿದರು. ಈ ಘಟನೆಯ ಮೂಲ ಶೋಧಿಸಲು ನಾನು ಅವರ ಮನೆಗೆ ಹೋಗಲು ಒಪ್ಪಿಕೊಂಡೆ.

ವಿಚಾರವಾದಿಯ ವಿಧಾನ (ಕಾರ್ಯತಂತ್ರ)

ನಾನು ಅಲ್ಲಿಗೆ ಹೋದಾಗ ಗುಂಪು ಚದುರಿತ್ತು. ಇದರಿಂದಾಗಿ ನಾನು ನನ್ನ ಕಾರ್ಯತಂತ್ರಗಳನ್ನು ಸರಿಯಾಗಿ ಪ್ರಯೋಗಿಸಿ ಪ್ರತಿಯೊಬ್ಬರನ್ನೂ ಪ್ರಶ್ನಿಸುವು ಸುಲಭಸಾಧ್ಯವಾಯಿತು.

ಮನೆಯಲ್ಲಿರುವ 15 ಜನರಲ್ಲಿ ನಾಲ್ಕು ಜನರನ್ನು ಪ್ರಶ್ನಿಸಲು ನಾನು ನಿರ್ಧರಿಸಿದೆ. ಇವರು ಮಿಹ್ರಾಳ ಅತ್ತೆ, ಶ್ರೀಮತಿ ಮಿಹ್ರಾಳ ಇಬ್ಬರೂ ಸಹೋದರರು ಹಾಗೂ ಶ್ರೀಮತಿ ಮಿಹ್ರಾ ಆಗಿದ್ದರು.

ಪ್ರಶ್ನೋತ್ತರ ವಿಧಾನ ತುಂಬಾ ಸರಳವಾಗಿತ್ತು. ಪ್ರತಿಯೊಬ್ಬರನ್ನೂ ಪ್ರತ್ಯೇಕವಾಗಿ ಒಂದು ಕೋಣೆಗೆ ಕರೆದು ನಾನು ಹೇಳಿದ ಕೆಲವು ನುಡಿಗಟ್ಟುಗಳನ್ನು ಬರೆಯಲು ಹೇಳಲಾಯಿತು. ಈ ನುಡಿಗಟ್ಟುಗಳನ್ನು ಮನೆಯಲ್ಲಿ ಕಂಡು ಬಂದ ನಿಗೂಢ ಪ್ರೇಮಪತ್ರಗಳಿಂದ ನಾನು ಆಯ್ದುಕೊಂಡೆ. ಈ ಘಟನೆಯ ಪ್ರಮುಖ ಅಂಶ ಇದಾಗಿತ್ತು.

ಈ ರೀತಿಯ ಉಕ್ತಲೇಖನ ಮುಗಿದ ಮೇಲೆ ನಾನು ಪ್ರತಿಯೋರ್ವನ ಕೈಬರಹವನ್ನೂ ಪರೀಕ್ಷಿಸತೊಡಗಿದೆ. ಹಾಗೂ ಆ ನಾಲ್ಕು ಕೈ ಬರಹಗಳನ್ನು ಪ್ರೇಮಪತ್ರಗಳೊಡನೆ ಹೋಲಿಸಿದೆ. ನಾಲ್ಕು ಕೈಬರಹಗಳಲ್ಲಿ ಮೂರನ್ನು ಹರಿದು ಹಾಕಿದೆ.

ಪದ ರಚನೆಯಲ್ಲಿ ತಪ್ಪು

ಒಂದು ಸುಳಿವಿನಿಂದ ಯಾವುದೇ ತಪ್ಪನ್ನು ಕಂಡು ಹಿಡಿಯುವುದು ಸಾಧ್ಯವಿಲ್ಲ. ಒಂದು ಸುಳಿವು ಪ್ರಮುಖವಾದರೂ ಅದನ್ನು ಸಾಬೀತುಗೊಳಿಸಲು ಹಾಗೂ ಒಂದು ಘಟನೆಗೂ ಇನ್ನೊಂದು ಘಟನೆಗೂ ಸಂಬಂಧ ಕಲ್ಪಿಸಲು ಅದಕ್ಕೆ ಪೂರಕವಾದ ಇತರ ಘಟನೆಗಳಿರಬೇಕು.

ಇಲ್ಲಿ ಪ್ರಮುಖವಾದ ಸುಳಿವು ಎಂದರೆ ಪದ ರಚನೆಯಲ್ಲಿ ಮಾಡಿದ ತಪ್ಪು. ಇಲ್ಲಿ ಇದ್ದಂತಹ ಶಬ್ದ "AFTER." ಪ್ರೇಮಪತ್ರದಲ್ಲಿ ಈ ಶಬ್ದ "UFTER" ಎಂಬ ಅಕ್ಷರಗಳೊಂದಿಗೆ ಮೂರು ಸಾರಿ ಬಂದಿತ್ತು. ಒಂದು ಕೈ ಬರಹದಲ್ಲಿ ಇದು "UFTER" ಎಂದಾಗಿತ್ತು. ಇದರಿಂದಾಗಿ ಅಪರಾಧಿಯ ಪತ್ತೆ ಹಚ್ಚಲಾಯಿತು. ಆದರೆ ಈ ಒಂದು ಸುಳಿವಿನಿಂದಾಗಿ ಅಪರಾಧಿ ಯಾರು ಎಂದು ಹೇಳುವುದು ಸರಿಯೆ?

ಸಂದರ್ಶನ ಕಾಲದಲ್ಲಿ ವಿಷಯವನ್ನು ದೃಢಪಡಿಸುವ ಅಂಶಗಳು ವ್ಯಕ್ತವಾಗದಿದ್ದಲ್ಲಿ ವಿಚಾರವಾದಿಯು ಯಾವುದೇ ತೀರ್ಮಾನವನ್ನು ಪ್ರಕಟಪಡಿಸುವಂತಿಲ್ಲ. ಆದರೆ ಕೆಲವು ಅಸ್ಪಷ್ಟ ಕುರುಹುಗಳು ನನ್ನ ಮನಸ್ಸಿನಲ್ಲಿ ವಿಲಕ್ಷಣ ನೃತ್ಯ ಮಾಡಲು ಆರಂಭಿಸಿದವು. ಈ ಕುರುಹುಗಳು ಪ್ರೇಮಪತ್ರದಲ್ಲಿದ್ದ 14 ... ಸ್ಯಾರಿ ... ಜೂನ್ 14 ... ನಾವು ವಿಮಾನದಲ್ಲಿ ಭಾರತಕ್ಕೆ ಹಾರಬಹುದು ... ನೀನು ಪ್ರತಿ ರಾತ್ರಿ ಬರಬೇಕು ... ಜೂನ್ 14 ... ಮಿಹ್ರಾ ಹಾಗೂ ಸ್ಯಾರಿ ..."

ಓರ್ವ ವಿಚಾರವಾದಿಯಾಗಿ ಹಾಗೂ ವಿಜ್ಞಾನಿಯಾಗಿ ನಾನು ನನ್ನ ಮನಸ್ಸಿನ ಅದ್ಭುತ ಕಲ್ಪನೆಗಳಿಗೆ ರೂಪ ಕೊಡುವುದು ಹೇಗೆ?

ಸತ್ಯದ ಕ್ಷಣ

ಸೂಕ್ಷ್ಮವಾದ ಕೆಲವು ವಿಷಯಗಳು ನನ್ನಲ್ಲಿ ಒಂದು ರೀತಿಯ ತರ್ಕವನ್ನುಂಟುಮಾಡಿದವು. ತಪ್ಪಾಗಿ ಬರೆದ ಶಬ್ದಗಳನ್ನೇ ನಾನು ಪ್ರಮುಖ ವಿಷಯವಾಗಿ ತೆಗೆದುಕೊಂಡೆ; ನಾನು ಈಗ ಮೊದಲಿಗೆ ಅಪರಾಧಿಯನ್ನು ಪತ್ತೆ ಹಚ್ಚಿ ಇನ್ನೂ

ಪ್ರಕಟಗೊಳ್ಳದ ಉದ್ದೇಶಗಳನ್ನು ಪತ್ತೆ ಹಚ್ಚ ಬೇಕು. ಹೀಗೆ ಯೋಚಿಸಿ ಭೂತದ ಉಪಟಳಕ್ಕೊಳಗಾದ ಮನೆಗೆ ನಾನು ರಾತ್ರಿ 9-15ಕ್ಕೆ ಬಂದೆ. ಈಗ ಸಮಯ ಸುಮಾರು ಒಂದು ಘಂಟೆಯಾಗಿತ್ತು. ನಾನು ನನ್ನ ತಾರ್ಕಿಕ ಊಹೆಯಿಂದ ಸತ್ಯ ಗೊತ್ತಾಗಿದೆ ಎನ್ನುವ ಅಂಶವನ್ನು ತಿಳಿದುಕೊಂಡೆ.

ಆಮೇಲೆ ಮಾವ ಮತ್ತು ಅಳಿಯನನ್ನು ಇನ್ನೊಂದು ರೂಮಿನ ಒಂದು ಬದಿಗೆ ಕರೆದು, ಬಾಗಿಲು ಮುಚ್ಚಿ, ''ಮಿಹ್ರಾ, ಇಲ್ಲಿ ನಡೆದುದಕ್ಕೆಲ್ಲಾ ನಿನ್ನ ಪತ್ನಿಯೇ ಜವಾಬ್ದಾರಳು'' ಎಂದು ಈ ಘಟನೆಯ ಕುರಿತು ನನ್ನ ಅನಿಸಿಕೆಯನ್ನು ಪ್ರಕಟಿಸಿದೆ.

ಇದರಿಂದ ಮಿಹ್ರಾ, ಮೊದಲಿಗೆ ಮೂಕನಾದನು. ಆಘಾತದಿಂದ ಚೇತರಿಸಿಕೊಳ್ಳುತ್ತ ನನ್ನ ಶೋಧವನ್ನು ಉಗ್ರವಾಗಿ ವಿರೋಧಿಸಲು ಆರಂಭಿಸಿದನು; ಅವನ ವಾದವನ್ನು ನಾನು ತುಂಬಾ ಕರುಣೆಯಿಂದ ಕೇಳಿದೆ. ಅಂತಹ ಒಳ್ಳೆಯ, ಕರ್ತವ್ಯಶೀಲ, ಸುಂದರ ಹಾಗೂ ಆಧುನಿಕ ಪತ್ನಿಯ ವಿರುದ್ಧ ಇಂತಹ ದೂರುಗಳನ್ನು ಯಾವ ಪತಿ ತಾನೆ ಒಪ್ಪಿಕೊಂಡಾನು!

ಊಹೆಗಳ ಸುಳಿಯಲ್ಲಿ

ಈ ಹಂತದಲ್ಲಿ ಮಿಹ್ರಾನ ಮಾವ ಅನಿರೀಕ್ಷಿತವಾಗಿ ಮಧ್ಯೆ ಪ್ರವೇಶಿಸಿದರು. ''ನೀನು ಮೂರ್ಖ, ಹೆಡ್ಡ'' ಎಂದು ಕ್ರೋಧದಿಂದ ತನ್ನ ಅಳಿಯನ ಬಗ್ಗೆ ನುಡಿದರು. ''ಆ ಹಣ ಸುಲಿಯುವ ಮಾಂತ್ರಿಕರು ಹೇಳಿದ ಎಲ್ಲಾ ಮಾತುಗಳನ್ನು ಒಪ್ಪಿದೆ. ಆದರೆ ಈಗ ವಾದ ಮಾಡಲು ಯತ್ನಿಸುತ್ತಿದ್ದೀಯಾ. ಈ ವಿದ್ಯಾವಂತ ದೊಡ್ಡ ಮನುಷ್ಯ ಹೇಳಿದುದನ್ನು ನೀನು ಯಾಕೆ ಒಪ್ಪಿಕೊಳ್ಳಬಾರದು?''

ಮಾವ ಯಾವುದೇ ತಡೆಯಿಲ್ಲದೆ ಮುಂದುವರೆಸಿದ - ''ಕೋವೂರ್, ನಾನು ಮತ್ತು ನನ್ನ ಅಳಿಯ ನೀವು ಹೇಳಿದುದನ್ನೆಲ್ಲಾ ಮಾಡುತ್ತೇವೆ. ಇದು ನನ್ನ ಜವಾಬ್ದಾರಿ.''

ಮಿಹ್ರಾ ಈಗ ಶಕ್ತಿ ಕುಂದಿದವರಂತೆ ಕಂಡುಬರುತ್ತಿದ್ದರು. ಬಿಕ್ಕಟ್ಟು ಸ್ವಲ್ಪ ಪರಿಹಾರವಾದುದನ್ನು ಕಂಡು ಶ್ರೀಮತಿ ಮಿಹ್ರಾಳನ್ನು ನನ್ನ ಮನೆಗೆ ಎರಡು ದಿನಗಳ ಮಟ್ಟಿಗೆ ಮಾನಸಿಕ ಪರೀಕ್ಷೆಗೋಸ್ಕರ ಕರೆದುಕೊಂಡು ಬರುವಂತೆ ಹೇಳಿದೆ.

ಈ ವಿಷಯವನ್ನು ಶ್ರೀಮತಿ ಮಿಹ್ರಾಳಿಗೆ ತಿಳಿಸದೆ ಇರುವಂತೆ ಹೇಳಿದೆ.

ಹೇಳಿದ ದಿವಸವೇ ''ತಿರುವಲ್ಲಾದ'' ನನ್ನ ಮನೆಗೆ ಮಾವ ಅಳಿಯ ಹಾಗೂ ಪತ್ನಿ ಬಂದರು. ಇಬ್ಬರನ್ನೂ ಹೊರಗಡೆಯ ರೂಮಲ್ಲಿ ಕಾಯುವಂತೆ ಹೇಳಿ, ನಾನು ಮತ್ತು ನನ್ನ ಪತ್ನಿ ಶ್ರೀಮತಿ ಮಿಹ್ರಾಳನ್ನು ಮಹಡಿಯ ಮೇಲೆ ಕರೆದುಕೊಂಡು ಹೋದೆವು.

ನಾನು ಮಾಡಿದ ವಶೀಕರಣ ಪರೀಕ್ಷೆಗೆ ಈ ಹೆಂಗಸು ಸರಿಯಾಗಿ ಪ್ರತ್ಯುತ್ತರಿಸಿದಳು. ನನಗೆ ಅವಳ ಸಂಪೂರ್ಣ ಸಹಕಾರ ಸಿಕ್ಕಿತು. ಹೊರಗಡೆಯ ರೂಮಿನಲ್ಲಿದ್ದಾಗ ಅವರ ತೊಂದರೆಗಳ ಪರಿಹಾರಕ್ಕೋಸ್ಕರ ಸಹಾಯ ಮಾಡುವಂತೆ ನನ್ನನ್ನು ಪದೇ ಪದೇ ಕೇಳಿಕೊಂಡಿದ್ದಳು. ಶ್ರೀಮತಿ ಮಿಹ್ರಾ ಈಗ ಸಂಪೂರ್ಣ ಚೇತರಿಸಿಕೊಂಡು ಇನ್ನೆರಡು ನಿಮಿಷಗಳಲ್ಲಿ ಆಳವಾದ ವಶೀಕರಣ ಸ್ಥಿತಿಗೊಳಗಾದಳು.

ಪ್ರಶ್ನೆಯಿಲ್ಲದೆ ತಪ್ಪೊಪ್ಪಿಗೆ

ಶ್ರೀಮತಿ ಮಿಹ್ರಾ ನನ್ನ ಪ್ರಶ್ನೆಗಳಿಗೆ ಉತ್ತರವಾಗಿ ಸತ್ಯವನ್ನೇ ನುಡಿದಳು. ಬರೆದ ಪ್ರೇಮಪತ್ರಗಳು, ಮಾಡಿದ ಮಾಟಗಳು, ಕಪಾಟಿಗೆ ಬೆಂಕಿ ಇಟ್ಟದ್ದು- ಎಲ್ಲವೂ ಶ್ರೀಮತಿ ಮಿಹ್ರಾಳ ಕೆಲಸವಾಗಿತ್ತು. ಅವಳು ತನ್ನ ಎಲ್ಲ ತಪ್ಪುಗಳನ್ನೂ ಒಪ್ಪಿಕೊಂಡ ನಂತರ, ಅವಳು ಮುಂದೆ ಕೈಗೊಳ್ಳಬೇಕಾದ ಎಚ್ಚರಿಕೆಯ ಸೂಚನೆಗಳನ್ನು ಹಲವಾರು ಬಾರಿ ಜಾಗರೂಕತೆಯಿಂದ ಉಚ್ಚರಿಸುವಂತೆ ಹೇಳಿದೆ. ಅವಳನ್ನು ಎಚ್ಚರಗೊಳಿಸಬೇಕಾದ ಸಮಯ ಬರುವ ತನಕ ನಾನು ವಾಕ್ಯಗಳನ್ನು ಪುನಃ ಪುನಃ ಹೇಳಿದೆ.

ಅನಂತರ ನಾನು ಒಂದು ರೀತಿಯ ಉಗ್ರ ಪರೀಕ್ಷೆಗೊಳಗಾದೆ.

ವಶೀಕರಣಕ್ಕೊಳಗಾದವರು ಪರೀಕ್ಷೆ ಮುಗಿದ ಮೇಲೆ ಮೂರರವರೆಗೆ ಲೆಕ್ಕ ಮಾಡುವ ಷ್ಟರಲ್ಲಿ ಬೆರಳುಗಳನ್ನು ಅಲುಗಾಡಿಸುತ್ತಾರೆ. ಇದು ವಶೀಕರಣಕ್ಕೊಳಗಾದ ವ್ಯಕ್ತಿಯನ್ನು ನಿಜ ಜಗತ್ತಿಗೆ ತರುವ ವಿಧಾನ; ಆದರೆ ಶ್ರೀಮತಿ ಮಿಹ್ರಾ ಮೇಲೇಳಲೇ ಇಲ್ಲ.

ಈ ರೀತಿ ಸಂಪೂರ್ಣ ವಶರಾಗುವುದಕ್ಕೆ ಕಾರಣ ನನಗೆ ತಿಳಿಯದುದಲ್ಲ. ಆದರೂ ಅದು ನನ್ನ ಶರೀರದಲ್ಲಿ ಬೆವರಿಳಿಯುವುದನ್ನು ತಡೆಗಟ್ಟುವಲ್ಲಿ ಸಮರ್ಥವಾಗಲಿಲ್ಲ.

ಮನಃ ಶಮನಕಾರೀ ನಿದ್ರೆ

ಈಗ ಶ್ರೀಮತಿ ಮಿಹ್ರಾಳ ಮನಸ್ಸು ಮತ್ತು ಶರೀರ ಎರಡೂ ಕೂಡಾ ಶಾಂತಿಯನ್ನು ಬಯಸಿದ್ದವು. ಅವಳು ಈ ಸ್ಥಿತಿಯಲ್ಲಿದ್ದುದರಿಂದ ನಾನು ಹಾಗೂ ನನ್ನ ಪತ್ನಿ ನಮ್ಮ ರೋಗಿಯ ಮಾನಸಿಕ ಗಾಯ ಮಾಗಿ ಆಕೆ ಸರಿಯಾದ ಜೀವನ ನಡೆಸಬೇಕಾದರೆ ಸ್ವಾಭಾವಿಕವಾಗಿ ಜಾಗೃತ ಸ್ಥಿತಿಗೆ ಬರಬೇಕು ಎಂಬುದಾಗಿ ನಿರ್ಧರಿಸಿದೆವು.

ಮುಂದಿನ ಸುಮಾರು ಎರಡು ಗಂಟೆಗಳ ಕಾಲವನ್ನು ಶ್ರೀಯುತ ಮಿಹ್ರಾರೊಡನೆ ಚರ್ಚಿಸುತ್ತಾ ಕಳೆದೆ. ಶ್ರೀಯುತ ಮಿಹ್ರಾರವರು ನನ್ನೊಡನೆ ಸಹಕರಿಸಿದರು. ಉದಾಹರಣೆಗೆ ಸ್ಕಾರಿ ಅಂದರೆ ಯಾರು?

ಮೊದಲಿಗೆ ಈ ಪ್ರಶ್ನೆಗೆ ಉತ್ತರಿಸುವುದು ಮಿಹ್ರಾಗೆ ತ್ರಾಸದಾಯಕವಾಯಿತು; ಆದರೆ ನನ್ನ ಒತ್ತಾಯದಿಂದಾಗಿ ಉತ್ತರಿಸಿದ.

ಸ್ಕಾರೀ–ಪ್ರೇಮಿಸಿದವಳು ಹಾಗೂ ದ್ವೇಷಿಸಿದವಳು

ಸ್ಕಾರೀ ಎನ್ನುವವಳು ಅಂದವಾಗಿ ನೃತ್ಯ ಮಾಡುವ ಹುಡುಗಿ. ಆಕೆ ಆ ದ್ವೀಪದಲ್ಲಿ ಪ್ರವಾಸ ಮಾಡುತ್ತಿದ್ದ ಭಾರತೀಯ ಮನರಂಜನಾ ತಂಡವೊಂದರಲ್ಲಿ ನೃತ್ಯ ಮಾಡುವ ಏಕೈಕ ಹುಡುಗಿಯಾಗಿದ್ದಳು.

ಈ ನೃತ್ಯ ತಂಡದ ಮುಖಂಡರ ಪರಿಚಯ ಮಿಹ್ರಾನಿಗೆ ಚೆನ್ನಾಗಿತ್ತು. ಹಾಗೂ ಅವರನ್ನು ಆದರಿಸುವ ನೆವದಲ್ಲಿ ಅವನು ಸ್ಕಾರಿಯನ್ನು ಹೆಚ್ಚಾಗಿಯೇ ಸತ್ಕರಿಸಿದ್ದಿರಬೇಕು. ಅವಳ ರಾತ್ರಿಯ ನೃತ್ಯ ನಗರದ ಎಲ್ಲೆಡೆಯಲ್ಲೂ ಮಾತಾಗಿತ್ತು.

ನಮಗೆಲ್ಲಾ ತಿಳಿದಂತೆ ಮುಸ್ಲಿಂ ಮಹಿಳೆಯರು ಎಲ್ಲರಿಂದಲೂ ಪ್ರತ್ಯೇಕಿಗಳಾಗಿದ್ದು ಜೀವನ ನಿರ್ವಹಿಸುವವರು; ಅಂತಹುದರಲ್ಲಿ ಮಿಹ್ರಾನ ನಡವಳಿಕೆ ಶ್ರೀಮತಿ ಮಿಹ್ರಾಳಲ್ಲಿ ಸಂಶಯವನ್ನು ಉಂಟುಮಾಡಿರಬೇಕು.

ಇನ್ನೊಂದು ಪ್ರಶ್ನೆ: ಸ್ಕಾರೀ ಯಾವಾಗ ಮತ್ತು ಹೇಗೆ ಭಾರತಕ್ಕೆ ಹೋದಳು?

''ಜೂನ್ 14ರಂದು ವಿಮಾನದಲ್ಲಿ'' ಮಿಹ್ರಾ ಹೇಳಿದ.

ಅವಳು ತೆತ್ತ ಬೆಲೆ

ನನ್ನ ಮನಸ್ಸಿನಲ್ಲಿ ಹಲವು ಶಬ್ದಗಳು ನರ್ತನ ಮಾಡಲಾರಂಭಿಸಿದವು. ''ಜೂನ್ 14 ಮರೆಯಬೇಡ ... ನಾವು ವಿಮಾನದಲ್ಲಿ ಹಾರಬಹುದು ... ನೀನು ಪ್ರತಿ ರಾತ್ರಿ ಬರಬೇಕು.'' ಇವು ನಿಗೂಢ ಪ್ರೇಮಪತ್ರಗಳಲ್ಲಿದ್ದ ನುಡಿಗಟ್ಟುಗಳಾಗಿದ್ದವು. ಈಗ ನನಗೆ ಈ ಮಾತುಗಳ ನಿಗೂಢತೆ ಕಡಿಮೆಯಾದಂತಾಯಿತು.

ಶ್ರೀಮತಿ ಮಿಹ್ರಾ ''ಸ್ಕಾರೀ'' ಆದುದು ಹೇಗೆ! ಅವಳು ಸ್ಕಾರೀ ಅನ್ನು ಪ್ರೇಮಿಸಿದ್ದಳು ಹಾಗೂ ದ್ವೇಷಿಸಿದ್ದಳು. ಆದರೆ ಪ್ರಮುಖ ಅಂಶ ಎಲ್ಲಿ ಮತ್ತು ಹೇಗೆ? ಎನ್ನುವುದು.

ಈಗ ಕೊನೆಯದಾಗಿ ಮಿಹ್ರಾ ಅವನ ಪತ್ನಿಯ ತಾಯಿ ಮತ್ತು ಅವಳ ಮಕ್ಕಳನ್ನು ನೋಡಿಕೊಳ್ಳುತ್ತಾನೋ ಎಂದು ಪ್ರಶ್ನಿಸಿದೆ. ನನ್ನ ಪ್ರಶ್ನೆಗೆ ನಕಾರಾತ್ಮಕವಾದ ಉತ್ತರ ದೊರಕಿದಾಗ ನನ್ನ ಸಂಶಯಗಳೆಲ್ಲಾ ಪರಿಹಾರವನ್ನು ಕಂಡುಕೊಂಡವು. ಈ ರೀತಿಯ ಘಟನೆಗಳು ನಡೆಯಲು ಹಣ ಮತ್ತು ಕುಟುಂಬದ ಬಗೆಗೆ ಇರುವ ಕಾಳಜಿ ಕಾರಣವಾಗಿದ್ದವು.

ಶ್ರೀಮತಿ ಮಿಹ್ರಾ ತನ್ನ ಸಹೋದರ ಸಹೋದರಿಯರ ಕುರಿತು ತುಂಬಾ ಕಾಳಜಿ ವಹಿಸುತ್ತಿದ್ದಳು. ಅವರಿಗೆ ಊಟೋಪಚಾರ, ಬಟ್ಟೆ ಹಾಗೂ ವಿದ್ಯಾಭ್ಯಾಸವನ್ನು ಕೊಡಬೇಕಾಗಿತ್ತು.

ಆದರೆ ಇದಕ್ಕೆಲ್ಲಾ ಹಣವೆಲ್ಲಿಂದ ಬರಬೇಕು?

ಇನ್ನು ಮಿಹ್ರಾ ಮದುವೆಯಾಗುವಾಗ ಈ ರೀತಿಯ ಹೊರೆ ಹೊರಬೇಕೆಂದು ಹೇಳಿರಲಿಲ್ಲ. ಅವನೋರ್ವ ಎಳೆಯ ಸುಂದರ ಮಹಿಳೆಯನ್ನು ಮದುವೆಯಾಗಿದ್ದನೇ ಹೊರತು ಅವಳ ತಾಯಿ ಹಾಗೂ ಅವಳ ಮಕ್ಕಳನ್ನಲ್ಲ.

ಇದರಿಂದಾಗಿ ಅಲ್ಲಿ ಆಗಾಗ್ಗೆ ಘರ್ಷಣೆಯುಂಟಾಗುತ್ತಿತ್ತು. ಹೇಗಾದರೂ ಮಾಡಿ ಶ್ರೀಮತಿ ಮಿಹ್ರಾ ಹಣವನ್ನು ಪಡೆಯುತ್ತಿದ್ದಳು. ಆದರೆ ಇದಕ್ಕೆ ಪ್ರತಿಫಲವಾಗಿ ಅವಳಲ್ಲಿ ಅಪರಾಧಿ ಭಾವ ಮೂಡಿತ್ತು. ಈ ಅಪರಾಧಿ ಭಾವ ಅವಳನ್ನು ಸಂಕುಚಿತಳನ್ನಾಗಿಸುತ್ತಿತ್ತು. ಅವಳು ಈ ಅಪರಾಧಿ ಭಾವವನ್ನು ಮರೆಯಲೋಸುಗ ಆಗಾಗ್ಗೆ ಸ್ಮೃತಿ ತಪ್ಪಿಬೀಳುತ್ತಿದ್ದಳು. ಹಾಗೂ ಇದರಿಂದಾಗಿ ತಾನು ತನ್ನ ಪತಿಯು ಮಾಡಿದ ಮೋಸ ಹಾಗೂ ಕಳ್ಳತನದ ಅಪರಾಧಿಭಾವದಿಂದ ತಾತ್ಕಾಲಿಕವಾಗಿ ಬಿಡುಗಡೆಯನ್ನು ಹೊಂದುತ್ತಿದ್ದಳು.

ಎರಡೂ ತೆರನ ಕಾಳಜಿ

ಸಮಯ ಕಳೆದಂತೆ ಶ್ರೀಮತಿ ಮಿಹ್ರಾಳ ಮನಸ್ಸಿನ ಮೇಲಾದ ಆಘಾತ ಹೆಚ್ಚು ಪರಿಣಾಮ ಬೀರತೊಡಗಿತು. ಆಗಾಗ್ಗೆ ಸ್ಮೃತಿ ತಪ್ಪಿ ಬೀಳುವುದರಿಂದ ಈ ರೀತಿಯ ಆಘಾತವನ್ನು ಮರೆಯುವುದು ತ್ರಾಸದಾಯಕವಾದಾಗ ಮಿಹ್ರಾಳಿಗೆ ತನ್ನ ಮೇಲೆ ಇರುವ ಪ್ರೇಮದ ಕುರಿತು ಅವಳು ಸಂಶಯಪಡತೊಡಗಿದಳು.

ಮಾನಸಿಕವಾಗಿ ಆದ ಆಘಾತವನ್ನು ನೇರ ಕಾರ್ಯಾಚರಣೆಯಲ್ಲಿ ತೋರಿಸಲು ಅವಳಿಗೆ ಸಾಧ್ಯವಾಗಲಿಲ್ಲ; ಇದರಿಂದಾಗಿ ತನಗೇ ತಿಳಿಯದಂತೆ ಅವಳು ಕೆಲವು ವಿಭಿನ್ನ ಕೆಲಸಗಳನ್ನು ಮಾಡತೊಡಗಿದಳು.

ಇಷ್ಟೇ ಅಲ್ಲದೆ ಅವಳು ಮಾಡುವ ಈ ಕೆಲಸಗಳು ಯಾರಿಗೂ ಯಾವುದೇ ರೀತಿಯ ಕೆಡುಕುಗಳನ್ನುಂಟು ಮಾಡುತ್ತಿರಲಿಲ್ಲ. ಆದ್ದರಿಂದ ಅವಳು ತನ್ನ ಗಂಡ ತನಗೆ ದ್ರೋಹವೆಸಗಿದನೆಂದು ಯಾವುದೇ ರೀತಿಯಲ್ಲಿ ತೋರಿಸುತ್ತಿರಲಿಲ್ಲ. ಆದರೆ ಅವಳ ಮನಸ್ಸು ಯಾವಾಗಲೂ ನರ್ತಕಿಯನ್ನು ನೆನೆಯುತ್ತಿತ್ತು ಹಾಗೂ ಮಿಹ್ರಾ ಮತ್ತು ಅವಳಿಗೆ ಸಂಬಂಧವಿದೆಯೆಂದು ಊಹಿಸುತ್ತಿತ್ತು. ಇದರಿಂದಾಗಿ ನಿಗೂಢ ಪ್ರೇಮಪತ್ರಗಳು ಬರುತ್ತಿದ್ದವು. ಶ್ರೀಮತಿ ಮಿಹ್ರಾಳ ಅನಿಸಿಕೆಗಳು ಎರಡು ರೀತಿಯದಾಗಿದ್ದವು. ಅವಳು ಸ್ಕಾರಿ ಆಗಬೇಕೆಂದು ಬಯಸಿದಾಗ ತನ್ನ ಪತಿಗೆ ಪ್ರೇಮ ಪತ್ರ ಬರೆಯುತ್ತಿದ್ದಳು. ಹಾಗೂ ಅವಳು ಸ್ಯಾರಿಯನ್ನು ದ್ವೇಷಿಸತೊಡಗಿದಾಗ ತನ್ನ ಸೀರೆಗಳನ್ನು ಸುಡತೊಡಗಿದಳು. ಹಾಗೂ ಮನೆಯಲ್ಲಿ ಮಾಯಮಾಟ ಮಾಡತೊಡಗಿದಳು.


ಈ ರೀತಿ ಮಾಡುವುದರಿಂದ ಶ್ರೀಮತಿ ಮಿಹ್ರಾಳ ಅಪರಾಧಿ ಪ್ರಜ್ಞೆ ಕಡಿಮೆಯಾಗುತ್ತಿತ್ತು. ಈ ಅಪರಾಧಿ ಭಾವ ಅವಳ ಗಂಡನಿಂದ ಹಣ ಕದಿಯುವುದನ್ನು ಹೆಚ್ಚು ಹೆಚ್ಚು ಪ್ರೋತ್ಸಾಹಿಸುತ್ತಿತ್ತು. ಅದೃಷ್ಟವಶಾತ್ ಈಗ ನಾನು ಈ ಕೇಸನ್ನು ಕೈಗೆ ತೆಗೆದುಕೊಂಡೆ.

ಎರಡು ಘಂಟೆಯ ದೀರ್ಘ ನಿದ್ರೆಯ ನಂತರ ಶ್ರೀಮತಿ ಮಿಹ್ರಾ ಎಚ್ಚೆತ್ತಳು. ಅವಳು ಎಚ್ಚರಗೊಂಡಾಗ ಸಾಮಾನ್ಯ ಹಾಗೂ ಸಂತೋಷದ ಮಹಿಳೆಯಾಗಿದ್ದಳು.

ಮಿಹ್ರಾ ಕುಟುಂಬದವರು ಅವರ ತೊಂದರೆಗಳನ್ನು ನಾಲ್ಕು ಪರೀಕ್ಷೆಗಳಲ್ಲಿ, ಉದಾಹರಣೆಗೆ ಉಕ್ತಲೇಖನಗಳ ಮೂಲಕ ಹಾಗೂ ಮಾನಸಿಕ ವಶೀಕರಣದ ಮೂಲಕ ಬಗೆಹರಿಸಿದ್ದಕ್ಕೆ ನನಗೆ ತಮ್ಮ ಕೃತಜ್ಞತೆಯನ್ನು ಸಲ್ಲಿಸಿದರು. ●

(ಈ ಲೇಖನವನ್ನು ಡಾ.ಕೋವೂರ್ ಅವರ 'ದೇವರು ದೆವ್ವ ವಿಜ್ಞಾನ' ಪುಸ್ತಕದಿಂದ ಆಯ್ದುಕೊಳ್ಳಲಾಗಿದೆ. ಪ್ರಕಾಶಕರು: ನವಕರ್ನಾಟಕ ಪ್ರಕಾಶನ, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು. ಸಂಪಾದಕರು: ಡಾ. ಪುರುಷೋತ್ತಮ ಬಿಳಿಮಲೆ)





ಆಂಗ್ಲ ಮೂಲ : ಆರ್ಥರ್-ಸಿ-ಕ್ಲಾರ್ಕ್
ಕನ್ನಡಾನುವಾದ : ಉದಯರವಿ

ನನಗೆ ಉಪಗ್ರಹ ಮೇಲ್ವಿಚಾರಣಾ ಸ್ಥಾವರದಿಂದ ಕರೆ ಬಂದಾಗ, ನಾನು ಬಾಹ್ಯಾಕಾಶ ಕೇಂದ್ರದ ನನ್ನ ಕಚೇರಿಯಲ್ಲಿ ಕುಳಿತು ಅಂದಿನ ಪ್ರೊಗ್ರೆಸ್ ರಿಪೋರ್ಟನ್ನು ಬರೆಯುತ್ತಿದ್ದೆ. ಅಂತರಿಕ್ಷದಲ್ಲಿ ತೇಲುತ್ತಿರುವ ಚಕ್ರಾಕಾರದ ಬಾಹ್ಯಾಕಾಶ ಕೇಂದ್ರದ ನಡುವೆ ಉಬ್ಬಿ ನಿಂತಿರುವ ಗಾಜಿನ ಅರೆ ಗೋಳಾಕಾರದ ಕಟ್ಟಡದಲ್ಲೇ ಈಗ ನಾನು ಕುಳಿತಿರುವುದು. ಪೂರ್ಣ ಪಾರದರ್ಶಕವಾದ ಇಲ್ಲಿಯ ಗೋಡೆಗಳಿಂದಾಗಿ ನಮ್ಮ ಕೆಲಸದ ಮೇಲೆ ನಾವು ಸಂಪೂರ್ಣ ಗಮನವಿಡುವುದಾಗುವುದಿಲ್ಲ. ಏಕೆಂದರೆ, ಹೊರಗಿನ ದೃಶ್ಯದ ಭವ್ಯತೆಯು ಬೇಡವೆಂದರೂ ಥಟ್ಟನೆ ಕಣ್ಣಿಗೆ ರಾಚಿ ಒಳಗೆಲ್ಲೋ ಒಂದು ಬಗೆಯ ತಳಮಳವನ್ನುಂಟು ಮಾಡುತ್ತದೆ. ಕೆಲವೇ ಗಜಗಳ ಅಂತರದಲ್ಲಿ ವಾಸ್ತುಶಿಲ್ಪ ತಂಡವು ಚದುರಂಗದ ಚೌಕಗಳಂತೆ ಇರುವ ಅಡಿಪಾಯಗಳಿಗೆ ಗೋಡೆಗಳನ್ನು ಹೊಂದಿಸುವ ಕೆಲಸದಲ್ಲಿ ನಿಧಾನವಾಗಿ ಆದರೆ, ಕರಾರುವಾಕ್ಕಾಗಿ ಮುಂದುವರೆಯುತ್ತಿತ್ತು. ಅವರ ಕೆಲಸದ ವೇಗವನ್ನು ಕಂಡಾಗ, ಸಿನಿಮಾದಲ್ಲಿ ಕಂಡ ಸ್ಲೋ-ಮೋಶನ್ ದೃಶ್ಯಗಳ ನೆನಪಾಗುತ್ತಿದೆ. ಅವರಿರುವಲ್ಲಿಂದ ಆಚೆಗೆ, ಇಪ್ಪತ್ತುಸಾವಿರ ಮೈಲಿಗಳಷ್ಟು ಕೆಳಗೆ, ನಕ್ಷತ್ರ ಖಚಿತವಾದ ಹಾಲು ಹಾದಿಯ ಹಿನ್ನೆಲೆಯಲ್ಲಿ, ತಿಳಿ ಹಸಿರು-ನೀಲಿ ಬಣ್ಣದ ಭೂಮಿಯ ಪೂರ್ಣ ಬಿಂಬವು ತೇಜೋಮಯವಾಗಿ ಬೆಳಗುತ್ತಿರುವುದು ಕಾಣಿಸುತ್ತಿದೆ.

''ನಾನು ಸ್ಟೇಶನ್ ಸೂಪರ್‌ವೈಸರ್ ಮಾತಾಡ್ತಿದೀನಿ. ಏನು ತೊಂದರೆ?'' ಎಂದು ಕೇಳಿದೆ.

''ನಮ್ಮ ರೆಡಾರ್‌ನ ದೃಶ್ಯ ಫಲಕದ ಮೇಲೆ, ಇಲ್ಲಿಂದ ಎರಡು ಕಿಲೋಮೀಟರ್‌ಗಳಷ್ಟು ದೂರದಲ್ಲಿ ತೇಲುತ್ತಿರುವ ಸ್ಥಿರವಸ್ತುವೊಂದರ ಪ್ರತಿಬಿಂಬವು ಗೋಚರಿಸುತ್ತಿದೆ. ಅದು (sirus) ಶ್ವಾನ ನಕ್ಷತ್ರದಿಂದ ಐದು ಡಿಗ್ರಿಯಷ್ಟು ಪಶ್ಚಿಮಕ್ಕಿದೆ. ಅದರ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಕೊಡಬಲ್ಲಿರಾ?''



ಇಷ್ಟು ಕರಾರುವಾಕ್ಕಾಗಿ ನಮ್ಮ ಕಕ್ಷೆಯಲ್ಲೇ ಭ್ರಮಿಸುತ್ತಿರುವ ಆ ವಸ್ತುವು ಉಲ್ಕೆಯಾಗಿರಲು ಸಾಧ್ಯವಿಲ್ಲ. ಇದು ನಮ್ಮ ಕೇಂದ್ರದ ನಿರ್ಮಾಣಕ್ಕಾಗಿ ಬಳಸುವ ಯಾವುದೋ ವಸ್ತುವು ನಮ್ಮ ಕೈ ತಪ್ಪಿ ಅಷ್ಟು ದೂರಕ್ಕೆ ತೇಲಿ ಹೋಗಿರಬಹುದೆಂದು ನನಗನಿಸಿತು. ನನ್ನ ದೂರದರ್ಶಕವನ್ನು ಕಣ್ಣಿಗೆ ಹಚ್ಚಿ ಶ್ವಾನ ನಕ್ಷತ್ರದತ್ತ ದಿಟ್ಟಿಸಿದಾಗ ನನ್ನ ಊಹೆ ಸುಳ್ಳೆಂದು ತಿಳಿಯಿತು. ಈ ಗಗನಯಾನಿಯು ಮಾನವ ನಿರ್ಮಿತ ವಸ್ತುವೇನೋ ನಿಜ. ಆದರೆ, ಅದಕ್ಕೂ ನಮ್ಮ ಬಾಹ್ಯಾಕಾಶ ಕೇಂದ್ರಕ್ಕೂ ಯಾವುದೇ ಸಂಬಂಧವಿರಲಿಲ್ಲ.

''ಅದನ್ನು ಕಂಡು ಹಿಡಿದೆ. ಇದು ಯಾರೋ ಪರೀಕ್ಷಣಾರ್ಥಕವಾಗಿ ಹಾರಿ ಬಿಟ್ಟ ಕೃತಕ ಉಪಗ್ರಹ. ಶಂಕುವಿನ ಆಕಾರ, ನಾಲ್ಕು ಆಂಟೆನಾಗಳನ್ನು ಹೊಂದಿದೆ. ಅದರ ತಳಭಾಗದಲ್ಲಿ ಛಾಯಾಗ್ರಹಣಕ್ಕಾಗಿ ಮಸೂರಗಳನ್ನು ಜೋಡಿಸಲಾಗಿದೆ. ಅದರ ವಿನ್ಯಾಸವನ್ನು ನೋಡಿದರೆ, ಯು.ಎಸ್. ವಾಯುದಳವು 1960ರ ದಶಕದಲ್ಲಿ ರಚಿಸಿದ ಮಾದರಿಯಂತಿದೆ. ಅವರ ಪ್ರೇಷಕ ಯಂತ್ರಗಳು ಒಮ್ಮೆಲೇ ವಿಫಲಗೊಂಡಾಗ ಇಂತಹ ಹಲವಾರು ಉಪಗ್ರಹಗಳೊಂದಿಗಿನ ಸಂಪರ್ಕವು ಪೂರ್ತಿಯಾಗಿ ತಪ್ಪಿ ಹೋಯಿತು. ಅವುಗಳು ಈಗಿನ ಕಕ್ಷೆಗೆ ತಲುಪುವಂತೆ ಮಾಡಲು ಭೂ ಕೇಂದ್ರವು ಹಲವಾರು ಸಲ ಪ್ರಯತ್ನಿಸಿ ಬಹು ಕಷ್ಪದಿಂದ ಸಫಲವಾಯಿತು'' ಎಂಬಲ್ಲಿಗೆ ನನ್ನ ವಿವರಣವನ್ನು ನಿಲ್ಲಿಸಿದೆ.

ಭೂ ಕೇಂದ್ರದಲ್ಲಿ ನನ್ನ ವಿವರಣೆಗೆ ಪುಷ್ಟಿ ನೀಡುವ ಕಡತಗಳನ್ನು ಕೆದಕಿ ನನ್ನ ಊಹೆ ನಿಜವೆಂದು ತಿಳಿಯಲು ಸ್ವಲ್ಪ ಹೊತ್ತು ಹಿಡಿಯಿತು. ಇಪ್ಪತ್ತುನಾಲ್ಕು ವರ್ಷಗಳಿಂದ ಭೂ ಕೇಂದ.ದ ಸಂಪರ್ಕವನ್ನು ತಪ್ಪಿಸಿಕೊಂಡು ಅಲೆಯುತ್ತಿರುವ ಈ ಉಪಗ್ರಹದಿಂದ ಅಮೆರಿಕೆಗೆ ಯಾವುದೇ ಪ್ರಯೋಜನವಿಲ್ಲವೆಂದು ನಾವು ಕಂಡು ಹಿಡಿದು ದೃಢ ಪಡಿಸಿಕೊಳ್ಳಲು ಮತ್ತಷ್ಟು ಕಾಲ ಹಿಡಿಯಿತು.

''ಹಾಗೆಂದು ಅದರ ಪಾಡಿಗೆ ಅದನ್ನು ಕಕ್ಷೆಯಲ್ಲಿ ಬಿಡುವುದು ಸರಿಯಿಲ್ಲ. ಅದು ನಮ್ಮ ಕಕ್ಷೆಯಲ್ಲೇ ಪರಿಭ್ರಮಿಸುತ್ತಿದೆಯಾದ್ದರಿಂದ

ಇಂದಲ್ಲ ನಾಳೆ ಯಾನಕ್ಕೆ ನಮ್ಮ ಪಥದಲ್ಲಿ ಅದರಿಂದ ವಿಪತ್ತುಂಟಾಗಬಹುದು. ಯಾರಾದರೂ ಹೊರಗೆ ಹೋಗಿ ಅದನ್ನು ಕೇಂದ್ರಕ್ಕೆ ಎಳೆದು ತಂದು ಜಿಡಿರಿ'' ಎಂದು ಉಪಗ್ರಹ ಕೇಂದ್ರದಿಂದ ಅರ್ಧ ವಿನಂತಿ, ಅರ್ಧ ಆಜ್ಞೆಯು ಬಂತು.

ಆ ''ಯಾರಾದರೂ'' ನಾನೇ ಎಂದು ನನಗೆ ಬೇರೆಯವರು ಹೇಳಬೇಕಾಗಿಲ್ಲ. ಏಕೆಂದರೆ, ನಿರ್ಮಾಣ ತಂಡದ ಯಾರೊಬ್ಬರನ್ನೂ ಅವರ ಕೆಲಸದಿಂದ ತಪ್ಪಿಸುವ ಹಾಗಿರಲಿಲ್ಲ. ಈಗಾಗಲೇ ನಿರ್ಮಾಣ ಕಾರ್ಯವು ಪೂರ್ಣವಾಗಬೇಕಿದ್ದ ಗಡುವು ಮೀರಿದೆ. ಈ ಕೆಲಸದಲ್ಲಿ ಒಂದು ದಿನ ವಿಳಂಬವಾದರೂ ಮಿಲಿಯ ಡಾಲರ್‌ಗಳಷ್ಟು ಹೆಚ್ಚಿನ ವೆಚ್ಚ ತಲೆಯ ಮೇಲೆ ಬರುತ್ತದೆ. ಈ ಬಾಹ್ಯಾಕಾಶ ಕೇಂದ್ರವು ಕಾರ್ಯೋನ್ಮುಖವಾಗುವುದನ್ನೇ ಭೂಮಿಯ ಎಲ್ಲಾ ಟಿ.ವಿ. ಮತ್ತು ರೇಡಿಯೋ ಸ್ಥಾವರಗಳು ಎದುರು ನೋಡುತ್ತಿವೆ. ಅವರ ಎಲ್ಲಾ ಕಾರ್ಯಕ್ರಮಗಳೂ ಈ ಕೇಂದ್ರದಿಂದ ಪ್ರಸಾರವಾಗತೊಡಗಿದರೆ, ಮೊಟ್ಟ ಮೊದಲ ಬಾರಿಗೆ ಭೂಮಿಯ ಉತ್ತರ ಧ್ರುವದಿಂದ ದಕ್ಷಿಣ ಧ್ರುವದವರೆಗಿನ ಅವಿಚ್ಛಿನ್ನವಾದ ಸಂಪರ್ಕ ಜಾಲವನ್ನು ಹೆಣೆದಂತಾಗುತ್ತದೆ. ''ನಾನು ಹೊರಗೆ ಹೋಗಿ ಅದನ್ನು ತಂದು ಬಿಡುತ್ತೇನೆ'' ಎಂದು ಮೇಲ್ವಿಚಾರಣಾ ಕೇಂದ್ರಕ್ಕೆ ತಿಳಿಸಿ, ಫೈಲನ್ನು ಮುಚ್ಚಿಟ್ಟು ಮೇಜಿನ ಮೇಲಿದ್ದ ಹಾಳೆಗಳು ವಾತಾಯನದಿಂದ ಬರುತ್ತಿರುವ ಗಾಳಿಗೆ ಸಿಕ್ಕಿ ಕೋಣೆಯಲ್ಲೆಲ್ಲ ತೇಲಾಡದಿರುವಂತೆ ಎಲಾಸ್ಟಿಕ್ ಪಟ್ಟಿಯನ್ನು ಬಿಗಿದೆ. ನಾನೇನೋ ಒಂದು ಮಹತ್ಕಾರ್ಯವನ್ನು ಸಾಧಿಸಲು ಹೊರಟಿರುವೆನೆಂದು ನನಗನ್ನಿಸಿತಾದರೂ, ಈ ಕೆಲಸ ನನಗೆ ಹರುಷದಾಯಕವೆನ್ನಿಸಿದ್ದು ಸುಳ್ಳಲ್ಲ. ನಾನು ಹೊರಗೆ ಹೋಗಿ ಬಂದು ಎರಡು ವಾರಗಳ ಮೇಲಾಗಿತ್ತು. ಈ ನಡುವೆ ನಾನು ದಿನಾ ಮಾಡುತ್ತಿದ್ದ ಉಗ್ರಾಣದ ಮೇಲ್ವಿಚಾರಣೆ, ಅದರ ವರದಿ, ಇಂತಹ ಸ್ಟೇಶನ್ ಸೂಪರ್‌ವೈಸರ್‌ನ ಎಲ್ಲಾ ಕೆಲಸಗಳಲ್ಲಿನ ಗ್ಲಾಮರ್ ಅನ್ನು ಕೊಂಚ ಕೊಂಚವೇ ಕಳೆದುಕೊಳ್ಳತೊಡಗಿದ್ದೇನೆ.

ಮುಂದಿನ ಕಾರ್ಯಾಚರಣೆಗೆ ಸಜ್ಜಾಗಲು ನಾನು ಏರ್‌ಲಾಕ್ ಚೇಂಬರ್‌ನತ್ತ ನಡೆದಾಗ ನನಗೆ ಟಾಮಿಯು ವಿನಃ ನಮ್ಮ ಸಿಬ್ಬಂದಿಯವರಾರೂ ಎದುರಾಗಲಿಲ್ಲ.

ಟಾಮಿ, ನಮ್ಮ ತಂಡಕ್ಕೆ ಹೊಸದಾಗಿ ಬಂದು ಸೇರಿದ್ದ ಬೆಕ್ಕು. ಭೂಮಿಯಿಂದ ಸಾವಿರಾರು ಮೈಲಿಗಳಷ್ಟು ದೂರದಲ್ಲಿರುವವನಿಗೆ ಸಾಕು ಪ್ರಾಣಿಗಳ ಒಡನಾಟದ ಮಹತ್ವವೇನೆಂದು ಬಲ್ಲವರೇ ಬಲ್ಲರು. ಆದರೂ, ಭಾರ ರಹಿತ ಪರಿಸರಕ್ಕೆ ಹೊಂದಿಕೊಂಡು ಬದುಕಬಲ್ಲ ಸಾಕು ಪ್ರಾಣಿಗಳು ಬಹಳ ಕಡಿಮೆ ಎಂದೇ ಹೇಳಬೇಕು. ನಾನು ವ್ಯೋಮಯಾನಕ್ಕೆ ಬಳಸುವ ಉಡುಪನ್ನು ಧರಿಸಲು ಹೆಣಗಾಡುತ್ತಿದ್ದೆ. ಟಾಮಿಯು ಪರಿತಾಪಕರವೆನಿಸುವ ಸ್ವರದಲ್ಲಿ ಮಿಯ್ ಗುಟ್ಟುತ್ತಾ ನನ್ನ ಕಾಲ ಬಳಿಯಲ್ಲೇ ಸುತ್ತುತ್ತಿತ್ತು. ಆದರೆ, ಅವನೊಂದಿಗೆ ಆಟವಾಡಿಕೊಂಡಿರುವಷ್ಟು ನನಗೆ ವ್ಯವಧಾನವಿರಲಿಲ್ಲ.

ಈ ಘಟ್ಟದಲ್ಲೇ ಕೆಲವೊಂದು ಅಂಶಗಳನ್ನು ನಿಮಗೆ ಸ್ಪಷ್ಟಪಡಿಸಬೇಕಾದ್ದು ಅವಶ್ಯ ಎಂದು ನನ್ನ ಅನಿಸಿಕೆ. ಬಾಹ್ಯಾಕಾಶ ಕೇಂದ್ರದಲ್ಲಿ ನಾವು ತೊಡುವ ಉಡುಪಿಗೂ, ಚಂದ್ರನ ಮೇಲೆ ನಡೆದಾಡಲು ಗಗನಯಾನಿಗಳು ಧರಿಸುವ ಉಡುಪಿಗೂ ಅಜಗಜಾಂತರ ವ್ಯತ್ಯಾಸವಿದೆ. ಅವರ ಪೋಷಾಕು ಮಿದುವಾದ, ಮೈಗೆ ಹತ್ತಿದಂತಿರುವ ಫ್ಲೆಕ್ಸಿಬಲ್ ಉಡುಪುಗಳು. ನಮ್ಮದಾದರೋ ನಿಜಕ್ಕೂ ಒಬ್ಬನನ್ನು ಮಾತ್ರ ಹೊತ್ತೊಯ್ಯಬಲ್ಲಂತಹ ಒಂದು ಪುಟ್ಟ ಗಗನ ನೌಕೆಯೆಂದರೆ ಸುಳ್ಳಲ್ಲ. ಅದು ಏಳು ಅಡಿ ಉದ್ದದ ಪೀಪಾಯಿಯ ಆಕಾರದಲ್ಲಿರುತ್ತದೆ. ಅದಕ್ಕೆ ಎರಡೂ ಬದಿಯಲ್ಲಿ ಚಲನಾನುಕೂಲಿಯಾದ ಜೆಟ್‌ಗಳನ್ನು ಹೊಂದಿಸಲಾಗಿರುತ್ತದೆ. ಅದರ ಒಳಗೆ ಕುಳಿತ ಚಾಲಕನ ತೋಳ ಬಳಿ ಹಾರ್ಮೋನಿಯಮ್ ವಾದನದ ಒತ್ತುಗುಂಡಿಗಳಂತಹ ಉಪಕರಣಗಳನ್ನು ಹೊಂದಿಸಲಾಗಿರುತ್ತದೆ. ಅವುಗಳನ್ನು ಮೀಟುವುದರ ಮೂಲಕ ಆ ಪುಟ್ಟ ಗಗನ

ನೌಕೆಯನ್ನು ಇಷ್ಟ ಬಂದ ದಿಕ್ಕಿಗೆ ಚಲಿಸುವಂತೆ ಮಾಡಬಹುದು. ಆದಾಗ್ಯೂ, ಕೈಗಳನ್ನು ಉಡುಪಿನೊಳಕ್ಕೆ ಎಳೆದುಕೊಂಡು ಎದೆಯ ಬಳಿಯಿರುವ ನಿಯಂತ್ರಕಗಳನ್ನು ಪಯೋಗಿಸಿ ಆ ಪೀಪಾಯಿಗೆ ಹೊಂದಿಸಿದ ಕೃತಕ ಕೈಗಳನ್ನು ಬಳಸಿ ನಮ್ಮ ಸ್ವಾಭಾವಿಕ ಕೈಗಳಷ್ಟು ಕೌಶಲ್ಯತೆಯಿಂದ ಕೆಲಸಗಳನ್ನು ಮಾಡಬಹುದು.

ನನ್ನದೇ ಆದ ಆ ಪುಟ್ಟ ನೌಕೆಯೊಳಗೆ ನಾನು ನೆಲಗೊಂಡವನೇ ಅದರ ಎಂಜಿನ್ ಅನ್ನು ಚಾಲೂ ಮಾಡಿ ಎದೆಯ ಬಳಿಯಿದ್ದ ಚಿಕ್ಕ ಚಿಕ್ಕ ಡಯಲ್‌ಗಳಿದ್ದ ಉಪಕರಣ ಫಲಕದತ್ತ ದಿಟ್ಟಿಸಿದೆ. ಒಬ್ಬ ಗಗನ ಯಾನಿಯು ತನ್ನ ನೌಕೆಯನ್ನು ಹೊರಡಿಸುವ ಮುನ್ನ ನಾಲ್ಕು ಮುಖ್ಯ ವಿಷಯಗಳನ್ನು ಖಚಿತ ಮಾಡಿಕೊಂಡು ಆ ಬಳಿಕವೇ ಮುಂದುವರೆಯಬೇಕು. ಅವು ಇಂಧನ, ಆಮ್ಲಜನಕ, ರೇಡಿಯೋ ಮತ್ತು ವಿದ್ಯುತ್ಕೋಶಗಳು; ಇವುಗಳೆಲ್ಲವೂ ಸುಸ್ಥಿತಿಯಲ್ಲಿವೆ ಎಂದು ನನ್ನ ನೌಕೆಯಲ್ಲಿದ್ದ ನಾಲ್ಕು ಡಯಲ್‌ಗಳಲ್ಲಿನ ಚಿಕ್ಕ ಚಿಕ್ಕ ಮುಳ್ಳುಗಳು ಸೂಚಿಸಿದವು. ಆ ಬಳಿಕ ನಾನು ಪಾರದರ್ಶಕವಾದ ಅರೆ ಗೋಳಾಕಾರದ ಮುಚ್ಚಳವನ್ನು ತಲೆಯ ಮೇಲಿಂದ ತಂದು ನನ್ನ ಕಂಠದ ಬದಿಗೆ ಹೊಂದಿಸಿ ಗಗನ ನೌಕೆಯೊಳಗೆ ನನ್ನನ್ನು ಸೀಲು ಮಾಡಿಕೊಂಡೆ. ಇಂತಹ ಅಲ್ಪಾವಧಿಯ ಕಾರ್ಯಾಚರಣೆಗೆ ಉಡುಪಿನಲ್ಲಿದ್ದ ಇತರ ಅರೆಗಳನ್ನು (ಲಾಕರ್) ಪರೀಕ್ಷಿಸಬೇಕಾದ ಅವಶ್ಯಕತೆಯಿರಲಿಲ್ಲ. ಏಕೆಂದರೆ, ಅವುಗಳನ್ನು ವಿಸ್ತರಿತ ಕಾರ್ಯಾಚರಣೆಯ ಸಮಯದಲ್ಲಿ ಮಾತ್ರ ಆಹಾರ ಮತ್ತು ವಿಶೇಷ ಸಲಕರಣೆಗಳನ್ನು ಭರ್ತಿ ಮಾಡಿಕೊಳ್ಳಲು ಉಪಯೋಗಿಸುವುದು ವಾಡಿಕೆ.

ನನ್ನನ್ನು ಹೊತ್ತ ವಾಹಕ ಪಟ್ಟಿಯು (conveyor belt) ಏರ್-ಲಾಕ್ ಚೇಂಬರ್‌ನತ್ತ ಸರಿಯಿತು. ಆ ಚೇಂಬರ್‌ಗೆ ಹೊಂದಿಸಿದ್ದ ಪಂಪ್‌ಗಳು ಒತ್ತಡವನ್ನು ಶೂನ್ಯಕ್ಕೆ ಸರಿ ಹೊಂದಿಸುತ್ತಿದ್ದಂತೆಯೇ ಹೊರಗಿನ ಬಾಗಿಲು ತೆರೆದುಕೊಂಡಿತು. ಆ ಖೋಲಿಯಲ್ಲಿದ್ದ ಅಳಿದುಳಿದ ಗಾಳಿಯೊಂದಿಗೆ ನಾನೂ ಸಹ ಹೊರಕ್ಕೆ ಚಿಮ್ಮಿ ನಕ್ಷತ್ರ



ನನಗೆ, ನಿಮ್ಮ ಸಾಲದ ಋಣ ತೀರಿಸಲು ಇದೊಂದನ್ನು ಬಿಟ್ಟು ಬೇರೆ ದಾರಿಯೇ ಇಲ್ಲ, ರಾಯ್ರೇ..."

ಖಚಿತವಾದ ಗಗನದಲ್ಲಿ ಸಾವಧಾನದಿಂದ ತಲೆ ಕೆಳಗಾಗಿ ಗಿರಕಿ ಹೊಡೆಯುತ್ತಿದ್ದೆ.

ಬಾಹ್ಯಾಕಾಶ ಕೇಂದ್ರದಿಂದ ನಾನು ಕೆಲವೇ ಗಜಗಳಷ್ಟು ದೂರದಲ್ಲಿದ್ದೆನಾದರೂ, ಈಗ ನಾನೊಂದು ಸ್ವತಂತ್ರ ಉಪಗ್ರಹ-ನನ್ನದೇ ಆದ ಪ್ರಪಂಚವಾಗಿದ್ದೆ. ಸ್ವತಂತ್ರವಾಗಿ ಚಲಿಸುತ್ತಿರುವ ಆ ಪುಟ್ಟ ಕೊಳವೆಯೊಳಗೆ ನಾನು ಬಂಧಿಯಾಗಿದ್ದೆ. ಸುತ್ತಲಿನ ಪ್ರಪಂಚದ ಭವ್ಯ ದರ್ಶನವು ನನಗಾಗುತ್ತಲಿತ್ತು. ಆದರೆ, ಪ್ರಾಯೋಗಿಕವಾಗಿ, ಆ ಉಡುಪಿನೊಳಗೆ ನನ್ನಿಷ್ಟ ಬಂದಂತೆ ಚಲಿಸುವ ಸ್ವಾತಂತ್ರ್ಯ ನನಗಿರಲಿಲ್ಲ. ನಾನು ಕುಳಿತಲ್ಲಿಂದಲೇ ನನ್ನ ಕೈ-ಕಾಲುಗಳನ್ನು ಪಯೋಗಿಸಿ ನಿಯಂತ್ರಕಗಳು ಹಾಗೂ ಇತರೆ ಸಲಕರಣೆಗಳನ್ನು ಬಳಸಬಲ್ಲೆನಾದರೂ, ನಾನು ಕುಳಿತ ಕುರ್ಚಿಯ ಕುಶನ್ ಹಾಗೂ ಆ ಕುರ್ಚಿಯೊಂದಿಗೆ ನನ್ನನ್ನು ಬಿಗಿದು ಬಂಧಿಸಿದ್ದ ಪಟ್ಟಿ (Seat belt)ಯಿಂದಾಗಿ ಆಚೀಚೆಗೆ ಮಗ್ಗಲು ಬದಲಿಸುವುದಾಗುವುದಿಲ್ಲ.

ವ್ಯೋಮಯಾನದಲ್ಲಿ ನಮಗಿರುವ ಪ್ರಬಲ ಶತ್ರುವೆಂದರೆ, ಸೂರ್ಯ. ಯಾವುದೇ ಕ್ಷಣದಲ್ಲಾದರೂ ಅದರ ಪ್ರಖರ ಬೆಳಕು ನಿಮ್ಮ ಕಣ್ಣನ್ನು ಕುರುಡಾಗಿಸಬಹುದು. ಬಹಳ ಎಚ್ಚರಿಕೆಯಿಂದ ನಾನು ನನ್ನ ಪೋಷಾಕಿನ 'ಕತ್ತಲು' ಕಡೆಯ ದಪ್ಪನಾದ ತಂಪುಗಾಜನ್ನು ಬದಿಗೆ ಸರಿಸಿ ನಕ್ಷತ್ರಗಳತ್ತ ಮುಖ ತಿರುಗಿಸಿದೆ. ಅದೇ ವೇಳೆಗೆ ನನ್ನ ಶಿರಸ್ತ್ರಾಣದ ತಂಪು ಗಾಜನ್ನು ಸ್ವಯಂಚಾಲಿತ ವ್ಯವಸ್ಥೆಗೆ ಒಳಪಡಿಸಿದೆ. ಹಾಗಾಗಿ ನಾನು ಧರಿಸಿರುವ ಪೋಷಾಕು ಎತ್ತ ಗಿರಕಿ ಹೊಡೆದರೂ, ಆ ತಂಪು ಕನ್ನಡಕದ ವ್ಯವಸ್ಥೆಯಿಂದಾಗಿ ಸೂರ್ಯನ ಪ್ರಖರ ಕಿರಣಗಳು ನನ್ನ ಕಣ್ಣುಗಳನ್ನು ಘಾಸಿಗೊಳಿಸಲಾರವು.

ಈ ಎಲ್ಲ ವ್ಯವಸ್ಥೆಗಳನ್ನು ನಾನು ಮಾಡಿ ಮುಗಿಸುವ ಸುಮಾರಿಗೆ ನಾನು ಸೇರಬೇಕಾದ ಲಕ್ಷ್ಯವನ್ನು ಗುರುತಿಸಿದೆ. ತನ್ನ ಸುತ್ತಲಿನ ನಕ್ಷತ್ರ ರಾಶಿಗಳ ಹಿನ್ನೆಲೆಯಲ್ಲಿ ಬೆಳ್ಳಿ ಬಣ್ಣದ ಆ ವಸ್ತುವು ನಿಚ್ಚಳವಾಗಿ ಮಿರುಗುಟ್ಟುತ್ತಿತ್ತು. ಕಾಲ ಬಳಿಯಿರುವ ಜೆಟ್ ಕಂಟ್ರೋಲರ್ ಪೆಡಲನ್ನು ಒತ್ತಿದೆ. ಅಲ್ಪ ಶಕ್ತಿಯ ರಾಕೆಟ್‌ಗಳು ಬಾಹ್ಯಾಕಾಶ ಕೇಂದ್ರದಿಂದ ನನ್ನನ್ನು ದೂರಕ್ಕೆ ಕೊಂಡೊಯ್ಯುತ್ತಿದ್ದುದು ನನ್ನ ಕಣ್ಣಿಗೆ ಕಾಣುತ್ತಿರುವಂತೆಯೇ ರಾಕೆಟ್‌ನ ಸೂಕ್ಷ್ಮವಾದ ಎಳೆತವನ್ನು ಸಹ ಅನುಭವಿಸಿದೆ. ಸುಮಾರು ಹತ್ತು ಸೆಕೆಂಡ್‌ಗಳವರೆಗೆ ಪೆಡಲನ್ನು ಒತ್ತಿ ಹಿಡಿದು ನಾನು ಸೇರಬೇಕಾದ ಗಮ್ಯದವರೆಗೂ ತಲುಪಬೇಕಾದಷ್ಟು ವೇಗವನ್ನು ಪಡೆದಿರುವೆನೆಂದು ಖಾತ್ರಿಯಾದ ನಂತರ ರಾಕೆಟ್‌ನ ವೇಗೋತ್ಕರ್ಷಣವನ್ನು ನಿಷ್ಕ್ರಿಯಗೊಳಿಸಿದೆ. ಇನ್ನೈದು ನಿಮಿಷದಲ್ಲಿ ನನ್ನ ಗುರಿಯನ್ನು ತಲುಪಿ, ಹೆಚ್ಚು ಕಡಿಮೆ ಅಷ್ಟೇ ಸಮಯದಲ್ಲಿ ಆ ತುಡುಗು ತಿರುಗುತ್ತಿದ್ದ ಕೃತಕ ಉಪಗ್ರಹದೊಂದಿಗೆ ಮರಳಿ ಬಾಹ್ಯಾಕಾಶ ಕೇಂದ್ರವನ್ನು ಸೇರುತ್ತೇನೆ.

ಹೀಗೆ ನಾನು ವ್ಯೋಮ ಗರ್ಭದೊಳಗೆ ಲಂಘಿಸಿದಾಕ್ಷಣದಲ್ಲೇ ಎಲ್ಲೋ ಏನೋ ಭಯಾನಕವಾದ ಎಡವಟ್ಟುಂಟಾಗಿರುವುದು ನನ್ನರಿವಿಗೆ ಬಂತು. ಗಗನಯಾನಿಗಳ ಪೋಷಾಕಿನೊಳಗೆ ಸಂಪೂರ್ಣ ನಿಶ್ಶಬ್ದತೆಯೇನೂ ಇರುವುದಿಲ್ಲ; ಆಮ್ಲಜನಕ ಸರಬರಾಜಿನ ಮೆದುವಾದ ಭುಸುಗುಟ್ಟುವಿಕೆ, ಫ್ಯಾನ್ ಮತ್ತು ಮೋಟರ್‌ಗಳ ಸೂಕ್ಷ್ಮವಾದ 'ಗುರ್' .... ಎನ್ನುವ ಶಬ್ದ, ಉಸಿರಾಟದ ಪಿಸುಗುಟ್ಟುವಿಕೆ, ಇವೇ ಮೊದಲಾದ ಯಾವತ್ತೂ ಶಬ್ದಗಳು ನಿಮ್ಮ ಕರ್ಣಪಟಲಕ್ಕೆ ತಾಗುತ್ತಲೇ ಇರುತ್ತವೆ. ಇನ್ನೂ ಸೂಕ್ಷ್ಮವಾಗಿ ಗಮನವಿಟ್ಟು ಆಲಿಸಿದರೆ, ತಾಳಬದ್ಧವಾದ ಎದೆ ಬಡಿತವೂ ಕೇಳಿಸಬಲ್ಲದು. ಈ ಸದ್ದುಗಳು ಹೊರ ಹೋಗಲು ಅವಕಾಶವಿಲ್ಲವಾದ ಕಾರಣ, ಇಡೀ ಪೋಷಾಕಿನೊಳಗೆ ಪ್ರತಿಧ್ವನಿಸುತ್ತಿರುತ್ತವೆ; ಇವು ಯಾನ ಕಾಲದಲ್ಲಿ ಗಮನಕ್ಕೆ ಬಾರದ ಜೀವಚೈತನ್ಯದ ಹಿಮ್ಮೇಳ. ಇವುಗಳ ಶಬ್ದಗಳಲ್ಲಿ ಯಾವುವಾದರೂ ವ್ಯತ್ಯಯವುಂಟಾದಾಗ ಮಾತ್ರ ಇವುಗಳತ್ತ ನಿಮ್ಮ ಪೂರ್ಣ ಗಮನವು ಹರಿಯುವುದು.

ಅವುಗಳ ಶಬ್ದದಲ್ಲೀಗ ಬದಲಾವಣೆಯಾಗುತ್ತಿದೆ; ಅಷ್ಟೇ ಅಲ್ಲ, ಅವುಗಳೊಂದಿಗೆ ಗುರುತಿಸಲಾಗದ ಮತ್ಯಾವುದೋ ಶಬ್ದವು ಬಂದು ಸೇರಿಕೊಂಡಿದೆ. ಅದು ತಡೆತಡೆದು ಬರುತ್ತಿರುವ ಮೆಲ್ಲಗೆ ಗುದ್ದುತ್ತಿರುವ ಶಬ್ದ. ಅದರೊಟ್ಟಿಗೆ ಒಮ್ಮೊಮ್ಮೆ ಲೋಹವನ್ನು ಲೋಹದ ಮೇಲೆ ಕೆರೆದಾಗ ಬರುವ ಕೀರಲು ಶಬ್ದವೂ ಸೇರಿಕೊಳ್ಳುತ್ತಿತ್ತು.

ಕ್ಷಣದಲ್ಲೇ ನಾನು ಮರಗಟ್ಟಿಹೋದೆ. ಉಸಿರನ್ನು ಬಿಗಿಹಿಡಿದು ಶಬ್ದವು ಉತ್ಪತ್ತಿಯಾಗುತ್ತಿರುವ ಎಡೆಯನ್ನು ಕಂಡುಹಿಡಿಯಲು ಕಿವಿಯನ್ನು ಚುರುಕುಗೊಳಿಸಿದೆ. ನಿಯಂತ್ರಣ ಫಲಕದಲ್ಲಿದ್ದ ಡಯಲ್‌ಗಳಿಂದ ಯಾವುದೇ ಸುಳಿವು ಸಿಗಲಿಲ್ಲ. ಅವುಗಳಲ್ಲಿದ್ದ ಚಿಕ್ಕ ಮುಳ್ಳುಗಳು ಎಲ್ಲವೂ ಸರಿಯಾಗಿದೆಯೆಂದೇ ಸೂಚಿಸುತ್ತಿದ್ದವು. ಅಲ್ಲದೆ ಅಪಾಯದ ಮುನ್ಸೂಚನೆಯನ್ನು ನೀಡುವ ಕೆಂಪು ದೀಪಗಳ ಹತ್ತಿ - ಆರುವ ಕಣ್ಣಾಮುಚ್ಚಾಲೆಯೇನೂ ಕಾಣಲಿಲ್ಲ. ಇದು ಸ್ವಲ್ಪ ಸಮಾಧಾನದ ವಿಷಯ. ಆದರೂ ಪೂರ್ತಿಯಾಗಿ ವಿಶ್ವಾಸವಿಡುವಂತಿಲ್ಲ. ಇಂತಹ ವಿಷಯಗಳಲ್ಲಿ ಯಂತ್ರಗಳಿ

ಗಿಂತ ನನ್ನ ಅಂತಃಸ್ಫೂರ್ತಿಯ ಮೇಲೇ ನಾನು ಹೆಚ್ಚು ವಿಶ್ವಾಸವಿಡಲು ನನ್ನ ಅನುಭವಗಳೇ ಕಾರಣ; ಇದೀಗ ನನ್ನ ಅಂತಃಸ್ಫೂರ್ತಿಯು ಎಚ್ಚರಿಕೆಯ ಕರೆಗಂಟೆಯನ್ನು ಬಾರಿಸುತ್ತಿದೆ. ಪರಿಸ್ಥಿತಿಯು ಕೈಮೀರುವ ಮೊದಲೇ ಕೇಂದ್ರಕ್ಕೆ ಹಿಂತಿರುಗಿ ಹೋಗಬೇಕೆಂದು ಆದೇಶಿಸುತ್ತಿದೆ.

ಈಗಲೂ ಆ ಮುಂದಿನ ಕ್ಷಣಗಳನ್ನು ನೆನೆಸಿಕೊಳ್ಳಲು ಮನಸ್ಸು ಹಿಂಜರಿಯುತ್ತಿದೆ. ಏಕೆಂದರೆ ನಿಗೂಢ ವ್ಯೋಮದಲ್ಲಿ ಪ್ರತಿಯೊಬ್ಬ ಮನುಷ್ಯನ ಮನಸ್ಸನ್ನು ಸ್ವಸ್ಥದಲ್ಲಿಡುವ ತರ್ಕ ಮತ್ತು ವಿವೇಕಗಳ ಒಡ್ಡನ್ನು ನುಚ್ಚುನೂರು ಮಾಡುತ್ತಾ ಭೀತಿಯೆಂಬ ಹದ್ದೆರೆಯು ನನ್ನನ್ನು ಆಕ್ರಮಿಸತೊಡಗಿತು. ಆ ಕ್ಷಣದಲ್ಲೆ ನನಗೆ ಹುಚ್ಚು ಹಿಡಿಯುವುದೆಂದರೇನೆಂದು ತಿಳಿದದ್ದು. ಆವಾಗಿನ ನನ್ನ ಮಾನಸಿಕ ಸ್ಥಿತಿಯು ಅದಕ್ಕಿಂತ ಬೇರೆಯಾಗಿರಲಿಲ್ಲ.

ನನಗೆ ತೊಂದರೆ ನೀಡುತ್ತಿರುವ ಆ ಶಬ್ದ ಪುಂಜವು ಯಾಂತ್ರಿಕ ದೋಷದಿಂದುಂಟಾದದ್ದು ಎಂದು ನಂಬಿ ಅಂತೆಯೇ ಮನಸ್ಸನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳಲು ಸಾಧ್ಯವಿರಲಿಲ್ಲ. ನಾನು ಮನುಷ್ಯ ಸಹವಾಸದಿಂದಲೇ ಏಕೆ, ಯಾವುದೇ ಮಾನವ ನಿರ್ಮಿತ ವಸ್ತುವಿನಿಂದ ಬಹುದೂರ ಏಕಾಕಿಯಾಗಿದ್ದೇನೆಂಬ ನನ್ನ ನಂಬಿಕೆಯು ನುಚ್ಚುನೂರಾಯಿತು. ಏಕೆಂದರೆ, ನಾನೀಗ ಏಕಾಕಿಯಲ್ಲ. ನನಗೆ ಕೇಳಿ ಬರುತ್ತಿರುವ ಶಬ್ದ ತರಂಗಗಳಿಂದ ಬೇರಾವುದೋ ಜೀವವೊಂದು ನನ್ನ ಜೊತೆಯಲ್ಲಿದೆ ಎಂಬುದು ಕ್ರಮಕ್ರಮೇಣ ಸೂಕ್ಷ್ಮವಾಗಿ ಆದರೆ ಅನುಮಾನಕ್ಕೆಡೆಯಿಲ್ಲದಂತೆ ನನ್ನರಿವಿಗೆ ವೇದ್ಯವಾಗತೊಡಗಿತು.

ಆ ಹೃದಯ ಸ್ತಂಭಿಸುವ, ರಕ್ತ ಹೆಪ್ಪುಗಟ್ಟುವ ಕ್ಷಣದಲ್ಲಿ, ಯಾವುದೋ ಅದೃಶ್ಯ ಶಕ್ತಿಯೊಂದು ಕ್ರೂರ, ನಿರ್ದಯವಾದ, ನಿರ್ವಾತ ವ್ಯೋಮದಿಂದ ತಪ್ಪಿಸಿಕೊಂಡು ನನ್ನ ಪುಟ್ಟ ನೌಕೆಯೊಳಗೆ ಸೇರಿಕೊಳ್ಳಲು ಪ್ರಯತ್ನಿಸುತ್ತಿರುವಂತೆ ಕಂಡಿತು. ಭೀತಿಯಿಂದ ಹುಚ್ಚು ಹಿಡಿದವಂತನಾದ ನಾನು ಪ್ರಖರವಾಗಿ ಬೆಳಗುತ್ತಿರುವ ಸೂರ್ಯನ ಬೆಳಕನ್ನು ಬಿಟ್ಟು ನನ್ನ ಸುತ್ತಲಿನ ಪರಿಸರವನ್ನು ವೀಕ್ಷಿಸಲು ನಾಲ್ಕೂ ದಿಕ್ಕಿಗೆ ನನ್ನ ನೌಕೆಯನ್ನು ಹೊರಳಿಸಿ ಗಿರಕಿ ಹೊಡೆದೆ. ಸುತ್ತಲೂ ಕಣ್ಣಿಗೆ ಯಾವೊಂದು ಆಕಾರವೂ ಗೋಚರಿಸಲಿಲ್ಲ. ಹಾಗೆ ಗೋಚರಿಸಲು ಸಾಧ್ಯವೂ ಇಲ್ಲ. ಆದಾಗ್ಯೂ, ಆ ಉದ್ವೇಶಪೂರಿತ ಬೆದಕಾಡುವ, ತಡಕಾಡುವ, ಗೀಚುವ ಸ್ಫುಟವಾದ ಶಬ್ದವು ಕ್ಷಣಕ್ಷಣಕ್ಕೂ ಹೆಚ್ಚಾಗಿ ನನಗೆ ಕೇಳಿಬರತೊಡಗಿತು.

ನಮ್ಮ ಬಗ್ಗೆ ಪತ್ರಿಕೆಗಳಲ್ಲಿ ನಿರ್ದಯೆಯಿಂದ ಏನೇನೋ ಹುಚ್ಚಾಪಟ್ಟೆ ಬರೆದಿದ್ದಾಗ್ಯೂ ಒಂದು ಮಾತ್ರ ನಿಜ. ಗಗನಯಾನಿಗಳು ಮೂಢನಂಬಿಕೆಯುಳ್ಳವರಲ್ಲ. ಆದರೆ, ನನ್ನಂತಯೇ ಬಾಹ್ಯಾಕಾಶ ಕೇಂದ್ರದಿಂದ ಹೊರ ಬಂದ ಬರ್ನೀ ಸಮ್ಮರ್ಸ್ (Bernie Summers) ವಿವರಿಸಲಾಗದ ಹಲವಾರು ಕಾರಣಗಳಿಂದಾಗಿ ಜೀವ ತೆತ್ತದ್ದು ಈಗಲೇ ನನ್ನ ನೆನಪಿಗೆ ಬಂದದ್ದಕ್ಕೆ ನೀವು ನನ್ನನ್ನು ಆಕ್ಷೇಪಿಸುವಿರಾ? ನಾನು ತರ್ಕಬದ್ಧವಾಗಿ ಆಲೋಚಿಸುತ್ತಿಲ್ಲವೆನ್ನುವಿರಾ? ಅದು ''ಅಸಂಭವ'' ಎಂದು ಪರಿಗಣಿಸಲಾಗದ ಆಕಸ್ಮಿಕಗಳಲ್ಲೊಂದು; ಅಂಥವುಗಳು ಘಟಿಸುತ್ತಲೇ ಇರುತ್ತವೆ. ಒಮ್ಮೆಲೆ ಮೂರು ವಸ್ತುಗಳು ಕೆಟ್ಟು ನಿಂತವು. ಬರ್ನಿಯ ಆಮ್ಲಜನಕ ನಿಯಂತ್ರಣ ವ್ಯವಸ್ಥೆಯು ಕೆಟ್ಟು ಒತ್ತಡವು ಹೆಚ್ಚುತ್ತಾ ಹೋಯಿತು. ಅದನ್ನು ಸೂಚಿಸಬೇಕಾದ ಸುರಕ್ಷಾ ಕವಾಟವು ಸಿಡಿಯದೆ ಹೋಯಿತು- ಅದರ ಬದಲು ತಪ್ಪಾಗಿ ಜೋಡಿಸಲಾದ ನಳಿಗೆಯೊಂದರಲ್ಲಿ ಬಿರುಕುಬಿಟ್ಟಿತು. ಒಂದು ಕ್ಷಣದ ಒಂದು ಭಾಗ ಕಳೆಯುವಷ್ಟರಲ್ಲಿ ಅವನ ಪೋಷಾಕು ಸಿಡಿದು ಅವನು ನಿರ್ವಾತಕ್ಕೆ ಬಲಿಯಾದ.

ನನಗೆ ಮುಖತಃ ಬರ್ನಿಯ ಪರಿಚಯವಿಲ್ಲ. ಆದರೂ ಇದ್ದಕ್ಕಿದ್ದಂತೆಯೇ ಅವನಿಗೊದಗಿದ ಗತಿಯ ಬಗ್ಗೆ ನನ್ನ ಮನದಲ್ಲಿ ಇನ್ನಿಲ್ಲದ ಪ್ರಾಶಸ್ತ್ಯ ದೊರೆಯಿತು.

ಏಕೆಂದರೆ, ನನ್ನ ತಲೆಯಲ್ಲಾಗಲೇ ಊಹಿಸಲೂ ಭಯಾನಕವಾದ ಆಲೋಚನೆಯೊಂದು ಮೂಡಿ ಮಾಯವಾಯಿತು. ಈ ಬಗ್ಗೆ ಯಾರೂ

ಹೆಚ್ಚಿಗೆ ಮಾತನಾಡಲು ಇಚ್ಛಿಸುವುದಿಲ್ಲ. ಗಗನ ಯಾನಿಗಳ ಪೋಷಾಕುಗಳಿಗೆ ಹಾನಿಯಾದೊಡನೆ ಅವನ್ನು ಬಿಸಾಡಲು ಬರುವುದಿಲ್ಲ. ಒಂದು ಪಕ್ಷ ಅದನ್ನು ಧರಿಸಿದ್ದ ಗಗನಯಾನಿಯು ಪೋಷಾಕಿನ ಉಪಕರಣಗಳ ಕಾರ್ಯದೋಷದಿಂದಾಗಿ ಅವು ಗಳಲ್ಲೇ ಮೃತಪಟ್ಟಿದ್ದಾಗ್ಯೂ ಸಹ ಅವನ್ನು ನಿಷ್ಪ್ರಯೋಜಕವೆಂದು ತೆಗೆದು ಹಾಕುವ ಹಾಗಿಲ್ಲ. ಅವು ಅಷ್ಟು ಬೆಲೆ ಬಾಳುವ ಉಪಕರಣಗಳನ್ನೊಳಗೊಂಡಿರುತ್ತವೆ. ಅವನ್ನು ಮತ್ತೆ ಸರಿಪಡಿಸಿ, ಮರು ಕ್ರಮಾಂಕವನ್ನಿತ್ತು ಬೇರೆಯವರಿಗೆ ಬಳಸಲು ಹಂಚಲಾಗುತ್ತದೆ.

ತನ್ನವರಿಂದ ದೂರವಾಗಿ ಆಕಾಶಕಾಯಗಳ ನಡುವೆ ಮೃತನಾದ ವ್ಯಕ್ತಿಯ ಆತ್ಮದ ಗತಿಯೇನು? ನಿನ್ನವರಿಂದ ನಿನ್ನನ್ನು ದೂರ ಮಾಡಿ, ನಿನ್ನ ಮನೆಯಿಂದ ದೂರಕ್ಕೆ ಹೊತ್ತು ತಂದು ಕೊಂಡ ಆ ನಿನ್ನ ಪೋಷಾಕಿಗೆ ಇನ್ನೂ ನೀನು ಅಂಟಿಕೊಂಡಿರುವೆಯಾ ಬರ್ನೀ?

ಈ ಆಲೋಚನೆ ನನ್ನ ತಲೆಯಲ್ಲಿ ರಿಂಗಣಿಸುತ್ತಿರುವಾಗಲೇ, ನನ್ನನ್ನು ಎಲ್ಲೆಡೆಯಿಂದ ಮುತ್ತಿಗೆ ಹಾಕುತ್ತಿದ್ದ, ಆ ಭಯಾನಕ ಶಬ್ದ ಪುಂಜಗಳಿಂದ ಪಾರಾಗಲು ನಾನು ಶಕ್ತಿ ಮೀರಿ ಹೆಣಗಾಡುತ್ತಿದ್ದೆ. ಏಕೆಂದರೆ, ಆ ಗುದ್ದಾಡುವ, ಬೆದರುವ, ಕೆರೆಯುವ ಶಬ್ದವು ನನ್ನ ಪೋಷಾಕಿನ ಎಲ್ಲೆಡೆಯಿಂದಲೂ ಪ್ರತಿಧ್ವನಿಸುತ್ತಿತ್ತು. ಈಗ ನಾನು ಒಂದೇ ಒಂದು ಭರವಸೆಯ ಎಳೆಯನ್ನು ಹಿಡಿದು ಮಾನಸಿಕವಾಗಿ ತೂಗಾಡುತ್ತಿದ್ದೆ. ನಾನು ಧರಿಸಿರುವ ಪೋಷಾಕು ಬರ್ನೀಯದಲ್ಲ ಎಂಬುದೇ ಅದು- ಅಂದರೆ, ನನ್ನ ಸುತ್ತಲೂ ಮೈಗೆ ಹತ್ತಿದಂತೆ ಆವರಿಸಿರುವ ಲೋಹದ ಗೋಡೆಗಳು ಮತ್ತಾರದೋ ಶವಸಂಪುಟವಾಗಿರಲಿಲ್ಲವೆಂಬ ನನ್ನ ಭರವಸೆ.

ನನ್ನ ಪೋಷಾಕಿನಲ್ಲಿದ್ದ ಪ್ರೇಷಕದ ಗುಂಡಿಯನ್ನೊತ್ತಲು ನನಗೆ ಹಲವಾರು ಕ್ಷಣಗಳೇ ಬೇಕಾದವು. ''ಸ್ಪೇಶನ್'' .....! ಎಂದು ತೇಕುತ್ತಾ ''ನಾನು ತೊಂದರೇಲಿದ್ದೀನಿ! ಭೂಕೇಂದ್ರದಿಂದ ಪೋಷಾಕುಗಳ ಮಾಹಿತಿಯ ಕಡತವನ್ನು ಪಡೆದು ನನ್ನ ಪೋಷಾಕಿನ ಪೂರ್ವ ಇತಿಹಾಸವನ್ನು ಸ್ವಲ್ಪ ಪರೀಕ್ಷಿಸಿ ಮತ್ತು .....'' ನಾನು ನನ್ನ ವಾಕ್ಯವನ್ನು ಪೂರ್ಣ ಮಾಡಲೇ ಇಲ್ಲ. ನಾನು ಕೂಗಿಕೊಂಡ ರಭಸಕ್ಕೆ ಪೋಷಾಕಿನಲ್ಲಿದ್ದ ಧ್ವನಿವರ್ಧಕ ಉಪಕರಣವೇ ಕಿತ್ತು ಬಂದಿತ್ತೆಂದು ಬಳಿಕ ನನಗೆ ತಿಳಿಯಿತು. ಆದರೆ, ನಿಗೂಢ ವ್ಯೋಮದಲ್ಲಿ ಏಕಾಂಗಿಯಾಗಿ ತನ್ನ ಪೋಷಾಕಿನಲ್ಲೇ ಬಂಧಿಯಂತಾದ ಒಬ್ಬ ಅಸಹಾಯಕನಿಗೆ, ಅವನ ಕತ್ತಿನ ಮೇಲೆ ಯಾರೋ ಮೆಲ್ಲಗೆ ಚಪ್ಪರಿಸುತ್ತಿದ್ದರೆ, ಅವನು ಕೂಗಿಕೊಳ್ಳದೆ ಬೇರೇನು ಮಾಡಿಯಾನು?

ನನ್ನನ್ನು ಕುರ್ಚಿಗೆ ಸುರಕ್ಷಣಾ ಪಟ್ಟಿಯಿಂದ ಬಂಧಿಸಿದ್ದಾಗ್ಯೂ ಧೊಪ್ಪನೆ ಮುಂದಕ್ಕೆ ವಾಲಿ ನನ್ನ ಮುಂದಿದ್ದ ನಿಯಂತ್ರಣ ಫಲಕಕ್ಕೆ ಅಪ್ಪಳಿಸಿದೆ. ಇದಾದ ಕೆಲ ನಿಮಿಷದಲ್ಲೇ ರಕ್ಷಣಾದಳದವರು ನನ್ನನ್ನರಸಿ ಬಂದಾಗ ನಾನು ಪ್ರಜ್ಞಾಹೀನನಾಗಿದ್ದೆ. ನನ್ನ ಹಣೆ ಮೇಲೆ ಆಳವಾದ ಗಾಯವೊಂದು 'ಆ' ಎಂದು ಬಾಯ್ದೆರೆದುಕೊಂಡಿತ್ತು.

ಹೀಗೆ, ಉಪಗ್ರಹ ಮರುಪ್ರಸಾರ ವ್ಯವಸ್ಥೆಯ ಸಿಬ್ಬಂದಿಯಲ್ಲೇ ನಡೆದದ್ದೇನೆಂದು ನನಗೊಬ್ಬನಿಗೆ ಮಾತ್ರ ತಿಳಿಸಿದ್ದು. ನನಗೆ ಪ್ರಜ್ಞೆ ಮರುಕಳಿಸಿದಾಗ ವೈದ್ಯಕೀಯ ತಂಡದ ಎಲ್ಲ ಸದಸ್ಯರೂ ನನ್ನ ಮಂಚದ ಸುತ್ತಲೇ ನೆರೆದಿದ್ದುದು ಕಂಡು ಬಂತು. ಆದರೆ, ವೈದ್ಯರುಗಳು ನನ್ನತ್ತ ಗಮನ ಹರಿಸಲು ಕೆಲ ಕಾಲ ಹಿಡಿಯಿತು. ಏಕೆಂದರೆ, ನಾವು ಟಾಮಿಯೆಂದು ತಪ್ಪು ಹೆಸರಿನಿಂದ ಕರೆಯುತ್ತಿದ್ದ ಹೆಣ್ಣು ಬೆಕ್ಕು ನನ್ನ ಪೋಷಾಕಿನ ಐದನೇ ನಂಬರ್ ದಾಸ್ತಾನು ಪೆಟ್ಟಿಗೆಯಲ್ಲಿ ಯಾರಿಗೂ ಕಾಣದಂತೆ ಕದ್ದು ಮುಚ್ಚಿ ಸಾಕಿದ್ದ ಮೂರು ಮುದ್ದಾದ ಪುಟ್ಟ ಸಣ್ಣ ಬೆಕ್ಕಿನ ಮರಿಗಳೊಂದಿಗೆ ಆಟವಾಡುವುದರಲ್ಲಿ ತನ್ಮಯವಾಗಿತ್ತು. ●

ನೀತಿಕಥೆ

● ಮಾಲಾ

ಕದ್ದು ತಿನ್ನದವರು

ಬುದ್ಧ ಶ್ರಾವಸ್ತಿಯಲ್ಲಿ ಒಂದು ಮನೆಯ ಮುಂದೆ ಹೋಗುತ್ತಿದ್ದಾಗ ಮನೆಯಾತ ಬುದ್ಧನನ್ನು ಆದರದಿಂದ ಕರೆದ. ''ಭಗವಾನ್, ಒಳಗೆ ನನ್ನ ಮಗಳ ಮದುವೆ ನಡೆಯುತ್ತಾ ಇದೆ. ದಯವಿಟ್ಟು ತಾವು ಆತಿಥ್ಯ ಸ್ವೀಕರಿಸಬೇಕು'' ಎಂದು ಪ್ರಾರ್ಥಿಸಿ ಬೆಳ್ಳಿ ತಟ್ಟೆಯಲ್ಲಿ ಸಿಹಿ ಭಕ್ಷ್ಯಗಳನ್ನು, ಹಣ್ಣುಗಳನ್ನು ಮತ್ತು ಪಾನಕವನ್ನು ಬುದ್ಧನ ಮುಂದಿರಿಸಿದ.

ಬುದ್ಧ ಏನನ್ನೂ ಮುಟ್ಟಲಿಲ್ಲ. ಅವನ ಮುಖ ನೋವಿನಿಂದ ತುಂಬಿತ್ತು. ಬುದ್ಧ ದೂರದಲ್ಲಿ ಅಳುತ್ತಿದ್ದ ಹುಡುಗಿಯೊಬ್ಬಳನ್ನು ಗಮನಿಸಿದ. ಆ ಹುಡುಗಿ ಧರಿಸಿದ ಬಟ್ಟೆ ಚಿಂದಿಯಾಗಿತ್ತು. ದಾರಿದ್ರ್ಯ, ಹಸಿವು ಅವಳ ಮುಖದಲ್ಲಿ ಎದ್ದು ಕಾಣುತ್ತಿತ್ತು. ''ಅವಳೇಕೆ ಅಳುತ್ತಿದ್ದಾಳೆ?'' ಎಂದು ಮನೆಯಾತನನ್ನು ಕೇಳಿದ.

''ಕಳ್ಳ ಹುಡುಗಿ. ಅವಳ ತಾಯಿಗೆ ಹುಶಾರಿಲ್ಲದೆ ಹಾಸಿಗೆ ಹಿಡಿದಿದ್ದಾಳಂತೆ. ಅನ್ನ ಕಾಣದೆ ನಾಲ್ಕು ದಿವಸಗಳಾಯಿತಂತೆ. ಪಾಕಶಾಲೆಗೆ ಹೋಗಿ ಒಂದು ಹಿಡಿ ಅವಲಕ್ಕಿ ಕದ್ದುಕೊಂಡಳಂತೆ. ಮದುವೆಗೆ ಬಂದವರು ಅವಳಿಗೆ ಏಟು ಕೊಟ್ಟರು. ಅವಳ ಕಳ್ಳತನಕ್ಕೆ ತಕ್ಕ ಶಾಸ್ತಿಯಾಯಿತು'' ಎಂದು ಗರ್ವದಿಂದ ಹೇಳಿದನು.

ಬುದ್ಧ ಆತಿಥ್ಯ ಸ್ವೀಕರಿಸಲಿಲ್ಲ. ''ನಾನಿದನ್ನು ತಿನ್ನಬೇಕಾದರೆ ಮದುವೆಗೆ ಬಂದ ಅತಿಥಿಗಳೆಲ್ಲ ಒಂದು ಕ್ಷಣ ನನ್ನೆದುರಿಗೆ ಬರಲಿ'' ಎಂದ. ಬಂದ ಅತಿಥಿಗಳೊಂದಿಗೆ ''ನಾನು ಇದರಲ್ಲಿ ಯಾವ ತಿಂಡಿಯನ್ನು ಸ್ವೀಕರಿಸಬೇಕೋ ಅದನ್ನು ನಿಮ್ಮಲ್ಲಿ ಯಾರೇ ಆಗಲಿ ಒಬ್ಬರು ನನ್ನ ಕೈಗೆ ಕೊಡಿ. ಆದರೆ ಒಂದು ಶರತ್ತು. ಆ ವ್ಯಕ್ತಿ ಈವರೆಗೆ ಎಲ್ಲಿಯೂ ಕದ್ದು ತಿಂದಿರಬಾರದು. ಇದು ನೆನಪಿರಲಿ'' ಎಂದನು.

ಅತಿಥಿಗಳು ಗುಸುಗುಸು ಪಿಸುಪಿಸು ಮಾತಾಡಿಕೊಂಡರು. ಆದರೆ ಒಬ್ಬರೂ ಮುಂದೆ ಬರಲಿಲ್ಲ. ತಲೆ ತಗ್ಗಿಸಿ ನಿಂತವರನ್ನು ನೋಡಿ ಬುದ್ಧ ಹೇಳಿದ. ''ಜೀವನದಲ್ಲಿ ಎಲ್ಲರೂ ಒಂದಲ್ಲ ಒಂದು ಸಲ ಅಪರಾಧ ಮಾಡಿಯೇ ಮಾಡುತ್ತೇವೆ. ಹೀಗೆ ಅಪರಾಧ ಮಾಡಿದಾಗ ದಂಡಿಸುವುದೇ ಮುಖ್ಯ ಅಲ್ಲ. ತಿಳಿ ಹೇಳಿ ಸರಿಪಡಿಸಬೇಕು. ಯಾರು ಹಸಿದಿದ್ದಾರೋ ಅವರನ್ನು ಸಂತೃಪ್ತಿಪಡಿಸಿ. ಆಗ ನಿಜವಾದ ಆತಿಥ್ಯವಾಗುತ್ತದೆ'' ಎಂದು ಅಲ್ಲಿಂದ ಹೊರಟು ಹೋದರು. ●

(ಆಧಾರ)

ವಿಶ್ವ ವಿಖ್ಯಾತ ನಾಟಕಕಾರನಾದ ಜಾರ್ಜ್ ಬರ್ನಾರ್ಡ್ ಷಾ, ಪ್ರೇಮ ಪತ್ರ ಬರೆವ ರೋಗಕ್ಕೆ ಬಲಿಯಾಗಿದ್ದ. ಅವನು ತನ್ನ ಪ್ರೇಯಸಿ, ಪ್ರಖ್ಯಾತ ಅಭಿನೇತ್ರಿ, ಶ್ರೀಮತಿ ಪ್ಯಾಟ್ರಿಸ್ ಕೆಂಪ್ ಬೆಲ್‌ಳಿಗೆ ಸುಮಾರು 239 ಪ್ರೇಮ ಪತ್ರಗಳನ್ನು ಬರೆದಿದ್ದ. 1984ರ ಫೆಬ್ರುವರಿ 24ರಂದು ಈ ಪ್ರೇಮ ಪತ್ರಗಳನ್ನು ಹರಾಜು ಮಾಡಲಾಯಿತು. ಇವುಗಳಿಗೆ ಬಂದ ಬೆಲೆ ಸುಮಾರು 3000 ಪೌಂಡ್‌ಗಳು!

ಹಾಗೆಯೇ ಫ್ರಾನ್ಸ್ ದೇಶದ ಪ್ರಸಿದ್ಧ ಕವಿ ಪ್ರೊ. ಬರೋನ್ ಬರೆದ ಪ್ರೇಮ ಪತ್ರಗಳನ್ನು ಸಹ ಹರಾಜು ಹಾಕಲಾಯಿತು. ಇವರ ಪ್ರೇಮ ಪತ್ರಗಳಿಗೆ ಬಂದ ಬೆಲೆ ಸುಮಾರು 21,00,000 ರೂಪಾಯಿಗಳು! ಇವು 1937ರಿಂದ 1945ರ ಅವಧಿಯಲ್ಲಿ ತನ್ನ ಪ್ರೇಯಸಿಗೆ ಪ್ರೊ. ಬರೋನ್ ಬರೆದ ಪತ್ರಗಳಾಗಿದ್ದವು. ಈತ ತನ್ನ ಪ್ರೇಯಸಿಯನ್ನು ಕುರಿತು ಸುಮಾರು 133 ಕವಿತೆಗಳನ್ನು ಬರೆದಿದ್ದ. ಅವುಗಳೆಲ್ಲಾ ಪತ್ರಿಕೆಗಳಲ್ಲಿ ಪ್ರಕಟಣೆಗೊಂಡವು. ಈ ಜೋಡಿಯ ಪ್ರೇಮನಾಟಕ ಕೊನೆಗೊಂಡಾಗ ಪ್ರೊ. ಬರೋನ ವಯಸ್ಸು 60 ವರ್ಷಗಳು!

ಹೀಗೆ ಪ್ರೇಯಸಿಗೆ ಬರೆದ ಪ್ರೇಮ ಪತ್ರ ಪ್ರಕಟಗೊಂಡು ಅತ್ಯಂತ ಜನಪ್ರಿಯತೆ ಪಡೆದ ಮತ್ತೊಬ್ಬ ಕವಿ ಪಾಬ್ಲೋ ನೆರೂದಾ. ನೊಬೆಲ್ ಪ್ರಶಸ್ತಿ ವಿಜೇತ ನೆರೂದಾನ ಮೊದಲ ಪ್ರೇಮ ಪತ್ರವೇ ಪ್ರಕಟಗೊಂಡು ಅತ್ಯಂತ ಜನಪ್ರಿಯವಾಯಿತು. ತನ್ನ ಬದುಕಿನಲ್ಲಿ ಆತ ಬರೆದ ಒಟ್ಟು ಪ್ರೇಮ ಪತ್ರಗಳು 316!

ಇದೆಲ್ಲಾ ಬಹಿರಂಗ ಪ್ರೇಮ ಪತ್ರಗಳ ವಿಷಯವಾಯಿತು. ಗುಪ್ತವಾಗಿ ಪ್ರೇಮ ಪತ್ರ ಬರೆದ ಮಹಾನ್ ಕವಿಗಳೂ ಇದ್ದಾರೆ. ಇವರಿಗೆ ಪ್ರೀತಿ-ಪ್ರೇಮ ಹಾಗೂ ಕಳ್ಳತನ ಎಷ್ಟೇ ಗುಪ್ತವಾಗಿಟ್ಟರೂ ಬೆಳಕಿಗೆ ಬರುತ್ತವೆ ಎಂಬ ಅಂಶ ಗೊತ್ತಿರಲಾರದಲ್ಲವೇ? ಸುಪ್ರಸಿದ್ಧ ಕವಿಗಳಾದ ವರ್ಡ್ಸ್‌ವರ್ತ್, ಟೆನಿಸನ್ ಅನುಕ್ರಮವಾಗಿ ಮೇರಿ ಮತ್ತು ಆ್ಯಮಿಲಿ ಎಂಬ ಪ್ರೇಯಸಿಯರಿಗೆ ವರ್ಷಾನುಗಟ್ಟಲೇ ದೀರ್ಘ ಪ್ರೇಮಪತ್ರಗಳನ್ನು ಬರೆದರು. ಅವರ ದೌರ್ಭಾಗ್ಯಕ್ಕೆ ಅವರ ಪ್ರೇಯಸಿಯರಿಂದ ಉತ್ತರವೇ ಬರಲಿಲ್ಲ! ಕೊನೆಗೆ ಪ್ರೇಮಿಗಳಿಬ್ಬರೂ ನಿರಾಶೆಗೊಂಡು ಜೀವನಕ್ಕೆ ತೆರೆ ಎಳೆದರು.

ಮಹಾಶೂರ ನೆಪೋಲಿಯನ್, ಮಹಾ ವಿಜ್ಞಾನಿ ಮೈಕೇಲ್ ಫ್ಯಾರಡೆ, ಅತ್ಯಂತ ವಿಲಕ್ಷಣ ಸ್ವಭಾವದ ಬಿಥೋವನ್ ಮುಂತಾದವರು ತಮ್ಮ ಪ್ರೇಯಸಿಯರಿಗೆ ಬರೆದ ಪ್ರೇಮಪತ್ರಗಳು ಗೌಪ್ಯವಾಗಿ ಉಳಿಯದೆ ಬೆಳಕಿಗೆ ಬಂದವು.

ನೆಲ್ಸನ್ ಎಂಬ ಸೇನಾಧಿಪತಿಯು ಯುದ್ಧದಲ್ಲಿ ತನ್ನ ಬಲಗೈಯನ್ನು ಕಳೆದುಕೊಂಡು ಅಪಾರ ವೇದನೆ ಅನುಭವಿಸುತ್ತಿದ್ದಾಗಲೂ, ಎಡಗೈಯಿಂದಲೇ ತನ್ನ ಪ್ರೇಯಸಿಗೆ ಸುದೀರ್ಘವಾದ ಪ್ರೇಮಪತ್ರವೊ[illegible]ರೆದ. (1808ನೇ ಇಸ್ವಿ ಅಕ್ಟೋಬರ್ ತಿ[illegible] ತಾರೀಖು) ಪ್ರಿಯಕರನು ತನ್ನ ಮೇ[illegible]ವ ಅಪ್ರತಿಮ ಪ್ರೀತಿಗೆ ಮಾರು ಹೋದ ಪ್ರೇಯಸಿ ಆ್ಯಮ್ಮ್ಯಾಲ್ ತನ್ನ ಬಲಗೈಯ ಐದೂ ಬೆರಳುಗಳನ್ನು ಕತ್ತರಿಸಿ ಪ್ರಿಯಕರನಿಗೆ ಕಳಿಸಿಕೊಟ್ಟಳು! ಈ ಪ್ರೇಮ ಪತ್ರವನ್ನು ಬ್ರಿಟಿಷ್ ವಸ್ತು ಸಂಗ್ರಹಾಲಯದಲ್ಲಿ ನೋಡಬಹುದು.

ಪ್ರೇಮ ಪತ್ರಗಳ ಬರವಣಿಗೆ ಕೆಲವರಿಗೆ ನೀರು ಕುಡಿದಷ್ಟು ಸುಲಭ. ಇನ್ನು ಕೆಲವರಿಗೆ ಹೇಗಪ್ಪಾ ಬರೆಯೋದು? ಏನಪ್ಪಾ ಬರೆಯೋದು? ಎಂಬ ಆತಂಕ. ಕೆಲವರು ನೂರಾರು ಪುಟಗಳಷ್ಟು ಪ್ರೇಮ ಪತ್ರ ಬರೆದರೆ, ಕೆಲವರು ಒಂದೇ ಶಬ್ದದ ಪ್ರೇಮ ಪತ್ರ ಬರೆದಿದ್ದಾರೆ! ಪ್ರೇಮ ಸಾಫಲ್ಯಕ್ಕಾಗಿ, ಪ್ರಿಯತಮ-ಪ್ರಿಯತಮೆಯರ ನಡುವಿನ ಉತ್ತಮ ಸಂಪರ್ಕ-ಸಾಧನ ಈ ಪ್ರೇಮ ಪತ್ರ ಎಂದು ಎಲ್ಲರೂ ಭಾವಿಸುತ್ತಾರೆ. ಆದರೆ ಅಪರಿಚಿತ, ಗೊತ್ತೇ ಇಲ್ಲದ, ಬೇರೆ-ಬೇರೆ ಗ್ರಹಗಳಲ್ಲಿರುವ ಪ್ರೇಯಸಿಯರಿಗಾಗಿ ಪ್ರೇಮ ಪತ್ರ ಬರೆದ ಪ್ರೇಮಿಗಳೂ ಇದ್ದಾರೆ!

ಪ್ರಥಮ ಎಲಿಜಬೆತ್ ಮಹಾರಾಣಿಯ ಆಡಳಿತ ಕಾಲದಲ್ಲಿ ಒಬ್ಬ ಪ್ರೇಮಿಯು ತನ್ನ ಪ್ರೇಯ

ಸಿಗೆ ಬರೆದ ಪ್ರೇಮ ಪತ್ರವು ಅತಿ ದೀರ್ಘ ಪ್ರೇಮ ಪತ್ರ ಎನಿಸಿದೆ. ಈ ಪ್ರೇಮ ಪತ್ರವು 800 ಪುಟಗಳಲ್ಲಿ 4,20,000 ಶಬ್ದಗಳನ್ನು ಒಳಗೊಂಡಿದೆ. ಈ ಪ್ರೇಮ ಪತ್ರ ಬ್ರಿಟಿಷ್ ಮ್ಯೂಜಿಯಂನಲ್ಲಿದೆ.

ಕೆನಡಾ ದೇಶದ ಟೋರಾಂಟೋ ಪಟ್ಟಣದ ಜೆಲ್‌ಷಿರಾಜ್ ಎಂಬ 16 ವರ್ಷ ವಯಸ್ಸಿನ ಯುವತಿಯು ತನ್ನ ಪ್ರೇಮಿ ಮಿಚ್ಚೈಲ್ ಜೆಹಾರಾ ಎಂಬ 30 ವರ್ಷದ ಯುವಕನಿಗೆ ಬರೆದ ಪ್ರೇಮ

ಈ ಪತ್ರದಲ್ಲಿರುವ ಶಬ್ದಗಳ ಸಂಖ್ಯೆ 25,000. ಕೋರಿಯಾ ಯುದ್ಧದ ಸಮಯದಲ್ಲಿ ಜೆಫ್ರೋ ಎಂಬ ಸೈನಿಕ ತನ್ನ ಪ್ರೇಯಸಿಗೆ ಬರೆದ ಪತ್ರದ ಉದ್ದಳತೆ 75 ಅಡಿ. ಈ ಪತ್ರವನ್ನೋದಲು ಆವನ ಪ್ರೇಯಸಿಗೆ 8 ತಾಸು ಬೇಕಾಯಿತು! ಆ ಸೈನಿಕ ಈ ಪತ್ರವನ್ನು ಬರೆಯಲು ಒಂದು ದಿನದ ಅನಾರೋಗ್ಯ ರಜೆಯನ್ನು ಪಡೆದುಕೊಂಡಿದ್ದ!

ಸ್ವೀಡನ್ನಿನ ಕಾರ್ಲ್ ಸ್ವಂಟ್ರೆಸ್ಥೆನ್ ಎಂಬ ಹೆಸ

ಎಸ್.ರವಿಕುಮಾರ

ಪ್ರೀತಿಪಾತ್ರರ ಪ್ರೇಮಪತ್ರಗಳು

ಪತ್ರದಲ್ಲಿ 4,24,000 ಶಬ್ದಗಳಿವೆ. ಈ ಪ್ರೇಮ ಪತ್ರ ಬರೆಯಲು ಆಕೆ 20 ದಿನಗಳ ಕಾಲ ಶ್ರಮಿಸಿದ್ದಳು!

ಆದರೆ ಅತಿ ಸುದೀರ್ಘ ಪ್ರೇಮ ಪತ್ರ ಬರೆದ ಶ್ರೇಯಸ್ಸು ಲೈಕರ್ ಎಂಬ ಚಿತ್ರಕಾರನಿಗೆ ಸಲ್ಲುತ್ತದೆ. ಅವನು 1875ರಲ್ಲಿ ತನ್ನ ಶ್ರೀಮಂತ ಪ್ರೇಯಸಿ ಬಿಲ್‌ಬೋರ್‌ಳಿಗೆ ಈ ಪತ್ರ ಬರೆದಿದ್ದ. ಈ ಪ್ರೇಮ ಪತ್ರದಲ್ಲಿ ಮೂರು ಕೌತುಕಮಯ ವಿಷಯಗಳಿವೆ. ಇದರಲ್ಲಿ ''ಐ ಲವ್ ಯು'' ಎಂಬ ಮೂರು ಶಬ್ದಗಳನ್ನು 59,25,000 ಸಲ ಬರೆದಿದ್ದ! ಈ ಪೂರ್ಣ ಪತ್ರದಲ್ಲಿ ಬರುವ ಶಬ್ದಗಳ ಸಂಖ್ಯೆ 1,68,75,000! ಇವುಗಳಿಗಿಂತ ಬಹು ವಿಚಿತ್ರ ಸಂಗತಿಯೆಂದರೆ, ಈ ಪ್ರೇಮ ಪತ್ರ ಬರೆಯಲು ಲೈಕರ್ ಸಂಬಳ ಕೊಟ್ಟು ಒಬ್ಬ ನೌಕರನನ್ನು ನೇಮಿಸಿಕೊಂಡಿದ್ದ!

ಪಶ್ಚಿಮ ಜರ್ಮನಿಯ ಒಬ್ಬ ಯುವಕನ ಪ್ರೇಮ ಪತ್ರದ ಉದ್ದಳತೆ 1224 ಮೀಟರ್‌ಗಳು.

ರಿನ ನಾವಿಕನು ಬಾಲ್ಟಿಮೋರ್ ಸ್ಮಿತ್ ಎಂಬ ತನ್ನ ಪ್ರೇಯಸಿಗೆ 10 ಅಡಿ ಉದ್ದಳತೆಯ ಪತ್ರ ಬರೆದ. ಇದಕ್ಕೆ ಉತ್ತರವಾಗಿ (ಒಂದು ಹೆಜ್ಜೆ ಮುಂದೆ ಹೋಗಿ) 20 ಅಡಿ ಉದ್ದದ ಪ್ರೇಮಪತ್ರ ಬರೆದಳು. ಈ ಪತ್ರ ನೋಡಿ ಸಂತಸಪಟ್ಟ ಪ್ರೇಮಿ ಪುನಃ 61 ಅಡಿ ಉದ್ದದ ಪ್ರೇಮ ಪತ್ರ ಬರೆದು ಪ್ರೇಯಸಿಗೆ ಕಳಿಸಿದ. ಅವರ ಮದುವೆಗೆ ಮೂರು ದಿನಗಳಿವೆ ಎಂದಾಗ ಪ್ರೇಮಿ-ಪ್ರೇಯಸಿಗೆ ಬರೆದ ಪತ್ರದ ಉದ್ದ 75 ಅಡಿಗಳು!

ಅತಿ ಚಿಕ್ಕ ಪ್ರೇಮ ಪತ್ರ ಬರೆದ ಶ್ರೇಯಸ್ಸು

ನಿನ್ನ ನೆನಪು ಭಾಳ ಆಗಿ
ಕೈಯಾಗ ಹಿಡಿದೆ ದೊಡ್ಡ ಹಾಳಿ
ನಿನಗೂ ಹಂಗ್ಯ ಆಗಿತ್ತ ತಗಿ
ಅಂತ ಕಳಸೀನಿ ಪತ್ರಾ ಖಾಲಿ

– ಶೇಖರ ಲದವಾ

ಇಂಗ್ಲೆಂಡಿನ ಮಾಜಿ ಪ್ರಧಾನ ಮಂತ್ರಿ ಲೂಯಿ ಜಾರ್ಜ್‌ರವರದು. ಫ್ರಾನ್ಸ್‌ನ ಒಪೇರಾ ನರ್ತಕಿಯೋರ್ವಳಿಗೆ ಅವರು ಒಂದು ಪ್ರೇಮ ಪತ್ರ ಬರೆದಿದ್ದರು. ಅದರಲ್ಲಿ ಒಂದೇ ಒಂದು ಶಬ್ದ ಇತ್ತು! ಅದು ''ಪ್ರೇಮಾಯಾಚನೆ'' ಅವರ ಈ ಪತ್ರಕ್ಕೆ ಆ ನರ್ತಕಿಯಿಂದ ಉತ್ತರವೂ ಬಂತು. ಅದರಲ್ಲಿಯೂ ಸಹ ''ಅಸ್ವೀಕೃತ'' ಎಂಬ ಒಂದೇ ಒಂದು ಶಬ್ದವಿತ್ತು!

1928ರಲ್ಲಿ ಡಾ. ರಾಬಿನ್‌ಸನ್ ಮಂಗಳ ಗ್ರಹ ನಿವಾಸಿಯಾದ ತನ್ನ ಅಜ್ಞಾತ ಪ್ರೇಯಸಿಗೆ, ಅಂಚೆ-ತಂತಿ ವಿಭಾಗದ ರೇಡಿಯೋ ತರಂಗಗಳ ಮೂಲಕ ಒಂದು ಪ್ರೇಮ ಸಂದೇಶವನ್ನು ಕಳುಹಿಸಿದ. ''ಮಂಗಳ ಗ್ರಹದ ನಿವಾಸಿಯಾದ ನನ್ನ ಪ್ರೇಯಸಿಗೆ, ಪೃಥ್ವಿಯ ನಿವಾಸಿಯಾದ ನಿನ್ನ ಪ್ರೇಮಿ ಬೇಡಿಕೊಳ್ಳುವುದೇನೆಂದರೆ ನನ್ನ ಪ್ರೇಮಾಚನೆಯನ್ನು ಸ್ವೀಕರಿಸು.''

ಈ ಸಂದೇಶ ಕಳಿಸಲು ರಾಬಿನ್‌ಸನ್ ಒಂದು ಶಬ್ದಕ್ಕೆ 1 ಶಿಲಿಂಗ್ 6 ಪೆನ್ನಿಗಳಂತೆ ಖರ್ಚು ಮಾಡಿದ್ದ. ಆದರೆ ಆ ಮಂಗಳ ಗ್ರಹ ನಿವಾಸಿ (ಪ್ರೇಯಸಿ)ಯಿಂದ ಉತ್ತರ ಬರಲಿಲ್ಲ. ಆಗ ರಾಬಿನ್‌ಸನ್ ನುಡಿದ. ''ಅದು ಹೇಗೆ ಸಾಧ್ಯ? ನನ್ನ ಪ್ರೇಯುಸಿಯ ಇಚ್ಛಾಶಕ್ತಿ ಅತೀ ದುರ್ಬಲ. ಅದಕ್ಕಾಗಿ ಆಕೆಯಿಂದ ಉತ್ತರವೇ ಬರಲಿಲ್ಲ.''

ಬರೋಡದ ಎಂಜಿನೀಯರಿಂಗ್ ಕಾಲೇಜಿನ ಫಾರೆಸ್ ಫರೇಬ ಎಂಬ ವಿದ್ಯಾರ್ಥಿಯೊಬ್ಬ ಅಜ್ಞಾತ ಪ್ರೇಯಸಿಯೋರ್ವಳಿಗೆ ಪ್ರೇಮ ಪತ್ರ ಬರೆದು, ದಾಖಲೆ ಸ್ಥಾಪಿಸುವ ಆಸೆಯಿಂದಿದ್ದಾನೆ. ಪತ್ರದ ಪ್ರಾರಂಭದಲ್ಲಿ ಯಾವ ಯುವತಿಯ ಹೆಸರೂ ಇಲ್ಲ, ಈ ಪತ್ರದ ಉದ್ದಳತೆ 1825 ಮೀಟರ್‌ಗಳು. ಈ ಪತ್ರದಲ್ಲಿ 6,10,266 ಶಬ್ದಗಳಿವೆ. ಇದನ್ನು ಬರೆಯಲು 180 ದಿನಗಳು ಬೇಕಾದವು. ತನ್ನ ಅಜ್ಞಾತ ಪ್ರೇಯಸಿ ಒಂದಿಲ್ಲೊಂದು ದಿನ ಸಿಕ್ಕೇ ಸಿಗುತ್ತಾಳೆಂಬ ನಂಬಿಕೆ ಆತನಿಗಿದೆ.

ಇವುಗಳೆಲ್ಲಾ ಪ್ರೇಮ ಪತ್ರದ ವೈಶಿಷ್ಟ್ಯಗಳಾದರೆ, ಪ್ರೇಮ ಪತ್ರದ ಸಂಖ್ಯೆಯ ಕಡೆಗೂ ಸ್ವಲ್ಪ ದೃಷ್ಟಿ ಹರಿಸೋಣ. ನೀವು ಪ್ರೇಮ ಪತ್ರ ಬರೆಯುವವರಾದರೆ ಎಷ್ಟು ದಿನಕ್ಕೊಮ್ಮೆ ಪ್ರೇಮ ಪತ್ರ ಬರೆಯುತ್ತೀರಿ? ವಾರಕ್ಕೊಮ್ಮೆ ... ತಿಂಗಳಿಗೊಮ್ಮೆ ... ಎರಡು ವಾರಗಳಿಗೊಮ್ಮೆ ... ಎರಡು ತಿಂಗಳಿಗೊಮ್ಮೆ ... ಮೂರು ತಿಂಗಳಿಗೊಮ್ಮೆ ...? ನಿಗದಿಯಾಗಿ ಹೇಳಲು ಸಾಧ್ಯವಿಲ್ಲ, ಅಲ್ಲವೇ? ಆದರೆ ದಿನಕ್ಕೊಂದು ಪ್ರೇಮ ಪತ್ರ ಬರೆಯುವ ಪ್ರೇಮಿಗಳೂ ಇದ್ದಾರೆ!

ಎರಡನೆಯ ಮಹಾಯುದ್ಧದ ಸಮಯದಲ್ಲಿ, ಇಂಗ್ಲೆಂಡಿನ ಸಿವೆಲ್ ಕೀಡರ್ ಎಂಬ ಮಹಿಳೆ ತನ್ನ ಪ್ರೇಮಿಗೆ ದಿನಕ್ಕೊಂದು ಪ್ರೇಮ ಪತ್ರ ಬರೆದು, ವಾರಕ್ಕೊಮ್ಮೆ (7 ಪತ್ರಗಳು) ರವಾನಿಸುತ್ತಿದ್ದಳು. ಪ್ರತಿಯೊಂದು ಪ್ರೇಮ ಪತ್ರದಲ್ಲಿ 7000 ಶಬ್ದಗಳು ಇರುತ್ತಿದ್ದವು. ಒಂದು ವಾರದವರೆಗೆ ಬರೆದ ಪ್ರೇಮ ಪತ್ರಗಳ ಪುಟಗಳ ಸಂಖ್ಯೆ 400. ಈಕೆ ದಿನಕ್ಕೊಂದರಂತೆ 30 ವರ್ಷ 9 ತಿಂಗಳು 23 ದಿನಗಳವರೆಗೆ ಸತತವಾಗಿ ಪ್ರೇಮ ಪತ್ರಗಳನ್ನು ಬರೆದಿದ್ದಳು. ಬಹುಶಃ 24ನೇ ದಿನವೂ ಆಕೆ ಬರೆಯುತ್ತಿದ್ದಳೇನೋ, ಆದರೆ ಆ ದಿನ ಅವಳ ಪ್ರೇಮಿಯೊಡನೆ ಲಗ್ನವಾಯಿತು!

(ವಿವಿಧ ಮೂಲಗಳಿಂದ)

ಸಂದೇಹ

''ನಮ್ಮ ನಾಯಿಯ ಬಗ್ಗೆ ನೀವೇನೂ ಹೆದರಬೇಕಾದ ಅಗತ್ಯವಿಲ್ಲ'', ಗೇಟ್‌ನಲ್ಲೇ ನಡಗುತ್ತ ನಿಂತಿದ್ದ ಪೆಕ್ರನಿಗೆ ಮನೆಯೊಡತಿ ಹೇಳಿದಳು, ''ಬೊಗಳುವ ನಾಯಿ ಕಚ್ಚುವುದಿಲ್ಲ ಎಂಬ ಮಾತು ನಿಮಗೆ ನೆನಪಿದೆ ತಾನೆ?''

''ನನಗೇನೋ ನೆನಪಿದೆ'', ಪೆಕ್ರ ಹೇಳಿದ, ''ಆದರೆ ನಾಯಿಗೆ ನೆನಪಿದೆಯೋ ಇಲ್ವೋ.''

ಹುಲ್ಕೋಡ ಆದಿತ್ಯ

ಪ್ರವಾಸಿ: ಕಾಫಿ ಕುಡಿದು ಬರುವವರೆಗೂ ಬಸ್ ಇರುತ್ತೇನಪ್ಪಾ?
ಕಂಡಕ್ಟರ್: ಇರುತ್ತೆ ಸಾರ್.
ಪ್ರವಾಸಿ: ಏನು ಗ್ಯಾರಂಟಿ?
ಕಂಡಕ್ಟರ್: ಡ್ರೈವರನನ್ನೂ ಕರೆದುಕೊಂಡು ಹೋಗಿ ಸಾರ್ ಜೊತೇಲಿ!

★ ★

ಭಾಷಣಕಾರ ತನ್ನ ಗಡ್ಡವನ್ನು ಸವರುತ್ತ - ''ಈ ಪ್ರಶ್ನೆಯನ್ನು ಬಗೆಹರಿಸಲು....'' ಎಂದು ತತವರಿಸಿದ.
ಸಭಿಕರಲ್ಲೊಬ್ಬ - ''ಕೇವಲ ಎಂಬತ್ತು ಪೈಸೆ ಸಾಕು!''


★ ★

ಟಿಕೆಟ್ ಕಲೆಕ್ಟರ್: ಏನ್ರೀ, ಗದುಗಿನ ತಿಕೀಟು ತಗೆದುಕೊಂಡಿದ್ದೀರಿ, ಆದರೆ ಈ ಗಾಡಿ ಬೆಂಗಳೂರಿಗೆ ಹೋಗುತ್ತಿದೆಯಲ್ಲ!
ಪ್ರಯಾಣಿಕ: ಅದಕ್ಕೆ ನಾನೇನು ಮಾಡ್ಲಿ? ತಪ್ಪು ಡ್ರೈವರನದು. ಹೋಗಿ ಅವನಿಗೆ ಹೇಳಿ.

★ ★

''ಅಲ್ಲೋ, ಕಷ್ಟಪಟ್ಟು ನಿನಗೆ ಶಿಕ್ಷೆಯಾಗುವುದನ್ನು ತಪ್ಪಿಸಿದೆ. ಮೂರು ತಿಂಗಳಾದರೂ ನನ್ನ ಫೀಜು ಕೊಡಬಾರದೇ?''
''ವಕೀಲಸಾಹೇಬರೇ, ಸ್ವಲ್ಪ ತಡೆಯಿರಿ. ಈ ಚಳಿಗಾಲ ಅಷ್ಟು ಕಳೆಯಲಿ. ಎಲ್ಲಾ ನನ್ನ ಮಕ್ಕಳೂ ಜೇಬಿನಲ್ಲಿ ಕೈ ತುರುಕಿಕೊಂಡೇ ಅಡ್ಡಾಡುತ್ತಾರೆ!''

★ ★



ಗುರು: ''ಅವನು ವರ್ತಮಾನವನ್ನು ಕಳಿಸುತ್ತಾನೆ.'' - ಈ ವಾಕ್ಯವನ್ನು ಭೂತಕಾಲದಲ್ಲಿ ಹೇಳು.
ಗುಂಡ: ಅವನು ಭೂತವನ್ನು ಕಳಿಸುತ್ತಾನೆ.

★ ★

ಗುರು: ದಾನಗಳಲ್ಲೆಲ್ಲಾ ದೊಡ್ಡದಾವುದು?
ಶಿಷ್ಯ: ಮೈದಾನ ಸಾರ್.

★ ★

''ನೀವು ಬರೆದ ಅತ್ಯಂತ ಕಾಲ್ಪನಿಕ ಕೃತಿ ಯಾವುದು?''
''ಆದಾಯ ತೆರಿಗೆ ರಿಟರ್ನ್''

★ ★

''ಮದುವೆಯೆಂಬುದು ಲಾಟರಿ'' ಎಂದನೊಬ್ಬ ಗೃಹಸ್ಥ, ನಿರಾಶೆಯಿಂದ.
''ಸುಳ್ಳು'' ಎಂದ ಇನ್ನೊಬ್ಬ ಗೃಹಸ್ಥ, ''ಲಾಟರಿಯಲ್ಲಿ ಅಪರೂಪಕ್ಕೊಮ್ಮೆ ನಾವು ಗೆಲ್ಲೋದುಂಟು.''

(ಉದ್ಧೃತ: ''ಹಾಸ್ಯ ರಸಾಯನ'', ನಗೆಹನಿಗಳ ಬೃಹತ್ ಸಂಗ್ರಹ ಸಂ: ಟಿ.ವಿ. ವೆಂಕಟರಮಣಯ್ಯ, ಪ್ರ: ಸಮಾಜ ಪುಸ್ತಕಾಲಯ, ಧಾರವಾಡ)

ಒಂದು ಟೆಲಿಫೋನ್ ಕೇಂದ್ರದಲ್ಲಿ ದಿನವೂ 12 ಗಂಟೆಗೆ ಸರಿಯಾಗಿ ಒಬ್ಬನ ಫೋನ್ ಬರುತ್ತಿತ್ತು. ಒಂದು ದಿನ ಟೆಲಿಫೋನ್ ಆಪರೇಟರ್ ಅವನಿಗೆ, ''ನೀನು ದಿನ 12 ಗಂಟೆಗೆ ಸಮಯ ಕೇಳಲು ನನಗೆ ಟೆಲಿಫೋನ್ ಮಾಡ್ತೀಯಾ ಇದರ ಬದಲು ನೀನು ಮಿಲ್ ಸೈರನ್ ಏಕೆ ಕೇಳಬಾರದು?'' ಎಂದಳು.

ಅದಕ್ಕೆ ಅವನು, ''ನಾನು ಮಿಲ್‌ನಲ್ಲಿ ಸೈರನ್ ಗಂಟೆ ನೋಡಿಕೊಳ್ಳುವವನು. ಅದಕ್ಕೇ ನಿಮಗೆ ತೊಂದರೆ ಕೊಡುತ್ತೇನೆ'' ಎಂದ.

● ಟೇಕಲ್ ಗೋಪಾಲಕೃಷ್ಣ

ಶಾಂತಿದೂತ ಮಿಂಚು ಹುಳುಗಳು

● ಎಸ್.ಅರ್ಷದ್ ಖಾಜಿ

ಬೇಸಿಗೆಯ ಅಂತ್ಯದ ಶುಷ್ಕ ಹವೆಯ ವಿಪರೀತ ಸೆಕೆಯಿರುವ ರಾತ್ರಿಗಳಲ್ಲಿ ಒಮ್ಮೆಲೆ ಆಗಸದಿಂದ ಬಂದಿಳಿದ ಶಾಂತಿದೂತರಂತೆ ಎಲ್ಲಿಂದಲೋ ಬಂದು ತಮ್ಮ ದೇಹದಿಂದ ಹೊರಹೊಮ್ಮುವ ಬೆಳಕನ್ನು ಬೀರಿ ಮೇಘರಾಜನ ಆಗಮನದ ಶುಭ ಸೂಚನೆ ಜಗತ್ತಿಗೆ ಸಾರುವ ಚಿಕ್ಕ ಹುಳುವೇ-ಮಿಂಚುಹುಳು!

ಮಿಂಚು ಹುಳುವಿನ ಹೆಸರು ಕೇಳಿದಾಗ ಇದು ನೊಣದ ಜಾತಿಯದೇ ಎಂಬ ಕಲ್ಪನೆ ಮೂಡುತ್ತದೆ. ಆದರೆ ನಿಜಕ್ಕೂ ಇದು ತಪ್ಪು. ಸರಿಯಾಗಿ ಹೇಳಬೇಕೆಂದರೆ ಮಿಂಚು ಹುಳು ಒಂದು ಜೀರುಂಡೆ! ಇವುಗಳ ದೇಹದ ತಳಭಾಗದಲ್ಲಿ ಕಾಲುಗಳ ನಡುವಿನಿಂದ ಹಾದು ಹೋಗುವ ಒಂದು ನೇರವಾದ ಗೆರೆಯಿಂದ ಮತ್ತು ಕಠಿಣ ಕವಚದಿಂದಾಗಿ ಇವುಗಳು ಜೀರುಂಡೆಯೆಂಬುದು ಸ್ಪಷ್ಟವಾಗುತ್ತದೆ. ಕುಳಿತಲ್ಲಿಂದ ಹಾರುವಾಗ ಮಾತ್ರ ಇವು ಗಟ್ಟಿ ಕವಚದೊಳಗಿನಿಂದ ರೆಕ್ಕೆ ಬಿಚ್ಚಿ ಹಾರುತ್ತವೆ. ಮಿಂಚು ಹುಳುವಿನ ಹೊಟ್ಟೆಯ ಕೆಳಭಾಗದಲ್ಲಿರುವ ಹಸಿರು ಮಿಶ್ರಿತ ಬೂದು ಬಣ್ಣದ ಮೆದು ಭಾಗವೊಂದನ್ನು ಬಿಟ್ಟು ಸಾಮಾನ್ಯವಾಗಿ ಜೀರುಂಡೆಗೂ ಮಿಂಚು ಹುಳಕ್ಕೂ ಯಾವುದೇ ವ್ಯತ್ಯಾಸವಿರುವುದಿಲ್ಲ.

ಸೆಕೆ ಹೆಚ್ಚಾದಾಗಲೇ ಹೊರ ಬೀಳುವ ಮಿಂಚು ಹುಳುಗಳು ಹೊರ ಚಿಮ್ಮುವ ಬೆಳಕಿನ ಪ್ರಖರತೆ ಮತ್ತದು ಬೆಳಗುವ ಅಂತರ, ಬೆಳಕು ಹೊರಸೂಸುವ ಕಾಲಾವಕಾಶ ಸೆಕೆಯ ಹೆಚ್ಚು ಕಡಿಮೆಯೊಂದಿಗೆ ಏರಿಳಿಯುತ್ತದೆ. ಸಾಮಾನ್ಯವಾಗಿ ಜಗತ್ತಿನೆಲ್ಲೆಡೆ ಕಂಡು ಬರುವ ಮಿಂಚು ಹುಳುಗಳು ಬೇರೆ ಬೇರೆ ಆಕಾರ, ಗಾತ್ರ ಹೊಂದಿರುತ್ತವೆ. ವೆಸ್ಟ್ ಇಂಡೀಜಿನಲ್ಲಿ ಕಾಣಸಿಗುವ Cucuyo ಜಾತಿಯ ಮಿಂಚು ಹುಳಗಳ ಬೆಳಕು ಎಷ್ಟು ತೀಕ್ಷ್ಣ (ತೀಕ್ಷ್ಣವಾಗಿದ್ದರೂ ಉರಿ (Heat) ಇರುವುದಿಲ್ಲ)ವಾಗಿರುತ್ತದೆಂದರೆ ಅಲ್ಲಿಯ ಹಳ್ಳಿಗರು ದಟ್ಟಡವಿಗಳಿಂದ ಹಾದು ಹೋಗುವಾಗ ಅವನ್ನು ಕಾಲಿಗೆ ಕಟ್ಟಿಕೊಂಡು ಸುಲಭವಾಗಿ ದಾರಿ ಕಂಡುಕೊಳ್ಳುತ್ತಾರೆ. 1898ರಲ್ಲಿ ಅಮೆರಿಕನ್ ಸೈನ್ಯ ಕ್ಯೂಬಾದಲ್ಲಿ ಹೋರಾಡುತ್ತಿರುವಾಗ ಪ್ರಸಿದ್ಧ ಡಾಕ್ಟರ್ ವಿಲಿಯಂ ಜೋಗಿಸ್ ಒಬ್ಬ ಸೈನಿಕನ ಆಪರೇಷನ್ ಮಾಡುವಾಗ ಲ್ಯಾಂಪ್ ಆರಿ ಹೋದಾಗ ಬಾಟಲಿ ತುಂಬ ಈ ಮಿಂಚು ಹುಳುಗಳನ್ನು ಹಿಡಿದು ಅದನ್ನೇ ದೀಪದಂತೆ ಉಪಯೋಗಿಸಿ ಆಪರೇಶನ್ ಯಶಸ್ವಿಯಾಗಿ ಮುಗಿಸಿದ್ದನಂತೆ.

ಜಪಾನಿನಲ್ಲಿ ಸಂಭ್ರಮದಿಂದ ಆಚರಿಸಲ್ಪಡುವ Fire Fly Festivalದಲ್ಲಿ ದೇಶಾದ್ಯಂತದಿಂದ ಹಿಡಿಯಲ್ಪಟ್ಟ ಸಾವಿರಾರು ಮಿಂಚು ಹುಳುಗಳು Khoto ನಗರದ ಸಮುದ್ರತಟದಲ್ಲಿ ಮಾರಲ್ಪಡುತ್ತವೆ. ಇದನ್ನು ಖರೀದಿಸಿದ ಜನ ಒಂದು ಗೊತ್ತು ಪಡಿಸಿದ ವೇಳೆಯಲ್ಲಿ (ರಾತ್ರಿ) ಒಮ್ಮೆಲೇ ಅವನ್ನು ಬಿಟ್ಟು ಬಿಡುತ್ತಾರೆ. ಅಲ್ಲಿ ಇದೊಂದು ಶಾಂತಿ, ಸಮೃದ್ಧಿಯ ಸಂಕೇತ! ಆಗ ಮಿಣು ಮಿಣು ಬೆಳಕನ್ನು ಚಿಮ್ಮುತ್ತ ಆಕಾಶದಲ್ಲವು ಹಾರಾಡುವಾಗ ಅಲ್ಲೊಂದು ನಕ್ಷತ್ರ

ಪುಂಜವೇ ತಯಾರಾಗಿ ಬಿಡುತ್ತದೆ.

ಭಾರತದೆಲ್ಲೆಡೆ ಕಂಡು ಬರುವ ಅಮೆರಿಕನ್ ಮೂಲದ ಪೈರಾಲಿಸ್ (Pyralis) ಜಾತಿಯ ಮಿಂಚು ಹುಳುಗಳು ತಾವು ಹೊರಸೂಸುವ ಬೆಳಕನ್ನು ವಂಶಾಭಿವೃದ್ಧಿಯ ಸಂಕೇತವಾಗಿ ಉಪಯೋಗಿಸುತ್ತವೆ. ದೊಡ್ಡ ದೊಡ್ಡ ಮೈದಾನಗಳಲ್ಲಿ ಗಂಡು ಹುಳುಗಳು ಹುಲ್ಲಿನಲ್ಲಿ ಕುಳಿತಿರುವ ಹೆಣ್ಣು ಹುಳುಗಳನ್ನು ಹುಡುಕುತ್ತ ಭೂಮಿಯಿಂದ ಒಂದೆರಡಡಿ ಮೇಲಿನಿಂದ ನಿಧಾನವಾಗಿ ಹಾರುತ್ತವೆ. ಇವು ಸುಮಾರು ಐದರಿಂದ ಸೆಕೆಂಡುಗಳಿಗೊಮ್ಮೆ ಬೆಳಗುತ್ತವೆ. ಗರ್ಭ ಧರಿಸಲು ಇಚ್ಛಿಸುವ ಹೆಣ್ಣು ಗಂಡಿನಿಂದ ಬರುವ ಸಂಕೇತಕ್ಕೆ ಪ್ರತಿಯಾಗಿ ಅದು ಬೆಳಗಿದ 2 ಸೆಕೆಂಡ್ ನಂತರ ತಾನೂ ಬೆಳಕನ್ನು ಚಿಮ್ಮುತ್ತದೆ. ಆಗ ಗಂಡು ಬಂದು ಆ ಹೆಣ್ಣಿನೊಂದಿಗೆ ಕೂಡಿಕೊಳ್ಳುತ್ತದೆ. ಹೆಚ್ಚಾಗಿ ಹೆಣ್ಣು ಗಂಡು ಹೊರಸೂಸುವ ಬೆಳಕಿನ ಬಣ್ಣದಲ್ಲೇನೂ ವ್ಯತ್ಯಾಸವಿರದಿದ್ದರೂ ಗಂಡಿನ ಬೆಳಕು ತುಸು ಹೆಚ್ಚು ಪ್ರಕಾಶಮಾನವಾಗಿರುತ್ತದೆ.

ನಾವು ಭಯಪಟ್ಟಾಗ ಅಥವಾ ಸಿಟ್ಟಿನಲ್ಲಿದ್ದಾಗ ಹೃದಯ ಬಡಿತ ಜೋರಾಗುವಂತೆಯೇ ಮಿಂಚು ಹುಳುವೊಂದಕ್ಕೆ ಅಡ್ಡಿ ಆತಂಕ ಉಂಟಾದರೆ ಅದು ಬೆಳಕನ್ನು ಹೊರಸೂಸುವ ಕಾಲಾವಕಾಶದ ನಡುವಿನ ಅಂತರ ಗಮನಾರ್ಹ ರೀತಿಯಲ್ಲಿ ಕಡಿಮೆಯಾಗುತ್ತದೆ. ಹೀಗಾಗಿಯೇ ನಾವೊಂದು ಮಿಂಚು ಹುಳುವನ್ನು ಕೈಯಲ್ಲಿ ಹಿಡಿದರೆ ಅದು ಬೇಗ ಬೇಗ ಬೆಳಕನ್ನು ಹೊರಸೂಸುತ್ತದೆ.

ಇದರ ಬೆಳಕನ್ನು ಹೊರಸೂಸುವ ಭಾಗದಲ್ಲಿ ಎರಡು ಬಗೆಯ ಅಂಗಾಂಶಗಳಿದ್ದು ಎರಡು ಪದರಿನಲ್ಲಿರುತ್ತವೆ. ಹೊರಪದರಿನಲ್ಲಿ ಒಂದಕ್ಕೊಂದು ಅಂಟಿಕೊಂಡಿರುವ ಚಿಕ್ಕ ಚಿಕ್ಕ ಕಣಗಳ ಪದರವಿರುತ್ತದೆ. ಒಳಪದರು ನುಣ್ಣನೆಯದಾಗಿದ್ದು ಬೆಳಕನ್ನು ಪ್ರತಿಫಲಿಸಲು ಸಹಾಯಕಾರಿಯಾಗಿದೆ. ಹೊರಪದರಿನ ಒಂದಕ್ಕೊಂದು ಅಂಟಿಕೊಂಡಿರುವ ಕಣಗಳ ನಡುವೆ ಸೂಕ್ಷ್ಮ ರಂಧ್ರಗಳ ತಂತು ಒಂದಕ್ಕೊಂದು ಸಂಪರ್ಕ ಹೊಂದಿರುತ್ತವೆ. ಈ ರಂಧ್ರಗಳು ಮುಚ್ಚುತ್ತವೆ. ರಂಧ್ರಗಳು ತೆರೆದಾಗ ಗಾಳಿಯಲ್ಲಿರುವ ಆಮ್ಲಜನಕ ಒಮ್ಮೆಲೆ ಒಳನುಗ್ಗುತ್ತದೆ. ತಕ್ಷಣ ಅಲ್ಲಿ ಬೆಳಕು ಕಂಡುಬರುತ್ತದೆ. ಆಮ್ಲಜನಕ ಮುಗಿದಾಗ ಬೆಳಕು ತಂತಾನೆ ಆರುತ್ತದೆ. ನಂತರ ಪುನಃ ಇದೇ ಕ್ರಿಯೆಯ ಪುನರಾವರ್ತನೆ.

ಹೊರಪದರಿನ ಚಿಕ್ಕ ಕಣಗಳನ್ನು ಹೊರತೆಗೆದು ಆಮ್ಲಜನಕದಲ್ಲಿ ಹಾಕಿಟ್ಟರೆ ಅವು ರೇಡಿಯಂನಂತೆ ಬೆಳಗುತ್ತವೆ. ಇವು ಬೆಳಗುವ ಸಮಯದಲ್ಲಿ ಅವುಗಳಲ್ಲಿ ಬೆಳಕನ್ನು ಉತ್ಪಾದಿಸುವ ಧಾತು ನಿಧಾನವಾಗಿ ಖರ್ಚಾಗುತ್ತದೆ. ಆಗ ಆ ಕಣಗಳು ಪ್ರಕಾಶ ರಹಿತವಾಗುತ್ತವೆ.

ಮಿಂಚು ಹುಳುಗಳಲ್ಲಿ ಈ ಬೆಳಕಿನ ಅವಶ್ಯಕತೆಯೂ ಏಕೆಂದು ಸ್ಪಷ್ಟವಾಗಿ ತಿಳಿಯುವುದಿಲ್ಲ. ಕೆಲ ಜಾತಿಯ ಮಿಂಚು ಹುಳುಗಳಲ್ಲಿ ಇದು ವಂಶಾಭಿವೃದ್ಧಿಗೆ ಸಹಾಯಕ ಹೌದು. ಆದರೆ ಹೊಳೆಯುತ್ತಲೇ (ಬೆಳಕನ್ನು ಹೊರಸೂಸುತ್ತಲೇ) ಇರುವ ಮಿಂಚು ಹುಳುಗಳ ಜಾತಿವೊಂದಿದೆ. ಇವುಗಳಲ್ಲಿ ಈ ಬೆಳಕಿನ ಉಪಯೋಗ ವಂಶಾಭಿವೃದ್ಧಿ ಖಂಡಿತ ಅಲ್ಲ. ಇನ್ನು ಕೆಲಜಾತಿಯ ಮಿಂಚು ಹುಳುಗಳು ಹಗಲಿನ ವೇಳೆಯಲ್ಲಿ ಕೂಡುತ್ತವೆ.

ಸತ್ಯವೇನೆಂದರೆ ಈ ಬೆಳಕಿನಿಂದ ಅವುಗಳಿಗೆ ಲಾಭಕ್ಕಿಂತ ಹಾನಿಯೇ ಹೆಚ್ಚು. ಈ ಬೆಳಕಿನ ಕಾರಣದಿಂದಾಗೇ ಇವು ದೊಡ್ಡ ಪ್ರಮಾಣದಲ್ಲಿ ಕಪ್ಪೆಯಂತಹ ಪ್ರಾಣಿಗಳಿಗೆ ಸುಲಭವಾಗಿ ತುತ್ತಾಗುತ್ತವೆ. (ಮಿಂಚು ಹುಳುಗಳ ಕಾಲದಲ್ಲಿ ಕಪ್ಪೆಯನ್ನು ಕೊಯ್ದು ಪರೀಕ್ಷಿಸಿದರೆ ಅದರ ಜಠರ ಮತ್ತು ಕರುಳಿನಲ್ಲಿ 'Floro Scope' ಕಂಡು ಬರುವುದರಿಂದ ಇದು ಸಿದ್ಧವಾಗುತ್ತದೆ.)

ಜಮೈಕಾದಲ್ಲಿ ಕಾಣಸಿಗುವ ಹುಳುಗಳ ಬೆಳಕು ಸುಮಾರು ಅರ್ಧ ಮೈಲು ದೂರದಿಂದಲೇ ಕಾಣಬಹುದು. ಗುಂಪುಗುಂಪಾಗಿ ಇವು ಮರಗಳ ಮೇಲೆ ಕುಳಿತವೆಂದರೆ ಮರವೇ ಹೊತ್ತಿ ಉರಿದಂತೆ ಭಾಸವಾಗುತ್ತದೆ.

ಜಗತ್ತಿನ ಅತೀ ದೊಡ್ಡ ಮಿಂಚು ಹುಳುಗಳು

ಸಿಯಾಮಿನಲ್ಲಿ ಕಂಡು ಬರುತ್ತವೆ. ಅಲ್ಲಿನ Mangrove ಜಾತಿಯ Fon lampo ಎಂಬ ಮರಗಳ ಮೇಲೆ ಹೆಚ್ಚಾಗಿ ಕುಳಿತುಕೊಳ್ಳುವ ಇವು ನಿಮಿಷಕ್ಕೆ 120 ಬಾರಿ ಬೆಳಗುತ್ತದೆ. ಇವುಗಳ ವೈಶಿಷ್ಟ್ಯವೇನೆಂದರೆ ಇವೆಲ್ಲ ಒಂದೇ ಸಲಕ್ಕೆ (ಚಿಕ್-ಪುಕ್ ಬಲ್ಬುಗಳಂತೆ) ಬೆಳಗಿ ಒಂದೇ ಸಲ ನಂದುತ್ತವೆ. ಹೀಗೆ ನಂದಿದಾಗ ಎಲ್ಲೆಡೆ ಗಾಢಾಂಧಕಾರ ಕವಿದರೆ ಕ್ಷಣಾರ್ಧದಲ್ಲಿ ಸರ್ಚ್ ಲೈಟಿನಂತೆ ಮತ್ತೇ ಬೆಳಗಿ ಎಲ್ಲೆಡೆ ಬೆಳಕು ಪಸರಿಸುತ್ತದೆ. ಜುಲೈಯಿಂದ ಸೆಪ್ಟೆಂಬರ್ ಅಂತ್ಯದವರೆಗೆ ದಿನಾಲೂ ರಾತ್ರಿ ಎಂಟು ಗಂಟೆಯಿಂದ ಬೆಳಗಿನ ಮೂರು ಗಂಟೆಯವರೆಗೆ ಈ ನೆಳಲು ಬೆಳಕಿನ ಆಟ ನಡೆಯುತ್ತದೆ. Fon lampo ಮರಗಳನ್ನೇ ಇವುಗಳು ಕುಳಿತುಕೊಳ್ಳಲು ಏಕೆ ಆರಿಸುತ್ತವೆಂದರೆ ಅವುಗಳ ತೊಗಟೆ ನುಣ್ಣನೆಯದಾಗಿದ್ದು ಮೊಟ್ಟೆ ಇಡಲು ಸೂಕ್ತವಾಗಿರುತ್ತವೆ. ಮೊಟ್ಟೆ ಹಾಕಿ ಅವೆಲ್ಲೋ (ವಲಸೆ!) ಹೋಗಿ ಬಿಡುತ್ತವೆ. ನಂತರ ಮೊಟ್ಟೆ ಒಡೆದು ಹೊರ ಬಂದ ಮರಿಗಳು ತಮ್ಮದೇ ಒಂದು ಹೊಸ ಗುಂಪು ಕಟ್ಟಿಕೊಳ್ಳುತ್ತವೆ.

ಹೀಗೆ ವೈಜ್ಞಾನಿಕವಾಗಿ ಈಗಲೂ ಕೊಂಚ ಮಟ್ಟಿಗೆ ಒಗಟಾಗಿದ್ದರೂ ತಮ್ಮ ಪ್ರಕೃತಿದತ್ತ ಬೆಳಕಿನಿಂದ ನಮ್ಮೆಲ್ಲರ ಕಣ್ಮನ ಸೆಳೆಯುವ ಈ ನಿರುಪದ್ರವಿ ಕೀಟಗಳು ಜಪಾನಿಯರ ಕಲ್ಪನೆಯಂತೆ ನಿಜಕ್ಕೂ ಶಾಂತಿದ್ಯೋತಕವೆನ್ನಬಹುದಲ್ಲವೇ? ●

(ವಿವಿಧ ಮೂಲಗಳಿಂದ)

ಜಗತ್ತಿನಲ್ಲಿಯೇ ಅತ್ಯಂತ ಹಳೆಯ ಮುದ್ರಿತ ಗ್ರಂಥ

ಜಗತ್ತಿನ ಪ್ರಥಮ ಮುದ್ರಿತ ಪುಸ್ತಕವೆಂದರೆ ಡುಂಹಾಂಗ್‌ದಲ್ಲಿ ಸಿಕ್ಕಿರುವ ಬೌದ್ಧ ಗ್ರಂಥ ''ವಜ್ರ ಸೂತ್ರ''. ಈಗ ಇದು ಬ್ರಿಟಿಷ್ ಮ್ಯುಜಿಯಮ್‌ದಲ್ಲಿ ಸಿಡಿದು ಬಿಡಿ ಬಿಡಿಯಾಗಿ ಹೋಗತೊಡಗಿದೆ. ಸೆಸೆಕ್ಸ ವಿಶ್ವವಿದ್ಯಾಲಯ ರಾಸಾಯನಿಕ ತಜ್ಞರಾದ ಕೆನೆತ್ ಸೆಡಾನ್ ಹಾಗೂ ಫಿಯೋನಾ ಜೋನ್ಸ್ ಅದನ್ನು ರಕ್ಷಿಸುವ ಉಪಾಯ ಹುಡುಕಿದ್ದಾರೆ.

ಈ ''ವಜ್ರ ಸೂತ್ರ'' 1907ರಲ್ಲಿ ಶೋಧಗೊಂಡಿತು. ಡುಂಹಾಂಗ್ ಬಳಿಯ ಸಾವಿರ ಬುದ್ಧರ ಗುಹೆಯ ಬಳಿ ಸರ್ ಆರಿಯಲ್ ಸ್ಟೀನ್‌ರಿಗೆ ಸಿಕ್ಕಿತು. ಅದು ಐದು ಮೀಟರ್ ಉದ್ದದ ಸುರುಳಿಯಾಗಿದೆ. ಹಿಸೀನ್ ವಂಗ್‌ನ ಆಳ್ವಿಕೆಯ 9ನೇ ವರ್ಷದ ನಾಲ್ಕನೇ ಚಂದ್ರನ 15ನೇ ದಿನ, ವ್ಯಾಂಗ್ ಚೀ ತನ್ನ ತಂದೆ-ತಾಯಿಗಳಿಗೆ ಶುಭಾಶೀರ್ವಾದ ಸಿಗಲೆಂದು, ಸಾರ್ವತ್ರಿಕ ಹಂಚಿಕೆಗೋಸುಗ ಭಕ್ತಿಪೂರ್ವಕವಾಗಿ ಸಿದ್ಧಪಡಿಸಿದನು ಎಂದು ಅದರಲ್ಲಿ ಬಂದಿದೆ. ಆಧುನಿಕ ಪಂಚಾಂಗದ ಮೇರೆಗೆ ಹೇಳುವುದಾದರೆ ಅದನ್ನು ಕ್ರಿ.ಶ. 868ರಲ್ಲಿ ಮುದ್ರಿಸಲಾಯಿತು.

ಡುಂಹಾಂಗ್ ಸಂಗ್ರಹದಲ್ಲಿರುವ 14 ಸಾವಿರ ಬೇರೆ ಬೇರೆ ವಸ್ತುಗಳಲ್ಲಿ ''ವಜ್ರ ಸೂತ್ರ'' ಒಂದು. ಈ ಮುಂಚೆ ಅದನ್ನು ಕಾಯ್ದಿಡಬೇಕೆಂದವರು ಅದನ್ನು ಬಲಪಡಿಸಲು ಅದರ ಹಿಂದೆ ಕಾಗದವನ್ನು ಅಂಟಿಸಿದರು. ಆದರೆ ಅದನ್ನು ಸುತ್ತುವಾಗ ಕಾಗದ ಒಡೆಯತೊಡಗಿತು. ಕಾಲ ಕಳೆದಂತೆ ಆ ಸುರುಳಿ ಇನ್ನೂ ಕೆಟ್ಟಿದೆ. ಇದರ ಪರಿಣಾಮವಾಗಿ ಈಗ ಬ್ರಿಟಿಷ್ ಮ್ಯುಜಿಯಮ್‌ದವರು ಅದಕ್ಕೆ ಅಂಟಿಸಲಾದ ಕಾಗದವನ್ನು ತೆಗೆದು ಹಾಕಬೇಕೆಂದಿದ್ದಾರೆ. ನೀರು, ಅಂಟನ್ನು ತೆಗೆದು ಹಾಕಲು ಸಹಾಯಕವೆನಿಸುವುದೆನ್ನುವುದು ರಾಸಾಯನಿಕ ಪಂಡಿತರಿಗೆ ಗೊತ್ತಿದೆ. ಆದರೆ, ನೀರು ಈ ದಸ್ತಾವೇಜಿನಲ್ಲಿ ಉಪಯೋಗಿಸಿದ ಮೂಲ ಬಣ್ಣವನ್ನು ಅಳಿಸಬಹುದು. ಈ ''ವಜ್ರ ಸೂತ್ರ'' ಬರೆಯುವುದರಲ್ಲಿ ಹಳದಿ ಬಣ್ಣವನ್ನು ಉಪಯೋಗಿಸಿದ್ದಾರೆ.

(ಸಂಗ್ರಹ) ಶಂಕರಗೌಡ.ಯ.ಪಾಟೀಲ

ಭೂಮಿಯನ್ನು ಬೆಂಬಿಡದ ಬವಣೆ

● ಎಂ.ಪಿ.ಚಂದ್ರಶೇಖರ

ಅಮೆರಿಕದ 'ಟೈಂ' ವಾರಪತ್ರಿಕೆ ಪ್ರತಿವರ್ಷದಂತೆ ವರ್ಷದ ವ್ಯಕ್ತಿಯನ್ನು ಗುರುತಿಸುವ ಬದಲು, 1989ರಲ್ಲಿ ಪೃಥ್ವಿಯನ್ನು ವರ್ಷದ ಗ್ರಹವಾಹಿ ಗುರುತಿಸಿ, ''ನಾವು ಭೂಮಿಯ ಮೇಲೆ ಏನು ಮಾಡುತ್ತಿದ್ದೇವೆ?'' ಎಂಬ 35 ಪುಟಗಳ ವರದಿಯನ್ನು ಪ್ರಕಟಿಸಿತು. ಪರಿಸರದ ಮೇಲೆ ಮೂರು ದಿನಗಳ ವಿಚಾರಗೋಷ್ಠಿಯನ್ನು ನಡೆಸಲು ತಜ್ಞರಿಗೆ ಆಹ್ವಾನವನ್ನು ಕಳುಹಿಸಿ, ಪತ್ರಿಕೆಯ ಸಿಬ್ಬಂದಿಯೊಂದಿಗೆ, ಈ ವರದಿಯನ್ನು ತಯಾರಿಸಿ ಪ್ರಕಟಿಸಿತು. ಜನಸಾಮಾನ್ಯರು ಈ ವರದಿಯನ್ನು (ಲೇಖನಗಳನ್ನು) ಓದಿ ಮರೆತಿರಬಹುದು.

1989ರ 'ಟೈಂ' ಪತ್ರಿಕೆಯ, ವಿಚಾರಗೋಷ್ಠಿಯಿಂದ ಹೊರಬಂದ ಲೇಖನಗಳನ್ನು ಸಮರ್ಥಿಸುವಂತೆ, ಜನವರಿ 11, 1991ರಂದು ಬಹುತೇಕ ಪತ್ರಿಕೆಗಳು ಯು.ಪಿ.ಐ.ನ ವರದಿಯ ಮೇರೆಗೆ, 1990ರಲ್ಲಿ ಭೂಮಿಯು ಅತಿ ಹೆಚ್ಚು ಉಷ್ಣಾಂಶವನ್ನು ದಾಖಲು ಮಾಡಿದೆ ಎಂದು ಪ್ರಕಟಿಸಿದವು. ಪ್ರಪಂಚದ ಎಲ್ಲಾ ಮೂಲೆಗಳ ಸುಮಾರು 2000 ಹವಾಮಾನ ಕಚೇರಿಗಳಲ್ಲಿ ದಾಖಲಾದ ಉಷ್ಣತೆಯ ಪ್ರಕಾರ, 1990ರಲ್ಲಿ ಸರಾಸರಿ ಉಷ್ಣತೆ 59.80 ಡಿಗ್ರಿ ಫ್ಯಾರನ್ ಹೀಟ್ ಅಥವಾ 15.40 ಡಿಗ್ರಿ ಸೆಲ್ಸಿಯಸ್. ಮುಂಬರುವ ವರ್ಷಗಳಲ್ಲಿ ಉಷ್ಣತೆಯು ಇನ್ನೂ ಹೆಚ್ಚುವ ಸೂಚನೆ ಇದೆ ಎಂದು ಪರಿಸರ ತಜ್ಞರ ಅಭಿಪ್ರಾಯ ಹೇಳಿದೆ.

ಪರಿಸರ ಮಾಲಿನ್ಯದಿಂದ ಹವಾಮಾನದಲ್ಲಿ ಬಹಳ ಏರುಪೇರಾಗಿದೆ. ನಾಲ್ಕು ದಿನ ಬಿಸಿಲಿದ್ದರೆ, ಮತ್ತೆ ನಾಲ್ಕು ದಿನ ಚಳಿ, ಮುಂದಿನ ನಾಲ್ಕು ದಿನ ಮೋಡದಿಂದ ಕವಿದ ಹವಾಮಾನ. ನಿರ್ದಿಷ್ಟ ಕಾಲದ ಋತುಮಾನಗಳನ್ನು ಪುಸ್ತಕದಲ್ಲಿ ಮಾತ್ರ ಓದಬಹುದಾಗಿದೆ.

ಹವಾಮಾನವೆಂದ ಕೂಡಲೇ, ನಮಗೆ ಬಿಸಿಲು, ಮಳೆ, ಚಳಿ, ಮೋಡಗಳು, ಗಾಳಿಯ ನೆನಪಾಗುತ್ತದೆ. ಪೃಥ್ವಿ ಹುಟ್ಟಿದ 4600 ಮಿಲಿಯ ವರ್ಷಗಳ ಹಿಂದೆ ಉತ್ತರ ದೇಶಗಳು ಮಂಜಿನಿಂದ ತುಂಬಿ, ಸರಾಸರಿ ಹವಾಗುಣ, ಇಂದಿಗಿಂತಲೂ ಹೆಚ್ಚು ಚಳಿಯಿಂದಿರುತ್ತಿತ್ತು. ಪರಿಸರ ತಜ್ಞರಿಗೆ ಹವಾಗುಣದಲ್ಲಿ ಯಾಕೆ ಹೆಚ್ಚಿನ ಏರುಪೇರು ಆಗುತ್ತಿದೆ ಎನ್ನುವುದು ದೊಡ್ಡ ಸಮಸ್ಯೆಯಾಗಿದೆ. ಅದಕ್ಕೆ ಅವರಲ್ಲಿ ಖಚಿತವಾದ ಉತ್ತರ ಇಲ್ಲ. ಅವರುಗಳು ಇಷ್ಟು ಮಾತ್ರ ನಿರ್ದಿಷ್ಟವಾಗಿ ಹೇಳಬಲ್ಲರು, ಮುಂದಿನ ವರ್ಷಗಳಲ್ಲಿನ ಹವಾಗುಣ ಮಾನವ ಜನಾಂಗಕ್ಕೆ ಸಂಕಟಗಳನ್ನು ತರುತ್ತದೆ. ಈಗಾಗಲೇ ನಾವು 1000 ವರ್ಷಗಳ ಹಿಂದೆ ಇದ್ದ ಬಿಸಿಲಿಗಿಂತಲೂ ಹೆಚ್ಚಿನ ಬಿಸಿಲನ್ನು ಅನುಭವಿಸುತ್ತಿದ್ದೇವೆ.

ಹವಾಮಾನವನ್ನು ನಿಯಂತ್ರಿಸುವಲ್ಲಿ, ಗಾಳಿ,

ಸೂರ್ಯ, ಭೂಮಿ ಮತ್ತು ನೀರು ಮಹತ್ತರ ಪಾತ್ರವನ್ನು ಹೊಂದಿದೆ.

ಗಾಳಿ :

ಭೂಮಿಯ ಸುತ್ತಲು ವಾಯುಮಂಡಲವಿದೆ. ಭೂಮಿಯ ಗುರುತ್ವಾಕರ್ಷಣೆಯಿಂದ ಭೂಮಿ ಈ ಗಾಳಿಯನ್ನು ತನ್ನೆಡೆಗೆ ಸೆಳೆದಿಟ್ಟಿದೆ.

ಶುದ್ಧ ಗಾಳಿಯಲ್ಲಿ ವಾಸನೆಯಿಲ್ಲದ, ಕಣ್ಣಿಗೆ ಕಾಣಿಸದ ಅನಿಲಗಳು ಬಹಳ ಇವೆ. ಇದರಲ್ಲಿ ಹೆಚ್ಚಿನ ಭಾಗ ನೈಟ್ರೋಜನ್ (78 %) ಮತ್ತು ಆಕ್ಸಿಜನ್ (21 %)ನಿಂದ ಕೂಡಿರುತ್ತದೆ. ಇದಲ್ಲದೆ ಕಡಿಮೆ ಪ್ರಮಾಣದಲ್ಲಿ ಕಾರ್ಬನ್ ಡೈ ಆಕ್ಸೈಡ್ (0.03 %) ಆರೆಗಾನ್, ನಿಯೋನ್, ಹೆಲಿಯಂ, ಹೈಡ್ರೋಜನ್, ಧೂಳಿನ ಕಣಗಳು, ಹೊಗೆ, ನೀರಿನ ಹನಿ ಮತ್ತು ಮಂಜಿನ ಹರಳುಗಳು ಸಹ ಇರುತ್ತವೆ.

ಸಮುದ್ರಮಟ್ಟದಿಂದ 10-15 ಕಿ.ಮೀ ಎತ್ತರದವರೆಗೆ ಇರುವ ಟ್ರೋಪೋಸ್ಪಿಯರ್ (ವಾಯುಮಂಡಲದ ಒಂದು ಪದರು)ನಿಂದ ನಾವು ಉಸಿರಾಡುತ್ತೇವೆ. ಈ ಎತ್ತರದ ಒಳಗಡೆಯೇ ವಿಮಾನಗಳು ಸಹ ಓಡಾಡುತ್ತವೆ. ಈ ಪದರದಲ್ಲಿಯೇ ನೀರಿನ ಆವಿಯಿಂದ ಮೋಡ ಮತ್ತು ಮಂಜು ಹನಿಗಳು ರೂಪುಗೊಳ್ಳುತ್ತವೆ. ಈ ಪದರದಲ್ಲಿ ವ್ಯತ್ಯಾಸ ಉಂಟಾದಾಗ, ವಾತಾವರಣದಲ್ಲಿ ಬದಲಾವಣೆಯಾಗುತ್ತದೆ.

ಟ್ರೋಪೋಸ್ಪಿಯರ್ ಪದರು ಒಂದರಿಂದಲೇ ನಾವುಗಳು, ಉಸಿರಾಡಬಹುದಾದರೂ ಅದಕ್ಕಿಂತ ಮೇಲಿರುವ ಪದರಗಳಿಂದಲೂ ನಮಗೆ ಉಪಯೋಗವಿದೆ. ಇದರ ಮೇಲೆ ಸ್ಟ್ರಾಟೋಸ್ಪಿಯರ್, ಮೆಸೋಸ್ಪಿಯರ್, ಥರ್ಮಾಸ್ಪಿಯರ್ ಮತ್ತು ಎಕ್ಸೋಸ್ಪಿಯರ್, ನಂತರ ವಾಯುಮಂಡಲದ ಅಂತ್ಯ.

ನಮ್ಮ ಸುತ್ತಲೂ ಇರುವ ಗಾಳಿಗೆ ತೂಕವಿದೆ. ನಾವು ಭೂಮಿಯ ಮೇಲೆ ನಿಂತಾಗ, ಗಾಳಿಯು ನಮ್ಮನ್ನು 90 ಟನ್ ತೂಕದಿಂದ ತಳ್ಳುತ್ತದೆ. ನಮ್ಮ ದೇಹದ ಒಳಗಿನ ತೂತಿನಿಂದ ಈ ಗಾಳಿಯ ತೂಕಕ್ಕೆ ನಾವು ತಳ್ಳಲ್ಪಡುವುದಿಲ್ಲ. ಮಾನವ, ಬೇರೆ ಪ್ರಾಣಿಗಳ ಹಾಗೇ ಈ ರೀತಿಯಾದ ಗಾಳಿಯ ಒತ್ತಡಕ್ಕೆ ಹೊಂದಿಕೊಂಡಿದ್ದಾನೆ.

ಗಾಳಿಯ ಒತ್ತಡ, ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಬೇರೆಯಾಗಿರುತ್ತದೆ. ಇದಕ್ಕೆ ಕಾರಣ, ಉಷ್ಣಾಂಶದ ಏರುಪೇರು. ಗಾಳಿಯು ಬಿಸಿಯಾದಾಗ, ಅದರಲ್ಲಿರುವ ಕಣಗಳು ಬಹಳ ವೇಗವಾಗಿ ಚಲಿಸುತ್ತವೆ. ಅದು ಒಂದಕ್ಕೊಂದು ಡಿಕ್ಕಿ ಹೊಡೆದು ಗಾಳಿಯು ಹರಡುವಂತಾಗುತ್ತದೆ. ಗಾಳಿಯು ಹರಡಿದಂತೆಲ್ಲಾ, ಅದರ ಕಣಗಳು ಸಹ ಹರಡಿ, ಒಂದೇ ಜಾಗದಲ್ಲಿ ಕೆಲವೇ ಕೇಂದ್ರ ಕಣಗಳು ಮಾತ್ರ ಉಳಿಯುತ್ತವೆ. ಇದರಿಂದಾಗಿ ಗಾಳಿಯ ತೂಕ ಹಗುರಾಗಿ ಭೂಮಿಯ ಮೇಲೆ ಒತ್ತಡ ಕಡಿಮೆಯಾಗುತ್ತದೆ. ಇದಕ್ಕೆ ವಿರುದ್ಧವಾಗಿ ತಣ್ಣನೆಯ ಗಾಳಿಯಲ್ಲಿ ಕಣಗಳು ಒಂದಕ್ಕೊಂದು ಹತ್ತಿರವಿದ್ದು ಹೆಚ್ಚಿನ ಒತ್ತಡವನ್ನು ಭೂಮಿಯ ಮೇಲೆ ಹೇರುತ್ತದೆ.

ಸೂರ್ಯ :

ಸೂರ್ಯನು ತನ್ನ ಶಕ್ತಿಯನ್ನು ಎಲ್ಲಾ ದಿಕ್ಕುಗಳಲ್ಲಿ ಪಸರಿಸುತ್ತಾನೆ. ಈ ಶಕ್ತಿಯು ಹಲವು ವಿಧವಾದ ಕಿರಣಗಳ ಅಥವಾ ಅಲೆಗಳ ಮುಖಾಂತರ ಸಂಚರಿಸುತ್ತದೆ. ಕೆಲವು ಕಿರಣಗಳನ್ನು ನಾವು ಬೆಳಕಿನಂತೆ ಕಾಣುತ್ತೇವೆ. ಕೆಲವನ್ನು ಬಿಸಿಯೆಂದು ಅನುಭವಿಸುತ್ತೇವೆ. ಇನ್ನು ಕೆಲವು ಕಿರಣಗಳನ್ನು ನಾವು ನೋಡುವುದೇ ಇಲ್ಲ, ಅನುಭವಿಸುವುದೂ ಇಲ್ಲ. ಉದಾಹರಣೆಗೆ, ಎಕ್ಸರೇ ಕಿರಣಗಳು ಮತ್ತು ಅಲ್ಟ್ರಾ ವೈಯಲೆಟ್ ಕಿರಣಗಳು. ಸೂರ್ಯನ 1/2,00,00,000ರಷ್ಟು ಶಕ್ತಿ ಮಾತ್ರ, ಭೂಮಿಯನ್ನು ತಲುಪುತ್ತದೆ. ವಾಯುಗುಣದ ಮೇಲೆ ಪರಿಣಾಮ ಮಾಡಲು ಮತ್ತು ಹವಾಮಾನವನ್ನು ಸರಿತೂಗಿಸಲು ಇಷ್ಟು ಬಿಸಿಲು ಸಾಕು.

ಭೂಮಿಯನ್ನು ಸೇರುವ ಮೊದಲು, ಸೂರ್ಯನ ಕಿರಣಗಳು ವಾಯುಮಂಡಲದ ಅನಿಲಗಳನ್ನು ಎದುರಿಸುತ್ತವೆ. ಈ ಅನಿಲಗಳು;

1) ಸೂರ್ಯನ ಕಿರಣಗಳನ್ನು ತಮ್ಮ ಮೂಲಕ ಹಾಯ್ದು ಹೋಗಲು ಬಿಡುತ್ತವೆ.
2) ಕೆಲವು ಕಿರಣಗಳನ್ನು ತಮ್ಮಲ್ಲಿಯೇ ಕರಗಿಸಿ

ಕೊಳ್ಳುತ್ತವೆ.

3) ಸೂರ್ಯನ ಶಕ್ತಿಯನ್ನು ಬಾಹ್ಯಾಕಾಶಕ್ಕೆ ವಾಪಸ್ಸು ಕಳುಹಿಸುತ್ತವೆ.

ವಾಯುಮಂಡಲದೆಡೆ ನುಗ್ಗಿ ಬರುವ, ಸೂರ್ಯ ಶಕ್ತಿಯಲ್ಲಿ ಅರ್ಧ ಮಾತ್ರ ಭೂಮಿಯನ್ನು ಮುಟ್ಟುತ್ತದೆ. ಈ ರೀತಿಯಾಗಿ ಬಂದ ಸೂರ್ಯ ಶಕ್ತಿಯು ಯಾವ ಪ್ರದೇಶವನ್ನು ಸೇರುತ್ತದೆಯೋ ಅದರ ಮೇಲೆ ಅವಲಂಬಿಸಿ ಭೂಮಿಯನ್ನು ಸೇರುತ್ತದೆ ಅಥವಾ ವಾಯುಮಂಡಲಕ್ಕೆ ವಾಪಸ್ಸು ಹೋಗುತ್ತದೆ.

ಸೂರ್ಯನಿಂದ ಬರುವ ಎಲ್ಲಾ ಶಕ್ತಿಯನ್ನು ಭೂಮಿ ಪಡೆದರೆ, ಭೂಮಿಯು ಇನ್ನೂ ಹೆಚ್ಚು ಬಿಸಿಯಾಗುತ್ತದೆ. ಇದು ಆಗಲೂ ಸಾಧ್ಯವಿಲ್ಲ. ಕಾರಣ, ಭೂಮಿಯು ತನ್ನ ಮೇಲೆ ಬೀಳುವ ಸೂರ್ಯನ ಶಕ್ತಿಯನ್ನು ವಾಪಸ್ಸು ಕಳಿಸುತ್ತದೆ. ವಾತಾವರಣದಲ್ಲಿರುವ ನೀರಿನ ಆವಿ ಮತ್ತು ಕಾರ್ಬನ್ ಡೈ ಆಕ್ಸೈಡ್ ಈ ಬಿಸಿಯನ್ನು ತಡೆ ಹಿಡಿಯುತ್ತದೆ.

ಭೂಮಿ :

ವಾತಾವರಣದಲ್ಲಿ ನಿಂತು ಭೂಪ್ರದೇಶವನ್ನು ಬೆಚ್ಚನೆ ಇಡುವ ಸೂರ್ಯನ ಬಿಸಿಯನ್ನು ಹಸಿರು ಮನೆಯ ಶಾಖಕ್ಕೆ ಹೋಲಿಸಬಹುದು. ಹಸಿರು ಮನೆಯ ಗಾಜು, ಸೂರ್ಯನ ಶಕ್ತಿಯನ್ನು (ಬಿಸಿಯನ್ನು) ತನ್ನ ಮೂಲಕ ಹೋಗಲು ಬಿಟ್ಟರೂ, ಸ್ವಲ್ಪ ಬಿಸಿಯನ್ನು ಮತ್ತೆ ಆಚೆ ಹೋಗಲು ಬಿಡುವುದಿಲ್ಲ. ಇದರಿಂದಾಗಿ ಹಸಿರು ಮನೆಯು ಬೆಚ್ಚಗಿರುವಂತಾಗುತ್ತದೆ. ಮತ್ತು ಗಿಡಗಳನ್ನು ಬೆಳೆಯಲು ಸಹಕಾರಿಯಾಗುತ್ತದೆ. ಈ ಹಸಿರು ಮನೆಯ ಪರಿಣಾಮದಿಂದ ಭೂಮಿಯು ವಾಸಿಸಲು ಯೋಗ್ಯಸ್ಥಳವಾಗಿದೆ. ಇದಲ್ಲದೆ ವಾಯುಮಂಡಲದ ಟ್ರೋಪೋಸ್ಫಿಯರ್ ಪದರು ಮತ್ತು ಸ್ಟ್ರಾಟೋಸ್ಫಿಯರ್ ಮಧ್ಯೆ ಇರುವ ಓಜೋನ್ ಪದರು ಸೂರ್ಯನಿಂದ ಬರುವ ಅಪಾಯಕಾರಿ ಕಿರಣಗಳನ್ನು ತಡೆದು ಭೂಮಿಯ ಮೇಲಿರುವ ಮಾನವರನ್ನು ಪ್ರಾಣಿಗಳನ್ನು ರಕ್ಷಿಸುತ್ತಿದೆ. ಈ ಓಜೋನ್ ಪದರು ಒಂದು ನಿಸರ್ಗ ನಿರ್ಮಿತ ರಕ್ಷಾಕವಚವಾಗಿದೆ.

ಭೂಮಿಯು ಒಂದೇ ಸ್ಥಳದಿಂದ ಅಂದರೆ, ಸೂರ್ಯನಿಂದ ಶಕ್ತಿಯನ್ನು ಪಡೆಯುತ್ತಿರುವಾಗ, ಪ್ರಪಂಚದ ಎಲ್ಲಾ ಭಾಗಗಳಲ್ಲಿ ಒಂದೇ ರೀತಿಯ ವಾತಾವರಣವೇಕಿಲ್ಲ? ಒಂದು ಪ್ರದೇಶದಲ್ಲಿ ಮಂಜುಗಡ್ಡೆ, ಇನ್ನೊಂದರಲ್ಲಿ ಮರುಭೂಮಿ ಯಾಕೆ? ಕಾರಣ, ಎಲ್ಲಾ ಭಾಗಗಳಲ್ಲಿ ಸೂರ್ಯನ ಶಕ್ತಿಯನ್ನು ಸಮನಾಗಿ ಪಡೆಯುತ್ತಿಲ್ಲ, ಯಾಕೆ? ಕಾರಣ, ಭೂಮಿಯೂ ಗುಂಡಾಗಿದ್ದು, ಸೂರ್ಯನ ಸುತ್ತಲೂ ತನ್ನದೇ ಆದ ಪಥದಲ್ಲಿ ಸಂಚರಿಸುತ್ತದೆ.

ಭೂಮಿ ಗುಂಡಾಗಿರುವುದರಿಂದ, ಸೂರ್ಯ ಶಕ್ತಿಯೂ ಸಮನಾಗಿ ಭೂಮಿಯ ಮೇಲೆ ಬೀಳುವುದಿಲ್ಲ. ಭೂಮಿಯ ಮೇಲಿನ ಎಲ್ಲಾ ಸ್ಥಳಗಳಲ್ಲಿ ಸೂರ್ಯನ ಪ್ರಕಾಶವು ಅಷ್ಟೇ ಘಂಟೆಗಳು ಬಿದ್ದರೂ ಸಹ, ಭೂಮಧ್ಯರೇಖೆ ಮತ್ತು ಧೃವದ ಮಧ್ಯೆ ಇರುವ ಭಾಗದಲ್ಲಿ ಸೂರ್ಯನ ಶಕ್ತಿಯ ಪರಿಣಾಮ ಸಮನಾಗಿರುವುದಿಲ್ಲ. ಈ ರೀತಿಯಾದ ಅಸಮಾನತೆಯು ಭೂಮಿಯ ಬಿಸಿಯಿಂದ ಗಾಳಿಯಲ್ಲಿ ಉಷ್ಣಾಂಶ ಮತ್ತು ಒತ್ತಡ ವ್ಯತ್ಯಾಸವಾಗಿ, ಹಲವೆಡೆ ಸುಂಟರಗಾಳಿ ಬೀಸುತ್ತದೆ.

ಭೂಮಧ್ಯರೇಖೆಯ ಹತ್ತಿರವಿರುವ ಪ್ರದೇಶಗಳು ಪ್ರತಿದಿನ ಸಮನಾದ ಸೂರ್ಯನ ಬೆಳಕನ್ನು ಪಡೆಯುತ್ತವೆ. ಭೂಮಿ ಗುಂಡಾಗಿದ್ದು, ಸೂರ್ಯನ ಸುತ್ತ ತಿರುಗುವುದರಿಂದ, ಪ್ರಪಂಚದಲ್ಲಿ ಕೆಲವು ಪ್ರದೇಶಗಳು, ಸೂರ್ಯನ ಬೆಳಕನ್ನು ವರ್ಷದ ಎಲ್ಲ ಕಾಲದಲ್ಲೂ ಸಮನಾಗಿ ಪಡೆಯುವುದಿಲ್ಲ. ದಕ್ಷಿಣಧೃವವು ಸೂರ್ಯನ ಕಡೆ ತಿರುಗಿದಾಗ, ದಕ್ಷಿಣ ಖಗೋಳದಲ್ಲಿ ವಸಂತ ಕಾಲ ಮತ್ತು ಬಿಸಿಲು ಇರುತ್ತದೆ. ಈ ಸಮಯದಲ್ಲಿ ಸೂರ್ಯನ ಬೆಳಕನ್ನು ನೇರವಾಗಿ ಪಡೆಯುವುದರಿಂದ ಹಗಲು ಜಾಸ್ತಿಯಾಗಿರುತ್ತದೆ. ಉತ್ತರ ಧೃವ ಸೂರ್ಯನ ಕಡೆ ತಿರುಗಿದಾಗ ಇದೇ ರೀತಿಯಾಗುತ್ತದೆ.

ನೀರು :

ನೀರು ಗಾಳಿಯಲ್ಲಿ ಸದಾಕಾಲವಿರುತ್ತದೆ. ಕೆಲವು ಸಲ ಅದು ಅನಿಲವಾಗಿರುತ್ತದೆ, ನೀರಿನ ಆವಿಯಾಗಿರುತ್ತದೆ, ಮತ್ತೆ ಕೆಲವು ಸಲ ದ್ರವಣ ರೂಪದಲ್ಲಿರುತ್ತದೆ. ನೀರಿನ ಹನಿ ಮತ್ತು ಮಳೆಯ ದೊಡ್ಡ ಹನಿಯಾಗಿರಬಹುದು. ಇನ್ನೂ ಕೆಲವು ಸಲ ಘನ ವಸ್ತು ಮಂಜು ಹರಳು ಅಥವಾ ತೆಳುವಾದ ಪರೆಯಾಗಿರಬಹುದು.

ಗಾಳಿಯು ಬೆಚ್ಚಗೆ ಮತ್ತು ಪಸೆಯಾಗಿದ್ದಾಗ, ಅದರಲ್ಲಿ ನೀರಿನ ಆವಿಯಾಗಿರುವುದು ಗೊತ್ತಾಗುತ್ತದೆ. ಬೆಚ್ಚನೆಯ ಗಾಳಿ, ತಂಪುಗಾಳಿಗಿಂತ ಹೆಚ್ಚು ನೀರಿನ ಆವಿಯನ್ನು ಹೊಂದಿರುತ್ತದೆ. ಗಾಳಿ 70 %ಕ್ಕಿಂತಲೂ ಹೆಚ್ಚಿಗೆ ಪಸಿಯಾಗಿದ್ದಾಗ, ಮನುಷ್ಯರ ದೇಹಕ್ಕೆ ಕಸಿವಿಸಿಯಾಗುತ್ತದೆ. ಗಾಳಿಯ ಉಷ್ಣಾಂಶ ಮತ್ತು ಪಸಿಯುವಿಕೆ ಹೆಚ್ಚಾದಾಗ, ನೀರಿನ ಅಂಶವು ಸಹ ಹೆಚ್ಚುತ್ತದೆ. ಭೂಮಿಯ ಮೇಲಿರುವ ನೀರು (ಭೂಮಿಯ ಮೇಲೆ, ಸಮುದ್ರದಲ್ಲಿ ಮತ್ತು ಗಾಳಿಯಲ್ಲಿ) ಯಾವಾಗಲೂ ಸಮನಾಗಿರುತ್ತದೆ. ಅದು ನಾಶವಾಗುವುದಿಲ್ಲ ಅಥವಾ ಕಳೆದು (ಕಡಿಮೆ) ಹೋಗುವುದಿಲ್ಲ, ಆದರೆ ಒಂದು ರೂಪದಿಂದ ಇನ್ನೊಂದು ರೂಪದಲ್ಲಿ ಚಲಿಸುತ್ತಿರುತ್ತದೆ.

ವಿಶ್ವ ಬ್ಯಾಂಕಿನ ವರದಿ :

ವಿಶ್ವಬ್ಯಾಂಕಿನ 1990ರ ವಾರ್ಷಿಕ ವರದಿಯಂತೆ, ಪರಿಸರಕ್ಕೆ ಸಂಬಂಧಪಟ್ಟ ವಿಶೇಷಗಳು ವಿಶ್ವದ ಗಮನ ಸೆಳೆದಿವೆ. ಓಜೋನ್ ಪದರಕ್ಕೆ ಕ್ಲೋರೋಫ್ಲೋರೋ ಕಾರ್ಬನ್ (ಸಿಎಫ್‌ಸಿ) ನಿಂದ ಆಗುತ್ತಿರುವ 90 % ಅಪಾಯಕ್ಕೆ ಕೈಗಾರಿಕಾ ರಾಷ್ಟ್ರಗಳೇ ಹೊಣೆ. ಮುಂಬರುವ ವರ್ಷಗಳಲ್ಲಿ, ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಸಹ ಇದರಲ್ಲಿ ಸೇರುತ್ತವೆ. ಈ ರಾಷ್ಟ್ರಗಳ ಆರ್ಥಿಕ ಪರಿಸ್ಥಿತಿಯನ್ನು ನೋಡಿದರೆ, ಇವು ಪರಿಸರದ ಉಳಿವಿಗಾಗಿ ಕಾರ್ಯಕ್ರಮಗಳನ್ನು ರೂಪಿಸಲು ಸಾಕಷ್ಟು ಹಣ ಒದಗಿಸುವ ಸ್ಥಿತಿಯಲ್ಲಿಲ್ಲ. 1987 ರಲ್ಲಿ ಮಾಂಟ್ರಿಯಲ್‌ನಲ್ಲೂ, 1990ರಲ್ಲಿ ಲಂಡನ್ನಿನಲ್ಲೂ ನಡೆದ ಅಂತಾರಾಷ್ಟ್ರೀಯ ಸಮಾವೇಶದಲ್ಲಿ, ಸಿಎಫ್‌ಸಿಯ ಉತ್ಪಾದನೆಯನ್ನು, ಈ ಶತಮಾನದ ಕೊನೆಯ ವೇಳೆಗೆ ಕಡಿಮೆ ಮಾಡುವ ನಿರ್ಧಾರ ಕೈಗೊಳ್ಳಲಾಗಿದೆ. ಇದರಿಂದ ಓಜೋನ್ ಪದರನ್ನು ರಕ್ಷಿಸುವ ಸಾಧ್ಯತೆ ಇದೆ.

ಪರಿಸರ ರಕ್ಷಣೆ :

ಇದಲ್ಲದೆ ''ಸಂರಕ್ಷಿಸುವ ಅಭಿವೃದ್ಧಿ'' ಕಾರ್ಯಕ್ರಮಗಳ ಅಗತ್ಯ ಹೆಚ್ಚುತ್ತಿದೆ. ಇದರಿಂದ ಆರ್ಥಿಕ ವ್ಯವಸ್ಥೆಯನ್ನು ಕೆಲವೇ ವರ್ಷಗಳಿಗೆ ಬದಲಾಗಿ ದೀರ್ಘ ಕಾಲಕ್ಕೆ ರೂಪಿಸುವಂತಾಗಬೇಕು.

ಮೈಕೆಲ್ ಲಿಮೋನಿಕ್ ಮತ್ತು ಜಾನ್ ಲಂಗೂನ್‌ರವರು 'ಟೈಂ' ಪತ್ರಿಕೆಯಲ್ಲಿ ಪ್ರಕಟಿಸಿದ ಲೇಖನಗಳ ಪ್ರಕಾರ, ಪರಿಸರವನ್ನು ಸಮತೋಲನದಲ್ಲಿಡಲು ಜಾಗತಿಕ ಮಟ್ಟದಲ್ಲಿ ನಿರೂಪಿಸಬೇಕಾದ ಕಾರ್ಯಕ್ರಮಗಳ ಪಟ್ಟಿ ಹೀಗಿದೆ;

1) ಕಾರ್ಬನ್ ಡೈ ಆಕ್ಸೈಡ್ ಉತ್ಪಾದಿಸುವ ಕೈಗಾರಿಕೆಗಳ ಮೇಲೆ ಹೆಚ್ಚಿನ ತೆರಿಗೆ ವಿಧಿಸಿದಲ್ಲಿ, ಶಕ್ತಿಯ ಬಳಕೆಯನ್ನು ಹಿಡಿತಕ್ಕೆ ತರಬಹುದು.
2) ಮೀಥೇನ್ ಅನಿಲವನ್ನು ವಾಯು ಮಂಡಲಕ್ಕೆ ಹೋಗದಂತೆ ತಡೆಯುವುದು.
3) ವಾಯುಶಕ್ತಿ, ಸೂರ್ಯಶಕ್ತಿ ಮುಂತಾದ ಬದಲಿ ಶಕ್ತಿಗಳ ಪ್ರಯೋಗಕ್ಕೆ ಹೆಚ್ಚು ಹಣ ನೀಡುವುದು.
4) ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಸಿಗಳನ್ನು ನೆಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
5) ನದಿ ಸಾಗರಗಳಲ್ಲಿ ಕಸ, ಕೊಳಚೆ ಎಸೆಯುವುದನ್ನು ನಿಷೇಧಿಸುವುದು ..... ಇನ್ನೂ ಹತ್ತು ಹಲವಾರು.

ಇದನ್ನೆಲ್ಲಾ ಯೋಚಿಸಿದರೆ (!) ಕೊಲಂಬಿಯ ವಿಶ್ವವಿದ್ಯಾಲಯದ ಸಾಗರ ಚರಿತ್ರೆಗಾರ, ವಾಲೆಸ್ ಬ್ರೂಕರ್‌ರವರು ಹೇಳಿದ ಮಾತು ಪ್ರಸ್ತುತವೆನ್ನಿಸುತ್ತದೆ:

''ಸೃಷ್ಟಿಕರ್ತ ಕರಾರುವಾಕ್ಕಾಗಿ ನಡೆಯುವಂತೆ ಈ ಭೂಮಿಯನ್ನು ಸೃಷ್ಟಿಸಿದ, ಆದರೆ ಅದರ ನೀಲಿ ನಕಾಶೆಯನ್ನು ಮಾತ್ರ ಮಾನವನಿಗೆ ಕೊಡಲಿಲ್ಲ.''

(ಆಧಾರ) ●

ಕಣ್ಣಿಗೆ ಕುಕ್ಕುವ ಬೆಳ್ಳಿಕೂದಲು

ರತ್ನಾಕರವರ್ಣಿಯ 'ಭರತೇಶ ವೈಭವ'ಕ್ಕೆ ವಸ್ತುವಾದ ಭರತ ಶೂರರಲ್ಲಿ ಶೂರ; ಭೋಗ ಜೀವನದ ಆಳ ಅಗಲಗಳನ್ನು ಜಾಲಾಡಿದ ಚಕ್ರವರ್ತಿ. ಆದರೆ ಒಂದು ನಸುಕಿನಲ್ಲಿ ಇದ್ದಕ್ಕಿದ್ದಂತೆ ವೈರಾಗ್ಯ ತಾಳಿ ಸಕಲ ಸವಲತ್ತಿನ ಭೋಗಲಾಲಸೆಯಿಂದ ಮೇಲೆದ್ದು ಬಂದ. ಬದುಕನ್ನು ಅದುವರೆಗೆ ಸ್ವೀಕರಿಸಿದ ರೀತಿ ಅಂದಿನಿಂದ ಆತನಿಗೆ ವಿವರ್ಣವಾಗಿ ತೋರಿತು.

ಡಾ. ಎಚ್.ಹನುಮಂತಪ್ಪ

ಭರತ ಚಕ್ರವರ್ತಿಯನ್ನು ವೈರಾಗ್ಯದೆಡೆ ಸೆಳೆದ ಆ ಶಕ್ತಿ ಅದೆಷ್ಟು ಬಲಶಾಲಿಯಾಗಿರಬೇಕೆಂಬ ಕುತೂಹಲ ಮೊಳೆಯಲು ಅವಕಾಶವಿದೆ. ಆದರೆ ಆ 'ಶಕ್ತಿ' ಅದೆಷ್ಟು ಕ್ಷುಲ್ಲಕವೂ ಸಾಮಾನ್ಯವೂ, ಸಹಜವೂ ಆದುದೆಂದರೆ, ಬದುಕಿನ ಯಾವುದೋ ಒಂದು ಕ್ಷಣದಲ್ಲಿ ಆ ಅನುಭವ ಪ್ರತಿಯೊಬ್ಬನಿಗೂ ಎದುರಾಗುತ್ತದೆ. ಆ ಶಕ್ತಿ ಬೇರೇನೂ ಅಲ್ಲ.

ನೆರೆಗೂದಲು !

ಶುಭ್ರ ಸ್ನಾನದ ಆಹ್ಲಾದಕರ ಮೂಡಿನಲ್ಲಿ ಕನ್ನಡಿಯ ಮುಂದೆ ನಿಂತಾಗ ತಲೆಯ ಯಾವುದೋ ಮೂಲೆಯಲ್ಲಿ ಬೆಳ್ಳಿಗೂದಲೊಂದು ಫಕ್ಕನೆ ಮಿಂಚಿದರೆ ..... ಎಂಥದೋ ಭಯ, ಕಳವಳ ಎದೆಯೊಳಗೆ ಧುಮ್ಮಿಕ್ಕುತ್ತದೆ. ಅದು ಬದುಕಿನ ಒಂದು ಪ್ರಮುಖ ಘಟ್ಟವನ್ನು ಹೊಳೆಯಿಸುತ್ತದೆ. ಇದ್ದಕ್ಕಿದ್ದಂತೆ ಬದುಕು ಬೊಗಸೆಯೊಳಗಿನಿಂದ ಸೋರಿಹೋದಂತೆ ಭಾಸವಾಗುತ್ತದೆ.

ಭರತನಂಥವನನ್ನೇ ಭೋಗಜೀವನದಿಂದ ವಿಮುಖಗೊಳಿಸಿದ ಬೆಳ್ಳಿ ಕೂದಲ ಪ್ರತಾಪಕ್ಕೆ ಸಾಮಾನ್ಯ ಜನರು ತಲೆದೂಗದಿರಲಾಗುತ್ತದೆಯೇ? ಕನ್ನಡಿಯಲ್ಲಿ ಹೊಳೆದ ಬೆಳ್ಳಿಕೂದಲಿನ ಒಡತಿ ಅಥವಾ ಒಡೆಯ ಮದುವೆಯ ಹೊಸ್ತಿಲಲ್ಲಿರುವ ಹದಿಹರೆಯದವರಾಗಿದ್ದರಂತೂ ತಲ್ಲಣದ ತೆರೆಗಳು ಎದೆಯ ಅಂಚನ್ನು ಕೊರೆಯತೊಡಗುತ್ತವೆ. ಅದನ್ನು ಮರೆಮಾಚುವ ವ್ಯರ್ಥ ಪ್ರಯತ್ನವಾಗಿ ಅತ್ತಿತ್ತ ನೋಡಿ ಯಾರಿಗೂ ಗೊತ್ತಾಗದಂತೆ ಬೆಳ್ಳಿ ಕೂದಲನ್ನು ಕಿತ್ತೆಸೆಯಬಹುದು. ಆದರೆ ಅಂಥ ಯತ್ನ ಫಲಿಸಲಾರದು. ಕೆಲವೇ ದಿನಗಳಲ್ಲಿ ಮತ್ತೆರಡು ಮಿಂಚುಗಳು ಕಪ್ಪು ತಲೆಯಾಗಸದಲ್ಲಿ ಟಿಸಿಲೊಡೆಯುತ್ತವೆ. ಮತ್ತೆ ಎದೆಯಲ್ಲಿ ಗುಡುಗು ..... ಮನದಲ್ಲಿ ಚಿಂತೆಯ ಸಿಡಿಲು!

ಆದರೆ ಆಧುನಿಕ ವಿಜ್ಞಾನ ಇಂತಹ ಭಯಗಳಿಗೆ ಕಾರಣವಿಲ್ಲವೆಂದು ತಳ್ಳಿ ಹಾಕುತ್ತದೆ. ಕೂದಲು ಬಿಳಿಯಾದರೆ ಅಥವಾ ತಲೆ ಬೋಳಾದರೆ ಆ ವ್ಯಕ್ತಿಗೆ ವಯಸ್ಸಾಯಿತು ಎಂಬ ಹಳೆಯ ತತ್ವವನ್ನು ವಿಜ್ಞಾನ ಒಪ್ಪದು. ಕೂದಲು ಕಪ್ಪಾಗುವುದು, ಬಿಳಿಯಾಗುವುದು, ಕೆಂಪುಗೊಳ್ಳುವುದು ಎಲ್ಲ ಕ್ರಿಯೆಗಳಿಗೂ ವೈಜ್ಞಾನಿಕ ಕಾರಣಗಳು ಲಭ್ಯವಾಗಿವೆ; ವಿಜ್ಞಾನಕ್ಕೆ ಕೂದಲು ಸೀಳುವ ಹವ್ಯಾಸ!

ಇಷ್ಟೆಲ್ಲಾ ಮಹತ್ವ ಗಿಟ್ಟಿಸಿದ ಕೂದಲು ಶರೀರದಲ್ಲಿ ಹೇಳಿಕೊಳ್ಳುವಂತಹ ಪಾತ್ರವನ್ನೇನೂ

ನಿರ್ವಹಿಸದು. ಆದರೆ ಇದು ಪ್ರತಿಯೊಬ್ಬ ಮನುಷ್ಯನ ವ್ಯಕ್ತಿತ್ವದ ಭಾಗವಂತೂ ಆಗಿದೆ; ಸೌಂದರ್ಯದ ಸಂಕೇತವೆಂದೂ ಹೇಳಲಾಗುತ್ತದೆ. ಮನುಷ್ಯ ದೇಹದಲ್ಲಿ ಹಸ್ತ, ಪಾದ, ಲೋಳೆ ಪದರು (Mucus membranes) ಬಿಟ್ಟರೆ ಮಿಕ್ಕೆಲ್ಲ ಭಾಗಗಳನ್ನು ಕೂದಲು ಆವರಿಸಿರುತ್ತದೆ. ಪ್ರಪಂಚದಲ್ಲೆಡೆ ಚೆದುರಿದ ಜನಾಂಗಗಳಲ್ಲಿ ಅವುಗಳ ಸಾಂಸ್ಕೃತಿಕ ವೈಶಿಷ್ಟ್ಯಗಳಂತೆಯೇ ಕೂದಲಿನ ಬಣ್ಣದಲ್ಲೂ ವೈವಿಧ್ಯತೆ ಇದೆ. ಬಣ್ಣವನ್ನಾಧರಿಸಿ ಕೂದಲನ್ನು ಮೂರು ಗುಂಪಾಗಿ ವಿಂಗಡಿಸಬಹುದು. ಕರಿಗೂದಲು, ಬಿಳಿಗೂದಲು, ಕೆಂಗೂದಲು.

ಸಾಮಾನ್ಯವಾಗಿ ನಲವತ್ತು ವರ್ಷ ವಯಸ್ಸಿನವರೆಗೆ ಕೂದಲಿನ ವರ್ಣ ಕಪ್ಪು. ಈ ಕಪ್ಪಿಗೆ ಕಾರಣವಾದ ರಾಸಾಯನಿಕ ವಸ್ತುವೆಂದರೆ ಮೆಲಾನಿನ್ (Melanin). ಕೂದಲಿನೊಳಗೆ ಕಪ್ಪು ಬಣ್ಣವನ್ನು ಉತ್ಪತ್ತಿ ಮಾಡುವ ಜೀವಕೋಶಗಳಿರುತ್ತವೆ. ಮೆಲಾನೋಸೈಟ್ಸ್ ಎಂಬ ಈ ಜೀವಕೋಶಗಳು ಕೂದಲಿನ ಗರ್ಭದಲ್ಲಿ ಉಂಟಾಗುವ ರಸಾಯನಿಕ ಕ್ರಿಯೆಯಿಂದ ಅಸ್ತಿತ್ವ ಪಡೆಯುತ್ತವೆ. ಈ ಮೆಲಾನೋಸೈಟ್ಸ್‌ಗಳಿಗೆ ಹಾನಿಯಾಗುವುದು, ಸಂಖ್ಯೆ ಕ್ಷೀಣಿಸುವುದು ಬಿಳಿ ಕೂದಲ ಮೊಳಕೆಗೆ ಕಾರಣವಾಗುತ್ತದೆ.

ಕೂದಲಿನಲ್ಲಿ ಕೋಶಿಕ (Hair follicle) ಮತ್ತು ಕಾಂಡ (Hair Shaft) ಎಂದು ಎರಡು ಭಾಗಗಳನ್ನಾಗಿ ವಿಂಗಡಿಸಬಹುದು. ಮೊದಲನೆಯದು ಚರ್ಮದೊಳಗೆ ಆಳವಾಗಿ ಅಡಗಿದ್ದರೆ, ಎರಡನೆಯದು ಚರ್ಮದ ಮೇಲ್ಭಾಗದಲ್ಲಿ ಬೆಳೆದಿರುತ್ತದೆ.

ಕೂದಲಿನ ಗರ್ಭಕೋಶದಲ್ಲಿ ಜನ್ಮ ತಾಳುವ ಮೆಲಾನಿನ್ ಪ್ರಮಾಣಕ್ಕನುಗುಣವಾಗಿ ಕೂದಲಿನ ಕಪ್ಪು ವರ್ಣ ಉಂಟಾಗುವುದಲ್ಲದೆ ಅದರ ಕೊರತೆಯಿಂದ ಕೂದಲು ಬಣ್ಣ ಕಳೆದುಕೊಂಡು ಬಿಳಿಯಾಗಬಹುದು. ಈ ಬಿಳುಪು ಕೂದಲು ತಾತ್ಕಾಲಿಕವೂ ಆಗಬಹುದು ಅಥವಾ ಶಾಶ್ವತವೂ ಆಗಬಹುದು. ಮೆಲಾನಿನ್ ಉತ್ಪತ್ತಿ ಮಾಡುವ ಕೋಶಗಳು ತಮ್ಮ ಕೆಲಸವನ್ನು ಪುನಃ ಮಾಡಲು ಸಿದ್ಧವಾದರೆ ಈ ಬಿಳಿ ಕೂದಲು ಕಪ್ಪಾಗಲು ಸಾಧ್ಯ. ನಲವತ್ತು ವಸಂತಗಳನ್ನು ದಾಟಿದ ನಂತರ ವ್ಯಕ್ತಿಗೆ ಬಿಳಿ ಕೂದಲು ಶಾಶ್ವತವಾಗಿಯೇ ಉಳಿಯುವ ಸಾಧ್ಯತೆ ಹೆಚ್ಚು. ಏಕೆಂದರೆ ಈ ವಯೋಮಾನದವರಲ್ಲಿ ಮೆಲನೋಸೈಟ್ಸ್‌ಗಳು ಕಪ್ಪು ಬಣ್ಣವನ್ನು ತಯಾರಿಸುವ ಶಕ್ತಿಯನ್ನು ಶಾಶ್ವತವಾಗಿಯೇ ಕಳೆದುಕೊಂಡಿರುತ್ತವೆ. ಇದು ಸ್ವಾಭಾವಿಕ ಬಿಳಿ ಕೂದಲಿನ ವಿಚಾರವಾಯಿತು. ಇನ್ನು ಕೂದಲಿಗೆ ಅಸ್ವಾಭಾವಿಕವಾಗಿ ಬಿಳುಪು ಅಂಟಿಕೊಳ್ಳುವ ಕಾರಣಗಳನ್ನು ಕೆದಕಬಹುದು. ಇದರ ಕಾರಣಗಳನ್ನು ವಿವರಿಸಲು ಹಲವಾರು ಅನುಸಿದ್ಧಾಂತಗಳು ನೆರವಿಗೆ ಧಾವಿಸುತ್ತವೆ.

1) ಆನುವಂಶಿಕ ಸಿದ್ಧಾಂತ (Heriditary Theory) :

ಈ ಸಿದ್ಧಾಂತದ ಪ್ರಕಾರ ವ್ಯಕ್ತಿಯ ತಲೆಗೂದಲಿನ ವರ್ಣ ನಿರ್ಣಯವಾಗುವುದು ಜನಿಕ(Genes)ಗಳಿಂದ. ಕೂದಲಿನ ರಾಸಾಯನಿಕ ಗುಣ, ಬಣ್ಣದ ಸಾಂದ್ರತೆ, ಕೂದಲಿನ ಕಾಂಡದುದ್ದಕ್ಕೂ ಹಂಚಿಕೆಯಾಗುವ ಬಣ್ಣ ಇವೆಲ್ಲವನ್ನೂ ನಿಯಂತ್ರಿಸುವ ತಾಕತ್ತು ಈ ಜನಿಕಗಳಿಗಿದೆ. ಆದುದರಿಂದಲೇ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಹುಟ್ಟುವ ಮಕ್ಕಳಿಗೆ ಚಿಕ್ಕಂದಿನಿಂದಲೇ ಬಿಳಿಯ ಅಥವಾ ಕೆಂಪು ಕೂದಲು ಸೊಂಪಾಗಿ ಬೆಳೆಯುತ್ತವೆ; ಇದೆಲ್ಲ ಮಗುವಿನ ತಂದೆ ಅಥವಾ ತಾಯಿಯಿಂದ ಪಡೆದ ಬಳುವಳಿ.

2) ಉರಿತದ ರೋಗಗಳು (Inflammatory diseases) :

ಕೂದಲಿನಲ್ಲಿ ಪ್ರೋಟಿನ್ ಅಂಶ ಕಡಿಮೆ ಮಾಡುವಂತಹ ಅಲ್ಸರೆಟಿವ್ ಕೊಲೈಟೀಸ್ (Ulcerative Colitis)ರಕ್ತ ಹೀನತೆ (Anaemia) ಕೂಸು ಕಾರ್ದೋಗಲು (Kwashiorkor), ಉಡಿಸರ್ಪಸುತ್ತು (Herpes Zoaster) ಇತ್ಯಾದಿ ಕಾಯಿಲೆಗಳಿಂದ, ಕೂದಲು ಬಿಳಿಯಾಗಬಹುದು. ಪರ್ನೀಶಿಯಸ್ ಅನೀಮಿಯಾ,

ಥೈರಾಯ್ಡ್ ಗ್ರಂಥಿಯ ಕಾಯಿಲೆ ಹಾಗೂ ಅಡ್ಡಿಸನ್ಸ್ ಕಾಯಿಲೆಗಳಿಂದಲೂ ಬಿಳಿಕೂದಲು ಬೆಳೆಯುವ ಸಾಧ್ಯತೆ ಹೆಚ್ಚಿರುತ್ತದೆ.

3) ಔಷಧಿಗಳ ಸೇವನೆ :

ಮಲೇರಿಯಾ ಕಾಯಿಲೆಗೆ ಬಳಸುವ ಕ್ಲೋರೋಕ್ವಿನ್ (Chloroquin), ಮೈಕೈ ನೋವಿಗೆ ಉಪಯೋಗಿಸುವ ಮೆಫೆನಿಸೆನ್ (Mephenisen), ದೇಹದಲ್ಲಿನ ಕೊಬ್ಬಿನಂಶ ಕಡಿಮೆ ಮಾಡಲು ಸೇವಿಸುವ ಟ್ರೈಪರನಾಲ್ (Triparanol) ಹಾಗೂ ವಿಟಾಮನ್ 'ಇ'ಯ ಅತಿಯಾದ ಬಳಕೆ ಬಿಳಿ ಕೂದಲ ಕೊಡುಗೆಯನ್ನು ನೀಡಬಹುದು.

4) ರಾಸಾಯನಿಕ ವಸ್ತುಗಳು :

ನಗರಗಳಲ್ಲಿ ಶುದ್ಧೀಕರಿಸಿ ಸರಬರಾಜು ಮಾಡುವ ನೀರಿಗೆ ಫ್ಲೋರಿನ್ (fluorine) ಮತ್ತು ಕ್ಲೋರಿನ್ (Chlorine)ಗಳನ್ನು ಬೆರೆಸುತ್ತಾರೆ. ಆಂಟಿಸೆಪ್ಟಿಕ್ ಆಗಿ ಬಳಸುವ ಈ ರಾಸಾಯನಿಕಗಳು ತಮ್ಮ ಮತ್ತೊಂದು ರೂಪ ತೋರಿದಾಗ ಬಿಳಿಗೂದಲು ಬೆಳೆಯುತ್ತವೆ. ಹುಣ್ಣುಗಳನ್ನು ಸ್ವಚ್ಛ ಮಾಡಲು ಉಪಯೋಗಿಸುವ ಹೈಡ್ರೋಜನ್ ಪರಾಕ್ಸೈಡ್ (H_2O_2) ಸಹ ಕೂದಲಿನ ಕಪ್ಪು ಬಣ್ಣವನ್ನು ನುಂಗಿ ಬಿಳಿಯಾಗಿಸಬಹುದು.

ರಬ್ಬರ್ ಮತ್ತು ಪ್ಲಾಸ್ಟಿಕ್ ಕಾರ್ಖಾನೆಗಳಲ್ಲಿನ ಹೈಡ್ರೋಕ್ವಿನೋನ್ಸ್, ಫೀನಾಲ್ಸ್, ಕ್ರೆಸಾಲ್ಸ್ ಎಂಬ ರಾಸಾಯನಿಕ ವಸ್ತುಗಳೂ ಕಪ್ಪು ಕೂದಲನ್ನು ಬೆಳ್ಳಿ ಕೂದಲನ್ನಾಗಿ ಪರಿವರ್ತಿಸಬಲ್ಲವು.

5) ಭಾವೋದ್ವೇಗ ಮತ್ತು ಮಾನಸಿಕ ವೇದನೆ :

ಕೂದಲು ಬಿಳಿ ರೂಪ ಧರಿಸಲು ಭಾವೋದ್ವೇಗ ಮತ್ತು ಮಾನಸಿಕ ವೇದನೆಗಳೂ ಕಾರಣವಾಗಬಹುದು. ಇತ್ತೀಚೆಗೆ ವೈದ್ಯಕೀಯ ಪುಸ್ತಕವೊಂದರಲ್ಲಿ ಅದ್ಭುತ ಸಂಗತಿಯೊಂದನ್ನು ದಾಖಲಿಸಲಾಗಿದೆ. ಒಬ್ಬ ತರುಣಿ ಪರೀಕ್ಷೆಯಲ್ಲಿ ನಪಾಸಾದದ್ದನ್ನೇ ಮನಸ್ಸಿಗೆ ಹಚ್ಚಿಕೊಂಡು ರಾತ್ರಿ ಮಲಗಿದಳು. ಆ ವೇದನೆಯ ಪರಿಣಾಮವಾಗಿ ಆಕೆ ಬೆಳಗ್ಗೆ ಎದ್ದಾಗ ಕಪ್ಪುಗೂದಲೆಲ್ಲ ಬಿಳುಪು ತೊಟ್ಟುಕೊಂಡಿದ್ದವು.

ಕೆಲವು ಅಂಕಿಅಂಶಗಳಂತೂ ತಲೆಗೂದಲು ಬೆಳ್ಳಗಾಗುವ ಕ್ರಿಯೆ ವಿದ್ಯಾವಂತರಲ್ಲಿಯೇ ಅತಿ ಹೆಚ್ಚು ಎಂಬುದನ್ನು ಸಾಬೀತುಪಡಿಸಿವೆ. ಮಾನಸಿಕ ಒತ್ತಡ ಹಾಗೂ ಹಾರ್ಮೋನುಗಳ ಏರುಪೇರು ಇದಕ್ಕೆ ಕಾರಣವಾಗಿವೆ.

ವಯಸ್ಸಾದಂತೆ ಭೌತಿಕವಾಗಿ ಪ್ರಕಟಗೊಳ್ಳುತ್ತ ಸಾಗುವ ಬಿಳಿ ಕೂದಲಿನ ಪ್ರಕ್ರಿಯೆ ಮೊದಲು ಆರಂಭವಾಗುವುದು ಕಾಂಡದಲ್ಲಿ. ಬುಡದಿಂದ ಆರಂಭವಾಗುವ ಬಿಳುಪೀಕರಣ ಕ್ರಮೇಣ ಇಡೀ ಕೂದಲನ್ನು ವ್ಯಾಪಿಸುತ್ತದೆ. ಸಾಮಾನ್ಯವಾಗಿ ಇದು ಕಾಣಿಸಿಕೊಳ್ಳುವುದು 40 ವರ್ಷ ವಯಸ್ಸಿನ ತರುವಾಯವೇ. ಪ್ರಾರಂಭದ ಹಂತದಲ್ಲಿ ತಲೆಯ ಎರಡೂ ಬದಿಗಳಲ್ಲಿ ಕಾಣಿಸಿಕೊಂಡು ಮುಂದಿನ ಮಜಲಿನಲ್ಲಿ ಇಡೀ ತಲೆಯನ್ನು ಆಕ್ರಮಿಸುತ್ತಾ ಸಾಗುತ್ತದೆ. ಕೆಲವೇ ವರ್ಷಗಳ ನಂತರ ಗಡ್ಡ, ಮೀಸೆ, ಎದೆ, ಬೆನ್ನಿನ ರೋಮಗಳೆಲ್ಲ ಬಿಳಿಯಾಗುತ್ತವೆ. ಆದರೆ ಕಂಕುಳು ಮತ್ತು ಜನನೇಂದ್ರಿಯಗಳ ಕೂದಲು ಮಾತ್ರ ಮುದಿ ವಯಸ್ಸಿನಲ್ಲೂ ಕಪ್ಪಾಗಿಯೇ ಉಳಿಯಬಹುದು.

ಬಿಳಿ ಕೂದಲನ್ನು ಶಾಶ್ವತವಾಗಿ ಕಪ್ಪುಗೊಳಿಸುವ ಔಷಧಿಗಳ ಬಗ್ಗೆ ಅನೇಕ ಜಾಹೀರಾತುಗಳು ಬೊಬ್ಬೆ ಹಾಕಿದರೂ ಇದುವರೆಗೆ ಅಂತಹ ಔಷಧಿ ಲಭ್ಯವಿಲ್ಲದಿರುವುದು ವಾಸ್ತವ ಸಂಗತಿ. ಕೂದಲಿಗೆ ಬಳಿದುಕೊಳ್ಳುವ ಕಪ್ಪು ಬಣ್ಣ (Hair dye) ತಾತ್ಕಾಲಿಕ ಪರಿಹಾರ ಮಾತ್ರ. ಆದರೆ ಕ್ಯಾಲ್ಸಿಯಂ ಪೆಂಟೋಥೆಯನೇಟ್ ಮಾತ್ರೆ ಮತ್ತು ಮಾನಸಿಕ ಒತ್ತಡವನ್ನು ನಿಯಂತ್ರಿಸಲು ಬಳಸುವ ಟ್ರಾಂಕ್ವಿಲೈಸರ್ಸ್ (Tranquillisers) ಮಾತ್ರೆಗಳ ಸೇವನೆಯಿಂದ ಹಲವರಲ್ಲಿ ಬಿಳಿಗೂದಲು ನಿಯಂತ್ರಣಗೊಳ್ಳಲು ಸಾಧ್ಯವೆಂಬ ಅಂಶ ಇತ್ತೀಚಿನ ಪ್ರಯೋಗಗಳಿಂದ ಹೊರ ಬಿದ್ದಿದೆಯಾದರೂ ಅದಿನ್ನೂ ದೃಢಪಡಬೇಕಿದೆ. ಅಲ್ಲಿಯವರೆಗೆ ಕಾಯುವ ಸಹನೆಯನ್ನಂತೂ ಉಳಿಸಿಕೊಳ್ಳುವುದು ಅನಿವಾರ್ಯ. ●



● ಕುಂ.ವೀರಭದ್ರಪ್ಪ

ಕಡಲಿನ ಕಾದ ಮರಳ ದಂಡೆಯ ಮೇಲೆ
ಹಕ್ಕಿ ಬಿಚ್ಚಿ ರೆಕ್ಕೆ ಒಣಗಿಸಿಕೊಳ್ಳುತ್ತಿದೆ
ಪುಕ್ಕ ಪುಕ್ಕ ನಡುವೆ ಗರಿ ಕೊಳವೆಯೊಳಗೆ
ಕಚ್ಚಾ ತೈಲ ಅಂಟು ಅಂಟು ಹಠದ ಲೋಳೆ

ಕಡಲ ಅಲೆಗುಂಟ ಮೀನ ಕಳೇಬರಗಳ ತೇಲು
ಮುಗಿಲಿಗಂಗಾತ ತೆರೆದ ಕಣ್ಣಿನ ತುಂಬ ಕ್ಷಿಪಣಿ ಬಿಂಬ
ಕಿಡಿ ನಿರೀಕ್ಷೆಯ ಬಿಸಿಗಾಳಿ ಒಡಲಲ್ಲಿ ಎಚ್ಚತ್ತ ಇಂಧನ ಪಹರೆ
ತೂಕ ಕಳೆದುಕೊಂಡ ಡಾಲರು ತೈಲದುರಿಯೊಳಗೆ

ಮಧ್ಯಿನವಾಸನೆತೋಪು ನೆರಳಲ್ಲಿ ಮೂರ್ಛೆ ಹೋಗಿರುವ ಹಸುಳೆ
ಎದೆ ತುಂಬಿದ ತಾಯಿಯ ಸ್ವರ ಕಂಪನಕ್ಕೆ ಸಿಕ್ಕಿ ಹಾರಿದ ಚಿಟ್ಟೆ
ಬ್ರೆಡ್ ತುಂಡಿನ ಮೇಲೂ ಭೀತ ನೆರಳು ಮತ್ತು ತೊಡಕುಬಿದ್ದ ಕರುಳು
ಹೊಗೆಯ ದಟ್ಟ ಛಾಯೆ ಹಗಲ ತುಂಬ ಇರುಳು ಮುಗಿಲಲ್ಲಿ ದೀಪಾವಳಿ

ಸಾವಿರದೊಂದು ಹಾದಿ ಯುದ್ಧ ನೌಕೆಗಳುರುಳು ಸದ್ದು
ಉಸಿರುಗಟ್ಟಿದ ಗುಲಾಬಿ ಆಳದಲ್ಲಿ ಬೆಚ್ಚಗೆ ನಿದ್ದೆ ಹೋಗಿದೆ ಕಾಲ
ವರ್ತಮಾನದ ದುಪ್ಪಟಿ ಹೊದ್ದು. ಎಲ್ಲರೊಟ್ಟಿಗೆ ಇದ್ದು
ಮರಳ ಮೇಲೆ ಕ್ರೌರ್ಯದ ಹೆರಿಗೆ ಮುಗಿಲಲ್ಲಿ ರೆಕ್ಕೆ ಬಿಚ್ಚಿದೆ ಹದ್ದು
ಮಾನವೀಯತೆ ಮೇಲೆ ಅದರ ಕಣ್ಣು.



ಕಣ್ಣಗೊಂಬಿಗಳಂಗಡಿ ಮುಂದೆ ಮಾಂಸದ ಮಾರುಕಟ್ಟೆ
ಎಡಬಲಕೆ ಕಣ್ಣೀರು ಪ್ರತಿಹನಿ ಪಾರದರ್ಶಕದೊಳಗೆ
ತಿಲಕ ತಿದ್ದುವ ಟ್ಯಾಂಕುಗಳು ಬುಲ್ಡೋಜರುಗಳು
ಹೊಗೆಯಾಡುತ್ತಿರುವ ಕೋವಿಗಳು ಬೇಟೆ ಕಡೆ ನಿಗಾ ಇಟ್ಟ
ಮೆದುಳುಗಳು ಕರುಳುಗಳ ಕಿರು ಹಾದಿಗುಂಟ ಓಡುತ್ತಿರುವ
ಯುದ್ಧ ನೌಕೆಗಳು

ಭೂಪಟ ಚಿವುಟಿದೆಡೆ ರಕ್ತರೇಖೆಗಳು ಕೈ ಕುಟುಕುವ ಸಮಾಧಿಗಳು
ತಾಜಾತನ ಕಳೆದುಕೊಂಡ ವ್ರಣದಾಳ
ಜೀವಸೆಲೆಯ ಹಾಹಾಕಾರ

ಶಾಂತಿಯ ಶ್ರೀಕಾರ ಹುಡುಕಾಟದ ಹಕ್ಕಿ
ದಟ್ಟ ಹೊಗೆ ನಡುವೆ ದಿಕ್ಕು ತಪ್ಪಿ
ಜೀವಂತ ಸಮಾಧಿ ಎದೆಗೆ ಕಾಲೂರಿ ಹಾರಲೆಣಿಸುತ್ತಿದೆ

ಅದರ ಕೊಕ್ಕ ನಡುವೆ ಬಾಡಿಲ್ಲ ಕಕ್ಕುಲಾತಿಯ ಚಿಗುರು
ಪ್ರಯಾಸದಲ್ಲಿ ಮುತ್ತು ಗಟ್ಟಿದರೆ ಬೆವರು
ತೈಲದ ಕವಚ ಸೀಳಿ ಸಿಡಿದು ಕುಪ್ಪಳಿಸಿ ಮುಗಿಲಿಗೆ
ಅಮೇರಿಕಾದ ಲಿಬರ್ಟಿ ವಿಗ್ರಹದ ಮುಳ್ಳು ಕಿರೀಟದ ಕಡೆಗೆ
ಇಷ್ಟರಲ್ಲಿ

...ದು ಜೀವ ಇದು ಜೀವನ

...ರವಾಡಕ್ಕೆ ಒಂದು ಕೆಲಸದ ನಿಮಿತ್ತ
...ೀಗಿದ್ದೆ, ಕೆಲಸ ಮುಗಿಸಿ ಹಿಂದಿರುಗುವಾಗ
...ಜಾ' ಹಾಗೂ 'ಸಸ್ತಾ' ಇರುವ ಕಾಯಿಪಲ್ಲೆ,
...ಗೆಯೇ ಒಂದು ಡಜನ್ ಕಿತ್ತಳೆ ಹಣ್ಣು ಖರೀದಿ
...ೆ. ಹುಬ್ಬಳ್ಳಿ-ಗಣೇಶಗುಡಿ ಬಸ್ಸು ಧಾರವಾ
... ಬರುವಾಗ ತುಂಬಿಕೊಂಡೇ ಬಂದಿತ್ತು.
...ರೂ ಹುಬ್ಬಳ್ಳಿಯಿಂದ ಬಂದ ಲೋಕಲ್
...ರು ಕೆಲವರು ಅಲ್ಲಲ್ಲಿ ಇಳಿಯುತ್ತಿದ್ದರು.
...ನೆಯ ಸೀಟಿನಲ್ಲಿ ಒಬ್ಬರು ಇಳಿಯುವಂತೆ
...ತು. ಧಾರವಾಡದಲ್ಲಿ ಹತ್ತುವ ಜನರೂ
...ಬಾ ಇದ್ದರು. ಅದರಲ್ಲಿ ನಿಂತು ಪ್ರಯಾಣಿ
... ಸಹ ಜಾಗಾ ಇರುವಂತಿರಲಿಲ್ಲ. ಬಸ್ಸಿನ
...ನೆಯ ಸೀಟಿನ ಮಹನೀಯರೊಬ್ಬರಿಗೆ
...ದು 'ಜಾಗಾ' ಹಿಡಿಯುವಂತೆ ವಿನಂತಿಸಿ ಕಿಡಕಿ
...ಲ್ಲೇ ನನ್ನ ಕೈ ಚೀಲ ನೀಡಿದೆ. ಆತ ತೆಗೆದು
...ಂಡ. ಅಂತೂ ಆ ಸಮುದಾಯದಲ್ಲಿ ನುಗ್ಗಿ
...ನೆಯ ಸೀಟಿನಲ್ಲಿ ಕುಳಿತುಕೊಳ್ಳಲು ಸಾಕು
...ಾಗಿತ್ತು.

...ನನ್ನ ಚೀಲ ತೆಗೆದುಕೊಂಡು ಜಾಗಾ ಕಾಯ್ದಿರಿ
... ಪಕ್ಕದ ಸಹ ಪ್ರಯಾಣಿಕರಿಗೆ ಧನ್ಯವಾದ
...ಿಪಿಸಿದೆ. ಇರಲ್ರೀ ಸಾಹೇಬ್ರ, ಅದೆಲ್ಲಾ
...ೇನ್ರೀ .... ಎಂದು ತಳ್ಳಿ ಹಾಕಿದ್ದರು. ಮಧ್ಯ
...ಬಸ್ಸಿನ ಆತ ಹಳ್ಳಿಯ ರೈತನೆಂದು ಗುರುತಿಸಿ
...ಂಡೆ. ಬಸ್ಸು ತುಸು ದೂರ ಕ್ರಮಿಸುತ್ತಲೂ
...ಲ್ಲಿದ್ದ ಕಿತ್ತಳೆ ಹಣ್ಣು ಬಿಡಿಸಿ ತಿನ್ನ ಹತ್ತಿದ.
...ತ್ತೆರಡು ಹಣ್ಣು ಬಿಡಿಸಿ ನನಗೂ, ನನ್ನ
... ಇರುವ ಪ್ರಯಾಣಿಕರಿಗೂ ಕೊಡಲು ಬಂದ.
...ವು ಬೇಡವೆಂದರೂ
...ನ್ನೋ ವಸ್ತು ಬ್ಯಾಡಾ ಅನ್ಬಾರ್ದ್ರೀ'' ಎಂದು
...ವಂತ ಮಾಡಿ ತಿನ್ನಿಸಿದ. ಅವನ ಈ ಮುಗ್ಧ
...ಜನ್ಯ ಹಾಗೂ ಉದಾರ ಬುದ್ಧಿ ನನ್ನನ್ನು
...ಬಾ ಅಣಕಿಸಿತು. ಚೀಲದಲ್ಲಿ ಒಂದು ಡಜನ್
ಕಿತ್ತಳೆ ಹಣ್ಣು ಇದ್ದರೂ ಒಂದನ್ನೂ ಬಿಡಿಸಿ ತಿನ್ನಲು ಕೊಡುವ ಔದಾರ್ಯ ತೋರಿಸಲಿಲ್ಲ ಎಂದು ಕುಬ್ಜನಾಗಿದ್ದೆ. ಧಾರವಾಡದಲ್ಲಿ ತುಂಬಾ ಹೊತ್ತು ಕಾದು ಬೇಸರದ ಬಾಯಾರಿಕೆಯಲ್ಲೂ ಒಂದು ತೊಳೆಯನ್ನೂ ತಿಂದಿರಲಿಲ್ಲ. ಬಾಯಿ ಚಪಲ ಬಂದರೂ ಹೆಂಡತಿ ಮಕ್ಕಳ ಜೊತೆ ತಿನ್ನೋಣವೆಂದು ಬಾಯಿ ಬೇಡಿಕೆಯನ್ನು ಅದುಮಿ ಇಟ್ಟಿದ್ದೆ. ಮುಂದೆ ಊರು ಸೇರಿ ಮನೆಗೆ ಬಂದು ಒಂದೊಂದೇ ಜಿನಸನ್ನು ಚೀಲದಿಂದ ತೆಗೆದಿರಿಸುವಾಗ ಕಿತ್ತಳೆ ಹಣ್ಣು ಒಂಭತ್ತೇ ಇದ್ದದ್ದು ಗಮನಕ್ಕೆ ಬಂತು. ಕೈ ಚೀಲ ತೆಗೆದುಕೊಳ್ಳುವಾಗ ನನ್ನ ಸಹ ಪ್ರಯಾಣಿಕ ಆಗಲೇ ಮೂರನ್ನು ಎತ್ತಿ ಇಟ್ಟಿದ್ದ. ಆತ ತಿಂದು, ಹಂಚಿ ತಿನ್ನುವ ಮುಗ್ಧ ಚಿತ್ರ, ಕಣ್ಣಿಗೆ ಕಟ್ಟಿತ್ತು.

● ಸುರೇಶ ಹೆಗಡೆ

ಮೊನ್ನೆ ಬೆಂಗಳೂರಿನಿಂದ ಶಿವಮೊಗ್ಗೆಗೆ ಹೊರಟಿದ್ದೆ. ಮಧ್ಯಾಹ್ನ ಎರಡು ಗಂಟೆಯ 'ತಡೆ ರಹಿತ' ಬಸ್. ಮೊದಲೇ ರಿಸರ್ವ್ ಆಗಿದ್ದ ನನ್ನ ಮುಂದಿನ ಸೀಟಿಗೆ ಯುವ ಜೋಡಿಯೊಂದು ಬಂತು. ಜೊತೆಗೆ ಮುದ್ದಾದ ಹೆಣ್ಣು ಮಗು! ಗಂಡ ಅವಳೊಡನೆ ಸ್ವಲ್ಪ ಹೊತ್ತು ಸರಸವಾಗಿ ಮಾತನಾಡಿದ; ಕೊನೆಗೆ ಮಗುವನ್ನು ಮುದ್ದಾಡಿ ಬಸ್ಸಿನಿಂದಿಳಿದು ಕಿಟಕಿಯ ಬಳಿ ಬಂದು ಪುನಃ ಅವಳೊಡನೆ ಮಾತನಾಡುತ್ತಾ ನಿಂತ.

ಇದ್ದಕ್ಕಿದ್ದಂತೆ ಅವನ ಮುಖ ಗಂಭೀರವಾಯಿತು. ಹೆಂಡತಿಗೆ ಒಂದು ಎಚ್ಚರಿಕೆಯ ಮಾತೂ ಬಂತು- ಬಹು ಮೆಲುದನಿಯಲ್ಲಿ. ''ನೋಡೆ! ಮತ್ತೆ ಮೊನ್ನೆ ದೀಪಾವಳಿಗೆ ಕೊಟ್ಟ ಹಾಗೆ ಈ ಸಲಿವೂ ನಿಮ್ಮಪ್ಪ ಸಾವಿರವೋ, ಎರಡು ಸಾವಿರವೋ ಕೊಟ್ಟರೆ ಕೈಯಿಂದಲೂ ಮುಟ್ಟಬೇಡ. ಗೊತ್ತಾಯ್ತಾ? ಹಲ್ಕಿರಿದು ಇಸಕೊಂಡ್ರೆ, ಮತ್ತೆ ನಿನ್ನ ಮನೆ ಸೇರಿಸೊಲ್ಲ!''

ಅರೆ! ಗೋಮುಖ ವ್ಯಾಘ್ರ! ನೋಡಲು ಎಷ್ಟು ಲಕ್ಷಣವಾಗಿದ್ದಾನೆ! ವಿದ್ಯಾವಂತ, ಸರಸಿ, ಒಳ್ಳೆಯ ಕೆಲಸದಲ್ಲಿ ಇರುವಂತೆ ಕಾಣುತ್ತಾನೆ. ಮತ್ತೆ ಮಾವನ ದುಡ್ಡಿಗಾಗಿ ಬಾಯಿ ಬಿಡುತ್ತಾ

ನಲ್ಲಿ! ಅಸೂಯೆ ಹುಟ್ಟಿಸುವಂತಿದ್ದ ಯುವಕನನ್ನು ನೋಡಿ, ನನಗೀಗ ಅಸಹ್ಯವಾಯಿತು.

ಪಾಪ, ನಗುತ್ತಿದ್ದ ತರುಣಿ ಒಮ್ಮೆಗೆ ಮಂಕಾಗಿಬಿಟ್ಟಳು. ಒಂದು ನಿಮಿಷದ ನಂತರ ಕಣ್ಣೊರೆಸಿಕೊಂಡು ನಿಧಾನವಾಗಿ ಬಿಕ್ಕಿದಳು.

''ಹೇಗಂತೀರ ನೋಡಿ! ಮದುವೆ ಮಾಡಿಕೊಟ್ಟ ಮಾತ್ರಕ್ಕೆ ನಮ್ಮಪ್ಪ ನನ್ನ ಮಾರಾಟ ಮಾಡಿಬಿಟ್ಟಿದ್ದಾರ? ಇರೋದು ಒಬ್ಬಳೇ ಮಗಳು. ನನಗಲ್ದೆ ಇನ್ನು ಯಾರಿಗೆ ಕೊಡ್ತಾರೆ? ನಾನು ದೊಡ್ಡಸ್ತಿಕೆಯಿಂದ ಬೇಡಾಂದ್ರೆ, ಅವರಿಗೆ ಬೇಜಾರಾಗೋಲ್ವಾ? ನಿಮಗೂ ಹೆಣ್ಣು ಮಗು ಇಲ್ವಾ? ನಾಳೆ ನಮ್ಮ ಪಮ್ಮಿಗೆ ನೀವು ಏನೂ ಕೊಡೋದೆ ಇಲ್ವಾ? ಅವಳು ನಿಂದೇನೂ ಬೇಡ ಅಂದ್ರೆ, ನಿಮಗೆ ಹೇಗಾಗುತ್ತೆ? ಅಷ್ಟು ಬಿಗುಮಾನ ಇದ್ರೆ, ನೀವೇನೂ ಇಸಗೋಬೇಡಿ. ನಾನು ಮಾತ್ರ, ಅವರು ಕೊಟ್ಟಿದ್ದನ್ನ ಬೇಡಾ ಅನ್ನೊಲ್ಲಾ. ನಿಮ್ಮ ಹೈ ಫಿಲಾಸಫಿ ನನಗೆ ಬೇಡ.''

ಓ! ಹೀಗಿದೆ ಸಮಾಚಾರ. ಇಬ್ಬರಲ್ಲಿ ಯಾರು ಸರಿ ಎಂದುಕೊಂಡೆ. ಪೆಚ್ಚಾದ ತರುಣ, ''ಹಾಗಲ್ವೆ, ಹಾಗಲ್ವೆ'' ಎನ್ನುತ್ತಾ ಪದಗಳಿಗಾಗಿ ತಡಕಾಡಿದ. ಅಷ್ಟರಲ್ಲಿ ಬಸ್ಸು ಮುಂದಕ್ಕೆ ದೌಡಾಯಿಸಿತು.

● ಎನ್ನೆ ಸುಬ್ರಹ್ಮಣ್ಯ

ಒಮ್ಮೆ ನಮ್ಮ ಹತ್ತಿರದ ಹಳ್ಳಿಯಲ್ಲಿ ಒಂದು ಮದುವೆ ನಡೆಯಿತು. ಪಟ್ಟಣದಿಂದ ಬೀಗರು ಬಸ್ಸು ಮಾಡಿಕೊಂಡು ಬಂದಿಳಿದರು. ಹೆಣ್ಣಿನವರೂ ಕೂಡ ಇರುವಷ್ಟು ಸೌಲಭ್ಯದಲ್ಲಿಯೇ ಅಚ್ಚುಕಟ್ಟಾದ ವ್ಯವಸ್ಥೆ ಮಾಡಿದ್ದರು. ಬಂದವರಿಗೆಲ್ಲಾ ಕಾಫಿ, ತಿಂಡಿಯ ಸಮಾರಾಧನೆ ಮುಗಿಯುತ್ತಿದ್ದಂತೆಯೇ ಶುರುವಾಯಿತು ಬೀಗರ ಆಕ್ಷೇಪಣಾ ಪಟ್ಟಿ. ರವೆ ಸರಿಯಾಗಿ ಹುರಿದಿಲ್ಲ, ಕೇಸರಿಭಾತಿಗೆ ತುಪ್ಪ ಸಾಕಷ್ಟು ಹಾಕಿಲ್ಲ, ಬೀಗರ ಕಡೆಯವರ್‍ಯಾರನ್ನೂ ಊಟಕ್ಕೆ ಸರಿಯಾಗಿ ಕರೆಯಲಿಲ್ಲ, ಶೌಚ ವ್ಯವಸ್ಥೆ ಸರಿಯಾಗಿರಲಿಲ್ಲ, ಮತ್ತೆ

ಮರುದಿನ ಇಡ್ಲಿ ಸರಿಯಾಗಿ ಬೆಂದಿಲ್ಲ, ಊ
ಚೆನ್ನಾಗಿಲ್ಲ, ಬೀಗತಿಗೆ ಕೊಟ್ಟ ಸೀರೆಯಲ್ಲಿ ಜ
ತಾರಿ ಕಮ್ಮಿಯಾಯಿತು, ಹುಡುಗಿಗೆ ಕೊ
ದೊಡ್ಡ ಸೀರೆ ದುಬಾರಿಯದಲ್ಲ - ಹೀಗೆ ಪ
ಬೆಳೆಯುತ್ತಾ ಹೋಯಿತು. ಹೆಣ್ಣಿನವರು ಜೀ
ಓಡಿ ಮಾಡಿಕೊಂಡು ಸಾಧ್ಯವಾದಷ್ಟು ಬೀಗರನ
ತೃಪ್ತಿಪಡಿಸಲು ಹೆಣಗುತ್ತಿದ್ದರು. ಕೆಲವ
ಮಧ್ಯಸ್ಥಿಕೆ ಮಾಡಿ ವಿಕೋಪಕ್ಕೆ ಹೋಗುತ್ತಿ
ಪ್ರಕರಣಗಳನ್ನು ಶಾಂತಗೊಳಿಸುತ್ತಿದ್ದ
ಮದುವೆ ಹೊಂದಿಸಿದ್ದ ಮಧ್ಯಸ್ಥಗಾರರು ಗಂ
ವರ ಆಟಾಟೋಪ ನೋಡಿ ಬೇಸತ್ತರು. ಹೆಣ್ಣ
ಕಡೆಯ ಕೆಲವು ಹತ್ತಿರದ ಸಂಬಂಧಿಗಳು ಧಾ
ಊಟ ಆಗುವುದನ್ನೇ ಎದುರು ನೋಡುತ್ತಿ
ಮಧ್ಯಾಹ್ನದ ಕಾಫಿಯಾಗುತ್ತಿದ್ದಂತೆಯೇ ಬೀ
ಕಡೆಯವರ ಚಪ್ಪಲಿಗಳನ್ನೆಲ್ಲಾ ಗೋಣಿ ಚೀ
ದಲ್ಲಿ ಹಾಕಿ ಮೂಟೆ ಕಟ್ಟಿ ಬಸ್ಸಿನ ಟಾಪಿನ
ಹಾಕಿ, ''ನಿಮ್ಮ ಹುಡುಗಿಯನ್ನು ಕರೆದುಕೊಂ
ಇನ್ನು ನೀವೆಲ್ಲಾ ಹೊರಡಿ,'' ಎಂದು ಗಜ
ದರು. ಊರಿನವರೂ ಕೂಡ ತಿರುಗಿ ಬಿದ್ದ ಮೇ
ಗಂಡಿನವರು ನಿರ್ವಾಹವಿಲ್ಲದೆ ಹುಡುಗಿಯ
ಕರೆದುಕೊಂಡು ಹೊರಟುಹೋದರು. ರಾ
ಭೂರಿ ಭೋಜನ, ಬೆಳಿಗ್ಗೆ ಬೀಗರ ಉಪಚ
ಮಾಡಿ ಬೀಗರನ್ನು ಆದರ, ಗೌರವಗಳಿ
ಬೀಳ್ಕೊಡಬೇಕೆಂದಿದ್ದ ಕಾರ್ಯಕ್ರಮ ಅನಿರೀ
ವಾಗಿ ರದ್ದಾಯಿತು. ಬೀಗರಾಗಿ ಒಂದು
ತಮ್ಮ ದರ್ಪ ತೋರಲೇಬೇಕೆಂದಿದ್ದ ಅ
ನಿಲುವು ಅವರ ಮರ್ಯಾದೆಗೇ ಕುತ್ತಾಯಿ
ಗಂಡಿನವರಿಗೆ ಬಂದ ಸ್ಥಿತಿ ನೋಡಿ ನಗು ಬಂ
ದರೂ ಹೆಣ್ಣಿನವರ ಅಸ್ವಾಭಾವಿಕ ಹಾಗೂ
ರೂಪದ ಈ ನಿಲುವು ಸರಿಯೇನೋ ಎನಿಸಿ
ಎರಡು ಸಂಸಾರಗಳನ್ನು ಮತ್ತು ಎರಡು ಹ
ಯಗಳನ್ನು ಒಂದುಗೂಡಿಸುವ ಮಂಗಳ ಕ್ಷ
ಳನ್ನು ಅಶಾಂತಿಯ ಬೀಡನ್ನಾಗಿಸಿದ ಎಲ್ಲಾ
ಮೆಯೂ ಗಂಡಿನವರಿಗೇ ಸೇರತಕ್ಕದ್ದಲ್ಲವೆ?

● ಕೆ.ಎನ್.ಮ

ಸೌದಿ ಅರಸರ ಅಷ್ಟೈಶ್ವರ್ಯ

ರಾಧಾಕೃಷ್ಣರಾವ್

1955ರ ನವಂಬರಿನಲ್ಲಿ ಸೌದಿ ಅರೇಬಿಯದ ಅರಸರಾದ ಸೌದ್ ಇಬ್ನ ಅಬ್ದುಲ್ ಅಜೀಜ್ ಅವರು ಭಾರತ ಸಂಚಾರಕ್ಕಾಗಿ ಮುಂಬಯಿಯಲ್ಲಿ ಬಂದಿಳಿದರು. ತಮ್ಮ ಸ್ವಂತ ಕಾನ್‌ವೇರ್ ವಿಮಾನದಲ್ಲಿ ಅವರು ಚಿತ್ತೈಸಿದ್ದರು. ಅವರ ಬೆನ್ನಿಗೇ ಐದು ಸೌದಿ ವಿಮಾನಗಳ ತುಂಬ ಅವರ ಪರಿವಾರದವರಿದ್ದರು. ಅವರ ಸಂಖ್ಯೆ 200 ಇತ್ತು.



ಅವರಲ್ಲಿ 12 ಜನ ಅರಸರ ಸೋದರರು, ಆರು ಜನ ಮಂತ್ರಿಗಳು, ಅನೇಕ ಮಕ್ಕಳೂ ಸೇರಿದ್ದರು.

ಅದೇ ಸಮಯದಲ್ಲಿ ನೇಪಾಳದ ರಾಜರೂ ರಷಿಯದ ಕ್ರುಶ್ಚೇವ್ ಮತ್ತು ಬುಲ್ಗಾನಿನ್ನರೂ ಭಾರತದ ಸಂಚಾರಕ್ಕೆ ಬಂದಿದ್ದುದರಿಂದ ಅರಸು ಸೌದರ 17 ದಿನದ ಭಾರತ ಸಂಚಾರಕ್ಕೆ ಸಿಗಬಹುದಾಗಿದ್ದ ಪ್ರಚಾರ ಸಿಗಲಿಲ್ಲ. ಆದರೂ ಸೌದಿ ರಾಜರು ವಿಮಾನ ಮೂಲಕವಿರಲಿ, ರೈಲಿನಲ್ಲಿರಲಿ ಎಲ್ಲಿ ಸಂಚರಿಸಿದರೂ ಯಾವಾಗಲೂ ಪಶ್ಚಿಮಾಭಿಮುಖರಾಗಿಯೇ ಇರುತ್ತಿದ್ದರೆಂಬುದನ್ನು ಪತ್ರಿಕೆಗಳು ವರದಿ ಮಾಡದಿರಲಿಲ್ಲ. ಈ ಅರಸರ ಸಂಚಾರ ಸಿಂಹಾಸನ ಲೋಹಚುಂಬಕ ವ್ಯವಸ್ಥೆಯಿಂದ ಯುಕ್ತವಾಗಿತ್ತು. ಮುಸ್ಲಿಮರು ಪ್ರಾರ್ಥನಾ ಕಾಲದಲ್ಲಿ ಪಶ್ಚಿಮಾಭಿಮುಖರಾಗಿರುವುದು ರೂಢಿ. ಆದರೆ ಈ ಅರಸರು ಸದಾ ಮಕ್ಕಾಭಿಮುಖರಾಗಿರುವಂತೆ ಅನುಕೂಲ ಮಾಡಿಕೊಂಡಿದ್ದರು.

ಈ ಚುಂಬಕ ಸಿಂಹಾಸನಕ್ಕಾಗಲಿ, ಆ ಐಷಾರಾಮದ ವಿಮಾನಗಳಿಗಾಗಲಿ, ಅವರ ಸಂಚಾರಕ್ಕಾಗಲಿ ಎಷ್ಟು ಖರ್ಚು ಬಂತೆಂದು ಯಾರಿಗೂ ಗೊತ್ತಿಲ್ಲ. ಬಹುಶಃ ಅರಸರಿಗೂ ಗೊತ್ತಿರಲಿಲ್ಲ. ಅವರು ಎಂದೂ ಲೆಕ್ಕ ಮಾಡಿ ವೆಚ್ಚ ಮಾಡುವವರಾಗಿದ್ದಿಲ್ಲ.

ಸೌದ್ ಇಬ್ನ ಅಬ್ದುಲ್ ಅಜೀಜರು, ಬಹುಶಃ ಹಿಂದೆಂದೂ ಯಾವ ಅರಸನೂ - ಚಕ್ರವರ್ತಿಗಳೂ ಕೂಡ - ಅನುಭವಿಸಿರದ ವೈಭವದಿಂದ ಬಾಳಿದರು. ಹಣ ಅವರಿಗೆ ಕಃಪದಾರ್ಥವಾಗಿತ್ತು. 1957ರ ಆರಂಭದಲ್ಲಿ ಅವರು ಅಮೆರಿಕ್ಕೆ ಹೋದಾಗ ಒಂದೇ ಅಂಗಡಿಯಿಂದ ಹನ್ನೆರಡು ಲಕ್ಷ ರೂಪಾಯಿಗಳ ಜವಳಿಯನ್ನು ಕೊಂಡರೆಂದು ವರದಿಯಾಯಿತು. ಇಂಗ್ಲಂಡಿಗೆ ಅವರು ಹೋದಾಗ ಉತ್ಕೃಷ್ಟ ಮಟ್ಟದ ಸ್ಪಾನಿಶ್ ಹೊಟೇಲಿನಲ್ಲಿದ್ದ ಎಲ್ಲ ಇನ್ನೂರು ಕೋಣೆಗಳನ್ನೂ

ನಡೆದು ಬಂದ ದಾರಿ

ನವೆಂಬರ್ 1969ರ ಸಂಚಿಕೆಯಿಂದ

ತಮ್ಮ ಹಾಗೂ ತಮ್ಮ ಪರಿವಾರದವರ ಸಲುವಾಗಿ ಮೊದಲೇ ಕಾಯ್ದಿರಿಸಿದ್ದರು. ಇನ್ನೊಂದು ಸಲ ಒಂದು ಹೊಟೇಲಿನಲ್ಲಿ ಐದೇ ದಿನ ಅವರು ತಂಗಿದಾಗ ಏಳು ಲಕ್ಷ ರೂಪಾಯಿ ಹೊಟೇಲ್ ಬಿಲ್ ಆಯಿತಂತೆ.

ಸೌದಿ ಅರೇಬಿಯ ಎಂಬ ಸ್ವತಂತ್ರ ರಾಜ್ಯ ತಲೆಯೆತ್ತಿದ್ದು ಮೊದಲನೇ ಮಹಾಯುದ್ಧ ಮುಗಿದ ನಂತರ. ಸಕಲ ಮುಸ್ಲಿಮರ ಪರಮ ಪವಿತ್ರ ಕ್ಷೇತ್ರಗಳಾದ ಮಕ್ಕಾ-ಮದೀನಗಳನ್ನೊಳಗೊಂಡ ಈ ಮರುಭೂಮಿ ಮಯವಾದ ದೇಶ ಅದಕ್ಕೂ ಮೊದಲು ತುರ್ಕಿ ಸಾಮ್ರಾಜ್ಯಕ್ಕೆ ಸೇರಿತ್ತು. ಯುದ್ಧದಲ್ಲಿ ತುರ್ಕಿಯ ವಿರುದ್ಧ ಬ್ರಿಟಿಶರಿಗೆ ನೆರವಾಗಿದ್ದರಿಂದ ಸೌದಿ ರಾಜಕುಲದ ಇಬ್ನ್ ಸೌದರಿಗೆ ಸ್ವತಂತ್ರ ಅರಸೊತ್ತಿಗೆ ಸಿಕ್ಕಿತು. ಸುತ್ತಲಿನ ಮಾಂಡಲಿಕರನ್ನು ಹತ್ತಿಕ್ಕಿ ಅವರು ಭದ್ರವಾದ ರಾಜ್ಯವನ್ನು ನಿರ್ಮಿಸಿಕೊಂಡರು. ಸೌದ್ ಇಬ್ನ್ ಅಬ್ದುಲ್ ಅಜೀಜರು ಇಬ್ನ್ ಸೌದರ ಅಸಂಖ್ಯ ಮಕ್ಕಳಲ್ಲಿ ತಂದೆಯ ಮರಣ ಕಾಲದಲ್ಲಿ ಉಳಿದುಳಿದ 32 ಜನರ ಪೈಕಿ ಹಿರಿಯರಾಗಿದ್ದರು. ಅವರು 1953ರಲ್ಲಿ ತಮ್ಮ 51ನೇ ವಯಸ್ಸಿನಲ್ಲಿ ಪಟ್ಟಕ್ಕೆ ಬಂದರು. 80,000 ಚದರ ಮೈಲು ವಿಸ್ತಾರವಾದ 30-40 ಲಕ್ಷ ಜನಸಂಖ್ಯೆಯ ಈ ಮರಳುಗಾಡಿನ ಪ್ರದೇಶದ ರಾಜನ ಕೈಲಿ ಹೀಗೆ ನೀರಿನಂತೆ (ಅರಬಸ್ತಾನದಲ್ಲಿ ನೀರಿಗೂ ಬೆಲೆ ಇದೆಯಲ್ಲ!) ವೆಚ್ಚ ಮಾಡಲು ಹಣವೆಲ್ಲಿಂದ ಬಂದಿರಬಹುದು? ಸೌದ್ ಇಬ[್ನ್] ಅಬ್ದುಲ್ ಅಜೀಜರ ತಂದೆ ರಾಜ್ಯ ಸ್ಥಾಪನೆ ಮಾ[ಡಿ] ಕೊಂಡಾಗ ಅಂಥದೇನೂ ಇರಲಿಲ್ಲ. ''ಸ್ಟೇಟ[್ಸ್] ಮನ್ಸ್ ಯಿಯರ್ ಬುಕ್'' 1945ರ ಸಂಪುಟದಲ[್ಲಿ] ಕೂಡ ಈ ರಾಜ್ಯದ ಆದಾಯ ಎಷ್ಟೆಂದ[ು] ಹೇಳಿಲ್ಲ; ಅಷ್ಟು ಅಲ್ಪವಾಗಿರಬೇಕದು.

ಸೌದಿ ಅರೇಬಿಯದ ಅದೃಷ್ಟ ಖುಲಾಯಿ[ಸ] ತೊಡಗಿದ್ದು 1936ರಲ್ಲಿ; ಅಮೆರಿಕನ್ನರು ಉಸುಬಿನ ಅರಣ್ಯದಲ್ಲಿ ಎಣ್ಣೆಯನ್ನು ಕಂಡ[ು] ಹಿಡಿದ ನಂತರ. 1936ರಲ್ಲಿ ಅವರು ಒಂದು ಬಾ[ವಿ] ಯಿಂದ 2,600 ಟನ್ ಎಣ್ಣೆ ತೆಗೆದರು. 1939ರ[ಲ್ಲಿ] ಹತ್ತು ಬಾವಿಗಳು ಕೆಲಸ ಮಾಡುತ್ತಿದ್ದವು. 19[...] ರೊಳಗೆ ವರ್ಷಕ್ಕೆ 262 ಲಕ್ಷ ಟನ್ ಕ್ರೂ[ಡ್] ಆಯಿಲ್ ಸೌದಿ ಅರೇಬಿಯದಲ್ಲಿ ಉತ್ಪಾದ[ನೆ] ಯಾಗುತ್ತಿತ್ತು. 1955 ಸೌದ್ ಇಬ್ನ ಅಬ್ದು[ಲ್] ಅಜೀಜರು ಭಾರತಕ್ಕೆ ಬಂದ ವರ್ಷದಲ್ಲಿ ಉತ[್ಪಾ] ದನೆ 482 ಲಕ್ಷ ಟನ್ನುಗಳಿಗೇರಿತ್ತು.

ಈ ಎಣ್ಣೆ ಉತ್ಪಾದನೆಯೊಡನೆ ಹೊನ್ನಿ[ನ] ಹೊಳೆಯೇ ಹರಿಯತೊಡಗಿತು. ಪ್ರಾರಂಭದ[ಲ್ಲಿ] ಶೇಕಡಾ 25ರಷ್ಟು ರಾಜಧನವನ್ನು ಎಣ್ಣೆ ಕಂಪ[ನಿ] ಗಳು ಕೊಡುತ್ತಿದ್ದರೆ ಮುಂದೆ ಏರಿಸುತ್ತ 19[...] ರಷ್ಟು ಹೊತ್ತಿಗೆ ಶೇಕಡಾ 50ರಷ್ಟು ಕೊಡತೊಡ[ಗಿ] ದವು. ಇದಲ್ಲದೆ ಕಂಪನಿಗಳು ಆದಾಯ ತೆರ[ಿಗೆ] ಯನ್ನು ಕೂಡ ಕೊಡಬೇಕಾಗಿತ್ತು. 1954ರ[ಲ್ಲಿ] ಎಣ್ಣೆ ರಾಜಧನವೇ ರೂ.30 ಕೋಟಿಗಳಷ[್ಟಾ] ಗಿತ್ತು. 1962-63ರಲ್ಲಿ ಇದು ರೂ.385 ಕೋಟಿ[ಗೇ] ರಿತ್ತು. 1965-66ರಲ್ಲಿ ಈ ಆದಾಯ 630 ಕೋ[ಟಿ] ಯಷ್ಟಾಯಿತು. ಸೌದಿ ಅರೇಬಿಯಕ್ಕಿಂತ 1[...] ಪಟ್ಟು ಜನಸಂಖ್ಯೆಯಿರುವ ಭಾರತ ಸರಕಾರ[ದ] ಒಟ್ಟು ಆದಾಯ 1965ರಲ್ಲಿ ಬರೇ 2,228 ಕೋ[ಟಿ] ಇತ್ತೆಂದು ಹೇಳಿದರೆ ಸೌದೀ ಅರೇಬಿಯ[ಕ್ಕೆ] ಒಮ್ಮೆಲೇ ಬಂದ ಭಾಗ್ಯದ ಪರಿಮಾಣವ[ನ್ನು] ತರ್ಕಿಸಬಹುದು.

ಎಣ್ಣೆ ಆದಾಯ ದೊಡ್ಡ ಪ್ರಮಾಣದಲ್ಲಿ ಬ[...] ತೊಡಗಿದಾಗಲೇ ಸೌದ್ ಇಬ್ನ್ ಅಬ್ದುಲ್ ಅ[ಜೀ] ಜರಿಗೆ ತಂದೆಯ ಮರಣದಿಂದ ರಾಜ್ಯಾಧಿಕಾ[ರ]

ಂತು. ಸೌದ್ ಇಬ್ನರು ಎಷ್ಟು ಹಣ ಬಂದರೂ ರ್ಚು ಮಾಡಬಲ್ಲ ತಾಕತ್ತುಳ್ಳವರಾಗಿದ್ದರು. ರುತ್ತಿದ್ದ ರಾಜಾದಾಯದಲ್ಲಿ ಒಂದು ಪಾಲು ಜಮನೆತನದ ಸ್ವಂತಕ್ಕೆ ಸಿಗುತ್ತಿತ್ತು. 1963-ರ ವೇಳೆಗೆ ಈ ಖಾಸಗಿ ಖರ್ಚಿಗೆ ಮಂಜೂರಾದ ಣ ರೂ.36 ಕೋಟಿಗೇರಿತ್ತು. ರಾಜಮನೆತನದ ದಾಯದ ಬಾಬು ಇದೊಂದೇ ಅಲ್ಲವೆಂಬು ನ್ನು ನೆನಪಿಡಬೇಕು. ಅರಬಸ್ತಾನದ ತೇಲ ಗೂ ಅರಸರಿಗೂ ಸ್ವಂತ ಪ್ರದೇಶದ ಎಣ್ಣೆ ಬಾವಿ ದಲಾದವುಗಳಲ್ಲಿ ಪ್ರತ್ಯೇಕ ಲಾಭ ಬರುತ್ತದೆ. ದು ಎಷ್ಟೆಂದು ಪ್ರಕಟವಾಗಿಲ್ಲ. ಜಗತ್ತಿನ ಅತಿ ಮಂತ ರಾಷ್ಟ್ರವಾದ ಅಮೆರಿಕದ ಅಧ್ಯಕ್ಷರಿಗೆ ರೆಯುವ ಸಂಬಳ ವಾರಿಗೆ ಭತ್ತೆ ಎಲ್ಲಾ ಸೇರಿ ಲಕ್ಷಕ್ಕೆ ಮಿಕ್ಕುವುದಿಲ್ಲ. ಇದರಲ್ಲಿ ಆದಾಯ ಗೆ ಬೇರೆ ವಜಾ ಹೋಗುತ್ತದೆ. ಬ್ರಿಟನ್ನಿನ ಣಿಗೆ ರೂ.75 ಲಕ್ಷಕ್ಕಿಂತಲೂ ಕಡಿಮೆ ಹಣ ನ್ನು ಅವರ ದೇಶ ಕೊಡುತ್ತದೆ. ಇದಕ್ಕಾಗಿ ತನ್ನ ಲ್ಲ ಖಾಸಗಿ ಆಸ್ತಿಯ ಆದಾಯವನ್ನು ಆಕೆ ಶಕ್ಕೆ ಬಿಟ್ಟುಕೊಟ್ಟಿದ್ದಾಳೆ.

ಆದ್ದರಿಂದ ಜಗತ್ತಿನಲ್ಲಿ ಬೇರಾವ ವ್ಯಕ್ತಿಯೂ ದೂ ಕಾಣದ ವೈಭವದಿಂದ ಬಾಳುವುದು ದ್ ಇಬ್ನ ಅಬ್ದುಲ್ ಅಜೀಜರಿಗೆ ಸಾಧ್ಯವಾ ತು. ಅವರಿಗೆ ಅರಬಸ್ತಾನದಲ್ಲಿ ಒಟ್ಟು 24 ರ್‌ಕಂಡೀಶನ್ ಮಾಡಿದ ಭವನಗಳಿದ್ದವು. ಹನ್ನೆ ಡು ಶ್ರೇಷ್ಠ ಸ್ವಂತ ವಿಮಾನಗಳಿದ್ದವು. ಕ್ಯಾಡಿ ಕ್ ಮೊದಲಾದ ಕಾರುಗಳಿಗೆ ಲೆಕ್ಕವೇ ಇರ ಲ್ಲ. ಅವರು ಸ್ವಂತವಾಗಿ ಉಪಯೋಗಿಸುತ್ತಿದ್ದ ರು ಬಂಗಾರದ ತಗಡುಗಳಿಂದಲೇ ಕಟ್ಟಲ್ಪಟ್ಟ ಬುದಾಗಿ ವರದಿ ಇತ್ತು.

ಖರ್ಚನ್ನು ಹೆಚ್ಚು ಮಾಡುವುದಕ್ಕೆ ಅನೇಕ ತಿಯ ವಿಧಾನಗಳು ಅವರಲ್ಲಿದ್ದವು. ತಾವಾ ತಮ್ಮ ಪರಿವಾರದವರಾಗಲಿ ಅನ್ಯರು ಉಪ ೋಗಿಸಿದ ಯಾವ ಪದಾರ್ಥವನ್ನೂ ಬಳಸಬಾ ದೆಂದು ಅವರು ನಿರ್ಬಂಧಪಟ್ಟುಕೊಂಡಿದ್ದರು. ಗಾಗಿ ಯಾವುದೇ ವಿದೇಶಿ ಹೊಟೇಲಿನಲ್ಲಿ ದುಕೊಳ್ಳಬೇಕಾದಾಗ ಸಕಲ ಫರ್ನಿಚರ್, ಕ್ರೋಕರಿ ಎಲ್ಲವನ್ನೂ ಹೊಚ್ಚಹೊಸದಾಗಿ ಕೊಳ್ಳಲಾಗುತ್ತಿತ್ತು. ಒಮ್ಮೆ ಅವರು ವಿದೇಶದಲ್ಲಿ ಸರ್ಕಸ್ಸಿಗೆ ಹೋದಾಗ ಅವರು ತಮಗೂ ತಮ್ಮ 200 ಪರಿವಾರ ಗಣಗಳಿಗೂ ಹೊಚ್ಚಹೊಸ ಆರಾಮ ಕುರ್ಚಿಗಳನ್ನು ತರಿಸಿ ಹಾಕಿಸಿದರು. ರಾಜಾಮರ್ಜಿಯ ಈ ರಾಜರು ಅದಕ್ಕೆಲ್ಲ ನಿಷ್ಕೃಪ ಣತೆಯಿಂದ ಹಣ ಸುರಿಯುತ್ತಿದ್ದರು. ಅವರು ಸ್ವಂತಕ್ಕೂ ಅತಿಥಿಗಳಿಗೂ ಉಪಯೋಗಿಸುತ್ತಿದ್ದ ಪಾತ್ರೆ ಪರಡಿಗಳೆಲ್ಲ ಬಂಗಾರ ಬೆಳ್ಳಿಯವಾಗಿರು ತ್ತಿದ್ದವು.

ಸ್ವದೇಶದಲ್ಲಂತೂ ಅವರು ನೆಲದ ಮೇಲೆ ಕಾಲೇ ಇಡುತ್ತಿರಲಿಲ್ಲ ಎನ್ನಬೇಕು. ಮೋಟರಿನಿಂ ದಿಳಿಯುವಾಗ ಕಾಲ ಕೆಳಗೆ ರತ್ನಕಂಬಳಿ ಹಾಸಿರ ಬೇಕು. ಒಮ್ಮೆ ಅವರು ತಮ್ಮ ಸೈನ್ಯದ ಸಲಾಂ ತೆಗೆದುಕೊಳ್ಳುವುದಕ್ಕೆ ಸಾಗಿದಾಗ ಅರ್ಧ ಮೈಲು ದ್ದಕ್ಕೆ ರತ್ನಕಂಬಳಿ ಹಾಸಿದ್ದರು.

ಪುಣ್ಯಕ್ಕೆ ಅವರು ವಿದೇಶಗಳಿಗೆ ಹೋಗುತ್ತಿ ದ್ದುದು ಕಡಿಮೆ. ಹೋದಾಗೆಲ್ಲ ಅದು ಆಯಾ ದೇಶದವರಿಗೆ ಅದ್ಭುತವಾಗಿರುತ್ತಿತ್ತು. ಅವರು ತಮ್ಮೊಡನೆ ಉಕ್ಕಿನ ಪೆಟ್ಟಿಗೆಗಳಲ್ಲಿ ಬಂಗಾರದ ಗಟ್ಟಿಗಳನ್ನು ತೆಗೆದುಕೊಂಡೇ ಹೋಗುತ್ತಿದ್ದರು.

ಸೌದ್ ಇಬ್ನ್ ಅಬ್ದುಲ್ ಅಜೀಜರು ಬರೇ ದುಂದುಗಾರರಾಗಿರಲಿಲ್ಲ. ಅವರು ಕೊಡುಗೈ ದೊರೆಗಳಾಗಿದ್ದರು. ಮುಂಬಯಿ, ಕಾಶಿ, ಆಗ್ರಾ, ನಾಗಪುರ, ಹೈದರಾಬಾದ, ಬೆಂಗಳೂರು ಮೊದ ಲಾದ ಊರುಗಳಿಗೆ ಭೆಟ್ಟಿ ಕೊಟ್ಟಾಗ ಅನೇಕ ಮುಸ್ಲಿಂ ಸಂಘ ಸಂಸ್ಥೆಗಳಿಗೆ ದಾನ ಮಾಡಿದರು. ಯಾವುದಕ್ಕೂ ರೂ.10,000ಕ್ಕೆ ಕಡಿಮೆ ಅವರು ಕೊಡಲಿಲ್ಲ. ದಿಲ್ಲಿಯಲ್ಲಿ ಜಮಾಯತೇ ಉಲೇ ಮಾಕ್ಕೆ ರೂ.20,000. ಮುಂಬಯಿಯಲ್ಲಿ ಹಾಜ್ ಕಮೀಟಿಗೆ ರೂ.50,000 ಕೊಟ್ಟರು.

ಮುಂಬಯಿಯಲ್ಲಿ ತಾಜ್‌ಮಹಲ್ ಹೊಟೇ ಲಿನಲ್ಲಿ ಅವರಿಗೆ ರಾಜವೈಭವದ ಸತ್ಕಾರ ನಡೆ ಯಿತು. ಆಗ ಹೊಟೇಲಿನ ಸುಗಂಧ ದ್ರವ್ಯದ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಗುಲು ಆದ ವಾನಿ ಎಂಬ ಯುವತಿ ಹೇಗೋ ಸಂರಕ್ಷಣ ಪಡೆ

ಯವರಿಂದ ತಪ್ಪಿಸಿಕೊಂಡು ಸೌದರ ಸಾನ್ನಿಧ್ಯಕ್ಕೆ ಹೋಗಿ ಒಂದು ಪುಷ್ಪಗುಚ್ಛವನ್ನು ಸಮರ್ಪಿಸಿದಳು. ಸೌದರು ಎಷ್ಟು ಪ್ರೀತರಾದರೆಂದರೆ ತತ್‌ಕ್ಷಣ ಆರ್ಡರು ಮಾಡಿ ಒಂದು ಬಂಗಾರದ ಗಡಿಯಾರವನ್ನು ಅವಳಿಗೆ ಕೆಲವೇ ನಿಮಿಷಗಳಲ್ಲಿ ತರಿಸಿ ಬಹುಮಾನ ಕೊಟ್ಟರು. ಅದರ ಬೆಲೆ ಒಂದು ಸಾವಿರ ರೂಪಾಯಿಯಾಗಿತ್ತು. ಅದೇ ದಿನ ಅವರು ಖಾದಿ-ಗ್ರಾಮೋದ್ಯೋಗ ಎಂಪೋರಿಯಂನಲ್ಲಿ ರೂ.15,000 ಬೆಲೆಯ ಸರಕುಗಳನ್ನು ಕೊಂಡರು.

ಇದೆಲ್ಲ ಸೌದರು ಇನ್ನೂ 'ಬಡವ'ರಾಗಿದ್ದಾಗ! ಹೆಚ್ಚು ಶ್ರೀಮಂತಿಕೆ ಬಂದಾಗೊಂದು ಸಲ ಅವರು ವಿಮಾನ ನಿಲ್ದಾಣದಲ್ಲಿ ತಮ್ಮ ಸ್ವಾಗತಕ್ಕೆ ಹಾಜರಾದ ಪ್ರತಿಯೊಬ್ಬನಿಗೂ ಒಂದೊಂದು ರತ್ನಖಚಿತ ಬಂಗಾರದ ಗಡಿಯಾರವನ್ನು ಬಹುಮಾನವಿತ್ತಿದ್ದರು. ಅಮೆರಿಕದಲ್ಲಿ ಅವರು ಹೊಟೇಲ್ ಮತ್ತು ಇತರ ಸ್ಥಳಗಳಲ್ಲಿ ಅವರಿಗೆ ಸೇವೆ ಸಲ್ಲಿಸಿದವರಿಗೆ ಟಿಪ್ಸ್ ಸಲುವಾಗಿಯೇ 20 ಲಕ್ಷ ರೂ. ಖರ್ಚು ಮಾಡಿದರೆಂದು ಹೇಳಲಾಗಿದೆ.

ಅಪರಿಮಿತ ಧನದ ಪ್ರವಾಹ ಬರುತ್ತಿದ್ದರೂ ಸೌದರಿಗೂ ಅವರ ಸರಕಾರಕ್ಕೂ ಖರ್ಚಿಗೆ ಸಾಲದಂತಾಗುವ ಪರಿಸ್ಥಿತಿ ಬರುತ್ತಿತ್ತು. ದೇಶದ ಆರ್ಥಿಕ ಸ್ಥಿತಿ ಹದಗೆಡುತ್ತಿತ್ತು. ಆಗೆಲ್ಲ ಅವರು ತಮ್ಮನಾದ ಫೈಜಲ್ ಅಬ್ದುಲ್ ಅಜೀಜರಿಗೆ ಕಾರವಿತ್ತು ಗೊಂದಲವನ್ನು ಸರಿಪಡಿಸುತ್ತಿದ್ದ ಆದರೆ ಬಹಳ ಕಾಲ ಕೈ ತಡೆಹಿಡಿಯುವುದು ರಿಂದಾಗುತ್ತಿರಲಿಲ್ಲ. ಪರಿಸ್ಥಿತಿ ಸುಧಾರಿಸಿ ಡನೆ ಪುನಃ ಅವರು ಅಧಿಕಾರ ವಹಿಸಿಕೊಳ ದ್ದರು.

ಕೊನೆಗೆ 1964 ನವಂಬರದಲ್ಲಿ ಅವರನ್ನು ಕಾರದಿಂದ ಕಿತ್ತು ಹಾಕಿ ಅವರ ತಮ್ಮ ಫೈ ರನ್ನು ಪಟ್ಟಕ್ಕೆ ಕೂಡ್ರಿಸಲಾಯಿತು. ಆದರೂ ರಿಗೆ ಕೋಟಿಗಟ್ಟಲೆ ಹಣ ಜೇಬು ಖ ಮಂಜೂರಾಗಿತ್ತಂತೆ. ಅವರು ಮುಂದೆ ಗ್ರ ನಲ್ಲಿ ನಿವೃತ್ತ ಜೀವನ ನಡೆಸುತ್ತಿದ್ದಾಗಲೂ ತ ವೆಚ್ಚಗಳನ್ನು ಯಥಾವತ್ತಾಗಿ ಸಾಗಿಸಿದ್ದರು. ವರ್ಷ ಫೆಬ್ರವರಿಯಲ್ಲಿ ಅವರು ತೀರಿಕೊಳ ವರೆಗೂ ಇದು ನಡೆದಿತ್ತು.

ಆದರೂ ಸೌದ್ ಇಬ್ನ್ ಅಬ್ದುಲ್ ಅಜೀ ಕಾಲದಲ್ಲಿ ಸೌದಿ ಅರೇಬಿಯಾದ ಅಭ ದ್ಧಿಯೂ ಚೆನ್ನಾಗಿ ಆಯಿತು. ರಸ್ತೆಗಳು, ಕ ಗಳು, ಶಿಕ್ಷಣ ಸೌಕರ್ಯಗಳು ಅಪಾರವಾಗಿ ವಿಸ್ತ ದವು. ವಿದೇಶಗಳಲ್ಲಿ ಕಲಿಯುವ ಪ್ರತಿ ವಿ ರ್ಥಿಯ ವೆಚ್ಚವನ್ನು ಸರಕಾರ ವಹಿಸುತ್ತಿ ಜಗತ್ತಿನ ಹಿಂದುಳಿದ ರಾಷ್ಟ್ರವೆನಿಸಿದ್ದ ಈ ದಲ್ಲಿ ಈಗ ಶೇಕಡಾ 98ರಷ್ಟು ಜನ ಸಾಕ್ಷರ ದ್ದಾರೆಂದು ಹೇಳಿದರಷ್ಟೇ ಸಾಕು.

ಗೇಟ್ ಪಾಸ್

ಎರಡು ಬಾರಿ ಅಮೆರಿಕದ ಅಧ್ಯಕ್ಷರಾಗಿದ್ದ ರೊನಾಲ್ಡ್ ರೇಗನ್ ಹೆಂಡತಿಯನ್ನು ಕಂಡ ಬೆವರುತ್ತಿದ್ದರು. ಅವರ ಹೆಂಡತಿ ವಿಲಾಸ ಪ್ರಿಯೆ. ಮೇಲಾಗಿ ದಿಟ್ಟ ಹೆಂಗಸು. ವೈಟ್ ಹೌಸಿನ ತನ್ನ ಪ್ರಿಯಕರ ಸಿನಾತ್ರ ಅವರೊಡನೆ ಸರಸ ಸಲ್ಲಾಪದಲ್ಲಿರುತ್ತಿದ್ದಳು. ಆಗ ಯಾರನ್ನೂ ಒಳ ಬಿಡಕೂಡದೆಂದು (ಅಧ್ಯಕ್ಷರನ್ನೂ ಸಹ) ಕಟ್ಟಪ್ಪಣೆ ಮಾಡಿದ್ದಳು. ಒಮ್ಮೆ ಅಧ್ಯಕ್ಷರು ಪ್ರತಿಭಟ ದಾಗ, "ಮನೆಯಿಂದ ಹೊರಕ್ಕೆ ಹಾಕ್ತೀನೆ, ಹುಷಾರ್!" ಎಂದು ಜಬರಿಸಿದಳು. ಮರ್ಯಾದೆ ಹೆದರಿ ರೇಗನ್ ಸುಮ್ಮನಿರಬೇಕಾಯಿತು. "ದಿ ಪ್ರೈವೇಟ್ ಲೈಫ್ ಆಫ್ ನ್ಯಾನ್ಸಿ" ಎಂಬ ಪುಸ್ತಕದ ಅವಳ ಅಂತರಂಗ ಜೀವನಕ್ಕೆ ಸಂಬಂಧಪಟ್ಟ ಅನೇಕ ವಿಷಯಗಳು ಹೇಳಲ್ಪಟ್ಟಿದ್ದವು. ಆ ಗ್ರಂ ಪ್ರಕಟವಾದ ದಿನವೇ ಎಲ್ಲ ಪ್ರತಿಗಳೂ ಖರ್ಚಾಗಿ ಹೋದವು. ಗ್ರಂಥಕರ್ತೆ ಕಿಟ್ಟಿಗೆ ಅಪಾರವಾ ಧನ ಲಾಭವಾಯಿತು.

(ಸಂಗ್ರಹ) ಡಿ.ಗುಂಡೂರಾ

- 150 -

ಕೊಡೆ ಮಳೆಗೋ ಬಿಸಿಲಿಗೋ?

ಮಳೆಗಾಲ ಬಂದರೆ ನಾವು ಕೊಡೆಗಳನ್ನು ಹೊರ ತೆಗೆಯುತ್ತೇವೆ ಅಥವಾ ಕೊಳ್ಳುತ್ತೇವೆ. ಆದರೆ ''ಕೊಡೆ'' ಎಂಬ ಪದದ ಹುಟ್ಟು ಹೇಗೆ? ತಮಿಳು, ಮಲೆಯಾಳಿ ತುಳು, ತೆಲುಗು, ತೊದ ಮೊದಲಾದ ದ್ರಾವಿಡ ಭಾಷೆಗಳಲ್ಲಿ ಇದಕ್ಕೆ ಜ್ಞಾತಿಗಳಿದ್ದರೂ ಇವು ಯಾವ ತಾಯಿ ಬೇರಿನಿಂದ ಜಿಗಿತವೆಂದು ಹೇಳುವುದು ಕಷ್ಟ. ತುಳುವಿನ ''ಕೊಡವು'' (=ಹೆಪ್ಪು ಸರಿಯಾಗಿ ಆಗದೆ ಹಾಲಿನಲ್ಲಿನ ನೀರಿನ ಅಂಶವೆಲ್ಲ ಕೆಳಗೆ ಬೇರೆ ನಿಂತು ಬಿಳಿಯ ಕೆನೆ ಮೊದಲಾದ್ದೆಲ್ಲ ಮೇಲ್ಭಾಗದಲ್ಲಿ ಕಟ್ಟಿ ನಿಲ್ಲುವುದು) ಎಂಬ ಪದ ನೋಡಿದರೆ ಬಹುಶಃ ''ಮೇಲೆದ್ದು ಹರಡು'' ಅಥವಾ ಮುಚ್ಚು ಎಂಬ ತಾತ್ಪರ್ಯದ ಯಾವುದೋ ಧಾತುವಿನಿಂದ ಕೊಡೆ ಉತ್ಪತ್ತಿಯಾಗಿರಬೇಕೆನಿಸುತ್ತದೆ. ಸಂಸ್ಕೃತದ ''ಉತ್-ಕುಟ (=ಕೊಡೆ)'' ಶಬ್ದದಲ್ಲಿನ ''ಉತ್'' ಉಪಸರ್ಗವನ್ನು (=ಮೇಲೆ) ನೋಡಿದರೆ ಈ ಊಹೆಗೆ ಒತ್ತು ಸಿಗುತ್ತದೆ. ಕೊಡೆಯೆಂಬರ್ಥದ ಇನ್ನೊಂದು ಹಳೇ ಕನ್ನಡ ಶಬ್ದ 'ತಲೆ' ಮೇಲೆದ್ದು ಚಿಗುರಿ ಹರಡು ಎಂಬರ್ಥದ ಧಾತುವಿನಿಂದ ಹೊರಟದ್ದೆಂದು ತುಲನಾತ್ಮಕ ದ್ರಾವಿಡ ನಿಘಂಟಿನಿಂದ (ಎಮಿನೋ ಮತ್ತು ಬರೋ) ತಿಳಿಯುತ್ತದೆ.

ಆದರೆ ನಾನು ಇಲ್ಲಿ ಚರ್ಚಿಸಬೇಕೆಂಬುದು ಈ ನಿರುಕ್ತ ಶಾಸ್ತ್ರೀಯ ಪ್ರಶ್ನೆಯನ್ನಲ್ಲ; ಕೊಡೆಯೆಂಬ ಅರ್ಥದ ಬೇರೆ ಬೇರೆ ಭಾಷೆಗಳಲ್ಲಿನ ಪದಗಳು ಅವು ಉಪಯೋಗವಾಗುವುದು ಬಿಸಿಲಿನ ವಿರುದ್ಧವೋ ಮಳೆಯ ವಿರುದ್ಧವೋ ಎಂಬ ಸಂದಿಗ್ಧವನ್ನುಂಟುಮಾಡುವುದರ ಸೋಜಿಗವನ್ನು. ಉದಾಹರಣೆಗೆ ''ಕೊಡೆಯೆಂಬರ್ ಆತ ಪತ್ರಮನ್'' ಎಂಬ ಲಕ್ಷ್ಮೀಶನ ಶ್ಲೇಷೆಯನ್ನು ನೋಡಿ. ಸಂಸ್ಕೃತದಲ್ಲಿ ''ಆತ ಪತ್ರ'' ಎಂಬುದು ಕೊಡೆಗಿರುವ ಒಂದು ಪದ. ''ಆತಪ'' ಎಂದರೆ ಬಿಸಿಲು; ''ತ್ರ'' ಎಂಬುದು ಕಾಪಾಡು ಎಂಬರ್ಥದ ಪ್ರತ್ಯಯ. ಅರ್ಥಾತ್ ಬಿಸಿಲಿನಿಂದ ನಿಮ್ಮನ್ನು ರಕ್ಷಿಸುವುದು ಕೊಡೆಯ ಕೆಲಸ; ಮಳೆಯಿಂದಲ್ಲ. ''ಛತ್ರ'' ಎಂಬ ಇನ್ನೊಂದು ಸಂಸ್ಕೃತ ಪದ ಮಳೆಯಿಂದಲೋ ಬಿಸಿಲಿಂದಲೋ ಎಂದು ಹೇಳುವುದಿಲ್ಲ; ಒಟ್ಟಾರೆ ''ಮರೆ ಮಾಡು'' ಎಂಬರ್ಥದ (ಛದ್=ಮರೆ ಮಾಡು, ಮುಚ್ಚು ರಕ್ಷಣೆ ಅಥವಾ ಆಶ್ರಯ ಕೊಡು) ಧಾತುವಿನಿಂದ ಅದು ಹುಟ್ಟಿದೆ. ಎರಡೂ ತುಂಬಾ ಪ್ರಾಚೀನ ಪದಗಳು. ಭಾರೋಪ್ಯ ವರ್ಗದ ಇತರ ಭಾಷೆಗಳ ಸಮಾನಾರ್ಥಕ ಪದಗಳನ್ನು ನೋಡೋಣ. ಇಂಗ್ಲೀಷಿನ Umbrella ಇಟಾಲಿಯನ್ ಭಾಷೆಯ Ombrellaದ ಕೈಗಡವಂತೆ. Ombra (=ಲ್ಯಾಟಿನ್ Umbra)= ನೆರಳು. ನಮ್ಮ ನೆರೆಯ ಪಾರಸೀಕದಲ್ಲಿ ಕೊಡೆಗೆ ''ಸಾಯಬಾನ್'' ಅಥವಾ ''ಸಾಯ್‌ಬಾನ್'' ಎಂಬ ಪದವಿದೆ. ''ಸಾಯ'' ಅಂದರೆ ಸಂಸ್ಕೃತ ''ಛಾಯಾ'' (=ನೆರಳು) ಗೆ ತಂಗಿ. ಅದರಲ್ಲಿಯೂ ಬಿಸಿಲಿನಿಂದ ರಕ್ಷಣೆ ಕೊಡುವುದೇ ಕೊಡೆಯೆಂದು ಸೂಚಿತವಾಗುತ್ತದೆ. ಇಂಗ್ಲೀಷ್, ಸ್ಪಾನಿಶ್ ಮೊದಲಾದ ಭಾಷೆಗಳಲ್ಲಿರುವ ಕೊಡೆಯೆಂಬರ್ಥದ Parasol ಕೂಡ ಬಿಸಿಲಿನಿಂದಲೇ ನಿಮ್ಮನ್ನು ಕಾಪಾಡುತ್ತದೆ. Sol ಸೂರ್ಯ, ಬಿಸಿಲು. Para– ರಕ್ಷಿಸುವ.

ಆದರೆ ಫ್ರೆಂಚರು ಮಳೆಗೇ ಕೊಡೆ ಹಿಡಿಯುತ್ತಾರೆ. ಅವರ Paraplule ನಲ್ಲಿ Plule ಎಂದರೆ

ಮಳೆ. ಸ್ಪಾನಿಶ್‌ನಲ್ಲಿ Parasol ಇದ್ದರೂ ಮಳೆಗೂ ಹಿಡಿಯುವಂಥ Paraguas ಕೂಡ ಇದೆ; aguas= ಮಳೆ. ಪೋರ್ಚುಗೀಸಿನ guarda chua ಶಬ್ದದಲ್ಲಿ ಮೊದಲಿನ ಭಾಗ ಕಾಪಾಡುವ ಎಂಬರ್ಥವನ್ನು ಎರಡನೇ ಭಾಗ (Chua) ಮಳೆಯನ್ನೂ ನಿರ್ದೇಶಿಸುತ್ತವೆ.

ನಮ್ಮ ''ಕೊಡೆ''ಯಾಗಲಿ ''ತಳೆ''ಯಾಗಲಿ ತಾನು ಬಿಸಿಲಿಗೆ ಹಿಡಿಯುವಂಥಾದ್ದೋ ಮಳೆಗೋ ಎಂದು ಸ್ಪಷ್ಟಪಡಿಸುವುದಿಲ್ಲ. ಛತ್ರದ ಹಾಗೆಯೇ. ಆದರೆ ಸಂಸ್ಕೃತ ಕೋಶಗಳಲ್ಲಿ ಮಳೆಗೇ ಹಿಡಿಯುವ ''ಜಲತ್ರಾ'' ಎಂಬೊಂದು ಕೊಡೆಯ ಹೆಸರಿದೆ. ನೀರಿನಿಂದ ರಕ್ಷಿಸುವಂಥಾದ್ದು ಎಂದು ಅದರ ಅರ್ಥ. ಇದು ಬರೇ ಕೋಶಕಾರರ ಸೃಷ್ಟಿಯೇ ಇರಬಹುದು. ಕಾವ್ಯಗಳಲ್ಲಿ ಪ್ರಯೋಗವಿದ್ದಂತೆ ಕಾಣದು. ಯಾವ ಕೋಶವೂ ''ಜಲತ್ರಾ''ದ ಸಾಹಿತ್ಯಕ ಪ್ರಯೋಗವನ್ನು ಎತ್ತಿ ತೋರಿಸಿಲ್ಲ. ಸಾಹಿತ್ಯದಲ್ಲಿ ''ಆತಪತ್ರ'', ''ಛತ್ರ''ಗಳೇ ಹೆಚ್ಚು ಪ್ರಚಲಿತ.

ಕೊಡೆಗಳು ರಾಜ್ಯಾಧಿಕಾರ, ಸಾಮಾಜಿಕ ಅಂತಸ್ತು ಮೊದಲಾದವುಗಳ ಚಿಹ್ನಗಳಾಗಿದ್ದವು. ''ಶ್ವೇತಚ್ಛತ್ರ'', ''ಸಿತಾತ ಪತ್ರ'' ಮೊದಲಾದ ಪದಗಳೂ ಶುದ್ಧ ಕನ್ನಡದ ''ಬೆಳ್ಗೊಡೆ'' (=ಬಿಳಿ ಕೊಡೆ) ಪದವೂ ಯಾವಾಗಲೂ ರಾಜರಿಗೆ ಸಂಬಂಧಿಸಿಯೇ ಸಾಹಿತ್ಯದಲ್ಲಿ ಕಾಣಬರುತ್ತದೆ. ಅದನ್ನು ಹಿಡಿಯುವ ಅಧಿಕಾರ ರಾಜರಿಗೆ ಮಾತ್ರ. ಅವರು ಹೋದಲ್ಲೆಲ್ಲ ಅದನ್ನು ಒಯ್ಯುವ ''ಛತ್ರಧರ'' ಸೇವಕರೂ ಇದ್ದರು. ಆದರೆ ಆ ಕಾಲ ಹಿಂದೂ ರಾಜರೊಡನೆಯೆ ಹೋಯಿತು. ಸಾಮಾನ್ಯರೂ (ಕಪ್ಪು ಬಟ್ಟೆಯ) ಕೊಡೆ ಹಿಡಿಯತೊಡಗಿದರು. ಹಳೇ ಕೊಡೆಗಳ ಮೇಲೆ ಬಿಳಿಯ ಬಟ್ಟೆಯ ಹೊದಿಕೆ ಹೊದಿಸಿ ಉಪಯೋಗಿಸುವುದು ಕಾಣಿಸತೊಡಗಿತು. ಅವರೂ ರಾಜ್ಯವಿಲ್ಲದ ಶ್ವೇತಚ್ಛತ್ರಧಾರಿಗಳು!

''ಬೀಸಣಿಗೆ'' ಕೂಡ ರಾಜರಿಗೆ ಮಾತ್ರವಲ್ಲದಿದ್ದರೂ ಆಢ್ಯರಿಗಂತೂ ಅವಶ್ಯವಾಗಿತ್ತು. ''ಛತ್ರ ಚಾಮರ ವ್ಯಜನ'' ಎಂಬ ರಾಜ ಚಿಹ್ನಗಳಲ್ಲಿ ''ವ್ಯಜನ'' ಎಂದರೆ ಬೀಸಣಿಗೆ. ಬೀಸಣಿಗೆಯ ಮೂಲದ ಬಗ್ಗೆ ಹೆಚ್ಚು ಪರದಾಡಬೇಕಾಗಿಲ್ಲ. ಅದು (ಗಾಳಿ) ಬೀಸುವ ಸಾಧನ. 'ಬೀಸು' ಎಂಬ ದ್ರಾವಿಡ ಧಾತು (ತಮಿಳು; ವೀಚು) ರಭಸದಿಂದ ಚಲಿಸು, ಚಲಿಸುವಂತೆ ಮಾಡುವುದು ಎಂಬರ್ಥ ಹೊಂದಿದೆ. ಗಾಳಿಯನ್ನಲ್ಲದೆ ಕಲ್ಲನ್ನೂ ಬೀಸಿ ಒಗೆಯಬಹುದು. (''ಅಣಿಗೆ'' ಸಾಧನ ಎಂಬರ್ಥದ ಪ್ರತ್ಯಯ: ''ಬಾಚಣಿಗೆ'' ''ಅಡ್ಡಣಿಗೆ'' ಇತ್ಯಾದಿ ಉದಾಹರಣೆಗಳಿವೆ. ಸಂಸ್ಕೃತದಲ್ಲಿ ''ವ್ಯಜನ'' (=ಬೀಸಣಿಗೆ) ಆರ್ಯ ಭಾಷಾ ಮೂಲದ್ದಲ್ಲ ಎಂಬ ಭಾಷಾಶಾಸ್ತ್ರಜ್ಞರ ಹೇಳಿಕೆ ಸುಸಂಗತವಾಗಿ ಕಾಣಿಸುತ್ತದೆ. ಯಾಕಂದರೆ ಸಂಸ್ಕೃತದ ''ವೀಜ್, ವ್ಯಜ್'' ಧಾತುಗಳಿಂದ ''ವ್ಯಜನ'' ಹುಟ್ಟಿತೆಂಬುದು ಪಂಡಿತರ ಹೇಳಿಕೆಯಾದರೂ ಆ ಧಾತುವೇ ದ್ರಾವಿಡ ''ವೀಚು'' ಧಾತುವಿನಿಂದ ಸ್ವೀಕೃತವೆಂದು ಅನಿಸುತ್ತದೆ. ಸಂಸ್ಕೃತದಲ್ಲಿ ಮಹಾಭಾರತದಷ್ಟು ಹಳೆಯದಾದರೂ ''ವ್ಯಜನ''ಕ್ಕೆ ಮನಂಬಗುವ ನಿಷ್ಪತ್ತಿ ಸಿಗುವುದಿಲ್ಲ.

ಬೀಸಣಿಗೆಗಿರುವ ಇಂಗ್ಲೀಷ್ ಶಬ್ದ fan ಎಂಬುದು ಈಗ ಸರ್ವರಿಗೂ ತಿಳಿದದ್ದೇ. ಅದನ್ನು ಇಲ್ಲಿ ಚರ್ಚಿಸಲು ತೆಗೆದುಕೊಂಡ ಕಾರಣವೆಂದರೆ, ಆ ಶಬ್ದದ ಜಾಡು ಹಿಡಿದು ಹೋದಾಗ ನಾವು ಕೊನೆಗೆ ತಲಪುವುದು ಲ್ಯಾಟಿನ್ Vannusಗೆ. Vannus ಎಂದರೆ ಗಾಳಿ ಬೀಸಿಕೊಳ್ಳುವ ಸಾಧನವಲ್ಲ; ಕಾಳಿನಿಂದ ಕಸವನ್ನು ತೂರುವುದಕ್ಕಾಗಿ ಗಾಳಿ ಹಾಕುವ ಸಾಧನ- ಅರ್ಥಾತ್ ರೈತರ ಒಂದು ಉಪಕರಣ. ಕೃಷಿಯುಗದ ಅನೇಕ ಪದಗಳು ಔದ್ಯೋಗಿಕ ಯುಗಕ್ಕೂ ದಾಟಿ ಬಂದಿವೆಯಲ್ಲವೆ?

ಬೀಸಣಿಗೆಯನ್ನು ಬೆಳ್ಳಿಯಿಂದ, ಅಡಿಕೆಯ ಹಾಳೆಯಿಂದ ಶ್ರೀಮಂತರು ಲಾಮಂಚದಿಂದ, ಇತರ ವಸ್ತುಗಳಿಂದ ಮಾಡುತ್ತಿದ್ದರೂ ಬಹುತರವಾಗಿ ಬಳಕೆಯಲ್ಲಿದ್ದದ್ದು ತಾಳೆಯ ಓಲೆಯಿಂದ ಮಾಡಿದ ಬೀಸಣಿಕೆಯೆಂಬುದು ಸಂಸ್ಕೃತದಲ್ಲಿ ಬೀಸಣಿಗೆಗಿರುವ ಇನ್ನೊಂದು ಪದವಾದ ''ತಾಲವೃಂತ'' ಅಥವಾ ''ತಾಡವೃಂತ'' ಎಂಬ ಪದದಿಂದ ತಿಳಿಯುತ್ತದೆ. ಮಹಾಭಾರತ ಕಾಲದಲ್ಲೇ ತಾಳೆ ಗರಿಯ ಬೀಸಣಿಗೆ ಬಳಕೆಯಲ್ಲಿತ್ತು.

– ಪಾವೆಂ.

ಮೇಜಿನ ಮೇಲೆ ತಾರಾ ಮಂಡಲ ....

ಧರೆಗಿಳಿದ ಸೌರವ್ಯೂಹ!

ಕಂಪ್ಯೂಟರ್‌ನಿಂದಾಗಿ ಮಕ್ಕಳಿಗೆ ವಿದ್ಯೆ ಬೇಗ ತಲೆಗೆ ಹತ್ತುತ್ತದೆ ಎಂಬುದು ನಮಗೆಲ್ಲ ಈಗ ಬಹುಮಟ್ಟಿಗೆ ಖಾತ್ರಿ ಆಗಿದೆ. ಪದವಿ ತರಗತಿಯ ವಿದ್ಯಾರ್ಥಿಗಳಿಗೂ ಸುಲಭವಾಗಿ ಅರ್ಥವಾಗದ ತಾರೆ, ನೀಹಾರಿಕೆ, ಗ್ರಹಗಳ ಚಲನೆ, ಗ್ರಹಣ ವಿದ್ಯಮಾನಗಳನ್ನು ಮೂರನೆ ತರಗತಿಯ ಮಕ್ಕಳ ತಲೆಯಲ್ಲಿ ಸಲೀಸಾಗಿ ತುಂಬಬಲ್ಲ ಕಂಪ್ಯೂಟರ್ 'ಸಾಫ್ಟ್ ವೇರ್'ಗಳು ಈಗ ಚಲಾವಣೆಗೆ ಬರುತ್ತಿವೆ.

'ಸೂಪರ್ ಸ್ಟಾರ್' ಎಂಬ ಹೆಸರಿನ ಅಂಥ ಒಂದು ಪ್ರೋಗ್ರಾಮ್ ಇದೀಗ ಪಾಶ್ಚಾತ್ಯ ದೇಶಗಳಲ್ಲಿ ಮಾರುಕಟ್ಟೆಗೆ ಬಂದಿದೆ. ಇದನ್ನು ತಂದು ಮನೆಯಲ್ಲಿರುವ ಕಂಪ್ಯೂಟರ್‌ಗೆ ಜೋಡಿಸಿದರೆ, ಡಾಕ್ಟರೇಟ್ ಪ್ರಬಂಧ ಬರೆಯಲು ಬೇಕಾದಷ್ಟು ಹೊಸ ಸಂಗತಿಗಳು ಹೊಳೆಯುತ್ತವೆ. ಅಂದರೆ ಆಕಾಶದತ್ತ ದೃಷ್ಟಿ ಕೂಡಾ ಹಾಯಿಸದೆ ಖಗೋಲ ವಿಜ್ಞಾನವನ್ನು ಕರಗತ ಮಾಡಿಕೊಳ್ಳಲು ಇದರಿಂದ ಸಾಧ್ಯವಿದೆ.

ಈ ಸೂಪರ್‌ಸ್ಟಾರ್ ಪ್ರೋಗ್ರಾಮ್‌ನಲ್ಲಿ 2,59,000 ತಾರೆಗಳ ಪರಿಚಯ, ಸ್ಥಿತಿಗತಿ, ಚಲನವಲನಗಳ ವಿವರಗಳಿವೆ. ಇದನ್ನು ಕಂಪ್ಯೂಟರ್‌ಗೆ ಜೋಡಿಸಿ ಅಭ್ಯಾಸಿಗಳು ಮಾಡಬೇಕಾದದ್ದು ಇಷ್ಟೆ. ತಾವಿರುವ ಸ್ಥಳದ ಅಕ್ಷಾಂಶ, ರೇಖಾಂಶ ಹಾಗೂ ಅವರು ಆಕಾಶ ನೋಡುತ್ತಿರುವ ತಾರೀಖು, ವೇಳೆ ತಿಳಿಸಿದರೆ ಸಾಕು. ಪರದೆಯ ಮೇಲೆ ಅಂದಿನ ತಾರಾ ಮೇಳದ ಯಥಾವತ್ ಚಿತ್ರ ಮೂಡುತ್ತದೆ. ಅಂದರೆ ಯಾವ ಗ್ರಹ, ಯಾವ ಉಪಗ್ರಹ, ಯಾವ ನಕ್ಷತ್ರ, ಯಾವ ಗ್ಯಾಲಕ್ಸಿ, ಯಾವ ಪಲ್ಸಾರ್ ಎಲ್ಲಿದೆ ಎಂಬುದನ್ನು ನೋಡಬಹುದು. ಯಾವುದೇ ಪುಟ್ಟ ಆಕಾಶಕಾಯದ ಬಗ್ಗೆ ಸಂಶಯ ಬಂದಾಗ 'ಇದೇನು?' ಎಂದು ಪ್ರಶ್ನೆ ಕೇಳಿದರೆ ತಕ್ಷಣ ಅದರ ಸಂಕ್ಷಿಪ್ತ ಪರಿಚಯ ಕೂಡಾ ಗೋಚರಿಸುತ್ತದೆ. ಅಷ್ಟೇ ಅಲ್ಲ. ಅದನ್ನು ಇನ್ನೂ ಸಮೀಪದಿಂದ ನೀವು ನೋಡಬೇಕೆಂದು ಬಯಸಿದರೆ ಕೀಲಿ ಮಣೆಯ ಮೇಲೆ ಬೆರಳೊತ್ತಿ 'ಝೂಮ್' ಮಾಡಿದರೆ ಸಾಕು. ಅದು ದೊಡ್ಡದಾಗುತ್ತ ಪರದೆಯ ತುಂಬಾ ಬೆಳೆಯುತ್ತದೆ. ಅದು ಗ್ರಹವಾಗಿದ್ದರೆ ಉಪಗ್ರಹವೂ, ಶನಿಯಾಗಿದ್ದರೆ ಅದರ ಬಳೆ ಕೂಡಾ ಕಾಣಿಸುತ್ತದೆ.

ನೀವು ಭೂಮಿಯ ಆಚೆಯ ಆಕಾಶವನ್ನು ನೋಡಲು ಬಯಸಿದರೆ ಅಥವಾ ನಿಮ್ಮ ಹಿರಿಯಜ್ಜ ಹುಟ್ಟಿದ ದಿನದ ನಿಮ್ಮೂರಿನ ಆಕಾಶ ಹೇಗಿತ್ತೆಂದು ನೋಡಲು ಬಯಸಿದರೆ ಅದೂ ಸಿಗುತ್ತದೆ. ತಾರೀಖು, ವೇಳೆ, ಅಕ್ಷಾಂಶ, ರೇಖಾಂಶ ಬದಲಿಸಿ ಯಾವ ದಿನದ, ಯಾವ ದಿಕ್ಕಿನ ಆಕಾಶವನ್ನು ನೋಡಬಹುದು. ಇಂದಿಗಿಂತ 4000 ವರ್ಷಗಳ ಹಿಂದಿನ ಅಥವಾ ಮುಂದಿನ ಎಂದೇ ಆದರೂ ನೀವು ತಾರಾವ್ಯೂಹ ನೋಡಬಹುದಾಗಿದೆ. ಅಂದರೆ ನೀವು ಒಂದು ಕಾಲ್ಪನಿಕ 'ಟೈಮ್ ಮೆಶಿನ್' ಎದುರು ಕುಳಿತು ಬೇಕೆಂದಲ್ಲಿ ಹೋಗಬಹುದು. ಬೇಕಾದುದನ್ನು ನೋಡಬಹುದು. ಹಿಂದೆ ಖಗ್ರಾಸ ಸೂರ್ಯ ಗ್ರಹಣ ಹೇಗಿತ್ತೆಂದು ಇಂದು ನೀವು ಸಮೀಪದಿಂದ ನೋಡಬಹುದು. ಅದಕ್ಕಿಂತ ಒಂದು ದಿನ ಮುಂಚೆ ಸೂರ್ಯ ಚಂದ್ರರು ಎಲ್ಲಿದ್ದರು ಎಂಬುದನ್ನು ನೋಡಿ, ನೀವೇ ನಾಳಿನ ಪಂಚಾಂಗ ಬರೆಯಬಹುದು. ನೀವು ಭೂಮಿಯನ್ನು ಬಿಟ್ಟು ಬಾಹ್ಯಾಕಾಶದಲ್ಲಿ ತೇಲಾಡುತ್ತ ಗ್ರಹ, ನಕ್ಷತ್ರಗಳ ವೀಕ್ಷಣೆ ಮೊದಲು ಬಯಸಿದರೆ ಅದಕ್ಕೂ ಸೌಲಭ್ಯ ಕಲ್ಪಿಸುವ 'ಸಾಫ್ಟ್ ವೇರ್' ಪ್ರೋಗ್ರಾಂ

ಗಳು ಸಿದ್ಧವಿವೆ.

'ಡಾನ್ಸ್ ಆಫ್ ದಿ ಪ್ಲಾನೆಟ್ಸ್' ಗ್ರಹಗಳ ನರ್ತನ ಎಂಬ ಹೆಸರಿನ ಪ್ರೋಗ್ರಾಂ ತಂದು ನೀವು ಕಂಪ್ಯೂಟರ್‌ಗೆ ಜೋಡಿಸಿ ಕಾಲ್ಪನಿಕ ಗಗನ ನೌಕೆ ಏರಬಹುದು. ಸೌರವ್ಯೂಹ ದಾಟಿ 2500 ಕೋಟಿ ಮೈಲಿಗಳ ಆಚೆ ನಿಂತು ನಮ್ಮ ಜಗತ್ತನ್ನು ವೀಕ್ಷಣೆ ಮಾಡಬಹುದು. ಮತ್ತೆ ನಮ್ಮ ಸೌರವ್ಯೂಹಕ್ಕೆ ಬಂದು ಪ್ಲುಟೋ, ನೆಪ್ಚೂನ್, ಯುರೇನಸ್, ಗುರು, ಶನಿ ಎಲ್ಲವುಗಳ ಪಕ್ಕದಲ್ಲಿ ಹಾಯ್ದು ಬಂದು ಕ್ಷುದ್ರಗಳ ಮಧ್ಯೆ ನುಸುಳಬಹುದು. ಎಲ್ಲವೂ ಅವುಗಳ ರೂಪ ಗಾತ್ರ ಸ್ಥಾನಮಾನ ವನ್ನು ನಿಖರವಾಗಿ ತೋರಿಸುತ್ತವೆ.

ಇದಕ್ಕೆ ಮಾಹಿತಿ ಕ್ರಾಂತಿಯ ವಿರಾಟರೂಪ ಎನ್ನಬಹುದು. ಇಡೀ ಮಾನವ ಇತಿಹಾಸದಲ್ಲಿ ಬಾಹ್ಯಲೋಕದ ಬಗ್ಗೆ ಸಂಗ್ರಹಿಸಲಾದ ಒಟ್ಟು ಮಾಹಿತಿಯನ್ನು ನಾವು ಈಗ ಕೆಲವೇ ತಾಸುಗಳಲ್ಲಿ ಗ್ರಹಿಸಲು ಸಾಧ್ಯವಾಗಿದೆ. ಆರ್ಯಭಟ, ಕೆಪ್ಲರ್, ಗೆಲಿಲಿಯೋ, ಬ್ರಾಹೆ, ನ್ಯೂಟನ್ ಇವರೆಲ್ಲಾ ತಮ್ಮ ಇಡೀ ಜೀವಮಾನವನ್ನೇ ವ್ಯಯಿಸಿ ಕಲೆ ಹಾಕಿದ ಜ್ಞಾನವನ್ನು ನಾವು ಇಂದು ಬೆರಳ ತುದಿ ಯಲ್ಲಿ ಸಾಕ್ಷಾತ್ಕಾರ ಮಾಡಬಹುದಾಗಿದೆ. ನಮ್ಮ ಹದಿನೈದು ವರ್ಷದ ಮಕ್ಕಳೂ ಪರಿಣಿತ ಖಗೋಲ ವಿಜ್ಞಾನಿ ಆಗಬಹುದಾಗಿದೆ.

ಗಮನಿಸಿ: ಇಲ್ಲಿ 'ನಾವು' ಎಂದರೆ ನಮಗಿಂತ ತುಂಬ ಮುಂದಿದ್ದವರು ಎಂದರ್ಥ. ನಮಗೆ ಹೋಮ್ ಕಂಪ್ಯೂಟರ್ ಕೈಗೆಟಕುವ ದಿನ ಇನ್ನೂ ಸಮೀಪಿಸಿಲ್ಲ. ಆದರೆ ಪಾಶ್ಚಾತ್ಯ ಮಕ್ಕಳಿಗೆ ಮನೆ ಯಲ್ಲೇ ತಾರಾ ವೀಕ್ಷಣೆಯ ಸಾಫ್ಟ್ ವೇರ್ ಸೌಲ ಭ್ಯಗಳು ಹತ್ತು ವರ್ಷಗಳ ಹಿಂದೆಯೇ ಲಭಿಸಿವೆ.

(ಆಧಾರ) 'ಗೌರಿ ಅಭಿ'



ಸಿಲುವು ಚಿತ್ರಗಳು

ಮರಗಳಾಚೆ ನೀಲಿ ಬಣ್ಣ ಮಸುಕಾಗತೊಡಗಿದ ಆಕಾಶದ ಸೀಳುಗಳು ಇಕ್ಕಟ್ಟಾದ ಚಿಂತೆಗಳ ಹಾಗೆ 'ಕುಂಜಾಣೆ'ಯ ಎವೆಗಳಲ್ಲಿ ತುಡಿದವು. ಕಿಟಕಿಯ ಬಳಿಯಿಂದ ದೂರಾಗದೆ ನೀನೇಕೆ ಹಟದಿಂದ ಅಲ್ಲೇ ನಿಂತಿರುವೆ ಎಂದು ಅಂಗಳದ ಬಾಳೆಯ ಹಿಂಡುಗಳು ಅವಳನ್ನು ಕೇಳಿದವು. ಆದರೆ, ಅವಳು, ಅವುಗಳ ಶಬ್ದ, ಚಲನೆಗಳನ್ನು

ಗಮನಿಸದೆ ಮೇಲಿನಿಂದ ಬೆಳಕಿನ ಎಳೆಗಳು ಧುಮ್ಮಿಕ್ಕುವುದನ್ನು ನೋಡುತ್ತ ನಿಂತಳು.

ಎಳೆಗಳು ಬಿದ್ದಲ್ಲೆಲ್ಲ ಕತ್ತಲಾಗುತ್ತಿತ್ತು. ಕತ್ತಲು ಸುತ್ತಲೂ ತೆವಳುತ್ತಿತ್ತು.

ಆತನ ಕಾಲ ಸಪ್ಪಳ ಬಾಗಿಲ ಬಳಿ ಕೇಳಿ ಬರುತ್ತಿಲ್ಲವೇಕೆ ಎಂದು ಅವಳು ಯೋಚಿಸಿದಳು. ಆತ ಹೊರಗಿನಿಂದ ಹಿಂತಿರುಗಲಿಲ್ಲವೇ? ಅಥವಾ ಒಳಗಿನ ಕೋಣೆಯಲ್ಲಿ ......

'ಸಣ್ಣ ಬಣಜಿಗ' ಕೆಲದಿನಗಳಿಂದ ಬಹಳ ತಳಮಳದಿಂದಿದ್ದ. ಕತ್ತಿಯಲುಗಿನ ಕಲೆಯಿದ್ದ ಮುಖದ ಪ್ರಸನ್ನತೆ ಮಾಯವಾಯಿತು. ಕಣ್ಣುಗಳಲ್ಲಿ ನೆರಳು ಹರಡಿತು. ಒಂದರ ಮೇಲೊಂದಾಗಿ ಬೀಡಿ ಸೇದಿ ಎಸೆಯುತ್ತಿದ್ದ.

ತಿರುಗ್ಲಿ ....''

ಅಂಗಳದ ಹುಲ್ಲಿನ ಗುಡಿಸಲಿನ ಕೆಳಗೆ ಅನಾಥತೆಯನ್ನು ಸ್ವೀಕರಿಸುವಂತೆ ನಿಶ್ಚಲತೆಯಲ್ಲಿ ಮುಳುಗಿರುವ ಗಾಣ. ಅದು ಒಮ್ಮೆ ಚಿಕ್ಕಿಯೇ ಬಹಳ ಕಾಲವಾಯಿತು. ಗಾಣದಲ್ಲಿ ಕೊಬ್ಬರಿಗಿಟುಕು

ಗಳನ್ನು ಹಾಕಿದ್ದು ಮತ್ತು ದಂಡಿನ ನೊಗದ ಹಿಂದೆ ಕೂಗಾಡುತ್ತ ನಡೆದದ್ದೆಲ್ಲ ಬರಿ ನೆನಪು ಮಾತ್ರವಾಗುತ್ತಿದೆಯೇ?

ಕೊರಳ ದೊಡ್ಡ ಗಂಟೆಯಲುಗಿಸುತ್ತ, ದೊಡ್ಡ ಕೊಂಬುಗಳುಳ್ಳ ತಲೆಯಲುಗಿಸುತ್ತ ಹಗಲೂ ಇರುಳೂ ಗಾಣವನ್ನು ಸುತ್ತಿ ಬರುತ್ತಿದ್ದ ಎತ್ತು ಇದ್ದಕ್ಕಿದ್ದಂತೆ ಒಂದು ದಿನ ಬಿದ್ದು ಒದ್ದಾಡಿ

ಮಲಯಾಳಂ ಮೂಲ : ಬಾಲಕೃಷ್ಣನ್ ಮಾಂಗಾಡ್

ಕನ್ನಡಕ್ಕೆ : ಡಾ। ಅಶೋಕ ಕುಮಾರ್

ಅವಳ ಎದೆಯಲ್ಲಿ ತಳಮಳದ ರೆಕ್ಕೆ ಬಡಿತ ಏರುತ್ತಿತ್ತು.

ಪುನಃ ಬೀಡಿ ಹಚ್ಚಲಣಿಯಾದಾಗ ಅವಳು ಕಪ್ಪನೆಯ ನವಿರಾದ ಬೆರಳುಗಳನ್ನು ಚಾಚಿ ತಡೆದಳು. ಆಗ ಮಾತ್ರವೇ ಅವಳ ಸಾಮೀಪ್ಯವನ್ನು ಆತ ಅರಿತಂತೆ ಕಾಣಿಸಿತು. ಆತ ಕಂಗಳನ್ನು ಮೇಲೆತ್ತಿದ್ದ.

ಅವಳು ಕೇಳಿದಳು:

''ನಂಗೇನೂ ಹೇಳಲ್ವೇ?''

ಆತ ಅದನ್ನು ಕೇಳಲಿಲ್ಲ.

ಅವಳ ಅಡಚಣೆಯನ್ನು ಲೆಕ್ಕಿಸದೆ ಬೀಡಿ ಹಚ್ಚಿ ಹೊಗೆಯೆಳೆದು ಅನಿರ್ವಚನೀಯವಾದ ಒಂದು ಉದ್ವೇಗದ ಮಂಜಿನ ಮುಸುಕನ್ನು ಮುಖದಲ್ಲಿ ಧರಿಸಿ ಆತ ಅವಳನ್ನು ನೋಡಿದ:

''ಕುಂಜಾಣೀ, ಈ ಬಾಳು ಎಷ್ಟು ಗೊತ್ತು ಗುರಿ ಇಲ್ದೇ ಇರೋದು, ಅಲ್ವಾ?''

ಅವಳು ಆ ಶಂಕೆಯಿಂದ ಗಂಡನನ್ನು ನೋಡಿದಳು:

''ನಂಗೆ ಹಾಗನ್ಸಿಲ್ಲ.''

''ನಿಂಗೂ ಅನ್ಸುತ್ತೆ. ಈ ಗಾಣ ಇನ್ನೊಲ್ಪ ಸತ್ತಂದೇ ಗಾಣವೂ ತಲೆ ಚಾಚಿ ಮಲಗಿತು. ದನಿಯೇರಿಸದೆ ಅಳುತ್ತಿತ್ತೇ?

''ಈ ಕೆಲ್ಸ ಸಾಕು. ಇನ್ನು ಬೇರೆ ಏನಾದ್ರೂ ಮಾಡ್ಬೇಕು. ಕಲ್ಲು ಕಿತ್ತೋದ್ನೂ ಹೊಡೆಯೋದ್ನೂ ನಾ ಬಲ್ಲೆ.'' ಆತ ಬೀಡಿ ತುಂಡನ್ನು ದೂರಕ್ಕೆ ಗುರಿಯಿಟ್ಟು ಎಸೆದ.

ಕುಂಜಾಣಿಯ ದಣಿದ ಎವೆಗಳು ಆತನ ಸುತ್ತಲೂ ಸುಳಿದಾಡಿದವು. ಅವಳ ದನಿ ಅಕಾರಣವಾಗಿ ಅದುರಿತು.

''ಯಾಕೆ ಹಾಗನ್ಸುತ್ತೇ?''

''ತೊಂಡಚ್ಚನ್ ಭೂತದ ಕೂಗು ನನ್ನೆದೇಲಿ ಕೇಳಿಸ್ತು.''

''ನಿದ್ದೇಲಾ?''

''ನಿದ್ದೇಲೂ ಎಚ್ಚರದಲ್ಲೂ.''

''ತೊಂಡಚ್ಚನ್ ಮುನಿಸಿಕೊಂಡ್ವೇನೋ?''

''ಯಾರಿಗ್ಗೊತ್ತು?''

ಅವಳ ಅಂತರಂಗದಲ್ಲಿ ಸಣ್ಣ ತರಂಗಗಳು ಕಂಪಿಸಿದವು. ತೊಂಡಚ್ಚನ್ ಭೂತದ ಕೋ ಆಡಿಸಿ ಬಹಳ ಕಾಲವಾಯಿತು. ಭೂತದ ಸಂಭಾ

ಸೆಗಳೂ ಖಡ್ಗದ ಹೊಳಪೂ ಗೆಜ್ಜೆಯ ಝಣತ್ಕಾರವೂ ಬರಿ ನೆನಪಾಗಿ ಉಳಿದಿದೆ. ಮನದಲ್ಲಿ ಒಂದು ಬತ್ತಿ ಎಂದೂ ಎಚ್ಚೆತ್ತು ಉರಿಯುವುದಷ್ಟೇ.

ತೊಂಡಚ್ಚನ್‌ನ ಕೋಪವಿರಬಹುದೇ ಗಂಡನ ಎಚ್ಚರವನ್ನೆಲ್ಲ ಹೊಡೆದು ಕೆಡವಿ ಹಾಳು ಮಾಡಿದ್ದು?

''ನಾವು ಹಾಯಾಗ್ ಬಾಳೋದು ಒಂದ್ವೇಳೆ ತೊಂಡಚ್ಚಂಗೆ ಹಿಡಿಸ್ಲಿಲ್ಲಾನ್ಸುತ್ತೆ .....'' ಆತನ ರಬ್ಬದ ತುಸು ಸಿಡುಕಿನ ಉರಿಯನ್ನು ಅವಳು ಅರಿತಳು.

''ಹಾಗನ್ಬೇಡ.'' ಎಂದು ಅವಳು ಬಾಯಿಗೆ ಬೆರಳಿಟ್ಟಳು. ನಂತರ ಅನುತಾಪದಿಂದ ಆತನನ್ನು ನೋಡಿದಳು .... ಹೌದು, ಆತ ಬಹಳಷ್ಟು ಬದಲಾಗಿದ್ದಾನೆ. ಮೋಡಗಳು ದಟ್ಟೈಸಿದ ಆ ಕಂಗಳನ್ನು ಕಂಡರೆ ತಿಳಿಯುತ್ತದೆ. ಸಲ್ಲದ ವಿಚಾರಗಳು ಆತನ ಮನಸ್ಸನ್ನು ಕೊರೆದು ತಿಂದಿವೆ. ಯಾವುದೋ ಒಂದು ನೆರಳು ಆತನ ಸುತ್ತಲೂ ಮೆಲ್ಲಗೆ ನಡೆಯುತ್ತಿದೆ.

ಭಯವುಂಟು ಮಾಡುವ ಇನ್ನೊಂದು ನೆರಳಾಗಿ ತಾಂಬೂಲ ಜಗಿದು ಉಗುಳಿ, ಅಲಕ್ಷ್ಯದಿಂದ ತಲೆಯೆತ್ತಿ ಹಿಡಿದು ಮಹಡಿ ಮನೆಯ ಉಕ್ಕಾರನ್ ನಾಯರ್ ಬಾಳೆಗುಂಪಿನ ಬಳಿ ಬಂದು ನಿಂತನು. ''ಲೋ ಸಣ್‌ಬಣಜಿಗಾ ....'' ಆತನ ಧ್ವನಿ ಹೊರಟಿತು.

ಸಣ್ಣ ಬಣಜಿಗ ವಿನಯದಿಂದ ಮುಂದಕ್ಕೆ ಸರಿದು ನಿಂತ.

''ಎಲ್ಹೋಯ್ತೋ ನಾನ್ ಕೊಟ್ ಕಳಿಸಿದ ಜುಬ್ರಿ ಚೇಲ?''

ಆತ ಗಾಣದ ಮನೆಯ ಮೂಲೆಗೆ ಬೆರಳು ತೋರಿಸಿದ. ಚೇಲ ಅಲ್ಲಿ ಬಿದ್ದಿತ್ತು.

ಉಕ್ಕಾರನ್ ನಾಯರ್‌ನ ಮುಖ ಕಪ್ಪಿಟ್ಟು ತುಟಿಗಳು ಕಂಪಿಸಿದವು.

''ನಾನು ಅದನ್ನ ನಿಮ್ಮತ್ತೇಗೆ ಕಾಣ್ಕೆ ಕೊಟ್ಕಳ್ಲಿಲ್ಲ: ಆಡಿಸಿ ಎಣ್ಣೆ ತೆಗೆಯೋ.''

''ಸಾವ್ಕಾರೇ, ನಾವು ಆಡ್ಸೋದನ್ನ ನಿಲ್ಸಿದ್ವಿ ....'' ಆತ ಧೈರ್ಯ ಕುಂದದೆ ಹೇಳಿದ.

ಉಕ್ಕಾರನ್ ನಾಯರ್‌ನ ಕಂಗಳು ಚೂಪಾದವು. ಆತ ಇನ್ನಷ್ಟು ಮುಂದಕ್ಕೆ ಬಂದು ಸಣ್ಣ ಬಣಜಿಗನ ಮುಖಕ್ಕೆದುರಾಗಿ ಬೆರಳು ತೋರಿದ.

''ಲೋ ಕಳ್ಳ ಬಣಜಿಗಾ, ಗಾಣವಾಡ್ಸೋದು ನಿನ್ ಧರ್ಮ. ಅದನ್ನ ನಿಲ್ಸಕ್ಕೆ ನಿಂಗೆ ಹಕ್ಕಿಲ್ಲ. ಅದಕ್ಕೆ ಯಾರೂ ನಿಂಗೆ ಅಧಿಕಾರ ಕೊಟ್ಟಿಲ್ಲ.''

ಸಣ್ಣ ಬಣಜಿಗ ಪುನಃ ಮುದುಡಿದ. ''ಸಾವ್ಕಾರೇ, ನಮ್ ಎತ್ತು ಸತ್ತೋಯ್ತು.''

''ಅದಕ್ಕೇನೋ .....'' ಉಕ್ಕಾರನ್ ನಾಯರ್‌ನ ದನಿ ಗಹಗಹಿಸಿತು. ''ನಿನ್ನ ಮಕ್ಳಿಲ್ವಾ? ತಿಂದು ಕೊಬ್ಬಿ ನಿಂತಿಲ್ವಾ ಇಲ್ಲಿ. ಹಿಡ್ದು ನೊಗಕ್ ಕಟ್ಟು .....''

ನಡುಗುತ್ತ ಕುಂಜಾಣಿ ಅದನ್ನು ಆಲಿಸಿದಳು. ಅವಳಿಂದ ಏನಾದರೂ ಮಾಡಲು ಸಾಧ್ಯವಾಗುವ ಮೊದಲೇ ಉಕ್ಕಾರನ್ ನಾಯರ್ ಅವಳ ಕುತ್ತಿಗೆಗೆ ಹಗ್ಗ ಬಿಗಿದು ಬಿಟ್ಟಿದ್ದ. ಅನುಮಾನಿಸುತ್ತ ನಿಂತು ನೋಡುತ್ತಿದ್ದ ಸಣ್ಣ ಬಣಜಿಗನ ಕಡೆಗೆ ಆತ ಆಕ್ರೋಶದ ಚಾಟಿ ಬೀಸಿದ.

''ಹುಂ, ಓಡ್ಸೋ .....''

ಗಾಣದಲ್ಲಿ ಕೊಬ್ಬರಿ ಗಿಟುಕುಗಳು ತುಂಬಿದವು. ಗಾಣ ರೋದಿಸಿತು. ದಿಢೀರನೆ ಹೊಮ್ಮಿದ ಆವೇಶದಿಂದ ಸಣ್ಣ ಬಣಜಿಗ ಮುಂದಕ್ಕೆ ನುಗ್ಗಿ ಬಾರುಕೋಲನ್ನು ಗಾಳಿಯಲ್ಲಿ ಆಡಿಸಿದ. ಕುಂಜಾಣಿ ನೊಗ ಎಳೆಯುತ್ತಾ ಏಗಿದಳು.

ಬಾರುಕೋಲು ಪುನಃ ನಡುಗಿತು.

ಉಕ್ಕಾರನ್ ನಾಯರ್ ಜೋರಾಗಿ ನಕ್ಕನು.

ಆತ ಹೋದಾಗ ಸಣ್ಣ ಬಣಜಿಗ ಕುಂಜಾಣಿಯನ್ನು ಆದರಿಸಿದ, ವಾತ್ಸಲ್ಯದಿಂದ ಅವಳ ತಲೆಗೂದಲನ್ನು ನೇವರಿಸಿದ.

''ಎದೆ ನೊಂದಿತಾ?''

''ಇಲ್ಲ.''

''ಬೇಜಾರಾಯ್ತಾ.''

''ಊಹುಂ.''

''ಇನ್ನೂ ಎಳೆಯೋಕಾಗುತ್ತಾ?''

''ಓ ....''

ಅವಳು ಹೆಣಗುತ್ತಾ ಏದುಸಿರಿಡುತ್ತಾ ಪುನಃ ಗಾಣವೆಳೆದಳು. ಕೈಯಲ್ಲಿ ಬಾರುಕೋಲಿನೊಂದಿಗೆ ಒಂದು ವ್ರತದಂತೆ ಆತ ಹಿಂದೆ ನಡೆದ. ''ತೊಂಡಚ್ಚನ್ ಭೂತಪ್ಪಾ ....'' ಎಂಬ ಅವಳ ನಿಶ್ಶಬ್ದ ರೋದನವನ್ನು ಆತ ಕೇಳುತ್ತಿರಲಿಲ್ಲ.

ಕೊಬ್ಬರಿ ಮೂಟೆಗಳು ಮತ್ತೆ ಮತ್ತೆ ಬಂದು ಬಿದ್ದವು. ಗಾಣದ ಮನೆ ತುಂಬಿತು. ಒಳತೊಟ್ಟಿಗಳು ತುಂಬಿದವು.

ಸಣ್ಣ ಬಣಜಿಗ ಹೇಳಿದ.

''ನಮ್ಮ ಕೆಲ್ಸಾನ ಇನ್ನು ಸಂಜೇಗೆ ಮಾಡೋಣ. ಎತ್ತಿನ್ಹಾಗೆ ನೀನ್ ಗಾಣ ಎಳೆಯೋದ್ನ ಯಾರೂ ನೋಡೋದ್‌ಬೇಡ.'' ಆತನ ಮನಸ್ಸೂ ತುಂಬಿಬರುತ್ತಿತ್ತು.

''ಅದೇನೂ ಪರ್ವಾಗಿಲ್ಲ .....'' ಅವಳು.

''ಆದ್ರೂ ಸಂಜೇಗೆ ಸಾಕು. ನೀನೂ ಒಬ್ಬ ಮನುಷ್ಯಳಲ್ವಾ?''

ತಾನು ಓರ್ವ ಮನುಷ್ಯ ಜೀವಿ ಅಲ್ಲದಾಗುತ್ತಿರುವ ಅನಿಸಿಕೆ ಅವಳಿಗೆ. ಸಂಜೆ ಬಾಗಿಲು ಮುಚ್ಚಿದೊಡನೆ ನೊಗಕ್ಕೆ ಹೆಗಲು ಕೊಡುತ್ತಾಳೆ. ಏದುತ್ತಾ ನಡುಗುತ್ತಾ ಗಾಣವನ್ನೆಳೆಯುತ್ತಾ ತಿರುಗುತ್ತಾಳೆ. ತಾನು ಮೂಡಿಸಿದ ಕಾಲ ಹೆಜ್ಜೆ ಗುರುತುಗಳನ್ನು ತುಳಿದು ಸವೆಸುತ್ತಾ ಮತ್ತೆ ಮತ್ತೆ ..... ಅರ್ಧ ರಾತ್ರಿಯ ನಕ್ಷತ್ರ ತನ್ನನ್ನು ನೋಡುತ್ತ ನಗು ಚಿಮ್ಮಿಸುವುದನ್ನು ಅವಳು ಎಂದೂ ಕಾಣಲಿಲ್ಲ ಎಂದು ನಟಿಸುವಳು.

ಕಾಲುಗಳು ಬಳಲಿದವು. ಮುಂದಕ್ಕೆ ಸಾಗಲು ಕಷ್ಟವೆನಿಸಿದಂಥ ಒಂದು ರಾತ್ರಿ ತೀರ ಅನಿರೀಕ್ಷಿತವಾಗಿ ಹಿಂದಿನಿಂದ ಆತನ ಗರ್ಜನೆ ಕೇಳಿಸಿತು. ಮತ್ತು ಬಾರುಕೋಲು ಚೀರುತ್ತಾ ಬೆನ್ನನ್ನಪ್ಪಳಿಸಿತು. ವೇದನೆಯಿಂದ ಅವಳು ಚಡಪಡಿಸಿದಳು. ನಾಲ್ಕೈದು ಹೆಜ್ಜೆ ಮುಂದಕ್ಕೆ ಜಗಿದು ಬಿಟ್ಟಳು.

ಸಿಟ್ಟಿನಿಂದ ತಿರುಗಿ ನೋಡಿದಾಗ ಬಾರುಕೋಲು ಪುನಃ ದೇಹಕ್ಕೆ ಬಿತ್ತು. ಭಯ ಬಿದ್ದು, ದಣಿದು ಗಾಣವನ್ನೆಳೆಯುತ್ತಾ ಅವಳು ಒಂದೇ ವೃತ್ತದಲ್ಲಿ ಓಡಿದಳು. ಆತನ ಆರ್ಭಟ ಮತ್ತು ಬಾರುಕೋಲಿನ ಮೊಳಗುವಿಕೆ ಸದಾ ಅವಳನ್ನು ಹೆದರಿಸಿತು. ಒಂದಕ್ಷರ ನುಡಿಯುವುದಾಗಲಿ ಕಣ್ಣುಗಳನ್ನು ಹಿಂದಕ್ಕೆ ಹಾಯಿಸುವುದಾಗಲಿ ಅವ ಳಿಂದ ಸಾಧ್ಯವಾಗಲಿಲ್ಲ.

ಬಳಿಕ ಅರೆಯುವುದಕ್ಕೆ ಭಾರ ಹೆಚ್ಚಿಸಲು ಆತ ಗಾಣದ ದಂಡಿನ ಮೇಲೇರಿ ಕುಳಿತ. ಕಾಲುಗಳನ್ನು ಬೀಸಿ ತೊನೆಯುತ್ತಾ ಬೀಡಿ ಹೊತ್ತಿಸಿ ಸೇದಿದ. ವೇಗ ತಗ್ಗಿತು ಎಂದೆನಿಸಿದಾಗಲೆಲ್ಲ ಬಾರುಕೋ ಲಿನ ಬೆತ್ತದ ಹಿಡಿಕೆಯಿಂದ ಅವಳ ಬೆನ್ನಿಗೆ ತಿವಿದ.

ಒಂದು ರಾತ್ರಿ ಕುಂಜಾಣಿ ನೊಗದ ಕೆಳ ಕುಸಿದು ಬಿದ್ದಳು. ನಾಲ್ಕಾರು ಸಲ ಬಾರುಕೋ ನಿಂದ ಬೀಸಿ ಹೊಡೆದನಾದರೂ ಚಡಪಡಿ ಹೊರಳಿದಳಲ್ಲದೆ ಅವಳು ಮೇಲೇಳಲಿಲ್ಲ. ಬಳಿಕ, ಒಂದು ಪಾರಿವಾಳವನ್ನೆಂಬಂತೆ ಒಣಗಿ ಅವಳನ್ನು ಎತ್ತಿಕೊಂಡು ಆತ ಒಳಗಿ ಕೋಣೆಯ ಮೂಲೆಯಲ್ಲಿ ಮಲಗಿಸಿದ.

ಆತ ಕಾದನಾದರೂ ಅವಳು ದಿನಗಳ ಕಾ ಹಾಗೆಯೇ ಬಿದ್ದಿದ್ದಳು.

ಆತ ಅಸಹನೀಯತೆಯಿಂದ ಕೇಳಿದ:

''ನೀನು ಕೆಲ್ಸ ಕಾರ್ಯಾನೆಲ್ಲ ಮರೆ ಹೋದೆಯಾ?''

''ನಂಗೆ ತೀರ ಆಗಲ್ಲ .....''

''ಒಂದ್ಸಲ ಬಂದು ನೋಡ್ಬಾರ್ದೇ?''

''ಆಗಲ್ಲ.''

ಸಾಹುಕಾರನ ಮಗಳ ಮದುವೆ ಮುಂದಿ ಸಂತೆ ದಿನ. ಅದಕ್ಕೆ ಬೇಕಾದ ಪೂರ್ತಿ ಎ ಯನ್ನೂ ಆಡಿಸಿ ಕೊಡಬೇಕು. ಒಂದು ದಿನ ಸ ವಾಯಿದೆ ಹೇಳುವುದು ಸಾಧ್ಯವಿಲ್ಲ. ಆತ ಚಿಂ ಮಗ್ನನಾದ.

ಅವಳಿಗೆ ಏನೂ ಹೇಳಲು ತೋಚಲಿಲ್ಲ.

ಮರುದಿನ ಆತ ಅಪ್ರತ್ಯಕ್ಷನಾದನು. ರಾ ಬರಲಿಲ್ಲ. ತೊಂಡಚ್ಚನ್ ಅವಳಿಗೆ ಜೊತೆಯಾ ನಿಂತಿತು. ತುಂಬು ಕತ್ತಲೆಯಲ್ಲಿ ಬೆಳ್ಳಗೆ ಹೊ ಯುವ ದಾಡಿಯನ್ನಲುಗಿಸುತ್ತ, ಕಣ್ಣುಗಳ ಜ್ವಾ ಗಳನ್ನು ಅದುರಿಸುತ್ತ ತೊಂಡಚ್ಚನ್ ಹೇಳಿತ ಹೆಣ್ಣೇ ಎಣ್ಣೆ ಆಡಿಸಿಯಾಡಿಸಿ ದಿನಗಳ ಮವ ವನ್ನು ತಿಳಿಯುವುದೇ ನಿನ್ನ ಧರ್ಮ. ಇಲ್ಲ

ಕೊಬ್ಬರಿ ಮತ್ತು ಎಣ್ಣೆ ತುಂಬಬೇಕು. ಉದ್ದಕ್ಕೂ ಎಣ್ಣೆಯ ಹೊಳೆಗಳು ಹರಿಯಬೇಕು. ಬೇರೇ ನನ್ನೂ ನೀನು ಚಿಂತಿಸಕೂಡದು .....

ಎಣ್ಣೆ ಹೊಳೆಗಳನ್ನು ಕನಸು ಕಾಣುತ್ತಾ ಕುಂಜಾಣಿ ನಿದ್ರಿಸಿದಳು.

ಬೆಳಗಿನಿಂದ ಅವಳು ಉತ್ಸಾಹವತಿಯಾಗಿ ಗಂಡನನ್ನು ಕಾದು ಕುಳಿತಳು. ಆತ ಬಂದಾಗ ಸಂಜೆಯಾಯಿತು. ಜೊತೆಯಲ್ಲಿ ಓರ್ವ ಹುಡುಗಿ ಯಿದ್ದಳು. ಎಣ್ಣೆಗಪ್ಪು ಬಣ್ಣದ ದಪ್ಪನೆ ದುಂಡ ಗಿನ ಓರ್ವ ಸಣ್ಣ ಹುಡುಗಿ.

ಹೊಸ ಬಟ್ಟೆಗಳನ್ನು ಧರಿಸಿದ ಅವಳು ಬಲಗಾ ಲಿಟ್ಟು ಒಳಬಂದಾಗಲೇ ಬಂದಡರುತ್ತಿರುವ ವಿಸ್ಮ ಯಗಳ ಆಳವರಿಯದೆ, ಕುಂಜಾಣಿ ಒಂದು ನಿಮಿಷ ದಂಗಾದಳು.

ಸಣ್ಣ ಬಣಜಿಗ ಅಳುಕದೆ ಎದೆಯುಬ್ಬಿಸಿ ಎದು ರಿಗೆ ನಿಂತ.

ನಾನು ಸೀರೆ ಕೊಟ್ಟು (ವಿವಾಹವಾಗಿ) ಕರೆದು ಕೊಂಡು ಬಂದೆ. ಇನ್ನೊಂದು ಹೆಣ್ಣು ಬೇಕೆಂದು ನನಗನ್ನಿಸಿತು. ತೊಂಡಚ್ಚನ್ ಹಾಗೆ ತೋಚು ವಂತೆ ಮಾಡಿತು.

ಕುಂಜಾಣಿಯ ಎದೆ ಏದಿತು. ಒಂದು ನಿಟ್ಟುಸಿ ನಲ್ಲಿ ಅವಳು ಸಾಂತ್ವನ ಕಂಡುಕೊಂಡಳು.

ಹೊಸ ಹೆಣ್ಣು ಅವಳ ಹೆಗಲಲ್ಲಿ ಮುಖವಿರಿಸಿ ಣ್ಣೀರು ಹರಿಸಿದಾಗ ಕುಂಜಾಣಿ ಅವಳನ್ನು ಸ್ನೇಹ ಭಾವದಿಂದ ಅಪ್ಪಿ ಹಿಡಿದಳು.

ಸಾಂತ್ವನಗೊಳಿಸಿದಳು.

''ಅಳ್ಬೇಡ.''

''ನಾ ಬಂದಿದ್ದು ತಪ್ಪಾಯ್ತಾ?''

''ಇಲ್ಲ, ಹುಡುಗೀ ...... ಇಲ್ಲ.''

ಕುಂಜಾಣಿಯ ಎದುರು ಹೊಸದೊಂದು ಕಾಶ ತೆರೆದುಕೊಳ್ಳುತ್ತಿತ್ತು. ಮರಗಳಾಚೆಗೆ ಮೋಡಗಳಿಲ್ಲದ, ನಕ್ಷತ್ರಗಳಿಲ್ಲದ ಎಣ್ಣೆ ಬಟ್ಟೆಯ ಹಾಗಿರುವ ಸಣ್ಣ ಆಕಾಶ. ಅದರ ಬಣ್ಣ ಮಾಸಿತ್ತು. ಹೊಳಪು ಕುಂದಿತ್ತು.

ಆ ಆಗಸದ ಕೆಳಗೆ ಕತ್ತಲೆಯಲ್ಲಿ ನಿಂತಿದ್ದಳು ಅವಳು. ''ಇನ್ನೂ ನೀ ಸರಿದು ಹೋಗಿಲ್ಲ ವೇಕೆ?'' ಎಂದು ಗಾಳಿಯಲ್ಲಿ ಕಲರವವೆಬ್ಬಿಸಿದ ಬಾಳೆಗುಂಪುಗಳು ಕೇಳುತ್ತಲಿವೆ. ಇದು ತನ್ನ ಆಕಾ ಶವಲ್ಲವೇ, ತನ್ನ ಮರಗಳಲ್ಲವೇ, ತನ್ನ ತೊಂಡ ಚ್ಚನ್ ಅಲ್ಲವೇ ಎಂದು ಮನಸ್ಸು ಹಲುಬಿತು.

ತಣ್ಣನೆ ಗಾಳಿಯು ರಾತ್ರಿಯ ಕೈಯನ್ನು ಹಿಡಿ ಯಲು ಬಂತು. ಒಳಗಿನ ಬಾಗಿಲ ಭಾಗಗಳು ಮುಚ್ಚಿಕೊಂಡವೇ? ಹೊಸ ಹೆಣ್ಣು ಈಗ ಆತನ ....

ತಂಪಿನಲ್ಲಿ ಇಲ್ಲಿ ಒಂದು 'ಆಕಾಶ ಗಂಗೆ' ಗಿಡದಂತೆ ಯಾರನ್ನು ಕಾದು ಕುಳಿತಿದ್ದಾಳೆ?

ಇದ್ದಕ್ಕಿದ್ದಂತೆ ಹಿಂದಿನಿಂದ ಕಾಲ ಹೆಜ್ಜೆ ಸಪ್ಪಳ ಹೊಮ್ಮಿತು. ಸಣ್ಣ ಬಣಜಿಗ ಬಾರುಕೋಲಿನೊಂ ದಿಗೆ ಹೊರ ಬರುತ್ತಿದ್ದಾನೆ. ಹಿಂದೆ ಹೊಸ ಬಟ್ಟೆ ಯಲ್ಲಿ ಅಲಂಕೃತ ಹೊಸ ಹೆಣ್ಣು. ಆತ ಗಾಣದ ಕಡೆಗೆ ನಡೆದ. ಹಿಂದೆಯೇ ಅವಳು ಸಹ.

ಎದೆ ಬಡಿತದೊಂದಿಗೆ ನೋಡುತ್ತ ನಿಂತಿರಲು ಗಾಣದ ನೊಗ ಹೊಸ ಹೆಣ್ಣಿನ ಹೆಗಲಲ್ಲಿ ಕುಳಿ ತಿತು. ಬಾರುಕೋಲು ವಾಯುವಿನಲ್ಲಿ ಬಳುಕಿತು. ಬೆರಗಾಗಿ ನಿಂತ ಅವಳ ಬೆನ್ನ ಮೇಲೆ ಮೊದಲ ಪ್ರಹಾರ ಬಂದೆರಗಿತು. ಪುನಃ ಬಾರುಕೋಲು ಮೇಲೇರಿದಾಗ ಅವಳು ಗಾಣವನ್ನೆಳೆಯುತ್ತಾ ಅತಿ ವೇಗದಲ್ಲಿ ಓಡಿದಳು.

ತಾಳಲಾಗದೆ, ನುಡಿಯಲಾಗದೆ ಕುಂಜಾಣಿ ಬಿಕ್ಕಿದಳು. ಆಕಾಶದಲ್ಲಿ ಎಲ್ಲಿಯೋ ಮಂಕಾಗಿದ್ದ ಒಂದು ನಕ್ಷತ್ರ ಉದುರಿ ಬೀಳುತ್ತಿರುವಂತೆ ಅವ ಳಿಗೆ ತೋರಿತು. ●

ಸೌದೆಗಳನ್ನು ಸ್ವಲ್ಪ ಅಲುಗಾಡಿಸಿದರೆ ಬೆಂಕಿಯು ಚೆನ್ನಾಗಿ ಉರಿಯುತ್ತದೆ. ತುಳಿದರೆ ಅಥವಾ ಹೆದರಿಸಿದರೆ ಹಾವು ಹೆಡೆಯನ್ನು ಬಿಚ್ಚುತ್ತದೆ. ಪ್ರಾಣಿ ಅಥವಾ ಮನುಷ್ಯನು ಸಿಟ್ಟು ಬಂದಾಗ ತನ್ನ ಶಕ್ತಿಯನ್ನು ತೋರಿಸುತ್ತಾನೆ.

– ಅಭಿಜ್ಞಾನ ಶಾಕುಂತಲ

'ಹೊಟ್ಟೆ' ಎಂಬ ಪದವನ್ನು ಂಡು ಹಿಡಿದಾದ ನಂತರ, ಮುಂದಿನ ಪದವಾಗಿ ಹೊಟೇಲ್' ಹುಟ್ಟಿಕೊಂಡಿದೆ. 'ಹೊಟೇಲ್' ಂದೊಡನೆ ಹೊಟ್ಟೆ ಚುರುಕಾಗಿ ಮಿದುಳಿನ ಇದೊಂದು ಕರ್ಮವು ಗುಮಾಸ್ತಗಿರಿಯ ಅವಿಭಾಜ್ಯ ಅಂಗವೇ ಸೈ. ಹೀಗೆ ಹೊಟೇಲುಗಳು ನಮ್ಮನ್ನು ಎಡೆಬಿಡದೆ ಸೋಲಿಸಿಯೂ, ಗೆದ್ದೆವೆಂಬ ಹಮ್ಮಿನಲ್ಲಿ ವಿಶ್ರಮಿಸದೇ, ಅನುದಿನವೂ

ಹೊಟೇಲಾನಂದಗಳು


ಚುರುಕುತನ ಮುರುಟಿದಂತಾಗುತ್ತದೆ. ಹೀಗಾಗಿ ಸ್ವಲ್ಪ 'ಚುರುಕು' ಪಡೆಯೋಣವೆಂದುಕೊಂಡು ತಹದ ಗುಟುಕಿಗೋ, ಕಾಫಿಯ ಕಾತರಕ್ಕೋ ಹೊಟೇಲ್ ಹೊಕ್ಕವೆನ್ನಿ. ಹೊಟೇಲಿನಾತ ಬಗೆಬಗೆಯ ಸಿಹಿ-ಖಾರ ತಿಂಡಿ-ತಿನಿಸುಗಳನ್ನು ಅಂದವಾಗಿ ಷೋಕೇಸಿನಲ್ಲಿ ಅಲಂಕರಿಸಿ ಇಟ್ಟಿರುತ್ತಾನೆ. ಈ ಷೋಕೇಸಾದರೂ ತನ್ನಲ್ಲಿರುವ ತಿಂಡಿಗಳನ್ನು ನೊಣ-ಹಲ್ಲಿ-ಜಿರಲೆಗಳೇತ್ಯಾದಿಗಳಿಂದ ರಕ್ಷಿಸಲೋಸುಗ ಮೂರು ಕಡೆಗಳಲ್ಲಿ ಮರದ ಹಲಗೆ ಹೊಂದಿದ್ದರೂ, ತನ್ನ ಧಣಿಯ ಗಲ್ಲಾ ಪೆಟ್ಟಿಗೆಯ ರಕ್ಷಣೆಗಾಗಿ ಮಗದೊಂದು ಕಡೆ ಗಾಜಿನ ಹಲಗೆಯನ್ನು ಹೊಂದಿರುತ್ತದೆ. ಪಿತೂರಿಗಾರನಾದ ಮಾಲಿಕನಾದರೂ ಈ ಗಾಜಿನ ಮುಖವನ್ನೇ ನಿಮಗೆದುರಾಗಿ ಇಟ್ಟಿರುತ್ತಾನೆ. ಯಾವುದೇ ವಿಷಯವನ್ನು ಕೈಗೆತ್ತಿಗೊಂಡರೂ, ಅದರ 'bright side'ನೆಡೆಗೆ ಆದ್ಯಗಮನ ಕೊಡಬೇಕಾದುದು

ವಿ.ಗುರುಪ್ರಸಾದ

policy matters'ನ ಪರಿವಿಡಿಯಲ್ಲೇ ಬರುತ್ತದೆ ಅನೆ? ಈ ಷೋಕೇಸು ನಿಜಕ್ಕೂ, ರಾಮಾಯಣ ಕಾಲದಲ್ಲಿ ಆ ಶ್ರೀರಾಮನನ್ನು ಕಾಡಿದ 'ಮಾಯಾ ಜಿಂಕೆ'ಯ ಮರಿ ಮೊಮ್ಮಗನೇ ಇರಬೇಕು. ಹೀಗಾಗಿ ಮಿದುಳನ್ನು ಚುರುಕುಗೊಳಿಸಲು ಹೋದವರು; ಹೊಟ್ಟೆ ಭರ್ತಿಸಿಕೊಂಡು, ಇದ್ದ ಅಲ್ಪ-ಸ್ವಲ್ಪ ಚುರುಕನ್ನೂ ಕಳೆದುಕೊಂಡು, ಕಡತಗಳ ಮುಂದೆ ತೂಕಡಿಸುವಂತೆ ಆಗುವುದು.

ನಸುಕಿಗೆ ಮತ್ತದೇ ಚುರುಕುತನದಿಂದ ಮೈ ಕೊಡವೆದ್ದು ಸುಪ್ರಭಾತವನ್ನು ಸುಸ್ವರಿಸುವಾಗ 'ಕರ್ಮಣ್ಯೇ ವಾಧಿಕಾರಸ್ತೇ' ಎಂಬ ಗೀತವಾಕ್ಯದ ನೆನಪಾಗುವುದಂತೂ ಖರೆ.

ಹೊಟೇಲಿಗೆ ಹೋಗುವವರ ಸಂಖ್ಯೆಯಂತೂ ಅಗಣಿತ. ತೀರಾ ಕರಾರುವಾಕ್ಕಾದ ಅಂಕಿ ಅಂಶಗಳೇ ಬೇಕೆಂದಾದಲ್ಲಿ ಜನಗಣತಿಯ ಸಂಖ್ಯೆಯ



ಶೇಕಡಾ ಐದರಷ್ಟನ್ನು ಕಡಿತ ಮಾಡಿ, ನಿಖರತೆಗಾಗಿ ಸಾವಿರಕ್ಕೆ ಹತ್ತರಂತೆ ಬೇರೀಜನ್ನು ಭರ್ತಿಸಿ ಬರುವ ಅಂಕಿಯನ್ನು ಮಾನದಂಡವಾಗಿ ಇಟ್ಟುಕೊಳ್ಳತಕ್ಕದ್ದು. ಈ ಉಳಿಕೆಯ ಅಲ್ಪಸಂಖ್ಯಾತ ಮಂದಿಗಳಾದರೂ ಕಡಲೆ ಇದ್ದರೂ ಹಲ್ಲಿಲ್ಲದ ಮಂದಿಯಂತೆ; ಆಯುಷ್ಯದ ಎಕ್ಸ್‌ಟೆನ್‌ಷನ್ನಿಗಾಗಿ ಯಮನ ಮುಂದೆ ಕರಜೋಡಿಸಿ ನಿಂತವರು (ಸೇವಾ ವಿಸ್ತರಣೆಗಾಗಿ ಮಂಡಿಯೂರಿ, ಕರಜೋಡಿಸಿ ಮೇಲಧಿಕಾರಿಗಳ ಮುಂದೆ ನಿಲ್ಲುವ ನೌಕರರಂತೆ); ಯಮನಾದರೋ, ತನ್ನ ಕಾರ್ಯಭಾರ ಆಧಿಕ್ಯದಿಂದ, ತನ್ನ ಅಧಿಕೃತ ಏಜೆಂಟರನ್ನು ಲಾರಿ, ಬಸ್ಸು, ಹೋಟೇಲ್ ತಿಂಡಿಗಳು ...... ಇತ್ಯಾದಿಗಳಲ್ಲಿ ನೇಮಿಸಿಟ್ಟಿರುವುದರಿಂದ, ಅಧಿಕಾಯುಷ್ಯ ಪ್ರಿಯರು ಇವುಗಳಿಂದ ದೂರವಿರ ಬಯಸುವವರಾದರೂ, ಅದು ಮುಂಜಾವಿನ ಇಬ್ಬನಿಯಂತೆ ಅಲ್ಪಾಯು; ಹೋಟೇಲಿಗರು ಇಂಥ ಮಿಕಗಳನ್ನು ಮಿಸುಗಾಡದಂತೆ ಮಲಗಿಸಲು ಹೊಸತೊಂದು ಘಮ್ಮನೆಯ ಮಸಾಲೆಯನ್ನು ಅರೆದೇ ತೀರುವರು.

ಹೋಟೇಲುಗಳ ಬಗ್ಗೆ ಮೂರ್ತಿರಾಯರೂ, ಅ.ರಾ.ಮಿತ್ರರೂ ಈಗಾಗಲೇ ಅನಿಸಿಕೆ-ಕನಸಿಕೆ (ಕನಸಿನಲ್ಲಿ ಕಂಡಂಥ ಅಂಶಗಳು) ಅಭಿಪ್ರಾಯ-ಸಂತೃಪ್ತಿ-ಅಸಂತೃಪ್ತಿ .... ಎಲ್ಲವನ್ನೂ ದಾಖಲಿಸಿದ್ದಾರೆ. ಹೋಟೇಲಿನ ಘಮಲು ವಾಯುಮಂಡಲವನ್ನು ಬೆರೆತು ಚಿರಸ್ಥಾಯಿಯಾಗಿ ಉಳಿದಿರುವಂತೆ, ಈ ಬರಹಗಳೂ ಅಲ್ಲಲ್ಲಿ ಕಾಣಸಿಗುತ್ತಿರುತ್ತವೆ. ಏಕೆ, ಅನುಮಾನವೆ? ಎಂದೋ, ಯಾವ ಯುಗದಲ್ಲೋ ತಿಂದಿದ್ದ ಮೆಚ್ಚಿಗೆಯ ತಿಂಡಿಯ ಬಗ್ಗೆ ಆನಂದಾಮೃತದ ಹೆಗ್ಗಳಿಕೆಯನ್ನು ಸಾರ ಬಯಸುವ ಮೆಚ್ಚುಗರಾದರೂ ಹೇಗೆ ಮೂಗಿನ ಹೊಳ್ಳೆ ಅರಳಿಸಿಯೇ ಮಾತನಾಡುತ್ತಾರಲ್ಲ, ಗಮನಿಸಿದ್ದೀರೇನು? ಪ್ರಾಣವಾಯುವಿನಲ್ಲಿ ಈ ಘಮಲು ಶಾಶ್ವತವಾಗಿ ಸೇರಿ ಹೋಗಿರುವುದರಿಂದಲೇ ಇದು ಸಾಧ್ಯವಾಗಿರಬೇಕು.

ಇದಂತೂ ಹೋಟೇಲುಗಳ ಯುಗ. ಹಾಗಾಗಿ, ಹೊಸ-ಹೊಸ ಹೋಟೇಲುಗಳು ಹುಟ್ಟಿಕೊಳ್ಳುತ್ತಿದ್ದಂತೇ ಜೊತೆ-ಜೊತೆಗೆ ಹೊಸರೂಪದ ಹ[illegible] ಅಡಿಗೆಯವರೂ, ಕ್ಲೀನರ್ ಹುದ್ದೆಯಿಂದ ಸಪ್ಲೈಯರ್ ಹುದ್ದೆಗೆ 'ರೆಕ್ರೂಟ್' ಆಗ ಬಯಸು[illegible]ವರೂ ಸನ್ನದ್ಧರಾಗುತ್ತಾರೆ. ಹೊಸ ಲೇಖಕರು ಇದೇ ವಾಮಾಷದಂತೆ ಏರಬೇಕಾದ ಅನಿವಾರ್ಯತೆಯನ್ನು ಮೂರ್ತಿರಾಯರೂ, ಅ.ರಾ. ಮಿತ್ರರೂ ಒಪ್ಪುತ್ತಾರೆ. ಈ ಮಾತಂತೂ ಅಪ್ಪ[illegible]ವಾದ ಕಲಬೆರಿಕೆ ಇಲ್ಲದ ಸತ್ಯ.

ಹೋಟೇಲಿಗರು ಚಮತ್ಕಾರ ವಾದಿಗಳು. ಹ[illegible]ಸುತ್ತಿರುವ ಹತ್ತು ಸೇರಕ್ಕಿಯ ಅನ್ನ[illegible] ಮೇಲೊಂದು ಸೇರಿನ ಬಿಸಿಯನ್ನವನ್ನು ಧುಮ[illegible]ಕಿಸಿ, ಮೇಲೆ ಚಟ-ಪಟ ಸಾಸಿವೆ, ಈರುಳ್ಳಿ, ಮೆ[illegible]ಸಿನಕಾಯಿ, ಕೊತ್ತುಂಬರಿ, ಕರಿಬೇವು, ಶುಂಠಿ-ಕಾಯಿತುರಿ ...... ಇವುಗಳ ಸಮ್ಮಿಶ್ರಣದಿಂ[illegible] ಜಾದೂ ಮಾಡಿಬಿಡುವರು. ಈ ಚಮತ್ಕಾ[illegible]ಯಿಂದ, ಹಳಸಿ ತಿಪ್ಪೆ ಸೇರಬೇಕಾಗಿದ್ದ ಅನ್ನವು 'ಆನಿಯನ್ ಭಾತ್' ಎಂಬ ಅಭಿದೇಯದಿಂದ ಹೊಳೆ-ಹೊಳೆಯುವ ಪಿಂಗಾಣಿ ಪ್ಲೇಟುಗಳಲ್ಲಿ ಅಲಂಕರಿಸಿ, ನಂತರ ನವನಾಗರಿಕರ ಹೊಟ್ಟೆ ಸೇರಿ ಪುನೀತವಾಗುವುದು. ಹೀಗೆಯೇ ಕೋಸುಂಬ[illegible]ರಿಯು ಮಸಾಲೆ ವಡೆಯಾಗಿಯೂ, ನಿನ್ನೆ-ಮೊನ್ನೆಯ ಸಾರು-ಸಾಂಬಾರುಗಳು ಇಂದಿನ ಅನ್ನವನ್ನೊಡಗೂಡಿ 'ಬಿಸಿಬೇಳೆ ಭಾತ್' ಆಗಿಯೂ, ಅಲ್ಲಿಗೂ ಉಳಿಯುವ ಅನ್ನವು ದೋಸೆಯ ಗರಿಯಲ್ಲಿ ಬೆರೆತು 'National Waste' ತಪ್ಪುವುದು. ಐಂದ್ರಜಾಲಿಕರಾದರೂ ಒಂದು ವಸ್ತುವಿನಿಂದ ಇನ್ನೊಂದನ್ನು ಸೃಷ್ಟಿಸುವಾಗ ಏನಾದರೂ Waste ಆಗಬಹುದು; ಇಲ್ಲ[illegible] ಮಾಯವೇ ಆಗಬಹುದು. ಹೀಗೆ, ಐಂದ್ರಜಾಲಿ[illegible]ರಿಗಿಂತ ಹೆಚ್ಚು ಕಿಮ್ಮತ್ತಿನ ಜಾದುವನ್ನು ಹೋಟೇಲಿಗರಷ್ಟೇ ಮಾಡಬಲ್ಲರು. ದೇಶದ ರೈತರು ಬೆವರು ಸುರಿಸಿ ದುಡಿದ ಉತ್ಪನ್ನಗಳನ್ನು ಹೀಗೆ ಕೊನೆಯ ಕಾಳಿನವರೆಗೆ ಸಾರ್ಥಕ[illegible]ಪಡಿಸುವ ಹೋಟೇಲಿಗರಿಗೆ ವಿಶೇಷ ರಾಷ್ಟ್ರೀಯ ಪುರಸ್ಕಾರಗಳನ್ನು ಆದ್ಯತೆಯ ಮೇರೆಗೆ ಮತ್ತು ವಿಶೇಷ ಮೀಸಲಾತಿಯ ಪ್ರಮಾಣದ ಆಧಾರದ[illegible]

ಮೇಲೆ ನೀಡಬೇಕು ಎಂಬುದೇ ರಾಷ್ಟ್ರಪತಿಗಳಲ್ಲಿ ನ್ನ ನಮ್ರ ಅರಿಕೆ. ಈ ಬಗೆಯ 'ಗರಿಮುರಿ' ಂಡಿಗಳ ಚಿದಂಬರ ರಹಸ್ಯವನ್ನರಿತೂ ಹೊಟೇಲ್ ಮುಂದೆ ಪಾಳಿ ಹಚ್ಚುವ ಮಂದಿ ಯನ್ನು ನೋಡಿಯೇ ನಿಸಾರ್ ಅಹಮದ್‌ರಿಗೆ ಕುರಿಗಳು ಸಾರ್ ....' ಕವನದ ಸ್ಫೂರ್ತಿ ಬಂದಿ ರಬೇಕು ಎನ್ನುವುದಂತೂ ಶುದ್ಧ ಕುಹಕ ತರ್ಕ. ಅದರೆ ಇಂದ್ರಜಾಲ, ಮಹೇಂದ್ರಜಾಲಗಳನ್ನು ಯಾವತ್ತೂ ಗೌರವಿಸುವ ನಾನು ಹೊಟೇಲಿಗರ ಬಗ್ಗೆ ಸದಭಿಪ್ರಾಯವನ್ನೇ ಹೊಂದಿದ್ದೇನೆ.

ಹೊಟೇಲಿಗರು ಮನುಷ್ಯರು ಉಪವಾಸ ಬೀಳುವುದನ್ನು ತಪ್ಪಿಸುತ್ತಾರೆ. "Love & Marriage at first sight" ಮಾದರಿಯ ದಂಪತಿಗಳಾದರೂ ಎಂದಾದರೊಂದು ದುರ್ದಿನ (ದೂರ ದರ್ಶನದ ಪ್ರಸಾರವಿಲ್ಲದ ದುರ್ದಿನ ಎಂದು ಕೊಂಡರೂ ಆದೀತು) ಜಗಳವಾಡದಿದ್ದಾರೆಯೇ? ಆ ರೀತಿಯಾಗಿ ಕೋಪಗೊಂಡು, ಗಂಡ-ಹೆಂಡಿರು ಉತ್ತರ-ದಕ್ಷಿಣ ದಿಕ್ಕುಗಳಿಗೆ ಬೆನ್ನು ಖಿಗರಾಗಿ ಬಿಜಯಂಗೈದಾಗ, ಆಯಾಯ ದಿಕ್ಕುಗಳಲ್ಲಿ ಇರುವ ಹೊಟೇಲುಗಳು ಅವರನ್ನು ಕಾಪಾಡುತ್ತವೆ. ಇಲ್ಲವೇ ಊರು ಚಿಕ್ಕದಾಗಿದ್ದು, ಪೂರ್ವ ಯಾ ಪಶ್ಚಿಮದಲ್ಲಿ ಒಂದೇ ಹೊಟೇಲ್ ಇದ್ದಾಗಲೂ, ಅದು ಗಂಡ-ಹೆಂಡಿರ 'ಮೀಟಿಂಗ್ ಪಾಯಿಂಟ್' ಆಗಿ ನಂತರ ಒಂದು ಕಾರ್ನರಿನ ಕೋಣೆಯಲ್ಲಿ ಕಾಂಪ್ರೊಮೈಸ್ ಆಗಲೂ ಅವಕಾಶವಾಗುವುದು. ಮುನಿಸಿನ ಅವಧಿಯನ್ನು ಇನ್ನಷ್ಟು ಹೊತ್ತು ವಿಸ್ತರಿಸುವ ಮನೋಭಾವ ಇದ್ದರೂ, ವಿರುದ್ಧ ದಿಕ್ಕುಗಳ ಕುರ್ಚಿಗಳು ಲಭ್ಯ ವಿದ್ದೇ ಇರುತ್ತವೆ. ಕೆಲವು ಹೊಟೇಲುಗಳ ಲ್ಲಂತೂ ಜಾಗದ ಅಭಾವದಿಂದಲೋ, ಮಾಲಿಕನ ನಿರ್ಲಿಪ್ತತೆಯಿಂದಲೋ ನವಗ್ರಹ ದೇವಸ್ಥಾನದ ನೆನಪು ತರುವ ಮಾದರಿಯಲ್ಲಿ ಆಸನಗಳ ವ್ಯವಸ್ಥೆ ಇರುತ್ತದೆ. ಹೇಗೇ ಇರಲಿ, ಹೀಗೆ ಎಲ್ಲ ಮನೋಭಾವಗಳಲ್ಲೂ 'ಮನಿ'ಗೆ ತಕ್ಕ 'ಮೆನು' ಸಿಕ್ಕಿ ಮಂದಹಾಸ ಬೀರುವಂತೆ ಮಾರ್ಪಾಡಿಸುವಲ್ಲೇ ಹೊಟೇಲುಗಳ ಹಿರಿಮೆಯ ಗರಿಯಾನಂದವು ಅಡಗಿರುವುದು. ಹೊಟೇಲುಗಳಾದರೂ ಸಮತಾವಾದವನ್ನೂ ಸಮಾಜವಾದವನ್ನೂ ಬೋಧಿಸಿ ಉಪಕರಿಸುತ್ತವೆ. ಒಂದೇ ಸಲಕ್ಕೆ ವಿಮಾನದಂತೆ ಗೌತಮಬುದ್ಧನ ಯಾ ಮಹಾತ್ಮಾಗಾಂಧಿಯ ಮನೋಭಾವವನ್ನು ಸಾಮಾನ್ಯ ಮಾನವ ಅಳವಡಿಸಿಕೊಳ್ಳಲಾರನಷ್ಟೆ? ಹಾರುವ ವಿಮಾನವಾದರೂ ನೆಟ್ಟಗೆ ತೊಂಬತ್ತು ಡಿಗ್ರಿಯ ಲಂಬಕೋನದಲ್ಲೇನೂ ಹಾರುವುದಿಲ್ಲ. ಅಡಿ ಅಡಿಗಳಂತರ ವೇರಿ, ಮುಗಿಲ ಪಕ್ಷಿಯ ಮಟ್ಟಕ್ಕೆ ಬಂದು ನಿಲ್ಲುವಂತೆ, ಸಾಮಾನ್ಯ ಹುಲುಮಾನವನಾದರೂ,



ನಾಲ್ಕಾಣೆಯ ಬೆಲೆಯ ಕಾಫಿಯನ್ನು ಒಂದು ರೂಪಾಯಿಯ ಮೇಲೊಂದು ನಾಲ್ಕಾಣೆ ತೆತ್ತು ಕುಡಿಯುವುದರಿಂದ ಆರಂಭವಾಗುವ ಕಾರ್ಯವು, ನಾಳೆ ಮುಂದೊಂದು ದಿನ ಪೈಸೆಯ ಪ್ರತಿಫಲಾಪೇಕ್ಷೆ ಇಲ್ಲದೆ ನಾಲ್ಕಾಣೆ ದಾನ ಮಾಡುವ ಹಂತಕ್ಕೂ ಹತ್ತಬಹುದು. ನಂತರದ ಮೆಟ್ಟಿಲುಗಳೂ ಮುಂದಕ್ಕೆ ಗೋಚರಿಸಬಹುದು. ಹೀಗೆ

ದಾನವನನ್ನು ದಾನಿಗನನ್ನಾಗಿ ವಿವಿಧ ಸ್ಟೇಜುಗಳ ಸಹಕಾರದಿಂದ ಪರಿವರ್ತಿಸುವ ಹೊಟೇಲುಗಳನ್ನೂ 'ಪರೋಕ್ಷ ಸಮಾಜಸೇವಾ ಕೇಂದ್ರ'ಗಳೆಂದು ಕರೆಯುವುದರಲ್ಲಿ ಏನು ತಪ್ಪಿದೆ?

ಇಷ್ಟೇ ಅಲ್ಲ, ಸುಸಂಸ್ಕೃತನಾದ ಮಾನವನಾದರೂ ತಾನು ಕಲಿತ-ಕಲಿಸುತ್ತಿರುವ ತರ್ಕಶಾಸ್ತ್ರ, ಅರ್ಥಶಾಸ್ತ್ರ, ಅನರ್ಥಶಾಸ್ತ್ರ, ಅಧಿಕಶಾಸ್ತ್ರ, ಕರ್ಮಸಿದ್ಧಾಂತ, ಮರ್ಮಸಿದ್ಧಾಂತ, ಚೋರ



ಪಾಂಡಿತ್ಯ, ಚಾರ ಪಾಂಡಿತ್ಯಗಳೇತ್ಯಾದಿ ಛಪ್ಪನ್ನೈವತ್ತಾರು ಸಿದ್ಧಾಂತಗಳಿಂದ ಬರಬಹುದಾದ ಉತ್ತಮ ಪ್ರತಿಫಲವನ್ನು ಹೊರಗೆಳೆಯುವಲ್ಲೂ ಹೊಟೇಲುಗಳು ವೇಗವರ್ಧಕಗಳಾಗಿ ಕೆಲಸ ಮಾಡುತ್ತವೆ. ಹೊಟೇಲಾತಿಥ್ಯದಿಂದ ಅತಿಥಿಯನ್ನು ಸಂತೃಪ್ತಿಗೊಳಿಸಿಕೊಂಡ ಅತಿಥೇಯನು ತನಗೆ ಬೇಕಾದ ಒಂದು ಸಲಹೆ-ಸೂಚನೆಯನ್ನು ಆತನಿಂದ ಎಳೆದುಕೊಳ್ಳಬಲ್ಲ. ಮನೆಯಲ್ಲೇ ಹೀಗೆ ಮಾಡಬೇಕಾದರೆ ಮನೆಯಾಕೆಯನ್ನು ಮೊದಲಿಗೆ ಒಲಿಸಿಕೊಳ್ಳಬೇಕಾಗಿ ಬಂದು, ಇರುವ ತ್ರಾಣವೆಲ್ಲವೂ ಒಲಿಸಿಕೆಯ ಹಂತಗಳಲ್ಲೇ ಸೋರಿ ಹೋಗುವ ತಾಪತ್ರಯವಿರುವುದು. ಪ್ರಾಣವಾಯುವಾದ ಆಮ್ಲಜನಕಕ್ಕೆ 'ಮ್ಯಾಂಗನಿಸ್ ಡೈಯಾಕ್ಸೈಡ್' ಎಂಬ ವೇಗವರ್ಧಕವನ್ನು ಸೃಜಿಸಿದ ಆ ದಯಾಮಯನಾದ ಭಗವಂತನೇ, ಈ ಪ್ರಾಣವಾಯುವಿನಿಂದ ಪ್ರಾಣ ಮತ್ತು ತ್ರಾಣಗಳೆರಡನ್ನೂ ಹಿಡಿದಿರುವ ಹುಲುಮಾನವರಿಗಾಗೇ 'ಹೊಟೇಲ್' ಎಂಬ ವೇಗವರ್ಧಕವನ್ನು ನಿರ್ಮಿಸಿದ್ದಾನೆ. 'ವೇಗದೂತ', 'ಮೇಘದೂತ', 'ತೂಫಾನ್ ಎಕ್ಸ್‌ಪ್ರೆಸ್' ಎಂಬ ಕಲಿಯುಗದ ಸಂಚಾರಿ ಬಸ್ಸುಗಳಾದರೂ ಹೊಟೇಲ್‌ಗಳ ಮುಂದೆ, ಹೆದ್ದಾರಿಯ ಬದಿಗಳಲ್ಲಿ ನಿಲ್ಲುವಂತೆ ಮಾಡಬಲ್ಲ ಚೈತನ್ಯವಿರುವುದಾದರೂ ಈ ಹೊಟೇಲುಗಳಿಗೆ ಮಾತ್ರ.

ಹೊಟೇಲಿಗರು ನಿಮ್ಮ ಹಿತ ಚಿಂತಕರಷ್ಟೇ ಅಲ್ಲ, ಸುಖ ಚಿಂತಕರೂ ಹೌದು. ಕಾಫಿ-ಟೀಗಳಲ್ಲಿ ಇರಬಹುದಾದ 'ಕ್ಯಾಫಿನ್', 'ನಿಕೋಟಿನ್' ಎಂಬ ವಿಷವು ಹೆಚ್ಚಾಗಿ ನಿಮ್ಮ ಹೊಟ್ಟೆ ಸೇರಬಾರದೆಂಬ ಸದುದ್ದೇಶದಿಂದ, ಅವರು ಹಿಂದಿನ ಕಾಲದ ಬೊಂಬೆಬಾಗಿನದ ಲೋಟಗಳನ್ನು ಚಲಾವಣೆಯಲ್ಲಿಟ್ಟಿದ್ದಾರೆ. ಇದನ್ನರಿಯದೇ ಹೊಟೇಲಿಗರನ್ನು 'ಮಿತಚಿಂತಕರು' ಎಂದು ಕಟಕಿಯಾಡುವ ಮಿನಿ-ಮರಿ ಶಕುನಿಗಳಿಗೆ ಏನು ಹೇಳುವುದು. ಜೊತೆಗೆ, ಡಾಕ್ಟರುಗಳಾದರೂ ಬೋಧಿಸುವುದೇನು? ''ಮಿತಾಹಾರಿಗಳಾಗಿರಿ; ಆರೋಗ್ಯ ಉಳಿಸಿಕೊಳ್ಳಿ'' ಈ ವೇದಘೋಷವನ್ನು ಅಕ್ಷರಶಃ ಜಾರಿಯಲ್ಲಿ ಇಟ್ಟಿರುವವರಾದರೂ ಹೊಟೇಲಿಗರು. ಮನೆ-ಮಂದಿ ಹೆಚ್ಚೆಚ್ಚು ಉಪಚರಿಸಿ, ಅಗತ್ಯಕ್ಕಿಂತ ಹೆಚ್ಚು ತಿನ್ನಿಸಿ, ಆಮೇಲೆ ನಾವು ಹೊಟ್ಟೆ ಹಿಡಿದು ಹೊರಳಾಡುತ್ತ ಉಬ್ಬಸಪಡುವುದನ್ನು ನೋಡಿ ಮನದಲ್ಲೇ ಆನಂದಿಸುತ್ತಾರೆ. ಬೇಡದ ಅತಿಥಿಗಳ ಮೇಲೆ ಈ ಪ್ರಯೋಗವನ್ನು ಕೆಲ ಅತಿಥೇಯರೂ ನಡೆಸುವುದನ್ನು ಅಲ್ಲಲ್ಲಿ ಕೇಳಿದ್ದೇನೆ. ನಿಯಮಗಳು ಬಿಗಿಯಾದಷ್ಟೂ, ನೇರದಾರಿಗಳು

ಒಂದಾಗಿ ಹೀಗೆ ಕಳ್ಳದಾರಿ ಹಿಡಿಯುವವರು, ಅದರ ಅನ್ವೇಷಕರು, ಹಿಂಬಾಲಕ ಮುಂಬಾಲಕ ಪಡೆ, ಈ 'ಹಿನ್ನಡೆ-ಮುನ್ನಡೆ'ಗರ ಎಡ-ಬಲ ಮಂದಿಗಳು ...... ಹೀಗೆಲ್ಲ ಹೊಸತಾಗಿ ಹುಟ್ಟಿಕೊಳ್ಳುವುದಂತೂ ಅಪ್ಪಟ ಸತ್ಯ. ಇರಲಿ ಬಿಡಿ; ಇವೆಲ್ಲ ನಮಗೆ ಬೇಡ ಇವೆಲ್ಲವನ್ನೂ 'ರಾಜಕೀಯಶಾಸ್ತ್ರ'ದ ಸಿಬ್ಬಂದಿ ಇಬ್ಬಂದಿಗಳಿಗೇ ಬಿಟ್ಟುಬಿಡೋಣ.

ಹೊಟೇಲುಗಳನ್ನು ಮೆಚ್ಚದವರಾರು? ಅವರ ತಿಂಡಿಗಳನ್ನು ಮೆಲ್ಲದವರಾರು? ಈ ತಿಂಡಿಗಳ ಬೆಲೆಯನ್ನು ಏರಿಸಿದಾಗ ಬಂದಿಗರು ('ಬಂದ್' ಘೋಷಿಸಿ, ಪಾಲಿಸುವ ಜನ), ಈ ಬಂದಿಗರ 'ಆಪ್ತ-ಪರಮಾಪ್ತ-ಭಾಗಶಃಪ್ತ' ಪಡೆ, ಈ ಆಪ್ತ-ಪರಮಾಪ್ತರ ಮಿತ್ರ ಬಣ, ಈ ಮಿತ್ರರ ಒಕ್ಕೂಟ ಹೀಗೆ ಒಂದು ಏಳೆಂಟು ಅಕ್ಷೋಹಿಣಿ ಸೈನ್ಯವೇ ಹೊಟೇಲಿಗರ ವಿರುದ್ಧ ಧಿಕ್ಕಾರಗಳನ್ನು ಕೂಗುತ್ತಾ, ಅಪ್ಪಿ-ತಪ್ಪಿ ದಾರಿಗೆದುರಾಗಿ ಬಂದ ಬಸ್ಸಿನೆಡೆ ಕಲ್ಲು ತೂರಿ, ಆ ಕಲ್ಲಿನ ಸುರಿಮಳೆಯ ಜೋರೊಂದರಿಂದ ಕಿಟಕಿ ಪಕ್ಕದ ಪ್ರಯಾಣಿಕನ್ಯಾವನೋ ಏಟು ತಿನ್ನುವಷ್ಟರಲ್ಲಿ ಈ ಜನಸಾಗರಕ್ಕೆ ಎದುರಾಗಿ, ಪೊಲೀಸ್ ಪಡೆ, 'ಪೋಲಿ ಪಡೆ', ರಿಸರ್ವ್ ಪಡೆ, ತುರ್ತು ಸಂದರ್ಭಗಳಲ್ಲಿ ತಾತ್ಕಾಲಿಕವಾಗಿ ಸ್ಥಳದಲ್ಲೇ ಸಜ್ಜಾಗಿ ಸನ್ನದ್ಧರಾಗುವ 'ವಾಲೆಂಟ್'ಗರ ಪಡೆ, ಹೀಗೆ ಇನ್ನೊಂದು ಜನಸಾಗರವು ಸೇರಿ ...... ಅಂತೂ-ಇಂತೂ ವಿಚಾರವು ತಹ ಬಂದಿಗೆ ಬಂದು ಗುಂಪಂತೂ ಚದುರುತ್ತದೆ. ಸಂಬಂಧವೇ ಪಡದ ಯಾವುದೋ ಬೇಕೂಫರ ಷರ್ಟು-ಪ್ಯಾಂಟು-ಕೈ-ಕಾಲುಗಳು ತುಂಡಾಗುತ್ತವೆ. ಕೆಲವರ ಪಾಕೀಟುಗಳು ಮಾಯವಾಗುತ್ತವೆ. ಹಾಗೂ, ಹೀಗೂ ಈ 'ಬಂದಿ'ಗರೆಲ್ಲ ಮತ್ತೆ ಜಮಾಯಿಸುವುದಾದರೂ ತಮ್ಮ ಮೆಚ್ಚಿನ ಹೊಟೇಲಿನಲ್ಲೇ. ಈ ಹೊಟೇಲಿಗನಿಗೆ ಬೆಳಿಗ್ಗೆಯೇ ವಿಷಯ ತಿಳಿಸಿರುತ್ತಾರೆ. ಹೀಗಾಗಿ ಹೊಟೇಲ್ ಮುಂಬಾಗಿಲು ಹಾಕಿದ್ದರೂ, ಒಳಗಿನ ಚಟುವಟಿಕೆಗಳಾದರೂ ಹೆಚ್ಚಾಗಿಯೇ ನಡೆದಿರುತ್ತವೆ. ಹೀಗೆ ಒಂದೊಂದು 'ಬಂದಿ'ಗರ ಗುಂಪೂ, ಒಂದೊಂದು ಹೊಟೇಲನ್ನು ಆಪ್ತವಲಯದಲ್ಲಿ ಸೇರಿಸಿಕೊಂಡಿರುವುದರಿಂದ, ಎಲ್ಲ ಹೊಟೇಲುಗಳಿಗೂ 'ಬಂದ್' ದಿನವೂ 'ಓವರ್ ಟೈಮ್ ವರ್ಕ್' ಇರುವುದು ಅನಿವಾರ್ಯವೇ ಆಗುತ್ತದೆ.

ಹೊಟೇಲುಗಳಲ್ಲಿ ಎಷ್ಟೊಂದು ವಿಧ? ತಿಂಡಿಗಳಲ್ಲಿ ಎಷ್ಟೊಂದು ಬಗೆ? ದೇವನಿತ್ತ ಈ ಒಂದು ಮಾನವ ಜನುಮದ ಜೀವಿತಾವಧಿಯಲ್ಲಿ ಆದಷ್ಟು ತಿಂಡಿಗಳನ್ನು ತಿಂದು, ಸುಖಿಸಿ ಕೊನೆಗೆ



'ಅನಾಯಸೇನ ಮರಣಂ' ಕೋರುವವರಂತೂ ಹೊಟೇಲಿಗೆ ಹೋಗದಿರಲು ಸಾಧ್ಯವೇ ಇಲ್ಲ. ಮಾನವ ಜನ್ಮವಿತ್ತ ಆ ದೇವನೂ ಒಮ್ಮೊಮ್ಮೆ 'ಮನಿ ಷಾರ್ಟೇಜ್' ಮಾಡಿ 'ಮನಮುದುರಿಕೆ' ಉಂಟುಮಾಡುತ್ತಾನೆ. ದಿ. ವಿ.ಸೀ.ರವರ ಕಾಲದಲ್ಲೇನೋ ಇಂಥ ವಿಷಮಸ್ಥಿತಿಯಲ್ಲಿ ಹಲವರು, ನಾಲ್ಕು ಬಜ್ಜಿ ದೋಸೆ ಪಿಟ್ಟುರುಬ್ಬಿ ಕೊಟ್ಟು

ನಾಲ್ಕು ದೋಸೆ ಮೆದ್ದು ಬರುತ್ತಿದ್ದರಂತೆ. ಈಗಿನ ಅವಧಿಯಲ್ಲಿ ಇದೇ ಬಗೆಯ ವಿವಿಧ 'ಆಧುನಿಕಾನುಕೂಲಗಳು' ಎಷ್ಟಿವೆಯೋ ನನಗಂತೂ ತಿಳಿಯದು.

ಹೊಟೇಲುಗಳ ಬಗ್ಗೆ ಹೆಚ್ಚು ಬರೆಯುವುದನ್ನು ಹೊಟೇಲಿಗರು ಒಪ್ಪಿದರೂ, ಹೊಟೇಲ್ ಪ್ರಿಯರು ಒಪ್ಪಲಾರರು. ಹೊಟೇಲಿಗರ ಮೇಲೆ 'ಮಿತಿ' ಹೇರಲು ಅವರಿಗೆ ಒಂದೇ ಅವಕಾಶ. ಬೇರೆಲ್ಲ 'ಮಿತಿ'ಯ ಅವಕಾಶಗಳು ಹೊಟೇಲಿಗರಿಗಾಗಿವೆಯಲ್ಲ. ''ಬನ್ನಿ ಕುಳಿತುಕೊಳ್ಳಿ'' ಎಂದು ಮನತುಂಬಿ ಮನೆಯೊಳಗೆ ಕರೆದರೂ ಬಾರದವರು, ಅರ್ಲಿ ಮಾರ್ನಿಂಗ್, ಆಫ್ಟರ್‌ನೂನ್ ಈವ್ನಿಂಗ್ ಕ್ಯಾಂಟೀನುಗಳ ಮುಂದೆ 'ಕುದುರೆ'ಯ ನಿರ್ಲಿಪ್ತತೆಯಿಂದ ನಿಂತು, ಕೈಲೊಂದು ತಟ್ಟೆ-ತಟ್ಟೆಯಲ್ಲೊಂದಷ್ಟು ತಿನಿಸು-ತಿನಿಸಿನ ನಡುವೆ ಮೈಮರೆತು ಮಲಗಿದ ಸ್ಪೂನು ಇವುಗಳ ಲಪರಿಯಲ್ಲಿ ಮುಳುಗಿರುತ್ತಾರೆ. ಕುದುರೆಯೇನೋ ನಿಂತೇ ನಿದ್ದೆ ಮಾಡುತ್ತದಂತೆ. ಆದರೆ ನಿಂತು ತಿನ್ನುವವರು ತಿಂದಾದ ಮೇಲೆ ನಡೆದೇ ಬರಬಹುದು ಮನೆಗೆ; ಆದರೆ ಕ್ಯಾಂಟೀನಿನ ಮುಂದೆ ನಿಲ್ಲಲು ಕ್ಯಾಂಟೀನಿಗರು ಅವಕಾಶ ನೀಡಲಾರರು.

ಗುಂಡಿನ ಬಗ್ಗೆ ಬರೆಯುವಾಗ, ಆರಂಭದಲ್ಲೊಂದು ಪೆಗ್ ಏರಿಸಿ, ಗುಂಡಿನ ಗಮ್ಮತ್ತಿನಿಂದಾರಂಭಿಸಿ, ಕೊನೆಗೆ ಗುಂಡಿನ ದುಷ್ಪರಿಣಾಮಗಳ ಬಗ್ಗೆ ಬರೆದು ಮುಕ್ತಾಯ ಮಾಡುವುದು ಲಾಗಾಯ್ತಿನಿಂದ ನಡೆದು ಬಂದ ಪದ್ಧತಿ. ಕೇವಲ 'ಗುಂಡಿನ ಹಾನಿ'ಯ ಬಗ್ಗೆ ಬರೆಯಬೇಕಾದಾಗಲೂ ಇದೇ ಕ್ರಮಾಕ್ರಮ ನೀತಿ. ಆದರೆ ಹೊಟೇಲುಗಳ ಬಗ್ಗೆ ಬರೆಯಲು ಇಂಥ ನಿರ್ಬಂಧವೇನೂ ''ಲೇಖಕರಿಗೆ ಕಿವಿ ಮಾತು'' ಗ್ರಂಥದಲ್ಲಿ ಇದ್ದಂತೆ ಕಾಣೆ. ಲೇಖಕನದ ಆರಂಭಕ್ಕೆ ಮೊದಲು, ಮುಗಿಸಿಯಾದ ನಂತರವೂ ಹೊಟೇಲಿಗೆ ತೆರಳಲು ಯಾವ ದೊಣ್ಣೆ ನಾಯ್ಕನ ಅಪ್ಪಣೆಯೂ ಅಗತ್ಯವಿಲ್ಲ. 'ಆಡದೆ ಮಾಡುವವನು ರೂಢಿಯೊಳಗುತ್ತಮನು' ಎಂದು ಸರ್ವಜ್ಞ ವಾರ್ನಿಂಗಿಸಿದ್ದರೂ, ಹೊಟೇಲುಗಳ ವಿಷಯದಲ್ಲಿ ಹಾಗೆ ಮಾಡುವುದು ಸಾಧುವಾಗಲಾರದು. ಏಕೆಂದರೆ ಇದಂತೂ ಪಬ್ಲಿಸಿಟಿಯ ಕಾಲ. ಪಬ್ಲಿಸಿಟಿಯ ಪೀಪಿ ಊದದೆ, ಪರದೇಶದ ಉತ್ಕೃಷ್ಟ ಮಾಲನ್ನೇ ಆಗಲಿ ಯಾವ ಪರದೇಶಿಗೂ ತಗುಲಿ ಹಾಕುವುದು ಇಂದು ಅಸಾಧ್ಯಕೋಟಿಯ ಮಾತು. ಆದರೆ ಚಿಂತೆ ಪಡಬೇಕಾದ್ದಿಲ್ಲ. ಅದೇ ಸರ್ವಜ್ಞನು ಮುಂದುವರಿದು, 'ಆಡಿ ಮಾಡುವವ ತಾ ಮಧ್ಯಮ' ಎಂಬುದೊಂದು ಸಬ್‌ಸ್ಪೇಜನ್ನೂ ಸೌಜನ್ಯತೆಯ ಪರಿಮಿತಿಯ ಅಂಚಿನಲ್ಲಂತೂ ನಿಲ್ಲಿಸಿದ್ದಾನೆ. ಆದ್ದರಿಂದ ಇಷ್ಟೆಲ್ಲ ಬರೆದು-ಕೊರೆದು ನಾನು ಹೊಟೇಲಿಗೆ ಹೋಗದಿದ್ದರೆ ಸರ್ವಜ್ಞನ ಪ್ರಕಾರ 'ಅಧಮ ತಾನಾಡಿ ಮಾಡದವ'ನಾಗುವುದಂತಿರಲಿ, 'ಸರ್ವಜ್ಞಾಭಿಮಾನಿಗಳ ಸಂಘದವರ' ದೃಷ್ಟಿಯಲ್ಲಾದರೂ ಏನಾದೇನು? ಆದ್ದರಿಂದ ಪೆನ್ನಿಗೆ ಕ್ಯಾಪ್ ಸಿಗಿಸಿ, ಈ ಲೇಖನ ಬರೆದ ಬಾಬ್ತು ಸೌಜನ್ಯದ ಹೆಗ್ಗಳಿಕೆಗಾಗಿ - ಇದೋ ಹೊಟೇಲಿಗೆ ಹೊರಟೆ. ಈ ಲೇಖನ ಪ್ರಕಟವಾಗಿ, ಸಂಭಾವನೆ ಕೈ ಸೇರಿದ ಮೇಲೆ, ಲೇಖನ ಬರೆಯಲು ಏಕಾಂತ ಕಲ್ಪಿಸಿ 'ಮ್ಯಾಟನಿ'ಗೆ ತೆರಳಿರುವ ಮಡದಿ-ಮಗಳೊಂದಿಗೆ ಮತ್ತೆ ಹೊಟೇಲಿಗೆ ಹೋಗುವುದು ಮುಂದಿನ ಮಾತು.

ವಿಪರ್ಯಾಸ

ಸಂವಿಧಾನ ತಜ್ಞರಲ್ಲಿ ಅಗ್ರಗಣ್ಯರಾದ ನಾನಿ ಪಾಲ್ಕೀವಾಲ ಹೀಗಂದರು:

ನಮ್ಮದು ದೊಡ್ಡ ಸರಕಾರ. ಆದರೆ ಆಡಳಿತ ಮಾತ್ರ ನಿರ್ಜೀವ; ಅಧಿಕ ಸಂಖ್ಯೆಯ ಅಧಿಕಾರಿಗಳಿದ್ದಾರೆ, ಆದರೆ ಸೇವೆ ಮಾತ್ರ ಶೂನ್ಯ, ಅಜೀರ್ಣವಾಗುವಷ್ಟು ನಿಯಂತ್ರಣಗಳಿವೆ, ಆದರೆ ಜನಗಳಿಗೆ ಸುಖವಿಲ್ಲ. ಅಪರಿಮಿತವಾದ ಕಾನೂನುಗಳಿವೆ, ಆದರೆ ನ್ಯಾಯ ದೊರಕುವುದು ಮಾತ್ರ ಅಪರೂಪ.

(ಸಂಗ್ರಹ) ಡಿ.ಗುಂಡೂರಾವ್

ನಷ್ಟ ಪರಿಹಾರ: ಅಮೆರಿಕೆಯ ಮಾದರಿ

● ಪಿ.ಎಚ್.ಸ್ವಾಮಿ

ಅಮೆರಿಕಾದಲ್ಲಿ ಯಾವುದೇ ಚಿಕ್ಕ ಘಟನೆ ಜರುಗಿದರೂ ಕೋರ್ಟಿಗೆ ಹೋಗುವುದು ಹವ್ಯಾಸವಾಗಿದೆ. ಚಿಕ್ಕ ಮಕ್ಕಳು ಆಡಿಕೊಳ್ಳುತ್ತಿರುವಾಗ ಬಿದ್ದು-ಗಿದ್ದು ಹೊಡೆತ ಬಿದ್ದು ಕೈಯೊ-ಕಾಲೋ ಮುರಿದರೆ ಆ ಮಗುವಿನ ತಂದೆ-ತಾಯಂದಿರ ನಷ್ಟ ಪರಿಹಾರಕ್ಕಾಗಿ ಕೋರ್ಟಿನಲ್ಲಿ ದಾವೆ ಹೂಡುತ್ತಾರೆ. ಒಂದು ವೇಳೆ ಮಗು ಎದುರು ಮನೆಗೆ ಆಡಲಿಕ್ಕೆ ಹೋಗಿ ಅಲ್ಲಿ ಬಿದ್ದು ಕೈಯೋ ಕಾಲೋ ಮುರಿದುಕೊಂಡಿದ್ದನೆನ್ನಿ. ಆಗ ಎದುರು ಮನೆಯ ಯಜಮಾನ ನಷ್ಟ ಪರಿಹಾರ ಕೊಡಬೇಕಾಗುತ್ತದೆ. ಅವರು ಕೇಳುವ ನಷ್ಟ ಪರಿಹಾರ ಲಕ್ಷ ಕೋಟಿ ಡಾಲರುಗಳಲ್ಲಿ ಇರುತ್ತದೆ.

ಮೌರಿಸ್, ರೋಜಲಿಂಡ್ ಫ್ರಂಡ್ ಮೆನ್' ಎಂಬ ದಂಪತಿಗಳು ಪಕ್ಕದ ಮನೆಯ ಮಕ್ಕಳಿಗೆ ತಮ್ಮ ಆವರಣದಲ್ಲಿ ಆಡಿಕೊಳ್ಳಲಿಕ್ಕೆ ಅನುಮತಿ ಕೊಟ್ಟರು. ಆ ಮಕ್ಕಳಲ್ಲಿ ಸಿಲ್ವಿಯಾ ಎಂಬ ಒಂಬತ್ತು ವರ್ಷದ ಹುಡುಗಿ ಜೋಕಾಲಿ ಆಡುತ್ತಾ ಕೆಳಗೆ ಬಿದ್ದಳು. ಅವಳ ತಂಗಿಯರು ಡೆಬೋರಾ, ಲಿಸಾ, ರೋಸೆನ್‌ಬರ್ಗ್ ಉಯ್ಯಾಲೆ ತೂಗುತ್ತಿದ್ದರು. ಜೋಕಾಲಿಯಿಂದ ಬಿದ್ದುದರಿಂದ ಅವಳ ಕಾಲಿನ ಎಲುಬು ಮುರಿಯಿತು. ಚಿಕಿತ್ಸೆಗಾಗಿ ಅವಳನ್ನು ಆಸ್ಪತ್ರೆಗೆ ಸೇರಿಸಿದರು. ನಂತರ ಆ ಹುಡುಗಿಯ ಅಪ್ಪ ಜೋಕಾಲಿ ತಯಾರು ಮಾಡಿದ್ದ ಕಂಪನಿ ಮೇಲೆ, ಪಕ್ಕದ ಮನೆಯ ಯಜಮಾನ (ಅವರ ಆವರಣದಲ್ಲಿ ಮಕ್ಕಳಿಗೆ ಆಡಲು ಅನುಮತಿ ಕೊಟ್ಟಿದ್ದ ತಪ್ಪಿಗೆ)ನ ಮೇಲೆ ಕೇಸು ಹಾಕಿದನು. ಉಯ್ಯಾಲೆ ತಯಾರು ಮಾಡಿದ್ದ 'ಫಾರ್ಕೊ ಕಂಪನಿ' ಮತ್ತು ಅದನ್ನು ಮಾರಿದ 'ಸಿರ್ಸಿ ರೋಜಬರ್ ಡಿಪಾರ್ಟಮೆಂಟಲ್ ಸ್ಟೋರ್'ಗೆ ಸಮನ್ಸ್ ನೀಡಲಾಯಿತು. ಆ ಮಗುವಿನ ತಂದೆ-ತಾಯಿಯರು ಲಾಯರನ್ನು ಇಟ್ಟು ವಾದಿಸಿದರು.

ಪ್ರತಿವಾದಿಗಳಾಗಿ ಮನೆ ಯಜಮಾನ, ಉಯ್ಯಾಲೆ ತಯಾರು ಮಾಡಿದ ಕಂಪನಿ, ಅದನ್ನು ಮಾರಿದ ಅಂಗಡಿ ಯಜಮಾನ ಮೂವರು ಲಾಯರನ್ನು ಇಟ್ಟು ಕೋರ್ಟಿನಲ್ಲಿ ವಾದಿಸಬೇಕಾಯಿತು. 1972ರಲ್ಲಿ ನಡೆದ ಈ ಘಟನೆಯನ್ನು ಮೂರು ವರ್ಷಗಳ ನಂತರ 1975ರಲ್ಲಿ ಕೋರ್ಟು ವಿಚಾರಣೆ ಮಾಡಿತು. ವಿಚಾರಣೆ ಪೂರ್ತಿ ಆಗಲಿಕ್ಕೆ ಹತ್ತು ವರ್ಷಗಳ ಕಾಲ ಹಿಡಿಯಿತು. ಮೂವರು ಪ್ರತಿ ವಾದಿಗಳೂ ಸೇರಿ ಆ ಮಗುವಿಗೆ ಮೂರು ಕೋಟಿ ರೂ.ಗಳ ನಷ್ಟ ಪರಿಹಾರ ಕೊಡಬೇಕಾಗಿ ಬಂದಿತು. ಉಯ್ಯಾಲೆ ತಯಾರಿಯಲ್ಲಿನ ಲೋಪದಿಂದಲೇ ಹುಡುಗಿಗೆ ಪೆಟ್ಟು ಬಿದ್ದಿತೆಂದೂ, ಆದ್ದರಿಂದ ನಷ್ಟ ಪರಿಹಾರದ ಮೂರು ಕೋಟಿಯಲ್ಲಿ ಶೇ. 80 ಭಾಗ ಫಾರ್ಕೊ ಕಂಪನಿ ಕೊಡಬೇಕೆಂದು ಉಳಿದ ಶೇ.20 ಭಾಗ ಉಯ್ಯಾಲೆ ಮಾರಿದ ಅಂಗಡಿ ಯಜಮಾನ ಕೊಡಬೇಕೆಂದು ಕೋರ್ಟು ತೀರ್ಪು ನೀಡಿತು. ಮನೆ ಯಜಮಾನನ್ನು ನಿರ್ದೋಷಿಯನ್ನಾಗಿ ತೀರ್ಮಾನಿಸಿ ನ್ಯಾಯಾಲಯ ಅವರನ್ನು ಬಿಟ್ಟಿತು. ಆದರೆ ಆ ಮೂರು ಜನರೂ 12 ವರ್ಷಗಳ ಕಾಲ ಕೋರ್ಟಿನ ಸುತ್ತಲೂ ಅಲೆಯಬೇಕಾಯಿತು. ಯಾರ ಮನೆಯಲ್ಲಿ ಮಕ್ಕಳು ಆಡಿಕೊಳ್ಳುತ್ತಾರೋ ಆ ಮನೆಯ ಯಜಮಾನ ಅವರ ಕ್ಷೇಮಕ್ಕಾಗಿ ಎಲ್ಲಾ ಜಾಗ್ರತೆಗಳನ್ನು ತೆಗೆದುಕೊಳ್ಳ

> ನೀನಿಲ್ಲದ
> ಇರುಳು:
> ಬರಿ
> ಹೊರಳು
> ವಿರಹದ ತಂತಿಯ
> ಬೆರಳು
> ಶೋಕದ ಕೊರಳಿನ
> ನರಳು
>
> ಟಿ.ಎಂ.ಪಂಡಿತ

ಬೇಕೆಂದು ಲಾಯರು ವಾದಿಸಿದರು. ಯಾವುದಾದರೂ ಕೇಸು ಕೋರ್ಟಿನಲ್ಲಿ ಗೆಲ್ಲುತ್ತದೆ ಎಂಬ ಭರವಸೆ ಲಾಯರುಗಳಿಗೆ ಇದ್ದರೆ ಫೀ ಇಲ್ಲದೇನೆ ವಾದಿಸುತ್ತೇವೆಂದು ಹೇಳುತ್ತಾರೆ. ಕೇಸು ಗೆದ್ದ ನಂತರ ನಷ್ಟ ಪರಿಹಾರದಲ್ಲಿ ಶೇ. 20ರಿಂದ 50 ಭಾಗ ತೆಗೆದುಕೊಳ್ಳುತ್ತಾರೆ. ನಿತ್ಯಾವಶ್ಯಕ ವಸ್ತುಗಳನ್ನು ತಯಾರು ಮಾಡುವ ಕಂಪನಿಗಳು ಅವುಗಳನ್ನು ಮಾರುವ ಅಂಗಡಿಗಳ ಯಜಮಾನರು ಲಾಯರುಗಳ ಬಗ್ಗೆ ಭಯಪಡುತ್ತಾರೆ. ನಷ್ಟ ಪರಿಹಾರ ಕೊಟ್ಟು ದಿವಾಳಿ ಎದ್ದ ಕಂಪನಿಗಳು ಸಹ ಇವೆ. ಯಾರಾದರೂ ಅತಿಥಿಯನ್ನು ಮನೆಗೆ ಆಹ್ವಾನಿಸಿ ಔತಣ ನೀಡಿ, ಮದ್ಯ ಕೊಡಲಿಕ್ಕೆ ಭಯಪಡುತ್ತಾರೆ. ಆ ಅತಿಥಿ ಅತಿಯಾಗಿ ಕುಡಿದು ಯಾವುದಾದರೂ ಅಪಘಾತಕ್ಕೆ ತುತ್ತಾದರೆ ಅವನಿಗೆ ನಷ್ಟ ಪರಿಹಾರ ಕೊಡುವ ಜವಾಬ್ದಾರಿಯ ಔತಣ ನೀಡಿದ ಮನೆ ಯಜಮಾನನ ಮೇಲಿರುತ್ತದೆ. ಅಂತಹ ಒಂದು ಕೇಸಿನಲ್ಲಿ ಔತಣ ನೀಡಿದ ಮನೆಯ ಯಜಮಾನ ಅತಿಥಿಯಾಗಿ ಬಂದವನಿಗೆ ಒಂಬತ್ತು ಲಕ್ಷ ರೂ.ಗಳ ನಷ್ಟ ಪರಿಹಾರ ಕೊಡಬೇಕೆಂದು ಸುಪ್ರಿಮ್‌ಕೋರ್ಟ್ ತೀರ್ಪು ನೀಡಿತ್ತು. ಮಿಚಿಗನ್‌ನಲ್ಲಿ ಒಂದು ಬಾರಿನಲ್ಲಿ ಸಿಕ್ಕಾಪಟ್ಟೆ ಕುಡಿದು ಕಾರು ನಡೆಸುತ್ತಿದ್ದ ಒಬ್ಬ ಗಿರಾಕಿಗೆ ಕಾರು ಅಪಘಾತದಲ್ಲಿ ಪೆಟ್ಟು ಬಿದ್ದಿತು. ಅವನಿಗೆ ಬಾರ್‌ನ ಮಾಲಿಕ ಒಂದು ಕೋಟಿ ರೂ.ಗಳ ನಷ್ಟ ಪರಿಹಾರ ಕೊಡಬೇಕಾಯಿತು. ಆ ವಾರ್ತೆ ಪೇಪರ್‌ನಲ್ಲಿ ಬಂದಿತು. ಬಾರುಗಳನ್ನು ನಡೆಸುವ ಯಜಮಾನರುಗಳು ಆ ವಾರ್ತೆಯನ್ನು ಕಟ್ ಮಾಡಿ ಫ್ರೇಮ್ ಹಾಕಿಸಿ ಬಾರಿನಲ್ಲಿ ಇಟ್ಟುಕೊಂಡಿದ್ದಾರೆ. ಅತಿಯಾಗಿ ಕುಡಿಯುವವರಿಗೆ ಆ ಕಟಿಂಗ್ ತೋರಿಸಿ ಕುಡಿಯದಂತೆ ತಡೆಯುತ್ತಾರೆ. ಡಾಕ್ಟರುಗಳು ಸಹ ಆಗಾಗ್ಗೆ ಕೋರ್ಟು ಕೇಸುಗಳಲ್ಲಿ ಸಿಕ್ಕಿಕೊಳ್ಳುತ್ತಾರೆ. ಅಜಾಗರೂಕತೆಯಿಂದ ಚಿಕಿತ್ಸೆ ಮಾಡುವ ಡಾಕ್ಟರುಗಳ ಮೇಲೆ ರೋಗಿಗಳು ಕೋರ್ಟಿನಲ್ಲಿ ಕೇಸು ಹಾಕಿ ನಷ್ಟ ಪರಿಹಾರವನ್ನು ಗಿಟ್ಟಿಸುತ್ತಾರೆ. ಅಂತಹ ಕೇಸುಗಳು ಹಿಂದಿಗಿಂತಲೂ ಈಗ ಜಾಸ್ತಿಯಾಗಿವೆ. ಕೆಲವು ಕೇಸುಗಳು ಸೋಲುತ್ತವೆ. ಆದರೆ ಕೇಸು ಗೆದ್ದರೆ ಮಾತ್ರ ಅವರು ಕೋಟ್ಯಾಧೀಶ್ವರುಗಳಾಗುತ್ತಾರೆ. 360 ಜನ ರೋಗಿಗಳು ಡಾಕ್ಟರುಗಳ ಮೇಲೆ ಕೇಸು ಹಾಕಿ ನಷ್ಟ ಪರಿಹಾರ ಹೊಂದಿ ಕೋಟ್ಯಾಧೀಶ್ವರುಗಳಾಗಿದ್ದಾರೆ. ಒಂದೊಂದು ಕೇಸಿನಲ್ಲಿ ಸರಾಸರಿ 42 ಲಕ್ಷ ರೂಪಾಯಿಗಳ ನಷ್ಟ ಪರಿಹಾರ ಸಿಕ್ಕಿದೆ. ಆ ಖರ್ಚು ಎಲ್ಲವನ್ನೂ ಡಾಕ್ಟರುಗಳ ಪರವಾಗಿ ಇನ್ಸೂರೆನ್ಸ್ ಕಂಪನಿಗಳು ಕೊಡುತ್ತವೆ. ಅದಕ್ಕಾಗಿ ಡಾಕ್ಟರುಗಳು ಹೆಚ್ಚಿನ ಮೊತ್ತದ ಪ್ರೀಮಿಯಮ್ ಕೊಡಬೇಕಾಗಿರುತ್ತದೆ. ಪ್ರತಿವರ್ಷ ಡಾಕ್ಟರುಗಳು 26000 ಕೋಟಿಗಳ ಮೊತ್ತದ ಪ್ರೀಮಿಯಮ್ ತುಂಬುತ್ತಾರೆ. ಒಟ್ಟಿಗೆ ಈ ಮೊತ್ತ ಅವರ ಆದಾಯದಲ್ಲಿ ಆರನೇಯ ಭಾಗದಷ್ಟಿರುತ್ತದೆ. ಸ್ತ್ರೀರೋಗಗಳಿಗೆ ಚಿಕಿತ್ಸೆ ಮಾಡುವ ಗೈನಕಾಲಜಿಸ್ಟ್‌ಗಳಿಗೆ ಇಂಥ ಕೇಸುಗಳ ಕಾಟ ಬಹಳವಾಗಿರುತ್ತದೆ. ತಾಯಿಗಾಗಲಿ, ಹುಟ್ಟಿದ ಮಗುವಿಗಾಗಲಿ ಅನಾಹುತವಾದರೆ ಡಾಕ್ಟರ್ ನಷ್ಟ ಪರಿಹಾರ ಕೊಡಬೇಕಾಗುತ್ತದೆ. ಹುಟ್ಟಿದ ಮಗು ಮಾನಸಿಕ ರೋಗಕ್ಕೆ ಗುರಿಯಾದರೆ, ಪ್ರಸವ ಸಮಯದಲ್ಲಿ ಡಾಕ್ಟರನ ಅಜಾಗರೂಕತೆಯಿಂದಲೇ ಅಂತಹ ರೋಗ ಬಂದಿದೆಯೆಂದು ಆ ಮಗುವಿನ ತಂದೆತಾಯಿಯರು ಕೋರ್ಟಿಗೆ ಹೋಗುವ ಸಾಧ್ಯತೆ ಇದೆ. ''ಕೋರ್ಟಿಗೆ ಹೋಗುವುದು, ಕೇಸಿನಲ್ಲಿ ಸಿಕ್ಕಿಸುವುದು

ಅಮೆರಿಕನ್ನರಿಗೆ ಒಂದು ಹಾಜಿ'' ಎಂದು ಒಬ್ಬ ಜರ್ಮನ್ ಅರ್ಥಶಾಸ್ತ್ರಜ್ಞ ಹೇಳಿದ್ದಾನೆ. ಅಮೆರಿಕನ್ನರ ಬಗ್ಗೆ ಒಂದು ಜೋಕ್ ಇದೆ. ಕಳ್ಳತನ ಮಾಡಲಿಕ್ಕೆ ಬಂದಿದ್ದ ಒಬ್ಬ ಕಳ್ಳ ಏಣಿ ಹತ್ತುತ್ತಿರುವಾಗ ಜಾರಿ ಕೆಳಗೆ ಬಿದ್ದು ಕಾಲುಗಳನ್ನು ಮುರಿದುಕೊಂಡನು. ಅವನು ಮನೆ ಯಜಮಾನನ ಮೇಲೆ ಏಣಿಯನ್ನು ಸರಿಯಾಗಿ ನಿಲ್ಲಿಸಿರಲಿಲ್ಲವೆಂದು ಕೇಸು ಹಾಕಿದನಂತೆ, ಇಂತಹ ಕೇಸುಗಳು ಅಮೆರಿಕಾ ನ್ಯಾಯಸ್ಥಾನಗಳಲ್ಲಿ ಬಹಳ ಇವೆಯಂತೆ. ಅಮೆರಿಕಾದಲ್ಲಿ ಬಡಲಾಯರುಗಳು ಇರುವುದೇ ಇಲ್ಲವಂತೆ. ಕೆಲವು ಕೇಸುಗಳಲ್ಲಿ ಅವರು ಆಸ್ತಿ ಬೆಲೆಯಲ್ಲಿ ಶೇ. 40 ಭಾಗ ಫೀಜನ ರೂಪದಲ್ಲಿ ತೆಗೆದುಕೊಳ್ಳುತ್ತಾರೆ. ಕೇವಲ ಕೇಸು ಗೆಲ್ಲುತ್ತೋ? ಇಲ್ಲವೋ? ಎಂಬುದರ ಬಗ್ಗೆ ಸಲಹೆ ಕೊಟ್ಟಿದ್ದಕ್ಕೆ 650ರಿಂದ 2000 ರೂಪಾಯಿ ಮೊತ್ತದವರೆಗೆ ಫೀಜು ತೆಗೆದುಕೊಳ್ಳುತ್ತಾರಂತೆ.

ನಮ್ಮ ದೇಶದಲ್ಲಿ ಹೆಸರಾಂತ ಅಶೋಕ್ ಸೇನ್, ನಾನಿ ಪಾಲ್ಕಿವಾಲ, ಸೋಲಿ ಸೋರಾಬ್ಜಿಯಂತಹ ಲಾಯರುಗಳು 1983ರಲ್ಲಿ ಅಮೆರಿಕದಲ್ಲಿ 26 ಕೋಟಿ ರೂಪಾಯಿಗಳನ್ನು ಸಂಪಾದಿಸಿದಂತೆ ಹೇಳುತ್ತಾರೆ. ಅಮೆರಿಕದಲ್ಲಿ ಒಟ್ಟು ಏಳು ಲಕ್ಷ ಜನ ಲಾಯರುಗಳಿದ್ದಾರೆ. ಅವರೆಲ್ಲರ ವಾರ್ಷಿಕ ಆದಾಯ ಬಡ್ಜೆಟ್ ಮೊತ್ತಕ್ಕಿಂತಲೂ ಹೆಚ್ಚು. ಹೆನ್ರಿ ಅಬ್ರಹಂ ಎಂಬ ಲೇಖಕ ''ಪೊಲಿಟಿಕಲ್ ಸೈನ್ಸ್'' ಎಂಬ ತ್ರೈಮಾಸಿಕದಲ್ಲಿ ಕೆಲವು ಆಸಕ್ತಿಕರ ಕೇಸುಗಳ ಬಗ್ಗೆ ಬರೆದಿದ್ದಾನೆ.

ಒಬ್ಬ ತನ್ನನ್ನು ಸರಿಯಾದ ಪದ್ಧತಿಯಲ್ಲಿ ಬೆಳೆಸಿಲ್ಲವೆಂದು ತನ್ನ ತಂದೆತಾಯಿಯರ ಮೇಲೆಕೇಸು ಹಾಕಿದನಂತೆ.

ತನ್ನ ಭವಿಷತ್ತನ್ನು ಹಾಳು ಮಾಡಿದಳೆಂದು ಒಬ್ಬ ಯಜಮಾನಳ ಮೇಲೆ ಅವಳ ಹತ್ತಿರ ಕೆಲಸ ಮಾಡುತ್ತಿದ್ದ ಉದ್ಯೋಗಿ ಎರಡು ಲಕ್ಷ ರೂ.ಗಳ ನಷ್ಟ ಪರಿಹಾರಕ್ಕೆ ಕೇಸು ಹಾಕಿದನು. ಅಡ್ವಾನ್ಸ್ ತೆಗೆದುಕೊಳ್ಳಲಿಕ್ಕೆ ನಿರಾಕರಿಸಿದನೆಂಬ ತಪ್ಪಿಗಾಗಿ ಅವನನ್ನು ಶಿಕ್ಷಿಸಬೇಕೆಂದು ಪ್ರಯತ್ನ ಮಾಡಿದಳೆಂದು ಆ ಉದ್ಯೋಗಿ ಅವಳ ಮೇಲೆ ಆರೋಪಿಸಿದನು!

ಫ್ಲೋರಿಡಾ ರಾಜ್ಯದ ಒಂದು ಆಫೀಸಿನಲ್ಲಿ ಟಾಯಿಲೆಟ್ ಸೀಟಿನ ಮೇಲೆ ಬಿದ್ದು ಸೊಂಟಕ್ಕೆ ಪೆಟ್ಟು ತಿಂದ ಒಬ್ಬ ಉದ್ಯೋಗಸ್ಥೆ ಮೇನೆಜರ್ ಮೇಲೆ ನಷ್ಟ ಪರಿಹಾರಕ್ಕಾಗಿ ಕೇಸು ಹಾಕಿದಳು.

ನೌಕಾದಳಕ್ಕೆ ಸೇರಿದ ಟೆನ್ನೀಸ್ ಕೋರ್ಟಿನಲ್ಲಿ ಬ್ಯಾಡ್‌ಮಿಂಟನ್ ಆಡುತ್ತಿರುವಾಗ ಗುರುವಿಗೆ ಮೊಣಕಾಲಿನ ಮೇಲೆ ಗಾಯವಾಯಿತು. ಅವರು ಸರಕಾರದ ಮೇಲೆ ಎರಡು ಲಕ್ಷ ಡಾಲರುಗಳು ನಷ್ಟ ಪರಿಹಾರ ಕೊಡಬೇಕೆಂದು ಕೇಸು ಹಾಕಿದರು. ಮೊಣಕಾಲಿಗೆ ಗಾಯವಾದುದರಿಂದ ಚರ್ಚಿನಲ್ಲಿ ಬಗ್ಗಿ ಮೊಣಕಾಲೂರಿ ಪ್ರಾರ್ಥಿಸಲು ಆಗುತ್ತಿಲ್ಲವೆಂದು ವಾದಿಸಿದರು.

ಒಬ್ಬ ವನಿತೆ ಚರ್ಚಿನ ಫಾದರ್ ಮೇಲೆ ಏಳು ಕೋಟಿ ರೂ.ಗಳ ನಷ್ಟ ಪರಿಹಾರಕ್ಕೆ ಕೇಸು ಹಾಕಿದಳು. ಅವಳು ಚರ್ಚಿನ ಹಣವನ್ನು ದುರುಪಯೋಗ ಮಾಡಿದ್ದಳು. ಆದರೆ ತನ್ನ ತಪ್ಪನ್ನು ಒಪ್ಪಿಕೊಳ್ಳಲಿಲ್ಲ. ಆ ಸಮಾಚಾರವನ್ನು ಚರ್ಚಿನ ಫಾದರ್ ರಹಸ್ಯವಾಗಿ ಇಟ್ಟಿಲ್ಲವೆಂದೂ, ಎಲ್ಲರಿಗೂ ತಿಳಿಸಿ ತನ್ನ ವೃತ್ತಿಧರ್ಮಕ್ಕೆ ಕಳಂಕ ತಂದುಕೊಂಡಿದ್ದಾರೆಂದು ಅವಳು ವಾದಿಸಿದಳು. ಕ್ಯಾಲಿಫೋರ್ನಿಯಾದಲ್ಲಿ ಜಿಮ್ನಾಸ್ಟಿಕ್ ಕಲಿತುಕೊಳ್ಳುತ್ತಿದ್ದ ಕ್ರೀಡಾಪಟು ಜಾರಿ ಬಿದ್ದು ಕಾಲು ಮುರಿದುಕೊಂಡನು. ನೆಲದ ಮೇಲೆ ಹಾಸಿದ್ದ ಚಾಪೆಯಿಂದ ತನಗೆ ಅನಾಹುತ ಆಯಿತೆಂದು ಆ ಚಾಪೆ ತಯಾರು ಮಾಡಿದ್ದ ಕಂಪನಿಯ ಮೇಲೆ ಕೇಸು ಹಾಕಿದನು. ಆ ಕಂಪನಿ ಅವನಿಗೆ 16 ಕೋಟಿ ರೂ.ಗಳ ನಷ್ಟ ಪರಿಹಾರ ಕೊಡಬೇಕಾಯಿತು.

ಆಸ್‌ಬೆಸ್ಟಾಸ್ ಕಾರ್ಖಾನೆಯಲ್ಲಿ ಹೊರಬೀಳುವ ಧೂಳಿನಿಂದ ಕಾರ್ಮಿಕರಿಗೆ ಶ್ವಾಸಕೋಶ ವ್ಯಾಧಿಗಳು, ಕ್ಯಾನ್ಸರ್ ರೋಗಗಳು ಬರುತ್ತವೆ ಎಂದು ವೈದ್ಯ ನಿಪುಣರು ಹೇಳಿದರು. ಆಗಿನಿಂದ ಆ ಕಾರ್ಖಾನೆಯಲ್ಲಿ ನಷ್ಟ ಪರಿಹಾರಕ್ಕಾಗಿ ಕಾರ್ಮಿಕರು ಮಾಲಿಕರ ಮೇಲೆ 30 ಸಾವಿರ ಕೇಸುಗಳನ್ನು ಹಾಕಿದ್ದಾರೆ. ಅವುಗಳಲ್ಲಿ ಬಹುಷ್ಟು ಕೇಸುಗಳು ಇನ್ನೂ ಇತ್ಯರ್ಥವಾಗಿಲ್ಲ. ಕೆಲವು

ಕಾರ್ಖಾನೆ ಮಾಲಕರುಗಳು ನಷ್ಟಪರಿಹಾರ ಕೊಡಲಾಗದೆ ಕಾರ್ಖಾನೆಗಳನ್ನೆ ಮುಚ್ಚಿ ಬಿಟ್ಟಿದ್ದಾರೆ. ವರ್ಜೀನಿಯಾದಲ್ಲಿ ರಾಬಿನ್ಸ್ ಕಂಪನಿ ಕುಟುಂಬ ನಿಯಂತ್ರಣಕ್ಕಾಗಿ 'ಟ್ಯಾಪ್'ಗಳನ್ನು ತಯಾರು ಮಾಡುತ್ತದೆ. ನಷ್ಟ ಪರಿಹಾರಕ್ಕಾಗಿ ಅವರ ಮೇಲೆ 15 ಸಾವಿರ ಕೇಸುಗಳು ವಿಚಾರಣೆಯಲ್ಲಿವೆ. ಪಿಟ್ಸ್ ಬರ್ಗ್‌ನಲ್ಲಿ ಒಬ್ಬ ಕಾರ್ಮಿಕ ಲುಕೇಮಿಯಾ ರೋಗದಿಂದ ಸತ್ತನು. ಅವನು ಕೆಲಸ ಮಾಡುವ ಬೆಂಜಿನ್ ಕಂಪನಿಯ ಮೇಲೆ ಸತ್ತವನ ಹೆಂಡತಿ ನಷ್ಟ ಪರಿಹಾರಕ್ಕಾಗಿ ಕೇಸು ಹಾಕಿದಳು. ಆ ರಸಾಯನದಿಂದಲೇ ಅವನಿಗೆ ಆ ರೋಗ ಬಂದಿತ್ತೆಂದು ಅವಳು ವಾದಿಸಿದಳು. ಅಂತಹ ರಸಾಯನವನ್ನು ತಯಾರು ಮಾಡುವ 101 ಕಂಪನಿಗಳನ್ನು ಅವಳು ಆ ಕೇಸಿನಲ್ಲಿ ಪಾರ್ಟಿಗಳಾಗಿ ಸೇರಿಸಿದಳು. ಅದರಲ್ಲಿ 87 ಕಂಪನಿಗಳು ತಾವು ತಯಾರು ಮಾಡುವ ಬೆಂಜಿನ್ ಅನ್ನು ಪಿಟ್ಸ್ ಬರ್ಗ್‌ನಲ್ಲಿನ ಫ್ಯಾಕ್ಟರಿಗೆ ಸರಬರಾಜು ಮಾಡಿಲ್ಲವೆಂದು ನಿರೂಪಿಸಿದರು. ಅವರೆಲ್ಲರಿಗೂ ಅವಳೇ ಕೋರ್ಟಿನ ಖರ್ಚುಗಳನ್ನು ಕೊಡಬೇಕಾಯಿತು.

ಅಮೆರಿಕನ್ ಪ್ರಜೆಗಳು ಲಾಯರುಗಳನ್ನು ಸಹ ಜಡರು, ನಷ್ಟ ಪರಿಹಾರದಿಂದ. ಸರಿಯಾದ ಸಮಯಕ್ಕೆ ಕೋರ್ಟಿನಲ್ಲಿ ಪೇಪರುಗಳನ್ನು ದಾಖಲು ಮಾಡಿಲ್ಲವಾದರೆ ಕೇಸಿನಲ್ಲಿ ಸರಿಯಾಗಿ ವಾದಿಸದಿದ್ದರೆ ಅವರ ಮೇಲೆ ನಷ್ಟ ಪರಿಹಾರಕ್ಕಾಗಿ ಕೇಸು ಹಾಕುತ್ತಾರೆ. ಎರಡು ವರ್ಷಗಳ ಕೆಳಗೆ ''ಸಿಂಗರ್ ಡೋರ್'' ಎಂಬ ಕಕ್ಷಿದಾರ ತನ್ನ ಕೇಸನ್ನು ವಾದಿಸಿದ ಲಾಯರಿನ ಮೇಲೆ 33 ಕೋಟಿ ರೂ.ಗಳ ನಷ್ಟ ಪರಿಹಾರಕ್ಕೆ ಕೇಸು ಹಾಕಿದನು.

ಪ್ರಪಂಚದಲ್ಲೇ ಅತೀ ಹೆಚ್ಚು ಲಾಯರುಗಳನ್ನು ಹೊಂದಿರುವ ದೇಶ ಅಮೆರಿಕ. ಗಣತಿ ಪ್ರಕಾರ ಅಮೆರಿಕದಲ್ಲಿ ಏಳು ಲಕ್ಷ ಜನ, ಜಪಾನಿನಲ್ಲಿ 12 ಸಾವಿರ ಜನ, ಇಂಗ್ಲಂಡಿನಲ್ಲಿ 53 ಸಾವಿರ ಜನ, ಸ್ವೀಡನ್‌ನಲ್ಲಿ 16 ಸಾವಿರ ಜನ ಲಾಯರುಗಳಿದ್ದಾರೆ. 1973ರವರೆಗೆ 700 ಜನಕ್ಕೆ ಒಬ್ಬ ಅಮೆರಿಕನ್ ಲಾಯರು ಇದ್ದರು. 1986ರಲ್ಲಿ ಪ್ರತಿ 320 ಜನಕ್ಕೆ ಒಬ್ಬ ಲಾಯರು ಇರುವುದಾಗಿ ತಿಳಿದಿದೆ. ವಾಷಿಂಗ್‌ಟನ್ ನಗರದಲ್ಲಿ ಪ್ರತಿ 18 ಜನಕ್ಕೆ ಒಬ್ಬ ಲಾಯರು ಇದ್ದಾನೆ. ಈ ಲೆಕ್ಕಗಳ ಪ್ರಕಾರ ನೋಡಿದರೆ 2045ನೇ ವರ್ಷಕ್ಕೆ ಆ ನಗರದಲ್ಲಿ ಪ್ರತಿ ಮನುಷ್ಯನಿಗೆ ಒಬ್ಬ ಲಾಯರು ಇರುವುದರಲ್ಲಿ ಆಶ್ಚರ್ಯವಿಲ್ಲ! (ಆಧಾರ) ●

ಹುರಿಟ್ಟು ಕಟ್ಟಿಸಿದ ಅಣೆಕಟ್ಟು

ಹಸಿದ ಹುಡುಗನ ಮುಂದಿದ್ದ ತಟ್ಟೆಯಲ್ಲಿತ್ತು. ಅಜ್ಜಿ ಕಲಿಸಿಟ್ಟ ಹುರಿಟ್ಟಿನ ಉಂಡೆ. ತಿನ್ನುತ್ತ, ತಿನ್ನುತ್ತ ಬಾಲಕ ಬಿಕ್ಕತೊಡಗಿದ. ''ಅಜ್ಜಿ ನೀರು'' ಕೂಗಿದ ಹುಡುಗ, ''ಬಂದೆ ಮಗೂ, ತಂದೆ ಮಗೂ,'' ಎನ್ನುತ್ತ ಖಾಲಿ ಕೊಡವನ್ನು ಕಂಕುಳಿಗಿರುಕಿ ಹೊರಟ ಮುದುಕಿ ಬೆವರೊರೆಸುತ್ತ ಮತ್ತೆ ಮನೆಗೆ ಮರಳಿದ್ದು ಮೂವತ್ತು ನಿಮಿಷಗಳ ನಂತರ, ನೀರು ಅರ್ಧ ಮೈಲಿ ದೂರದ ಶ್ಯಾನುಭೋಗರ ತೋಟದ ಬಾವಿಯಿಂದ ತಂದದ್ದು.

ಈ ಪ್ರಸಂಗ ಬಾಲಕನ ಮನವಾಳದಲ್ಲಿ ಗಾಢವಾಗಿ ಅಚ್ಚೊತ್ತಿತ್ತು. ದೇಶದ ಜನ ನೀರಿಗಾಗಿ ಪಡುವ ಬವಣೆಯನ್ನು ಹೇಗಾದರೂ ಪರಿಹರಿಸಬೇಕೆಂಬ ನಿರ್ಧಾರ ಮನದಲ್ಲಿ ಮೊಳೆತು ಚಿಗಿತು, ಜಗತ್ಪ್ರಸಿದ್ಧವಾದ ಅಣೆಕಟ್ಟೆಯಾಗಿ ಅರಳಿತು. (ಮೈಸೂರಿನ ಕನ್ನಂಬಾಡಿಕಟ್ಟೆ)

ಈ ಬಾಲಕನೇ ಭಾರತದ ಭಾಗ್ಯಶಿಲ್ಪಿ, ಮಾದರಿ ಮೈಸೂರಿನ ದಿವಾನರಾದ ಭಾರತರತ್ನ ಶ್ರೀ ಎಮ್.ವಿಶ್ವೇಶ್ವರಯ್ಯ. 101 ವರ್ಷಗಳ ಪೂರ್ಣಾಯಸ್ಸಿನ ಪ್ರತಿ ನಿಮಿಷವನ್ನು ನಾಡಿನ ಅಭ್ಯುದಯಕ್ಕಾಗಿ ಸವೆಸಿದ ಅಸಾಮಾನ್ಯ ಚೇತನ.

(ಸಂಗ್ರಹ) ಡಾ. ಮಾಧವಿ ಎಚ್.ಎಸ್


ದಿ ಓಲ್ಡ್ ಮ್ಯಾನ್
ಅಂಡ್ ದಿ ಸೀ
ಮೂಲ: ಅರ್ನೆಸ್ಟ್ ಹೆಮಿಂಗ್ವೇ
ಕನ್ನಡಕ್ಕೆ: ಸಿದ್ದಲಿಂಗ ಪೂಜಾರಿ

ದಿ ಓಲ್ಡ್ ಮ್ಯಾನ್ ಅಂಡ್ ದಿ ಸೀ ನೋಬೆಲ್ ಪಾರಿತೋಷಕ ವಿಜೇತ ಕೃತಿ. ಅದೊಂದು 'ಅಲೆಗರಿ' ಎನ್ನಬಹುದಾದ ಕಾದಂಬರಿ. ಕ್ರೈಸ್ತ ಧರ್ಮದ ನಂಬಿಕೆಗಳಿಗೆ ಪೂರಕವಾಗಿ ಇಲ್ಲಿಯ ಪಾತ್ರಗಳು ಪ್ರತೀಕಗಳಾಗಿ ಸೃಷ್ಟಿಗೊಂಡಿವೆಯಾದರೂ ಅವು ಬರೀ ಸಾಹಿತ್ಯಿಕ ಹಾಗೂ ತಾಂತ್ರಿಕ ಅವಶ್ಯಕತೆಗಳಿಗನುಗುಣವಾಗಿವೆ ಎನ್ನಬೇಕು. ವೃದ್ಧ ಸಾಂಟಿಯಾಗೊ ಹಾಗೂ ಗಾಳಕ್ಕೆ ಸಿಕ್ಕಿ ಬಿದ್ದ ಮೀನು ಇಬ್ಬರೂ ನಡೆಸುವ ಹೋರಾಟದ ಮಧ್ಯೆ ಚೈತನ್ಯದ ಚಿಲುಮೆಯಾಗಿದ್ದಾರೆ. ಕತೆಯಗುಂಟ ಜೀವ ಪಡೆದುಕೊಳ್ಳುವ ಅನೇಕ ಮೌಲ್ಯಗಳು ಕಾದಂಬರಿಯ ಶ್ರೇಷ್ಠತೆಯನ್ನು ಹೆಚ್ಚಿಸುತ್ತವೆ. ಸೋಲು-ಗೆಲವು ಮುಖ್ಯವಲ್ಲ, ಹೋರಾಟ ಮುಖ್ಯ. ತ[illegible]ಲ್ಲ ದುರಂತಗಳೊಂದಿಗೇ ಬದುಕು ಸಂಭ್ರಮಶೀಲವಾಗಿದೆಯಲ್ಲವೇ?



ಅರ್ನೆಸ್ಟ್ ಹೆಮಿಂಗ್ವೇ

ಅರ್ನೆಸ್ಟ್ ಹೆಮಿಂಗ್ವೇ ಹುಟ್ಟಿದ್ದು ಅಮೆರಿಕೆಯ ಇಲ್ಲಿನೋಯ್ಸ್ ರಾಜ್ಯದ ಓಕ್ ಪಾರ್ಕ್‌ನಲ್ಲಿ; ಜುಲೈ 21, 1899ರಲ್ಲಿ. ಅವನದು ರೋಮಾಂಚ ಕಾರಿ ಬದುಕು. ಅಪಾಯಗಳನ್ನು ಎದುರು ಹಾಕಿ ಕೊಳ್ಳುವುದು ಆತನ ಸ್ವಭಾವವಾಗಿತ್ತು. ತರುಣ ನಾಗಿದ್ದಾಗ ಹೆಗಲ ಮೇಲೆ ರೈಫಲ್ ಇಟ್ಟು ಕೊಂಡು ಕಾಡು ಕಾಡು ಅಲೆಯುತ್ತಿದ್ದ. ಮೀನು ಹಿಡಿಯಲು ದೋಣಿಯೇರಿ ಬಹಳ ದೂರ ಹೋಗುತ್ತಿದ್ದ. ವಾಸಿಸಲು ಸರೋವರದ ಬಳಿ ಒಂದು ಸುಂದರ ಮನೆಯಿದ್ದರೂ ಹೊರಗೆ ಟೆಂಟ್ ಹಾಕಿಕೊಂಡು ಕಂದೀಲು ಬೆಳಕಿನಲ್ಲಿ ಓದುತ್ತ ಮಲಗುತ್ತಿದ್ದ.

ಆತ ಓಕ್ ಪಾರ್ಕ್ ಹೈಸ್ಕೂಲಿನಲ್ಲಿ ಓದಿ ಪದವೀಧರನಾದ. ಅಷ್ಟರಲ್ಲಿ ಯುರೋಪದಲ್ಲಿ ಒಂದನೇ ಮಹಾಯುದ್ಧ ಪ್ರಾರಂಭವಾಗಿತ್ತು. ಶಿಕ್ಷಣಕ್ಕಿಂತ ಯುದ್ಧದಲ್ಲಿ ಆತನಿಗೆ ಹೆಚ್ಚಿನ ಆಸಕ್ತಿ. ಹೀಗಾಗಿ ಸೈನ್ಯ ಸೇರುವ ತವಕ. ದೃಷ್ಟಿ ಮಾಂದ್ಯದ ಕಾರಣಕ್ಕಾಗಿ ಆತನ ಆಯ್ಕೆಯಾಗ ಲಿಲ್ಲ. ನಿರಾಶನಾಗಿ ಕನ್ಸಾಸ್ ಸಿಟಿಯಲ್ಲಿದ್ದ ತನ್ನ ಚಿಕ್ಕಪ್ಪನ ಬಳಿಗೆ ಹೋದ. ಅಲ್ಲಿ ದಿನಪತ್ರಿಕೆ ಯೊಂದರ ವರದಿಗಾರನಾದ. ಆದರೆ ಯುದ್ಧ ದಲ್ಲಿ ಪಾಲ್ಗೊಳ್ಳುವ ಆಸೆ ಬತ್ತಿರಲಿಲ್ಲ. ಇಟ ಲಿಯ ಯುದ್ಧ ಭೂಮಿಯಲ್ಲಿ ಅಂಬುಲನ್ಸ್ ಚಾಲಕನಾಗಿ ಸೇವೆಗೆ ಸೇರಿಕೊಂಡ. ಸುರಕ್ಷಿತ ವಾಗಿ ಸ್ಥಳದಲ್ಲೇ ಓಡಾಡಿಕೊಂಡಿರುವುದು ಬೇಸ ರವೆನಿಸಿ ಆತ ಅಪಾಯಕಾರಿ ಶೆಲ್ ಸಿಡಿತದಿಂದ ಭೂಮಿಯಲ್ಲಿ ಹುಗಿದು ಹೋದ. ಹೇಗೋ ಪಾರಾದ. ಅಷ್ಟಕ್ಕೆ ಸಾಲದೆಂಬಂತೆ ಸೈನಿಕರಿಗೆ

ಉತ್ತರಾರ್ಧ

ಕಡಲು ಗಾಳಿ ಬೀಸುತ್ತಿದ್ದರೂ ಬಿಸಿಲು ಪ್ರಖರವಾಗಿತ್ತು.

''ದೋಣಿಯ ಹಿಂಭಾಗದಲ್ಲಿರುವ ಚಿಕ್ಕದಾದ ಗಾಳವನ್ನು ಮತ್ತೆ ಸಿದ್ಧಪಡಿಸಬೇಕು. ಮೀನು ಇನ್ನೊಂದು ರಾತ್ರಿ ಹೀಗೇ ಮುಂದುವರೆದರೆ ತಿನ್ನಲು ಏನಾದರೂ ಬೇಕೇಬೇಕು. ಅಲ್ಲದೆ ಬಾಟಲಿಯೊಳಗೆ ನೀರೂ ಕೂಡ ಸಾಕಷ್ಟಿಲ್ಲ. ಡಾಲ್ಫಿನ್ ಬಿಟ್ಟರೆ ತಿನ್ನಲು ಇಲ್ಲಿ ಬೇರೇನೂ ಸಿಗಲಾರದು. ತಾಜಾ ಇದ್ದಾಗಲೇ ತಿಂದರೆ ಇನ್ನೂ ಒಳ್ಳೆಯದು. ಇಂದು ರಾತ್ರಿ ಹಾರುವ ಮೀನೊಂದು ಸಿಕ್ಕರೂ ಸಿಗಬಹುದು. ಆದರೆ ಅವುಗಳನ್ನು ಆಕರ್ಷಿಸಲು ತನ್ನ ಬಳಿ ಬೆಳಕಿನ ಸಾಧನವಿಲ್ಲ. ಹಾರುವ ಮೀನನ್ನು ಬೇಯಿಸದೆ ತಿಂದರೂ ಬಹಳ ರುಚಿಕರವಾಗಿರುತ್ತದೆ. ಅಲ್ಲದೆ ಅದನ್ನು ಕೊಯ್ದು ತುಂಡು ಹಾಕಬೇಕಿಲ್ಲ. ಇದೀಗ ತನ್ನಲ್ಲಿರುವ ಶಕ್ತಿಯನ್ನೆಲ್ಲ ಕಾಪಾಡಿಕೊಳ್ಳಬೇಕು. ದೇವರೇ, ಮೀನು ಅಷ್ಟೊಂದು ಬಲಾಢ್ಯವಾಗಿರ

ಒಂದು ಪರಿಚಯ

ಸಹಾಯ ಮಾಡಲು ಹೋದಾಗ ಮಷಿನ್ ಗನ್ ಬುಲೆಟ್ ತಾಗಿ ಎಡ ಮೊಳಕಾಲಿಗೆ ತೀವ್ರ ಸ್ವರೂಪದ ಗಾಯವಾಯಿತು.

ಚಿಕಿತ್ಸೆಗಾಗಿ ಅನೇಕ ವಾರಗಳ ಕಾಲ ಆತ ರೆಡ್ ಕ್ರಾಸ್ ಆಸ್ಪತ್ರೆ ಸೇರಿದ. ಅಲ್ಲಿದ್ದಾಗ ಆ್ಯಗ್ನೇಸ್ ಎಂಬ ಇಂಗ್ಲೀಷ್ ನರ್ಸ್ ಒಬ್ಬಳ ಮೋಹ ಪಾಶದಲ್ಲಿ ಸಿಲುಕಿದ. ಮರಳಿ ಅಮೆರಿಕೆಗೆ ಹೋಗಿ ಆವಳಿಗಾಗಿ ದಾರಿಕಾದ. ಆಕೆ ಬರಲಿಲ್ಲ. ಇಟಾಲಿಯನ್ ಮೇಜರ್ ಒಬ್ಬನನ್ನು ಮದುವೆಯಾಗಿರುವುದಾಗಿ ಆಕೆ ಪತ್ರ ಬರೆದಿದ್ದಳು. ಆಘಾತದಿಂದ ಆತ ಹಾಸಿಗೆ ಹಿಡಿದ. ಅಲ್ಲಿಂದ ಮತ್ತೆ ಪ್ಯಾರೀಸಿಗೆ ಬಂದು ಬರೆಹಕ್ಕೆ ಅಂಟಿಕೊಂಡ. ಅಲ್ಲಿ ಆತನಿಗೆ ಜೇಮ್ಸ್ ಜಾಯ್ಸ್, ಗಟ್ರೂರ್ಡ್ ಸ್ಟೀನ್, ಎಜ್ರಾ ಪಾಂಡ್, ಶೇರವುಡ್ ಆ್ಯಂಡರ್‌ಸನ್ ಮುಂತಾದವರ ಪರಿಚಯವಾಯಿತು.

ಒಂದರ ಮೇಲೊಂದರಂತೆ ಆತನ ಬರೆಹಗಳು ಅಸ್ವೀಕೃತವಾಗಿ ವಾಪಸಾದವು. ತನ್ನ ಗೆಳೆಯನ ಮುಂದೆ ತನ್ನ ದುರ್ದೈವದ ಅಳಲನ್ನು ತೋಡಿಕೊಂಡ. ನೋವು-ಸಂಕಟಗಳ ಅನುಭವವಿಲ್ಲದ ನೀನೇನು ಬರೆಯಬಲ್ಲೆ ಎಂದಾಗ ಆತ ರೋಸಿ ಹೋದ. ತನ್ನಲ್ಲಿ ನೋವು-ಸಂಕಟಗಳಿಲ್ಲವೆ ಎಂದುಕೊಂಡು ಛಲಗಾರ ಹೆಮಿಂಗ್ವೇ 'ಎ ಫೇರ್ ವೆಲ್ ಟು ಆರ್ಮ್ಸ್' ಎಂಬ ಕಾದಂಬರಿ ಬರೆದು ಮುಗಿಸಿದ. ಅದು ಅತ್ಯಂತ ಜನಪ್ರಿಯ ಕೃತಿಯಾಗಿ ಹೊರ ಬಂತು.

ನಂತರ ವಿಶ್ವಸಂಚಾರಿಯಾಗಿ ಆಫ್ರಿಕೆಯ ಕಾಡುಗಳಲ್ಲಿ ಬೇಟೆಯಾಡುತ್ತ, ಸಾಗರ-ಮಹಾಸಾಗರಗಳಲ್ಲಿ ಮೀನು ಹಿಡಿಯುತ್ತ, ಸ್ಪೇನಿನ ಗೂಳಿಕಾಳಗಗಳಲ್ಲಿ ಭಾಗವಹಿಸುತ್ತ, ಬರೆಯುತ್ತ ಕಾಲ ಕಳೆದ. ಸ್ಪೇನ್ ದೇಶದ ಸಿವಿಲ್ ಯುದ್ಧದ ಬಗ್ಗೆ ಅಮೆರಿಕೆಯ ಪತ್ರಿಕೆಗಳಿಗೆ ವರದಿ ಮಾಡಿದ. ಎರಡನೇ ಮಹಾಯುದ್ಧದ ವೇಳೆಯಲ್ಲಿ ಆತ ಕ್ಯೂಬಾದಲ್ಲಿದ್ದುಕೊಂಡು ತನ್ನ ದೋಣಿಯಲ್ಲಿ ಮಾರಕಾಸ್ತ್ರಗಳನ್ನು ತುಂಬಿಕೊಂಡು ಅಮೆರಿಕೆಯ ಅಟ್ಲಾಂಟಿಕ್ ಕರಾವಳಿಗುಂಟ ಪಹರೆ ಕೆಲಸ ಮಾಡಿದ. ಅನೇಕ ಕತೆ, ಕಾದಂಬರಿ, ಅಣಕ ಹಾಗೂ ಬಿಡಿ ಲೇಖನಗಳನ್ನು ಪ್ರಕಟಿಸಿದ. ವಿಶ್ವಸಾಹಿತ್ಯದಲ್ಲಿ ತನ್ನ ಹೆಸರು ಚಿರಸ್ಥಾಯಿಯಾಗಿ ಉಳಿಯುವಂತೆ ಮಾಡಿದ.

ಅತ್ಯುತ್ತಮ ಹಾಗೂ ವಿವಿಧ ಮಾದರಿಯ ಮದ್ಯ, ರುಚಿಯಾದ ಆಹಾರ, ಅಲ್ಲದೆ ಸುಂದರ ಹೆಣ್ಣುಗಳನ್ನು ಆತ ಇಷ್ಟಪಡುತ್ತಿದ್ದ. 1961ರ ಜುಲೈ ತಿಂಗಳ ಒಂದು ಮುಂಜಾನೆ ಆತ ಮೆಟ್ಟಿಲುಗಳಿಂದ ಜಾರಿ ಕೆಳಗೆ ಬಿದ್ದ. ಇನ್ನು ನೋವು-ಸಂಕಟಗಳನ್ನು ಅನುಭವಿಸುವುದು ಸರಿಯಲ್ಲವೆಂದುಕೊಂಡು ಆತ ಗುಂಡು ಹೊಡೆದುಕೊಂಡು ಸಾವನ್ನಪ್ಪಿದ.

ಬಹುವೆಂದು ತನಗನಿಸಿರಲಿಲ್ಲ.''

''ಅದೆಷ್ಟೇ ದಿವ್ಯ ಭವ್ಯವಾಗಿದ್ದರೂ ನಾನದನ್ನು ಕೊಲ್ಲುವೆ'' ಆತ ಹೇಳಿದ.

ಕೊಲ್ಲುವುದು ನ್ಯಾಯ ಸಮ್ಮತವಲ್ಲದಿದ್ದರೂ ಮನುಷ್ಯ ಇಷ್ಟಪಟ್ಟರೆ ಏನು ಮಾಡಬಲ್ಲ, ಏನೇನು ಸಹಿಸಬಲ್ಲ ಎಂಬುದನ್ನು ತಾನು ಅದಕ್ಕೆ ಮನದಟ್ಟು ಮಾಡಿಕೊಡುವೆ.

''ನಾನೋರ್ವ ವಿಚಿತ್ರ ವೃದ್ಧ ಮನುಷ್ಯ ಎಂದು ಹುಡುಗನಿಗೆ ಹೇಳಿದ್ದೆ. ಅದನ್ನೀಗ ಸಿದ್ಧಮಾಡಿ ತೋರಿಸಬೇಕು.''

ಈ ಮೊದಲು ಸಾವಿರಾರು ಸಲ ಅಂಥ ಸಾಧನೆಗೈದಿದ್ದರೂ ಅದಕ್ಕೀಗ ಅರ್ಥವಿಲ್ಲ. ಮತ್ತೆ ಅದನ್ನೀಗ ಸಾಧಿಸಿ ತೋರಿಸಲು ಆತ ಸನ್ನದ್ಧನಾಗಿದ್ದಾನೆ. ಅವನ ದೃಷ್ಟಿಯಲ್ಲಿ ಪ್ರತಿಕ್ಷಣವೂ ನವನವೀನ. ತನ್ನ ಕೆಲಸದಲ್ಲಿ ಮಗ್ನವಾಗಿದ್ದಾಗ ಆತ ಭೂತಕಾಲದ ಬಗ್ಗೆ ಎಂದೂ ಯೋಚಿಸುವುದಿಲ್ಲ.

ಹೆಮಿಂಗ್ವೇ ಬರೆಹ ಹಾಗೂ ಬದುಕು :

ಕೌತುಕ, ಕೋಲಾಹಲ, ಸಾಹಸಗಳಿಂದ ತುಂಬಿದ ತನ್ನದೇ ಆದ ಅನಿಶ್ಚಿತ ಬದುಕಿನೊಂದಿಗೆ ಸೆಣಸಿದ ಅಪೂರ್ವ ಲೇಖಕ ಅರ್ನೆಸ್ಟ್ ಹೆಮಿಂಗ್ವೇ. ಜೀವನದ ಕೊನೆ ಹೇಗಿರಬಹುದು? ಹೇಗಿರಬೇಕು? ಎಂಬುದು ಆತನಿಗೆ ಮುಖ್ಯವಲ್ಲ. ಬದುಕು ನಡೆಸಲು ಪ್ರಾಮಾಣಿಕ ಹೋರಾಟ ಆತನಿಗೆ ಮುಖ್ಯ.

ನೋವು-ನಲಿವು, ಒಳಿತು-ಕೆಡಕು, ಆ ರೀತಿ ಇನ್ನಿತರ ಎಲ್ಲ ಸಾಧ್ಯತೆಗಳೊಂದಿಗೆ ಬದುಕನ್ನು ಇಡೀಯಾಗಿ ಸ್ವೀಕರಿಸುತ್ತ, ಸಂವೇದನಾಶೀಲನಾಗಿ ಬಾಳಿದ ಅಪರೂಪದ ಲೇಖಕ ಆತ. ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಒಳಸುಳಿಗಳನ್ನು ನಾಜೂಕಾಗಿ ಪರಿಶೀಲಿಸುವಾಗ ತಾನೇ ಸಂದಿಗ್ಧತೆಯಲ್ಲಿ ಸಿಲುಕಿ ಒದ್ದಾಡುವಂತೆ ತೋರುವ ವಿಕ್ಷಿಪ್ತ ಸ್ವಭಾವದ ವ್ಯಕ್ತಿ. ಹೆಮಿಂಗ್ವೇ ಪುಣ್ಯ-ಪಾಪಗಳ ಪರಿಭಾಷೆಗೆ ಅರ್ಥ ಹುಡುಕಲು ತವಕಾದುತ್ತ ಕೊನೆಗೆ ಹೇಳುತ್ತಾನೆ: ''ಪಾಪವನ್ನು ಜರೆ, ಪಾಪಿಯನ್ನಲ್ಲ.'' ಬಹುಶಃ ಇಲ್ಲಿ ಪಾಪಿಗಳನ್ನು ಬೇರ್ಪಡಿಸಲು ಸಾಧ್ಯವಿಲ್ಲವಷ್ಟು ಈ ನಾಗರಿಕತೆ ವಿಸ್ಮಯಕಾರಿಯಾಗಿದೆ ಎಂದು ಆತ ಭಾವಿಸಿರಬೇಕು. ಇಷ್ಟೊಂದು ಮಹತ್ವವಲ್ಲದ ಕಾರಣಗಳಿಗಾಗಿ ಆತನನ್ನು ನಿರಾಶಾವಾದಿ ಎಂದು ಕರೆದವರೂ ಉಂಟು. ಈ ಆರೋಪದ ಮಿತಿಯ ಆಚೆ ನಿಂತು ಯೋಚಿಸುವುದಾದರೆ ಆತ ಓರ್ವ ಸತ್ಯವಾದಿ. ತಾನು ಕಂಡುಂಡ ಬದುಕನ್ನು ಅದರ ಎಲ್ಲ ಸಾಧ್ಯತೆಗಳೊಂದಿಗೆ ದಾಖಲಿಸಲು ಪ್ರಯತ್ನಿಸಿದ ಧೀರ ಲೇಖಕ.

ಹೆಮಿಂಗ್ವೇ ಧಾರ್ಮಿಕ ಮನೋಭಾವದವನಲ್ಲ. ಆದರೆ ಪ್ರೀತಿ, ಸತ್ಯ, ಘನತೆ, ವಿನಮ್ರತೆ, ಕರ್ತವ್ಯನಿಷ್ಠೆ, ಆತ್ಮಗೌರವ ಮುಂತಾದ ಸದ್ಗುಣಗಳ ಸಿದ್ಧಿಗಾಗಿ, ಅವುಗಳ ರಕ್ಷಣೆಗಾಗಿ ಆಂತರಿಕವಾಗಿ ಆತ ಆಸಕ್ತನಾಗಿದ್ದನೆಂಬುದು ಸುಸ್ಪಷ್ಟ. ಇವುಗಳಿಗೆ ಪೂರಕವಾಗಿ 'ಮನುಷ್ಯ ಧರ್ಮ'ವೇ ಆತನ ನಿತ್ಯಾನ್ವೇಷಣೆ. ಮನುಷ್ಯ ಮನುಷ್ಯನನ್ನು ಗುರುತಿಸುವ, ಅರ್ಥ ಮಾಡಿಕೊಳ್ಳುವ ಪ್ರಕ್ರಿಯೆಗೆ ಚಾಲನೆ ನೀಡಬೇಕಾದ ಅಗತ್ಯವನ್ನು ಆತ ಅರಿತವನಾಗಿದ್ದ.

ಹೆಮಿಂಗ್ವೇನದು ಮನಸ್ಸು ಗೆಲ್ಲುವ ಶೈಲಿಯಾದರೂ ಆತ ಬಳಸುವ ಸರ್ವನಾಮಗಳು ಹಾಗೂ ಪದ ಸಮುಚ್ಚಯಗಳು ತುಂಬ ಸಂದಿಗ್ಧವಾಗಿವೆ. ಸರ್ವನಾಮಗಳ ಮೂಲ ಅಂಕಿತನಾಮಗಳು ಯಾವುವು ಎಂದರಿಯುವುದೇ ಒಮ್ಮೊಮ್ಮೆ ಕಷ್ಟಸಾಧ್ಯ. ಲಕ್ಷ್ಯವಿಟ್ಟು ಓದದಿದ್ದರೆ ಓದುಗ ಗೊಂದಲದಲ್ಲಿ ಸಿಕ್ಕಿ ಹಾಕಿಕೊಳ್ಳಬಹುದು.

–ಸಿದ್ಧರಾಜ

ಮೀನು ಸ್ವಲ್ಪ ಹೊತ್ತು ಮಲಗಿದರೆ ತಾನೂ ಮಲಗಿ ಆಫ್ರಿಕಾದ ಸಿಂಹಗಳ ಬಗ್ಗೆ ಕನಸು ಕಾಣಬಹುದು. ಬರೀ ಸಿಂಹಗಳ ಕನಸು ಬೀಳುವುದೇಕೋ. ವ್ಯರ್ಥವಾಗಿ ಏನೇನೋ ಚಿಂತಿಸಲು ಇದು ಸಮಯವಲ್ಲ. ನಿಶ್ಚಿಂತನಾಗಿ ಸ್ವಲ್ಪ ವಿಶ್ರಮಿಸಿಕೋ. ಮೀನು ಏನೋ ಸಂಚು ಹೂಡುತ್ತಿರಬೇಕು. ತಾನೂ ಕೂಡ ಸಿದ್ಧತೆಯಲ್ಲಿದ್ದರೆ ಒಳಿತು ಎಂದುಕೊಂಡ.

ಆದಾಗಲೇ ಇಳಿಹೊತ್ತು. ದೋಣಿ ನಿಧಾನವಾಗಿ, ನಿಶ್ಚಿತಗತಿಯಲ್ಲಿ ಸಾಗುತ್ತಿತ್ತು. ಮೂಡಣ ಗಾಳಿಯಿಂದಾಗಿ ಎಳೆತ ತುಸು ಹೆಚ್ಚಾಗಿತ್ತು. ಈಗ ಆತನ ಬೆನ್ನ ಮೇಲೆಲ್ಲ ಹುರಿಯ ಕೊರೆತದ ಅನುಭವವಾಗತೊಡಗಿತು.

ಇಳಿ ಹೊತ್ತಿನಲ್ಲಿ ಮತ್ತೆ ಗಾಳದ ಹುರಿ ಮೇಲಕ್ಕೇಳತೊಡಗಿತ್ತು. ಅಂದರೆ ಮೀನು ಸ್ವಲ್ಪ ಮೇಲ್ಮಟ್ಟದಲ್ಲಿ ಈಜಲು ತೊಡಗಿರಬೇಕು, ಅಷ್ಟೆ. ಸೂರ್ಯ ಆತನ ಎಡ ತೋಳು, ಭುಜ ಹಾಗೂ ಬೆನ್ನ ಮೇಲಿದ್ದ. ಅಂದರೆ ಮೀನು ಉತ್ತರದಿಂದ ಪೂರ್ವಕ್ಕೆ ಹೊರಳಿದಂತಾಯಿತು.

ಆತ ಒಮ್ಮೆ ಮಾತ್ರ ಮೀನನ್ನು ಕಂಡಿದ್ದ. ತನ್ನ ದಟ್ಟ ನೇರಿಳೆ ವರ್ಣದ ಈಜು ರೆಕ್ಕೆಗಳನ್ನು ತಳ್ಳುತ್ತ, ನೆಟ್ಟನೆಯ ಬಾಲದಿಂದ ಕಪ್ಪು ನೀರನ್ನು ಸೀಳುತ್ತ ಅದು ಈಜುತ್ತಿರುವ ದೃಶ್ಯವನ್ನು ಆತ ಕಲ್ಪಿಸಿಕೊಂಡ. ಅಷ್ಟು ಆಳದಲ್ಲಿ ಅದಕ್ಕೆ ಕಣ್ಣು ಕಾಣುತ್ತದೆಯೆ ಎಂದುಕೊಂಡ. ಅದರ ಕಣ್ಣುಗಳು ದೊಡ್ಡದಾಗಿವೆ. ಕುದುರೆಯ ಕಣ್ಣುಗಳು ಚಿಕ್ಕವಾಗಿದ್ದರೂ ಅದು ಕತ್ತಲೆಯಲ್ಲಿ ನೋಡಬಹುದು. ಒಮ್ಮೊಮ್ಮೆ ಕತ್ತಲೆಯಲ್ಲಿ ತನಗೂ ಕಣ್ಣು ಕಾಣುತ್ತದೆ. ಆದರೆ ಗಾಢಾಂಧಕಾರದಲ್ಲಲ್ಲ. ಕಂಡರೂ ಬೆಕ್ಕಿಗೆ ಕಾಣುವಷ್ಟು ಮಾತ್ರ.

ಬಿಸಿಲಿಗೆ ಆತನ ಎಡಗೈ ಈಗ ಸಂಪೂರ್ಣ ಚೇತರಿಸಿಕೊಂಡಿತ್ತು. ಕೈ ಮುಚ್ಚಿ ತೆರೆದು ಅದನ್ನಾತ ಸುಸ್ಥಿತಿಗೆ ತಂದಿದ್ದ. ಈಗ ಎಡಗೈಗೂ ಕೆಲಸ ಕೊಡತೊಡಗಿದ. ಬೆನ್ನಿನ ಸ್ನಾಯುಗಳನ್ನು ಆಕುಂಚನಗೊಳಿಸಿಕೊಂಡು ಹುರಿಯ ಕೊರೆತವನ್ನು ಸ್ವಲ್ಪ ಬದಿಗೆ ಸರಿಸಿಕೊಂಡ.

''ನಿನಗೆ ಒಂದಿಷ್ಟೂ ದಣಿವಾಗಿಲ್ಲವೆಂದರೆ, ಖಂಡಿತವಾಗಿಯೂ ನೀನೊಂದು ವಿಚಿತ್ರ ಜೀವ'' ಆತ ಮೀನನ್ನು ಉದ್ದೇಶಿಸಿ ಗಟ್ಟಿಯಾಗಿ ಹೇಳಿದ.

ಆತನಿಗೀಗ ಬಹಳ ದಣಿವೆನಿಸಿತು. ಇಷ್ಟರಲ್ಲೇ ರಾತ್ರಿಯಾಗುತ್ತದೆ ಎಂದುಕೊಂಡು ಇತರ ಸಂಗತಿಗಳ ಬಗ್ಗೆ ಯೋಚಿಸತೊಡಗಿದ. ಆತ ದೊಡ್ಡ ದೊಡ್ಡ ಲೀಗ್ ಪಂದ್ಯಗಳನ್ನು ಸ್ಮರಿಸಿಕೊಂಡ. ಆತ ಅವುಗಳನ್ನು ''ಗ್ರ್ಯಾನ್ ಲಿಗಾಸ್'' ಎಂದು ಕರೆಯುತ್ತಿದ್ದ. ನ್ಯೂಯಾರ್ಕಿನ ಅಮೆರಿಕನ್ನರು ಡೆಟ್ರಾಯಿಟದ ಟೈಗರುಗಳ ಜೊತೆ ಸೆಣಸುತ್ತಿರಬಹುದು ಎಂದುಕೊಂಡ.

ಇಂದಿಗೆ ಎರಡು ದಿನಗಳಾದರೂ ಜ್ಯೂಗಾಸ್ ಪಂದ್ಯದ ಫಲಿತಾಂಶ ಏನಾಯಿತೆಂಬುದು ನನಗೆ

ಹೆಮಿಂಗ್ವೇನ ಕೆಲವು ಮಹತ್ವದ ಕೃತಿಗಳು

1) ಎ ಫೇರ್‌ವೆಲ್ ಟು ಆರ್ಮ್ಸ್ (A Farewell to Arms)
2) ಇನ್ ಅವರ್ ಟೈಮ್ (In Our Time)
3) ಮೆನ್ ವಿದೌಟ್ ವುಮೆನ್ (Men without Women)
4) ದಿ ಸನ್ ಆಲ್ಸೋ ರೈಜೆಸ್ (The Sun Also Rises)
5) ಡೆಥ್ ಇನ್ ದಿ ಆಫ್ಟರ್‌ನೂನ್ (The Death in the Afternoon)
6) ದಿ ಟೋರೆಂಟ್ಸ್ ಆಫ್ ಸ್ಪ್ರಿಂಗ್ (The Torrents of Spring)
7) ವಿನ್ನರ್ ಟೇಕ್ ನಥಿಂಗ್ (Winner take nothing)
8) ಗ್ರೀನ್ ಹಿಲ್ಸ್ ಆಫ್ ಆಫ್ರಿಕಾ (Green Hills of Africa)

ಗೊತ್ತಾಗಲಿಲ್ಲ. ತನ್ನ ಹಿಂಬದಿಯ ಮೂಳೆ ಸರಿದಿದ್ದರೂ ಡಿಮ್ಯಾಗಿಯೋ ಸುಸಂಬದ್ಧವಾಗಿ ಆಡಿ ತನ್ನ ತಂಡಕ್ಕೆ ಒಳ್ಳೆಯ ಫಲಿತಾಂಶ ಒದಗಿಸುವಂತೆ ತಾನೂ ದೃಢ ನಿರ್ಧಾರದೊಂದಿಗೆ ಅಷ್ಟೇ ಘನತೆಯಿಂದ ಹೋರಾಡಬೇಕು ಎಂದುಕೊಂಡ. ಮೂಳೆ ಸರಿತದ ನೋವು ಹೇಗಿರಬಹುದು? ಆ ಅನುಭವ ನಮಗಿಲ್ಲ. ಹುಂಜಗಳು ಕಾದಾಡುವಾಗ ಅವು ಅನುಭವಿಸುವ ಇರಿತದ ನೋವು ಕೂಡ ಹಾಗೇ ಇರಬಹುದೆ? ಕಣ್ಣುಗಳನ್ನು ಕಳೆದುಕೊಂಡರೂ ನಿರಂತರವಾಗಿ ಕಾದಾಡುವ ಹುಂಜಗಳಂಥ ಮನೋಬಲ ತನ್ನಲ್ಲಿರಲಿಕ್ಕಿಲ್ಲ. ಮನುಷ್ಯ ದೊಡ್ಡ ದೊಡ್ಡ ಮೃಗಗಳು ಹಾಗೂ ಪಕ್ಷಿಗಳಿಗೆ ಸರಿಸಾಟಿಯಾಗಲಾರ. ತಾನು ಅಂಥ ಪಾಶವೀ ಶಕ್ತಿಯನ್ನು ಮೈಗೂಡಿಸಿಕೊಂಡು ಹೋರಾಟಕ್ಕೆ ಸಿದ್ಧವಾಗಬೇಕು.

''ಶಾರ್ಕ್‌ಗಳು ಪ್ರತ್ಯಕ್ಷವಾಗದಿದ್ದರೆ ಮಾತ್ರ ಅದೆಲ್ಲ ಸಾಧ್ಯ. ಶಾರ್ಕ್‌ಗಳು ಬಂದವೋ ಆದರೆ ನನ್ನನ್ನೂ ಹಾಗೂ ಮೀನನ್ನೂ ದೇವರೇ ಕಾಪಾಡಬೇಕು'' ಆತ ಗಟ್ಟಿಯಾಗಿ ಹೇಳಿದ.

ತಾನು ಈ ಮೀನಿನೊಂದಿಗೆ ಇಲ್ಲಿರುವಷ್ಟು ತಾಳ್ಮೆಯಿಂದ ಮಹಾನ್ ಆಟಗಾರ ಡಿಮ್ಯಾಗಿಯೊ ಇರಲು ಸಾಧ್ಯವೆ? ನಿಸ್ಸಂದೇಹವಾಗಿಯೂ ಅವನಲ್ಲಿ ಅಂಥ ತಾಳ್ಮೆಯಿದೆ. ಏಕೆಂದರೆ ಅವನಿನ್ನೂ ತರುಣ ಹಾಗೂ ಸದೃಢವಾಗಿದ್ದಾನೆ. ಅಲ್ಲದೆ ಅವನ ತಂದೆ ಓರ್ವ ಮೀನುಗಾರನಾಗಿದ್ದ. ಅಂದ ಹಾಗೆ ಹಿಂಬದಿಯ ಮೂಳೆ ಉಳುಕಿ ಆತನಿಗೆ ತುಂಬ ನೋವಾಗುತ್ತಿರಬಹುದೇ?

''ತನಗೆ ಹೇಗೆ ಗೊತ್ತಾಗಬೇಕು? ನನಗಂತೂ ಮೂಳೆ ಉಳುಕಿದ ಅನುಭವವಿಲ್ಲ.''

ಸೂರ್ಯ ಮುಳುಗುತ್ತಿದ್ದ. ತನ್ನಲ್ಲಿ ದೃಢ ವಿಶ್ವಾಸವನ್ನು ಹೆಚ್ಚಿಸಿಕೊಳ್ಳಲು ಆತ ಹಳೆಯ ಘಟನೆಯೊಂದನ್ನು ನೆನಪಿಸಿಕೊಂಡ. ಕ್ಯಾಸಾ ಬ್ಲ್ಯಾಂಕಾದ ಹೋಟೇಲೊಂದರಲ್ಲಿ ಏರ್ಪಡಿಸಲಾದ ★ತೋಳು ಬಲ ಪಂದ್ಯದಲ್ಲಿ ಆತ ಸೀನ್ ಫ್ಯೂಗೋಸ್‌ನ ಮಹಾನ್ ನಿಗ್ರೋ ಆಟಗಾರನನ್ನು ಎದುರಿಸಿದ್ದ. ಹಡಗು ಕಟ್ಟೆಯಲ್ಲೇ ಅವನು ಅತ್ಯಂತ ಬಲಾಢ್ಯ ವ್ಯಕ್ತಿಯಾಗಿದ್ದ. ಒಂದು ರಾತ್ರಿ, ಒಂದು ಹಗಲು ಜಪ್ಪೆನ್ನದೆ ಅವರಿಬ್ಬರೂ ಪರಸ್ಪರ ಮುಷ್ಟಿ ಬಿಗಿ ಹಿಡಿದು ಮೇಜಿನ ಮೇಲೆ ಕೂರದ ಗೆರೆಯ ಮೇಲೆ ಮೊಳಕೈಯೂರಿ ಕುಳಿತಿದ್ದರು. ಕೈ ಕೆಳಕ್ಕೆ ಬಾಗಿಸಲು ಇಬ್ಬರೂ ಶತಪ್ರಯತ್ನ ಮಾಡುತ್ತಿದ್ದರು. ಜನರು ಇವರಿಬ್ಬರ ಮೇಲೆ ಜೂಜು ಕಟ್ಟುತ್ತ ಸೀಮೆ ಎಣ್ಣೆ ಬೆಳಕಲ್ಲಿ ಅತ್ತಿಂದಿತ್ತ ಇತ್ತಿಂದತ್ತ ಅಡ್ಡಾಡುತ್ತಿದ್ದರು. ಆತ ನಿಗ್ರೋನ ತೋಳು ಹಾಗೂ ಮುಖವನ್ನೇ ದಿಟ್ಟಿಸುತ್ತಿದ್ದ. ಮೊದಲ ಎಂಟು ತಾಸುಗಳ ನಂತರ ಅವರು ನಾಲ್ಕು ತಾಸುಗಳಿಗೊಮ್ಮೆಯಂತೆ ತೀರ್ಪುಗಾರರನ್ನು ಅವರಿಗೆ ಮಲಗಿಕೊಳ್ಳಲು ಅನುಕೂಲವಾಗುವಂತೆ ಬದಲಾಯಿಸುತ್ತಿದ್ದರು. ಅವರಿಬ್ಬರ ಉಗುರುಗಳಿಂದ ರಕ್ತ ಸೋರತೊಡಗಿತ್ತು, ಅವರಿಬ್ಬರೂ ತದೇಕ ದೃಷ್ಟಿಯಿಂದ ಪರಸ್ಪರ ಕಣ್ಣು, ತೋಳು ಹಾಗೂ ಕೈಗಳನ್ನು ದಿಟ್ಟಿಸುತ್ತ ಪಂದ್ಯ ಮುಂದುವರೆಸಿದ್ದರು. ಜನರು ಒಳಗೆ ಹೊರಗೆ ಅಡ್ಡಾಡುತ್ತ ನಂತರ ಗೋಡೆಗಾನಿಸಿ ಇಟ್ಟಿದ್ದ ಆಸನಗಳ ಮೇಲೆ ಕುಳಿತುಕೊಳ್ಳುತ್ತಿದ್ದರು. ಕೋಣೆಯ ಕಟ್ಟಿಗೆಯ ಗೋಡೆಗಳಿಗೆ ತಿಳಿ ನೀಲಿ ಬಣ್ಣ ಬಳಿಯಲಾಗಿತ್ತು. ಅವರಿಬ್ಬರ ನೆರಳು ಗೋಡೆಯ ಮೇಲೆ ಬಿದ್ದಿತ್ತು. ಮಂದಗಾಳಿಗೆ ದೀಪ ಹೊಯ್ದಾಡುತ್ತಿರುವಾಗ ನಿಗ್ರೋನ ರಾಕ್ಷಸಾಕಾರದ ನೆರಳು ಗೋಡೆಗಳ ಮೇಲೆ ಹರಿದಾಡುತ್ತಿತ್ತು.

ಇಡೀ ರಾತ್ರಿ, ದೈವ ಅತ್ತೊಮ್ಮೆ ಇತ್ತೊಮ್ಮೆ ವಾಲುತ್ತಿತ್ತು. ಜನರು ನಿಗ್ರೋನಿಗೆ ಕುಡಿಯಲು ರಮ್‌ಹಾಕಿ, ಸಿಗರೇಟು ಹೊತ್ತಿಸಿಕೊಟ್ಟರು. ರಮ್ ಕುಡಿದ ಮೇಲೆ ಆತ ಶಕ್ತಿಯನ್ನು ಒಗ್ಗೂಡಿಸಿ ಸುಮಾರು ಮೂರು ಇಂಚುಗಳಷ್ಟು ಸಾಂಟಿಯಾಗೋನ ಕೈ ಮಣಿಸಿದ. ಸಾಂಟಿಯಾಗೋ ಆಗ ವೃದ್ಧನಾಗಿರಲಿಲ್ಲ. ಚಾಂಪಿಯನ್ ಆಗಿದ್ದ. ಆತ ತನ್ನೆಲ್ಲ ಬಲ ಒಟ್ಟುಗೂಡಿಸಿ ಕೈಯನ್ನು ಸಮಸ್ಥಿತಿಗೆ ತಂದ. ನಿಗ್ರೋನನ್ನು ಸೋಲಿಸಿಯೇ ತೀರುತ್ತೇನೆಂಬ ವಿಶ್ವಾಸ ಆತನಲ್ಲಿ ಬಲಗೊಂಡಿತು. ನಿಗ್ರೋ

★ತೋಳು ಬಲ ಪಂದ್ಯ → Hand Game

ಓರ್ವ ಬಲಿಷ್ಠ ಹಾಗೂ ಸಮರ್ಥ ಕ್ರೀಡಾಪಟುವಾಗಿದ್ದ. ಇನ್ನೂ ಬೆಳಕಿರುವಾಗಲೇ ಪಂದ್ಯದ ಸಮವಾಯಿತೆಂದು ಘೋಷಿಸುವಂತೆ ಅನೇಕರು ಕೇಳಿಕೊಂಡರು. ಆದರೆ ತೀರ್ಪುಗಾರರು ಒಪ್ಪಲಿಲ್ಲ. ಆತ ತನ್ನೆಲ್ಲ ಬಲವನ್ನು ಒಗ್ಗೂಡಿಸಿ, ಸರ್ವಪ್ರಯತ್ನದಿಂದ ನಿಗ್ರೋನ ಕೈಯನ್ನು ಮೇಜಿನ ಮೇಲೆ ಊರಿಸಿಯೇ ಬಿಟ್ಟ. ರವಿವಾರ ಮುಂಜಾನೆ ಪ್ರಾರಂಭವಾಗಿದ್ದ ಪಂದ್ಯ ಸೋಮವಾರ ಮುಂಜಾನೆ ಮುಕ್ತಾಯವಾಯಿತು. ಹಡಗಿನಲ್ಲಿ ಸಕ್ಕರೆ ಚೀಲಗಳನ್ನು ಹೇರಲು ಹಾಗೂ ಹವಾನಾ ಕಲ್ಲಿದ್ದಲು ಕಂಪನಿಯಲ್ಲಿ ಕೆಲಸ ಮಾಡಲು ಜನರಿಗೆ ಹೋಗಬೇಕಾಗಿದ್ದರಿಂದ ಅವರು ಪಂದ್ಯ 'ಡ್ರಾ' ಎಂದು ಘೋಷಿಸಲು ಕೇಳಿಕೊಂಡಿದ್ದರು. ಇಲ್ಲವಾದರೆ ಎಲ್ಲರಿಗೂ ಪಂದ್ಯ ನಿರ್ಣಾಯಕವಾಗುವುದೇಬೇಕಿತ್ತು. ಏನೇ ಆಗಲಿ, ಎಲ್ಲರೂ ಕೆಲಸಕ್ಕೆ ಹೋಗುವ ಮುನ್ನವೇ ಸಾಂಟಿಯಾಗೊ ಜಯ ಗಳಿಸಿದ್ದ.

ಬಹಳ ದಿನಗಳವರೆಗೆ ಎಲ್ಲರೂ ಆತನನ್ನು ಚಾಂಪಿಯನ್ ಎಂದೇ ಸಂಬೋಧಿಸುತ್ತಿದ್ದರು. ವಸಂತ ಕಾಲದಲ್ಲಿ ಮರು ಪಂದ್ಯವನ್ನು ಕೂಡ ಏರ್ಪಡಿಸಲಾಗಿತ್ತು. ಮೊದಲ ಪಂದ್ಯದಲ್ಲೇ ನಿಗ್ರೋನ ಆತ್ಮವಿಶ್ವಾಸ ಕದಡಿ ಹೋಗಿದ್ದರಿಂದ ಸಾಂಟಿಯಾಗೊ ಈ ಬಾರಿ ಸುಲಭವಾಗಿ ಜಯ ಗಳಿಸಿದ. ಆಗ ಬಹಳ ಜನ ಜೂಜು ಕಟ್ಟಲೂ ಮುಂದೆ ಬರಲಿಲ್ಲ. ಅನಂತರ ಸಾಂಟಿಯಾಗೊ ಕೆಲವೇ ಕೆಲವು ಪಂದ್ಯಗಳಲ್ಲಿ ಭಾಗವಹಿಸಿದ. ಮುಂದೆ ಎಂದೂ ಯಾವುದೇ ಪಂದ್ಯದಲ್ಲಿ ಭಾಗವಹಿಸಲಿಲ್ಲ. ತಾನು ಬಯಸಿದರೆ ಎಂಥವರನ್ನೂ ಸೋಲಿಸಬಲ್ಲೆ. ಆದರೆ ಬಲಗೈ ಹಿತದೃಷ್ಟಿಯಿಂದ ಅದು ಒಳ್ಳೆಯದಲ್ಲ. ಮೀನು ಬೇಟೆಗೆ ಕೂಡ ತೊಂದರೆಯಾಗುತ್ತದೆ. ಕೆಲವು ಅಭ್ಯಾಸ ಪಂದ್ಯಗಳಲ್ಲಿ ಆತ ಎಡಗೈ ಉಪಯೊಗಿಸಿ ನೋಡಿದ. ಆದರೆ ಆತನ ಎಡಗೈ ಯಾವಾಗಲೂ ಮೋಸ ಮಾಡುತ್ತಲೇ ಬಂದಿದ್ದರಿಂದ ಅದರ ಮೇಲೆ ಆತನಿಗೆ ವಿಶ್ವಾಸವಿರಲಿಲ್ಲ.

ಬಿಸಿಲಿನ ಝಳಕ್ಕೆ ಕೈ ಚೆನ್ನಾಗಿ ಗುಣ ಹೊಂದಿದೆ. ರಾತ್ರಿ ಕೊರೆವ ಚಳಿ ಇರದಿದ್ದರೆ ಇನ್ನು ಮುಂದೆ ಅದು ಸೆಟೆದುಕೊಳ್ಳಲಾರದು. ಈ ರಾತ್ರಿ ಏನಾಗುತ್ತದೋ ಯಾರು ಬಲ್ಲರು.

ಮಿಯಾಮಿಗೆ ಹೋಗುವ ವಿಮಾನವೊಂದು ಆಗಸದಲ್ಲಿ ತನ್ನ ದಾರಿಯಗುಂಟ ಹಾರಿ ಹೋಯಿತು. ಅದರ ನೆರಳು ಹಾರುವ ಮೀನುಗಳು ಈಜುತ್ತಿದ್ದ ಸ್ಥಳವನ್ನು ಸವರುತ್ತ ಹೊರಟು ಹೋಯಿತು.

''ಹಾರುವ ಮೀನುಗಳು ಗುಂಪುಗೂಡಿರಬೇಕಾದರೆ ಅಲ್ಲಿ ಡಾಲ್ಫಿನ್ ಇದ್ದಿರಬೇಕು'' ಎಂದುಕೊಳ್ಳುತ್ತ, ಹುರಿಯ ಜೊತೆ ಹಿಂದಕ್ಕೆ ಜರಿದು ಮೀನನ್ನು ಎಳೆಯಲು ಸಾಧ್ಯವೋ ಹೇಗೆ ನೋಡಿದ. ಆದರೆ ಸಾಧ್ಯವಾಗಲಿಲ್ಲ. ಬಿಗಿತ ಹೆಚ್ಚಿದ್ದರಿಂದ ಹುರಿಯ ನಿರ್ವ್ಯಕ್ತವಾದ ಭಾಗದಲ್ಲಿ ನೀರು ಹನಿ ಕಂಪಿಸುತ್ತಿತ್ತು. ದೋಣಿ ನಿಧಾನವಾಗಿ ಸಾಗಿದ್ದಂತೆ ಆತ ಮೇಲೆ ಹಾರುತ್ತಿದ್ದ ವಿಮಾನವನ್ನು ಅದು ಮರೆಯಾಗುವವರೆಗೂ ನೋಡುತ್ತ ಕುಳಿತ.

ವಿಮಾನ ಪ್ರಯಾಣ ತುಂಬ ರೋಮಾಂಚಕಾರಿಯಾಗಿರಬಹುದು. ಅಷ್ಟು ಎತ್ತರದಿಂದ ಸಮುದ್ರ ಹೇಗೆ ಕಾಣುತ್ತಿರಬಹುದು? ಬಹಳ ಎತ್ತರದಲ್ಲಿ ಹಾರದಿದ್ದರೆ ಒಳಗಿದ್ದವರಿಗೆ ಮೀನುಗಳು ಕಾಣಿಸಬಹುದು. ಎರಡುನೂರು ಆಳುಗಳಷ್ಟು ಎತ್ತರದಲ್ಲಿ ನಿಧಾನವಾಗಿ ಹಾರುತ್ತ ಮೀನುಗಳನ್ನು ನೋಡುವ ಬಯಕೆ ತನ್ನದು. ಕಡಲಾಮೆ ದೋಣಿಯ ಟಿಸಿಲೊಡೆದ ಹಾಯಿ ಕಂಬದ ತುದಿಯ ಮೇಲೆ ಕುಳಿತು ನೋಡಿದರೂ ಬಹಳಷ್ಟು ದೃಶ್ಯ ಕಣ್ಣಿಗೆ ಬಿದ್ದಿತ್ತು. ಅಲ್ಲಿ ಕುಳಿತು ನೋಡಿದಾಗ ಡಾಲ್ಫಿನ್ ಹಾಗೂ ಅದರ ಪಾರ್ಶ್ವ ರೇಖೆಗಳು ಹಸಿರಾಗಿ ತೋರುತ್ತಿದ್ದವು. ಆ ರೀತಿ ಇಡೀ ಡಾಲ್ಫಿನ್‌ಗಳ ಗುಂಪನ್ನೇ ನೋಡಬಹುದಿತ್ತು. ಕಪ್ಪು ನೀರಲ್ಲಿ ವೇಗವಾಗಿ ಈಜುವ ಮೀನುಗಳ ಬೆನ್ನು ಹಾಗೂ ಅವುಗಳ ಮೈಮೇಲಿನ ಕಲೆಗಳು ಹಾಗೂ ಪಾರ್ಶ್ವ ರೇಖೆಗಳು ನೇರಳೆ ವರ್ಣವಾಗಿರುವುದೇಕೋ? ನಿಜದಲ್ಲಿ ಡಾಲ್ಫಿನ್ ಬಂಗಾರ ವರ್ಣದ್ದಾಗಿರುವುದರಿಂದ ಕಪ್ಪು ನೀರಲ್ಲಿ ಅದು ಹಸಿರಾಗಿ ಕಾಣುತ್ತದೆ. ಹಸಿದು ಬೇಟೆಯಾಡುವ ಡಾಲ್ಫಿನ್‌ಗಳ ಪಾರ್ಶ್ವಗಳು ಮಾರ್ಲಿನ್‌ಗಳಂತೇ ತೋರುತ್ತವೆ. ಸಿಟ್ಟಿಗೆ ಬಂದಾಗ

ಅಥವಾ ವೇಗವಾಗಿ ಈಜುವಾಗ ಅವು ಹೊರಗೆ ಕಾಣಿಸಿಕೊಳ್ಳುತ್ತಿರಬಹುದೇ?

ಕತ್ತಲಾಗುವ ಮುನ್ನ, ದ್ವೀಪದಂತೆ ಕಾಣುತ್ತಿದ್ದ ಹಳದೀ ವರ್ಣದ ಸರ್ಗ್ಯಾಸೋ ಜೊಂಡನ್ನು ದಾಟಿ ಅವರು ಮುನ್ನಡೆದರು. ಹಳದಿ ಕಂಬಳಿಯ ಕೆಳಗೆ ಸಾಗರವು ಯಾರ ಜೊತೆಗೋ ಪ್ರೇಮ ಕೇಳಿಯಾಡುತ್ತಿರುವಂತೆ ತೋರಿತು. ಅಷ್ಟರಲ್ಲಿ ಡಾಲ್ಫಿನ್‌ವೊಂದು ಚಿಕ್ಕ ಗಾಳವನ್ನು ಎಳೆಯಿತು. ಅದಕ್ಕೂ ಮೊದಲು ಅದು ಹೊರಗೆ ಜಗಿದಾಗ ಆತನ ಕಣ್ಣಿಗೆ ಬಿದ್ದಿತ್ತು. ಸೂರ್ಯನ ಸಂಜೆಯ ಹೊಂಗಿರಣದಲ್ಲಿ ಅದು ಬಂಗಾರದಂತೆ ಥಳಥಳಿಸಿತು. ಭಯದಿಂದ ಅದು ಮತ್ತೆ ಮತ್ತೆ ಜಗಿಯತೊಡಗಿತು. ನೇರಿಳೆ ವರ್ಣದ ಚುಕ್ಕೆಗಳಿರುವ, ಮಿರುಗುವ, ಬಂಗಾರ ವರ್ಣದ ಮೀನನ್ನು ಆತ ಎತ್ತಿಕೊಂಡ. ಗಾಳವನ್ನು ಕಚ್ಚಿ ಹಿಡಿದ ಮೀನು ದೋಣಿಯ ಒಳ ಭಾಗದ ತಳದಲ್ಲಿ ತನ್ನ ಚಪ್ಪಟೆಯಾದ ದೇಹ, ತಲೆ ಹಾಗೂ ಬಾಲವನ್ನು ಕುಣಿಸುತ್ತ, ಅಪ್ಪಳಿಸತೊಡಗಿತು. ಆತ ಬಂಗಾರವರ್ಣದ ಅದರ ತಲೆಗೆ ಹೊಡೆದ ನಂತರ ಅದು ಉಬ್ಬಸ ವಿಡುತ್ತ ಶಾಂತವಾಯಿತು.

ಆತ ಮೀನನ್ನು ಕೊಕ್ಕೆಯಿಂದ ಬಿಡಿಸಿ, ಅದಕ್ಕೆ ಮತ್ತೊಂದು ಸಾರ್ಡೈನನ್ನು ಚುಚ್ಚಿ ನೀರಿಗೆಸೆದ. ನಂತರ ಜಾಗರೂಕತೆಯಿಂದ ಮೊದಲಿನ ಜಾಗೆಯಲ್ಲಿ ಬಂದು ಕುಳಿತ. ಈಗ ತನ್ನ ಎಡಗೈಯನ್ನು ತೊಳೆದುಕೊಂಡು ಪಾಯಿಜಾಮಿಗೆ ಒರೆಸಿಕೊಂಡ. ನಂತರ ಬಲಗೈಯಲ್ಲಿದ್ದ ಭಾರವಾದ ಗಾಳದ ಹುರಿಯನ್ನು ಎಡಗೈಗೆ ಹಸ್ತಾಂತರಿಸಿಕೊಂಡ. ಈಗ ಬಲಗೈಯನ್ನು ನೀರಿನಲ್ಲಿ ಅದ್ದಿ ತೊಳೆದುಕೊಳ್ಳುತ್ತ, ಸಮುದ್ರದಲ್ಲಿ ಸೂರ್ಯ ಮುಳುಗುವುದನ್ನು ಹಾಗೂ ದೊಡ್ಡ ಗಾಳದ ಹುರಿಯನ್ನು ನೋಡತೊಡಗಿದ.

''ಮೀನಿನ ಗತಿಯಲ್ಲಿ ಎಳ್ಳಷ್ಟೂ ಬದಲಾವಣೆ ಕಂಡು ಬರುತ್ತಿಲ್ಲ'' ಆತ ಹೇಳಿದ. ಸ್ವಲ್ಪ ಸೂಕ್ಷ್ಮವಾಗಿ, ಕೈಯಿಂದ ನೀರಿನ ಎಳೆತವನ್ನು ಗ್ರಹಿಸಿದರೆ ವೇಗ ಸ್ವಲ್ಪ ಕಡಿಮೆಯಾಗಿದೆ ಎನ್ನಬೇಕು.

''ಎರಡೂ ಬದಿಯಿಂದ ಹುಟ್ಟು ಹಾಕತೊಡಗಿದರೆ ರಾತ್ರಿ ಮೀನಿನ ವೇಗ ತಗ್ಗಬಹುದು. ಈ ರಾತ್ರಿ ಅದರ ಬಲಗುಂದಲಿಕ್ಕಿಲ್ಲ. ನನ್ನದೂ ಕೂಡ.''

ಇನ್ನೂ ಸ್ವಲ್ಪ ಹೊತ್ತು ತಡೆದು ಡಾಲ್ಫಿನ್‌ನ ಹೊಟ್ಟೆ ಹರಿಯಬೇಕು. ಅಂದರೆ ಮಾತ್ರ ಅದರ ಮಾಂಸದಲ್ಲಿ ರಕ್ತದ ಅಂಶ ಉಳಿಯಲು ಸಾಧ್ಯ. ಸದ್ಯ ಹುಟ್ಟು ಹಾಕುವುದು ಬೇಡ. ಸೂರ್ಯ ಮುಳುಗಿದ ಮೇಲೆ ಮೀನಿಗೆ ಬಹಳ ತೊಂದರೆ ಕೊಡುವುದು ಸರಿಯಲ್ಲ. ಏಕೆಂದರೆ ಸೂರ್ಯ ಮುಳುಗಿದ ಮೇಲೆ ಎಲ್ಲ ಮೀನುಗಳು ಕಕ್ಕಾವಿಕ್ಕಿಯಾಗುತ್ತವೆ.

ಆತ ಕೈ ಗಾಳಿಗೊಡ್ಡಿ ಹಿಡಿದು ಆರಲು ಬಿಟ್ಟ. ನಂತರ ಅದರಿಂದ ಹುರಿಯನ್ನು ಗಟ್ಟಿಯಾಗಿ ಹಿಡಿದು ತನಗೆ ಹಿತವೆನಿಸುವಷ್ಟು ಮೈ ಚಾಚಿದ. ದೋಣಿಯ ಹಲಗೆಗೆ ವಿರುದ್ಧವಾಗಿ ಮುಂದಕ್ಕೆ ಬಾಗಿ, ದೋಣಿಯ ಮೇಲೆ ಸಾಧ್ಯವಾದಷ್ಟು ಒತ್ತಡ ಬೀಳುವ ಹಾಗೆ ಮಾಡಿದ.

ಹೇಗೆ ಹೋರಾಡಬೇಕೆಂಬುದನ್ನು ತಾನು ಅಭ್ಯಸಿಸುತ್ತಿರುವೆ. ಇದೀಗ ಹೋರಾಟದ ಒಂದು ಭಾಗ ಅಷ್ಟೆ. ಮೀನು ಗಾಳವನ್ನು ಕಚ್ಚಿದಾಗಿನಿಂದ ಏನನ್ನೂ ತಿಂದಿಲ್ಲ. ಅದು ಬಲಾಢ್ಯವಾಗಿರುವುದರಿಂದ ಅದಕ್ಕೆ ಆಹಾರವೂ ಹೆಚ್ಚು ಬೇಕು. ನಾನಂತೂ ಇಡೀ ಟುನಾ ತಿಂದಿರುವೆ. ನಾಳೆ ಡಾಲ್ಫಿನ್ ತಿನ್ನುವೆ. ಆತ ಅದನ್ನು ಡೊರ್ಯಾಡೊ ಎಂದು ಕರೆಯುತ್ತಾನೆ. ತಿಕ್ಕಿ ಸ್ವಚ್ಛಗೊಳಿಸಿ ಅದನ್ನು ಸ್ವಲ್ಪ ತಿಂದರಾಯಿತು. ತಿನ್ನಲು ಅದು ಬೋನಿಟೊಗಿಂತಲೂ ಬಿರುಸಾಗಿರುತ್ತದೆ. ಆದರೆ ಯಾವುದೂ ಸುಲಭ ಸಾಧ್ಯವಲ್ಲ.

''ಎಲ್ಲಿ ಕುಶಲವೇ?'' ಆತ ಮೀನನ್ನು ಕೇಳಿದ. ನಾನಂತೂ ಕುಶಲವಾಗಿರುವೆ. ಎಡಗೈ ಕೂಡ ಗುಣವಾಗಿದೆ. ಒಂದು ರಾತ್ರಿ ಹಾಗೂ ಒಂದು ಹಗಲು ಸಾಕಾಗುವಷ್ಟು ಆಹಾರ ನನ್ನ ಬಳಿ ಇದೆ. ನೀನು ದೋಣಿಯನ್ನು ಎಳೆ, ಬಿಡಬೇಡ.''

ನಿಜ ಹೇಳಬೇಕೆಂದರೆ ಮೀನು ಅಷ್ಟೇನೂ ಸ್ವಸ್ಥವಾಗಿರಲಿಲ್ಲ. ಅದರ ಬೆನ್ನ ಮೇಲಿನ ಹುರಿಯ

ಕೊರೆತದ ನೋವು ಮರಗಟ್ಟಿ ಹೋಗಿತ್ತು. ಅದನ್ನೇ ಅದು ತಪ್ಪಾಗಿ ಭಾವಿಸಿರಬೇಕು. ಇದಕ್ಕಿಂತ ಎಷ್ಟೋ ಪಾಲು ಅಧಿಕ ಕಷ್ಟಗಳನ್ನು ತಾನು ಅನುಭವಿಸಿರುವೆ. ಬಲಗೈಗೆ ಸ್ವಲ್ಪ ಕೊರೆತದ ಗಾಯ ವಾಗಿದೆ, ಅಷ್ಟೆ. ಎಡಗೈ ಸೆಡೆತವೂ ಮಾಯವಾಗಿದೆ. ಕಾಲುಗಳೂ ಕೂಡ ಸ್ವಸ್ಥವಾಗಿವೆ. ಆಹಾರ ಸಂಗ್ರಹದ ದೃಷ್ಟಿಯಿಂದ ವಿಚಾರಿಸಿದರೂ ತಾನು ಅದನ್ನು ಮೀರಿಸಿರುವೆ.

ಇದೀಗ ಕತ್ತಲು ಕವಿದಿದೆ. ಸಪ್ಟಂಬರ್ ತಿಂಗಳಲ್ಲಿ ಸೂರ್ಯ ಮುಳುಗುವುದೇ ತಡ, ಕತ್ತಲಾವರಿಸಿ ಬಿಡುತ್ತದೆ. ದೋಣಿಯ ಅಡ್ಡ ಹಲಗೆಗೆ ಆತುಕೊಂಡು ಆತ ಕಾಲು ಚಾಚಿ ಮಲಗಿದ. ರಾತ್ರಿಯ ಪ್ರಥಮ ತಾರೆಗಳು ಕಣ್ಣು ತೆರೆದವು. ಅಂದ ಹಾಗೆ ನಕ್ಷತ್ರ ಪುಂಜದ ಪ್ರಮುಖ ತಾರೆಯ ಹೆಸರು ತನಗೆ ಗೊತ್ತಿಲ್ಲ. ಇನ್ನು ಸ್ವಲ್ಪ ಹೊತ್ತಿನಲ್ಲೇ ತನ್ನ ದೂರದ ಗೆಳೆಯರೆಲ್ಲ ಆಗಸದಲ್ಲಿ ಪ್ರತ್ಯಕ್ಷವಾಗುತ್ತಾರೆ.

''ಮೀನು ಕೂಡ ನನ್ನ ಗೆಳೆಯ. ಇಂಥ ಭವ್ಯವಾದ ಮೀನನ್ನು ತಾನೆಂದೂ ಕಂಡಿಲ್ಲ, ಅದರ ಬಗ್ಗೆ ಕೇಳಿಲ್ಲ. ಆದರೆ ನಾನದನ್ನು ಕೊಲ್ಲಲೇಬೇಕು. ಸಂತಸದ ಸಂಗತಿ ಎಂದರೆ ನಾವು ನಕ್ಷತ್ರಗಳನ್ನು ಕೊಲ್ಲುವುದಿಲ್ಲ.''

ಮನುಷ್ಯ ಪ್ರತಿದಿನ ಚಂದ್ರನನ್ನು ಕೊಲ್ಲಬೇಕಾಗಿ ಬಂದಿದ್ದರೆ ಆಗ ಏನಾಗಬಹುದಿತ್ತು? ಚಂದ್ರ ದೂರ ಓಡಿ ಹೋಗುತ್ತಾನೆ. ಸೂರ್ಯನನ್ನು ಕೊಲ್ಲಬೇಕಾಗಿ ಬಂದರೆ? ಸದ್ಯ ಆ ದೃಷ್ಟಿಯಿಂದ ನಾವು ಸುದೈವಿಗಳು.

ಮೀನಿಗೆ ತಿನ್ನಲು ಏನೂ ಇಲ್ಲವಲ್ಲ ಎಂದು ಆತನಿಗೆ ಕಳವಳವಾಯಿತು. ಆದರೆ ಅದನ್ನು ಕೊಲ್ಲಬೇಕೆನ್ನುವ ನಿಶ್ಚಯ ಮಾತ್ರ ಸಡಿಲಾಗಲಿಲ್ಲ. ಅದು ಎಷ್ಟು ಜನರ ಹೊಟ್ಟೆ ತುಂಬಿಸಬಹುದು? ಅದನ್ನು ತಿನ್ನಲು ಅವರಿಗೆ ಯೋಗ್ಯತೆ ಇದೆಯೇ? ಇಲ್ಲ. ಆ ಯೋಗ್ಯತೆ ಯಾರಿಗೂ ಇಲ್ಲ. ಅದರ ಘನತೆ ಗಾಂಭೀರ್ಯ ತುಂಬಿದ ವರ್ತನೆಯನ್ನು ಅನುಲಕ್ಷಿಸಿದರೆ ಅದನ್ನು ತಿನ್ನುವ ಯೋಗ್ಯತೆ ಯಾರಿಗೂ ಇಲ್ಲವೆನ್ನಬೇಕು.

ಇಂಥ ವಿಷಯಗಳೆಲ್ಲ ತನ್ನ ತಲೆಗೆ ಹತ್ತುವುದಿಲ್ಲ. ಚಂದ್ರ, ಸೂರ್ಯ, ನಕ್ಷತ್ರಗಳನ್ನು ಕೊಲ್ಲುವ ಪ್ರಸಂಗವೇ ಬರುವುದಿಲ್ಲ ಎಂಬುದು ಒಳ್ಳೆಯ ಅಂಶ. ಸದ್ಯ ಉಪಜೀವನಕ್ಕಾಗಿ, ನಮ್ಮ ನೆಚ್ಚಿನ ಸೋದರರಂತಿರುವ ಮೀನುಗಳನ್ನು ಕೊಂದರೆ ಸಾಕು.

ಈಗ ಎಳೆತದ ಪ್ರಮಾಣದ ಬಗ್ಗೆ ಯೋಚಿಸಬೇಕು. ಎಳೆತಕ್ಕೆ ಅದರದೇ ಆದ ಒಳಿತು-ಕೆಡಕುಗಳಿವೆ. ಒಂದು ವೇಳೆ ಮೀನು ತನ್ನ ಕೈಯಿಂದ ಜಾರಿಕೊಂಡರೆ ಅದರ ಜೊತೆ ಅಷ್ಟೆಲ್ಲ ಗಾಳದ ಹುರಿಯೂ ಕೈ ಜಾರಿದಂತೆಯೇ! ಮೀನು ಅತ್ತ ಎಳೆಯತೊಡಗುವಾಗ ಅದರ ವಿರುದ್ಧ ದಿಸೆಯಲ್ಲಿ ಹುಟ್ಟು ಹಾಕಿದರೆ ದೋಣಿ ಜಡವಾಗುತ್ತದೆ. ದೋಣಿ ಬಿಟ್ಟು ಬಿಡದೆ ತೇಲತೊಡಗಿದರೆ ನಮ್ಮಿಬ್ಬರ ಕಷ್ಟಗಳು ಇನ್ನಷ್ಟು ಹೆಚ್ಚುತ್ತವೆ. ಸದ್ಯಕ್ಕೆ ಮೀನು ವೇಗವಾಗಿ ಚಲಿಸುತ್ತಿಲ್ಲವಾದ್ದರಿಂದ ತಾನಿಲ್ಲಿ ಸುರಕ್ಷಿತವಾಗಿರುವೆ. ಏನು ಬರುತ್ತದೋ ಬರಲಿ, ತಾನೀಗ ಡಾಲ್ಫಿನ್ ಸ್ವಚ್ಛಗೊಳಿಸಿ ಸ್ವಲ್ಪಭಾಗ ತಿನ್ನುವೆ. ಇಲ್ಲದಿದ್ದರೆ ಅದು ಕೊಳೆತು ಹಾಳಾಗಬಹುದು.

ಸದ್ಯ ಒಂದು ತಾಸಾದರೂ ಮಲಗಿ ವಿಶ್ರಮಿಸಿಕೊಳ್ಳಬೇಕು. ಅದಕ್ಕೂ ಮುನ್ನ ಮೀನು ತಟಸ್ಥವಾಗಿದೆಯೋ ಹೇಗೆ ಪರೀಕ್ಷಿಸಬೇಕು. ಆ ಮೇಲೆ ಒಂದು ನಿರ್ಧಾರಕ್ಕೆ ಬರಬೇಕು. ಮೀನಿನ ವರ್ತನೆಯಲ್ಲಿ ಏನಾದರೂ ಬದಲಾವಣೆಗಳಾಗಿರಬಹುದೆ ಎಂಬುದನ್ನು ತಿಳಿದುಕೊಳ್ಳಬೇಕು. ಹುಟ್ಟು ಹಾಕುವುದೊಂದು ಒಳ್ಳೆಯ ಉಪಾಯ. ಸದ್ಯ ಸುರಕ್ಷಾ ಕ್ರಮಗಳ ಬಗ್ಗೆ ಮಾತ್ರ ಯೋಚಿಸಬೇಕು. ಎಲ್ಲ ಮೀನುಗಳಂತೆಯೇ ಅದು ಗಾಳವನ್ನು ತನ್ನ ಬಾಯಿಯ ಒಂದು ಮೂಲೆಯಲ್ಲಿ ಭದ್ರವಾಗಿ ಕಚ್ಚಿ ಹಿಡಿದಿದೆ. ಕೊಕ್ಕೆ ತಿವಿತದ ನೋವು ಏನೂ ಅಲ್ಲ. ಹಸಿವಿನ ಬಾಧೆ ಎಲ್ಲಕ್ಕೂ ದೊಡ್ಡ ಶಿಕ್ಷೆ. ತನ್ನೆದುರು ವಿಪತ್ತು ಕಾದಿದ್ದರೂ ಅದಕ್ಕೆ ಗೊತ್ತಾಗುವುದಿಲ್ಲ. ವೃದ್ಧನೇ ನೀನೀಗ ವಿಶ್ರಮಿಸಿಕೋ. ಮುಂದೆ ಏನು

ಬರುವುದೋ ನೋಡಿದರಾಯಿತು. ಮೀನು ತನ್ನ ಕೆಲಸ ಮುಂದುವರೆಸಲಿ ಬಿಡು.

ಆತ ಸುಮಾರು ಎರಡು ತಾಸು ಮಲಗಿರಬಹುದು. ಅಷ್ಟೊತ್ತಾದರೂ ಚಂದ್ರೋದಯವಾಗಿರಲಿಲ್ಲ. ಹೀಗಾಗಿ ಸಮಯ ತಿಳಿಯುವುದೇ ಕಷ್ಟವಾಗಿತ್ತು. ಆತನಿಗೆ ಅಂಥ ನಿದ್ರೆಯೂ ಹತ್ತಿರಲಿಲ್ಲ. ಹುರಿಯು ಭುಜಗಳನ್ನು ಕೊರೆಯುತ್ತಲೇ ಇತ್ತು. ತನ್ನ ಎಡಗೈಯನ್ನು ದೋಣಿಯ ಅಂಚಿನ ಮೇಲಿಟ್ಟು, ಮೀನಿಗೆ ಗೊತ್ತಾಗದಂತೆ ಸಾವಕಾಶವಾಗಿ ಪ್ರತಿರೋಧವೊಡ್ಡುತ್ತಿದ್ದ.

ಗಾಳದ ಹುರಿಯನ್ನು ಭದ್ರವಾಗಿ ಹಾಗೂ ಬಿಗಿಯಾಗಿ ಹಿಡಿಯುವುದೇನೂ ಕಷ್ಟವಲ್ಲ. ಆದರೆ ಮೀನು ಥಟ್ಟನೆ ಮೈಕೊಡಹಿದರೂ ಸಾಕು. ಹುರಿ ಹರಿದುಬಿಡಬಹುದು. ಹುರಿಯನ್ನು ಮೆಲ್ಲಗೆ ಅದುಮಿ ಹಿಡಿದುಕೊಂಡು ಅಗತ್ಯವೆನಿಸಿದರೆ ಅದನ್ನು ಜಾರಿ ಬಿಡಲು ಸದಾ ಸನ್ನದ್ಧನಾಗಿರಬೇಕು.

''ಆದರೆ ನೀನು ಮಲಗಲೇ ಇಲ್ಲವಲ್ಲ'' ಆತ ಗಟ್ಟಿಯಾಗಿ ತನ್ನಷ್ಟಕ್ಕೆ ಹೇಳಿಕೊಂಡ, ''ಅರ್ಧ ಹಗಲು, ಒಂದು ರಾತ್ರಿ ಮತ್ತೆ ಒಂದು ಹಗಲು ಕಳೆದರೂ ನಿನಗೆ ನಿದ್ರೆಯಿಲ್ಲ. ಮೀನು ತಟಸ್ಥವಾಗಿ ಉಳಿದರೆ ಸ್ವಲ್ಪ ಹೊತ್ತು ಮಲಗಲು ನೀನು ಏನಾದರೂ ಒಂದು ಯುಕ್ತಿ ಹುಡುಕಲೇಬೇಕು. ನಿದ್ರೆಯಿಲ್ಲದೆ ಹೋದರೆ ತಲೆಯಲ್ಲಿ ಗೊಂದಲ ತುಂಬಿಕೊಳ್ಳಬಹುದು.

ನನ್ನ ತಲೆ ನಿರಾಳವಾಗಿದೆ, ಸಾಕಷ್ಟು ನಿರಾಳವಾಗಿದೆ. ಆಗಸದಲ್ಲಿರುವ ನನ್ನ ಸೋದರರಾದ ನಕ್ಷತ್ರಗಳಂತೆ ನಿರ್ಮಲವಾಗಿದೆ. ಆದರೂ ತಾನು ಮಲಗಲೇಬೇಕು. ಚಂದ್ರ, ಸೂರ್ಯ ಮಲಗುತ್ತಾರೆ. ಸಾಗರ, ಮಹಾಸಾಗರಗಳು ನಿರ್ದಿಷ್ಟ ದಿನಗಳಲ್ಲಿ ಮಲಗುತ್ತವೆ. ಆಗ ಸುತ್ತೆಲ್ಲ ಮೌನ ಜಾಗೃತವಾಗಿರುತ್ತದೆ.

ಏನೇ ಆಗಲಿ ಮಲಗಲು ಮರೆಯಬೇಡ. ಗಾಳದ ಹುರಿಗಳನ್ನು ಕ್ರಮಬದ್ಧವಾಗಿ ಇರಿಸಲು ಸುಲಭ ಹಾಗೂ ಸುನಿಶ್ಚಿತ ಉಪಾಯಗಳನ್ನು ಯೋಜಿಸು. ಸದ್ಯ ಡಾಲ್ಫಿನ್ ಸ್ವಚ್ಛಗೊಳಿಸಿ ತಿನ್ನಲು ಸಿದ್ಧಗೊಳಿಸು. ಒಂದು ವೇಳೆ ಮಲಗುವುದೇ ನಿಶ್ಚಿತವಾದರೆ ಹುಟ್ಟುಗಳನ್ನು ನೀರಲ್ಲಿಯೇ ಬಿಡುವುದು ಒಳಿತಲ್ಲ.

ನಿದ್ರೆಯಿಲ್ಲದೆ ಇರಬಹುದು. ಆದರೆ ಅದು ತುಂಬ ಅಪಾಯಕಾರಿ.''

ಮೀನಿಗೆ ಸ್ವಲ್ಪವೂ ಗೊತ್ತಾಗದಂತೆ, ತುಂಬ ಎಚ್ಚರಿಕೆಯಿಂದ ಆತ ಸ್ವಲ್ಪ ಹಿಂದೆ ಸರಿದು ಕುಳಿತು ತನ್ನ ಕೈ ಹಾಗೂ ಮೊಳಕಾಲಿಗೆ ಹುರಿಯನ್ನು ಸುತ್ತಿಕೊಂಡ. ಮೀನು ಅರೆ-ನಿದ್ರೆಯಲ್ಲಿರಬೇಕು. ಆದರೆ ಅದು ಮಲಗಿಕೊಳ್ಳುವುದು ತನಗಿಷ್ಟವಿಲ್ಲ. ಸಾಯುವವರೆಗೂ ಅದು ದೋಣಿಯನ್ನು ಎಳೆಯುತ್ತಲೇ ಇರಬೇಕು.

ದೋಣಿಯ ಹಿಂಭಾಗದತ್ತ ಹೊರಳಿ ಎಡಗೈ ಉಪಯೋಗಿಸಿ ಭುಜಗಳಿಂದ ಇಳಿ ಬಿದ್ದ ಹುರಿಯನ್ನು ಹಿಡಿದುಕೊಂಡ. ನಂತರ ಬಲಗೈಯಿಂದ ಚಾಕುವನ್ನೂ ಹೊರತೆಗೆದ. ಈಗ ಚುಕ್ಕೆಗಳು ಫಳ ಫಳ ಹೊಳೆಯುತ್ತಿದ್ದರಿಂದ ಅಲ್ಲಿದ್ದ ಡಾಲ್ಫಿನ್ ಸ್ಪಷ್ಟವಾಗಿ ಕಾಣಿಸಿತು. ಅದರ ತಲೆಗೆ ಚಾಕುವಿನಿಂದ ಚುಚ್ಚಿ, ದೋಣಿಯ ಒಳಭಾಗದಿಂದ ಅದನ್ನು ಹೊರಗೆಳೆದುಕೊಂಡ. ನಂತರ ತನ್ನ ಒಂದು ಪಾದದಿಂದ ಅದನ್ನು ಗಟ್ಟಿಯಾಗಿ ಒತ್ತಿ ಹಿಡಿದು, ಮೇಲಿನಿಂದ ಕೆಳ ದವಡೆಯವರೆಗೆ ಕತ್ತರಿಸಿದ. ಚಾಕುವನ್ನು ಕೆಳಗಿಟ್ಟು ಬಲಗೈಯಿಂದ ಮೊಗೆದು ಅದರ ಕರುಳುಗಳನ್ನು ಹೊರ ತೆಗೆದು ಸ್ವಚ್ಛಗೊಳಿಸಿದ. ಅದರ ಹೊಟ್ಟೆ ಭಾರವಾಗಿತ್ತು. ಹಾಗೂ ಹಿಡಿದರೆ ಜಾರುತ್ತಿತ್ತು. ದೋಣಿಯ ಒಳಗೆ ಇನ್ನೂ ಎರಡು ಹಾರುವ ಮೀನುಗಳಿದ್ದವು. ಅವುಗಳಿನ್ನೂ ತಾಜಾ ಆಗಿದ್ದವು. ಅವುಗಳನ್ನು ಒಂದರ ಬದಿಗೊಂದು ಇರಿಸಿ, ಡಾಲ್ಫಿನ್‌ದ ನಿರುಪಯೋಗಿ ಕರುಳು ಹಾಗೂ ಕಿವಿರುಗಳನ್ನು ನೀರಿಗೆಸೆದ. ನೀರಿನ ಮೇಲೆ ಎಣ್ಣೆ ಪೊರೆಯನ್ನು ಉಳಿಸಿ ಅವು ಮುಳುಗಿ ಹೋದವು. ಡಾಲ್ಫಿನ್ ತಣ್ಣಗಿತ್ತು. ಚುಕ್ಕೆಗಳ ಮಂದ ಬೆಳಕಿನಲ್ಲಿ ಅದು ಕುಷ್ಠರೋಗಿಯ ಚರ್ಮದಂತೆ ಕಂದು ಬಿಳಿವರ್ಣವಾಗಿ ತೋರುತ್ತಿತ್ತು. ಆತ ತನ್ನ ಬಲಪಾದವನ್ನು ಡಾಲ್ಫಿನ್ ತಲೆಯ ಮೇಲಿಟ್ಟು ಅದರ ಬದಿಯನ್ನು ಬಲಗೈಯಿಂದ ಸೀಳಿದ. ಅದನ್ನು ಹೊರಳಿಸಿ

ಇನ್ನೊಂದು ಬದಿಯನ್ನು ಸೀಳುತ್ತ ತಲೆಯಿಂದ ಬಾಲದವರೆಗೆ ಅದರ ಪ್ರತಿಯೊಂದು ಭಾಗವನ್ನು ಬೇರ್ಪಡಿಸಿದ.

ಆತ ಡಾಲ್ಫಿನ್‌ದ ಎಲುಬು ಗೂಡನ್ನು ಸಮುದ್ರದಲ್ಲಿ ಎಸೆದು ನೀರಲ್ಲಿ ಗುಳಿವುಂಟಾಗಿದೆಯೇ ಎಂದು ಇಣುಕಿ ನೋಡಿದ. ಆದರೆ ಅದು ನಿಧಾನವಾಗಿ ನೀರೊಳಗಿಳಿಯುವುದು ಮಾತ್ರ ಕಂಡಿತು. ಆತ ಹಾರುವ ಮೀನುಗಳೆರಡನ್ನೂ ಬುಟ್ಟಿಯಲ್ಲಿ ಹಾಕಿ, ಚಾಕುವನ್ನು ಅದರ ಒರೆಯಲ್ಲಿರಿಸಿ, ಮತ್ತೆ ಹಿಂದೆ ಸರಿದು ಕುಳಿತ. ಗಾಳದ ಹುರಿಯ ಎಳೆತದ ಒತ್ತಡದಿಂದ ಆತನ ಬೆನ್ನು ಬಾಗಿತ್ತು. ಈಗ ಹುರಿಯನ್ನು ಬಲಗೈಯಲ್ಲಿ ಹಿಡಿದುಕೊಂಡ.


ಮೀನಿನ ಬುಟ್ಟಿಗಳೆರಡನ್ನೂ ದೋಣಿಯ ಹಿಂಭಾಗದಲ್ಲಿರಿಸಿದ. ಹಾರುವ ಮೀನುಗಳನ್ನು ಅದರ ಬದಿಗೇ ಇರಿಸಿ, ದೋಣಿಯ ಅಂಚಿನ ಮೇಲೆ ಎಡಗೈಯೂರಿ ತನ್ನ ಭುಜಗಳ ಮೇಲಿನ ಹುರಿಯನ್ನು ಬದಿಗೆ ಸರಿಸಿಕೊಂಡ. ನಂತರ ಕೆಳಗೆ ಬಾಗಿ ಮೀನುಗಳನ್ನು ತೊಳೆಯುತ್ತ ನೀರಿನ ವೇಗವನ್ನು ಪರೀಕ್ಷಿಸಿದ. ಆತ ಮೀನಿನ ಚರ್ಮ ಸುಲಿದಿದ್ದರಿಂದ ಆತನ ಕೈಗೆ ಅಂಟಿಕೊಂಡಿದ್ದ ಎಣ್ಣೆ ನೀರಲ್ಲಿ ತೆಳು ಪೊರೆಯಾಗಿ ಹರಡಿಕೊಂಡಿತು. ಈಗ ಎಳೆತ ಕಡಿಮೆಯಾಗಿತ್ತು. ಆತ ದೋಣಿಯ ಬದಿಗೆ ತನ್ನ ಕೈಗಳನ್ನು ತಿಕ್ಕುತ್ತ ಎಣ್ಣೆಯ ಜಿಗುಟು ಕಣಗಳು ನೀರಲ್ಲಿ ತೇಲಿ ಹೋಗಲು ಬಿಟ್ಟ.

''ಮೀನು ದಣಿದಿರಬಹುದು ಇಲ್ಲವೆ ವಿಶ್ರಾಂತಿ ಪಡೆಯುತ್ತಿರಬಹುದು. ಸದ್ಯ ಡಾಲ್ಫಿನ್ ಮಾಂಸ ತಿಂದು ಸ್ವಲ್ಪ ಹೊತ್ತು ಮಲಗಿ ವಿಶ್ರಮಿಸಿಕೊಳ್ಳಬೇಕು,'' ಆತ ಅಂದುಕೊಂಡ.

ಮಿನುಗುವ ಚುಕ್ಕೆಗಳ ಆ ತಣ್ಣನೆಯ ರಾತ್ರಿಯಲ್ಲಿ ಆತ ಅರ್ಧ ಡಾಲ್ಫಿನ್ ಹಾಗೂ ಒಂದು ಹಾರುವ ಮೀನಿನ ಮಾಂಸವನ್ನು ತಿಂದು ಮುಗಿಸಿದ.

''ಬೇಯಿಸಿ ತಿನ್ನಲು ಡಾಲ್ಫಿನ್ ಭರ್ಜರಿಯಾಗಿರುತ್ತದೆ. ಹಾಗೇ ತಿಂದರೆ ಅದರಷ್ಟು ಕೆಟ್ಟದ್ದು ಬೇರೊಂದಿಲ್ಲ. ಇನ್ನು ಮೇಲೆ ನಿಂಬೆ ಹಣ್ಣಿನ ರಸ ಹಾಗೂ ಉಪ್ಪನ್ನು ಮರೆತು ಮೀನು ಹಿಡಿಯಲು ಹೋಗಲೇಬಾರದು.''

ತನಗೆ ಬುದ್ಧಿ ಇದ್ದಿದ್ದರೆ ದೋಣಿಯ ಹಲಗೆಯ ಮೇಲೆ ಇಡೀ ದಿನ ಸಮುದ್ರದ ಉಪ್ಪು ನೀರನ್ನು ಚಿಮುಕಿಸುತ್ತ, ಒಣಗಲು ಬಿಡುತ್ತಿದ್ದೆ. ಅದರಿಂದ ತನಗೆ ತಿನ್ನಲು ಅಗತ್ಯವಿದ್ದಷ್ಟು ಉಪ್ಪಾದರೂ ದೊರೆಯುತ್ತಿತ್ತು. ಅದನ್ನೇ ಮಾಡುತ್ತ ಕುಳಿತಿದ್ದರೆ ಹೊತ್ತು ಮುಳುಗಿದರೂ ತನಗೆ ಡಾಲ್ಫಿನ್ ದಕ್ಕುತ್ತಿರಲಿಲ್ಲ. ಪೂರ್ವ ತಯಾರಿಯಿಲ್ಲದಿದ್ದರೆ ಇಷ್ಟೆಲ್ಲ ತಾಪತ್ರಯ ಅನುಭವಿಸಬೇಕಾಗುತ್ತದೆ. ಸದ್ಯ ಮೀನನ್ನು





ತಿಂದ ಮೇಲೆ ವಾಕರಿಕೆ ಎನಿಸಲಿಲ್ಲ.

ಪೂರ್ವ ದಿಕ್ಕಿನಲ್ಲಿ ಮೋಡಗಳು ಮುಸುಕತೊಡಗಿದ್ದವು. ಒಂದಾದ ಮೇಲೊಂದರಂತೆ ಆತನಿಗೆ ಪರಿಚಿತವಿದ್ದ ನಕ್ಷತ್ರಗಳು ಮಾಯವಾಗತೊಡಗಿದವು. ಮೋಡಗಳ ಪ್ರಪಾತದಲ್ಲಿಳಿಯುತ್ತಿರುವಂತೆ ಆತನಿಗೆ ಭಾಸವಾಯಿತು. ಗಾಳಿ ಬೀಸತೊಡಗಿತು.

''ಇನ್ನು ಮೂರು ನಾಲ್ಕು ದಿನ ಬಿಟ್ಟು ಪ್ರತಿಕೂಲ ಹವಾಮಾನ ಕಾಲಿಕ್ಕಬಹುದು. ಇಂದು ರಾತ್ರಿ ಹಾಗೂ ನಾಳೆ ಅದರ ಬಗ್ಗೆ ಚಿಂತೆ ಮಾಡಬೇಕಿಲ್ಲ. ಸದ್ಯ ಮಲಗಲು ಸಿದ್ಧವಾಗು, ಈಗ ಮೀನು ಕೂಡ ತಟಸ್ಥವಾಗಿದೆ'' ಆತ ತನ್ನಷ್ಟಕ್ಕೆ ಹೇಳಿಕೊಂಡ.

ಬಲಗೈಯಿಂದ ಹುರಿಯನ್ನು ಗಟ್ಟಿಯಾಗಿ ಹಿಡಿದು, ದೋಣಿಯ ಅಡ್ಡ ಹಲಗೆಯ ಮೇಲೆ ತನ್ನೆಲ್ಲ ಭಾರ ಹಾಕಿ, ತೊಡೆಯನ್ನು ಬಲಗೈಗೆ ತಾಕಿಸಿ, ನೂಕಿದ. ಭುಜಗಳ ಮೇಲಿನ ಹುರಿಯನ್ನು ತನ್ನ ಎಡಗೈಯಿಂದ ಕವುಚಿ ಹಿಡಿದು ಕೆಳಗೆ ಸರಿಸಿಕೊಂಡ.

ಕೈ ಸೋಲುವವರೆಗೂ ಬಲಗೈ ಹುರಿಯನ್ನು ಹಿಡಿದುಕೊಂಡಿರುತ್ತದೆ. ತನಗೆ ನಿದ್ರೆ ಹತ್ತಿದಾಗ ಹುರಿ ಜಾರತೊಡಗಿದರೆ ಎಡಗೈ ತನ್ನನ್ನು ಎಚ್ಚರಿಸುತ್ತದೆ. ಬಲಗೈಗೆ ಬಹಳ ಭಾರ ಬೀಳುತ್ತದೆ. ಹೀಗಾಗಿ ಅದಕ್ಕೆಲ್ಲವೂ ಒಗ್ಗಿ ಹೋಗಿದೆ. ಕನಿಷ್ಠ ಇಪ್ಪತ್ತು ನಿಮಿಷ ಅಥವಾ ಅರ್ಧ ಗಂಟೆ ಮಲಗಿದರೂ ಉತ್ತಮ. ಗಾಳದ ಹುರಿಗೆ ವಿರುದ್ಧವಾಗಿ, ತನ್ನ ದೇಹವನ್ನು ಮುಂದೆ ಬಾಗಿಸಿ, ಬಲಗೈ ಮೇಲೆ ಭಾರ ಹಾಕಿ, ಮುದ್ದೆಯಾಗಿ ಮಲಗಿ ನಿದ್ರೆ ಹೋದ.

ಆತ ಸಿಂಹಗಳ ಬಗ್ಗೆ ಕನಸು ಕಾಣಲಿಲ್ಲ. ಅದರ ಬದಲು ಸಮುದ್ರದಲ್ಲಿ ಎಂಟು-ಹತ್ತು ಮೈಲುಗಳಷ್ಟು ಉದ್ದ ಹರಡಿಕೊಂಡಿರುವ ಪರ್ಪೈಸ್ ಮೀನುಗಳ ಗುಂಪನ್ನು ಕಂಡ. ಅವು ಕಾಮ ಕೇಳಿಯಲ್ಲಿ ನಿರತವಾದಾಗ ಗಾಳಿಯಲ್ಲಿ ಜಿಮ್ಮುತ್ತಿದ್ದವು. ಆಗ ನೀರಲ್ಲಿ ಉಂಟಾದ ಗುಳಿಗಳಲ್ಲೇ ಮತ್ತೆ ಬಂದು ಬೀಳುತ್ತಿದ್ದವು.

ಆಮೇಲೆ ಆತನಿಗೆ ತನ್ನ ಹಳ್ಳಿಯಲ್ಲಿ ಇದ್ದ ಹಾಗೆ ಕನಸು ಬಿತ್ತು. ಅಲ್ಲಿ ತನ್ನ ಹಾಸಿಗೆಯಲ್ಲಿ ಮಲಗಿದಾಗ ಉತ್ತರದ ಗಾಳಿ ಬೀಸಿ ಇಡಿ ದೇಹ ಹೆಪ್ಪುಗಟ್ಟಿದಂತಾಯಿತು. ಆತ ತನ್ನ ಬಲ ತೋಳನ್ನೇ ತಲೆ ದಿಂಬು ಮಾಡಿ ಮಲಗಿದ್ದರಿಂದ ಅದು ಕೂಡ ನಿದ್ರಿಸುತ್ತಿತ್ತು.

ಅನಂತರ ಆತನ ಕನಸಿನಲ್ಲಿ ವಿಸ್ತಾರವಾದ ಹಳದೀ ಬೀಚು ಗೋಚರಿಸಿತು. ಸಂಜೆಯ ಮಬ್ಬುಗತ್ತಲಲ್ಲಿ ಸಿಂಹಗಳು ಇಳಿದು ಬಂದವು. ಮತ್ತಷ್ಟು ಸಿಂಹಗಳು ಬರಬಹುದೆಂದು ಆತ ಲಂಗರು ಹಾಕಿದ ಹಡಗಿನ ಹಲಗೆಯ ಮೇಲೆ ತನ್ನ ಗದ್ದವನ್ನೂರಿ ನಿಂತಿದ್ದ. ಆತ ಹರ್ಷಚಿತ್ತನಾಗಿದ್ದ.

ಚಂದ್ರ ಆಗಲೇ ಮೇಲೇರಿದ್ದ. ಆತ ಇನ್ನೂ ಮಲಗಿದ್ದ. ಮೀನು ನಿಧಾನವಾಗಿ ದೋಣಿಯನ್ನು ಎಳೆಯುತ್ತಿತ್ತು. ದೋಣಿ ತೇಲುತ್ತ ಮುಂದೆ ಸಾಗಿ ಮೋಡಗಳ ಗೂಡು ಸೇರಿಕೊಂಡಿತು.

ಥಟ್ಟನೆ ಎಳೆದಂತಾಗಿ ಆತನ ಬಲಗೈ ಮುಷ್ಟಿ ಮುಖದ ಮೇಲೆ ಜರಿದು ಆತನಿಗೆ ಎಚ್ಚರವಾಯಿತು. ಹುರಿಯ ಕೊರೆತದಿಂದ ಬಲಗೈ ಉರಿಯುತ್ತಿತ್ತು. ಎಡಗೈ ಸುದ್ದಿಯೇ ತಿಳಿಯಲಿಲ್ಲ. ಆತ ಬಲಗೈಯಿಂದಲೇ ಎಳೆದು ಹುರಿಯನ್ನು ತಡೆಯಲು ನೋಡಿದ. ಹುರಿ ರಭಸದಿಂದ ಜಾರುತ್ತಿತ್ತು. ಈಗ ಎಡಗೈ ಕೂಡ ಸಹಾಯಕ್ಕೆ ಬಂತು. ಆತ ಹಿಂದಕ್ಕೆ ಬಾಗಿದ. ಆತನ ಬೆನ್ನು ಹಾಗೂ ಕೈ ಉರಿಯತೊಡಗಿತು. ಎಲ್ಲ ಒತ್ತಡ ಈಗ ಎಡಗೈ ಮೇಲೆ ಬಿದ್ದು ಕೈ ಕೊರೆದು ಗಾಯವಾಯಿತು. ಗಾಳದ ಸಿಂಬೆಯಿಂದ ಹುರಿ ಒಂದೇ ಸಮನೆ ಜಾರುತ್ತಿತ್ತು. ಅಷ್ಟರಲ್ಲಿ ದೊಡ್ಡ ಸಪ್ಪಳ ಮಾಡುತ್ತ ಮೀನು ಮೇಲೆ ನೆಗೆದು ಮತ್ತೆ ನೀರಿಗಪ್ಪಳಿಸಿತು. ಮೀನು ಮತ್ತೆ ಮತ್ತೆ ನೆಗೆಯುತ್ತಿದ್ದಂತೆ ದೋಣಿ ವೇಗವಾಗಿ ಚಲಿಸತೊಡಗಿತು. ಆತ ಗಾಳದ ಹುರಿಯ ನಿರ್ದಿಷ್ಟ ಭಾಗವನ್ನು ಗಟ್ಟಿಯಾಗಿ ಹಿಡಿದುಕೊಂಡು ಮೇಲಕ್ಕೆತ್ತತೊಡಗಿದ. ಆತ ಕೆಳಕ್ಕೆ ಕುಸಿದು, ದೋಣಿಯನ್ನು ತಬ್ಬಿಕೊಂಡ. ಅಲ್ಲಿದ್ದ ಡಾಲ್ಫಿನ್ ತುಂಡುಗಳ ಮೇಲೆ ಆತನ ಮುಖ

ಒರಗಿಕೊಂಡಿತು. ಅನಂತರ ಆತ ಅಲುಗಾಡಲಿಲ್ಲ.

ನಾವಿಬ್ಬರೂ ಈ ಸಂದರ್ಭಕ್ಕಾಗಿಯೇ ಕಾದಿದ್ದೆವು. ಸದ್ಯ ಹೋರಾಟಕ್ಕೆ ಅಣಿಯಾಗಬೇಕು.

ಅದಕ್ಕೆ ತಕ್ಕ ಶಾಸ್ತಿ ಮಾಡಬೇಕೆಂದುಕೊಂಡ. ಮೀನು ನೆಗೆದಾಡುವುದು ಆತನಿಗೆ ಕಾಣುತ್ತಿರಲಿಲ್ಲ. ಅದು ನೆಗೆದಾಡುತ್ತಾ ನೀರಿಗೆ ಅಪ್ಪಳಿಸುವ ಸದ್ದು ಮಾತ್ರ ಕೇಳುತ್ತಿತ್ತು. ವೇಗವಾಗಿ ಚಲಿಸುತ್ತಿರುವುದರಿಂದ ಆತನ ಕೈ ಕೊರೆಯತೊಡಗಿತ್ತು. ಹೀಗಾಗುವುದು ಸಹಜವೇ ಎಂದು ಆತನಿಗೆ ಗೊತ್ತಿತ್ತು. ಕೊರೆದ ಭಾಗದಿಂದ ಹುರಿಯನ್ನು ಬದಿಗೆ ಸರಿಸಿಕೊಳ್ಳುತ್ತ, ಬೆರಳುಗಳು ಕತ್ತರಿಸದ ಹಾಗೆ ದಪ್ಪ ಬಿದ್ದ ಭಾಗದಲ್ಲೇ ಹುರಿ ಜರಿದುಕೊಳ್ಳುವಂತೆ ಎಚ್ಚರವಹಿಸಿದ.

ಹುಡುಗ ನನ್ನ ಜೊತೆಗಿದ್ದರೆ ಹುರಿ ಸಿಂಬೆಗಳನ್ನು ತೋಯಿಸುತ್ತಿದ್ದ. ಹೌದು, ಹುಡುಗ ಜೊತೆಯಿದ್ದರೆ ತಾನೆ?

ಹುರಿ ಒಂದೇ ಸಮನೇ ಜರಿಯುತ್ತ ನಡೆಯಿತು. ಒಂದು ಇಂಚು ಸಹ ಬಿಡದಂತೆ ಮೀನು ಹುರಿಯನ್ನು ಕೊಂಡೊಯ್ಯಲಿ ಎಂದುಕೊಂಡ. ಈಗ ತನ್ನ ಗದ್ದದ ಕೆಳಗೆ ಅಪ್ಪಚ್ಚಿಯಾದ ಮಾಂಸದ ತುಂಡುಗಳಿಂದ ಆತ ತಲೆ ಮೇಲಕ್ಕೆತ್ತಿದ ನಂತರ ಮೊಳಕಾಲೂರಿ ಎದ್ದು ನಿಂತ. ತೀರ ನಿಧಾನವಾಗಿ ಆತ ಗಾಳದ ಹುರಿಯನ್ನು ಬಿಟ್ಟುಕೊಡುತ್ತಿದ್ದ. ಕತ್ತಲಲ್ಲಿ ಏನೂ ಕಾಣದ್ದರಿಂದ ಸ್ವಲ್ಪ ಹಿಂದೆ ಸರಿದು, ಕಾಲು ತೊಸೆದಾಡಿ ಹುರಿಯ ಸಿಂಬೆಯನ್ನು ಪಾದದಿಂದ ಸ್ಪರ್ಶಿಸಿದ. ಇನ್ನೂ ಸಾಕಷ್ಟು ಹುರಿ ಇದೆ ಎಂದುಕೊಂಡ. ಈಗ ಮೀನು ಅಷ್ಟುದ್ದ ಹುರಿಯನ್ನು ನೀರಿನ ಘರ್ಷಣೆ ಸಮೇತ ಎಳೆಯಬೇಕಿತ್ತು.

ಮೀನು ಅದಾಗಲೇ ಹತ್ತು-ಹನ್ನೆರಡು ಬಾರಿ ಗಾಳಿಯಲ್ಲಿ ನೆಗೆದಿತ್ತು. ಅಂದರೆ ಅದರ ಬೆನ್ನ ಮೇಲಿನ ಕೋಶಗಳಲ್ಲಿ ಗಾಳಿ ತುಂಬಿಕೊಂಡಿತ್ತು. ಅಂದ ಮೇಲೆ ಬಹಳ ಆಳಕ್ಕೆ ಹೋಗಿ ಮೀನು ಸಾಯಲಾರದು. ಇಷ್ಟರಲ್ಲೇ ಅದು ವರ್ತುಲಾಕಾರವಾಗಿ ಸುತ್ತತೊಡಗಬಹುದು. ಆಗ ಒಂದು ಕೈ ನೋಡಿದರಾಯಿತು. ಇದ್ದಕ್ಕಿದ್ದಂತೆ ಮೀನು ಹೀಗೆ ವರ್ತಿಸಲು ಕಾರಣವೇನಿರಬಹುದು? ಅದಕ್ಕೆ ಹಸಿವೆಯಾಗಿರಬಹುದೇ? ಅಥವಾ ಕತ್ತಲಲ್ಲಿ ಏನನ್ನೋ ಕಂಡು ಭಯಪಟ್ಟಿರಬಹುದೇ? ಬಹುಶಃ ಭಯಗೊಂಡದ್ದೇ ನಿಜವಿರಬೇಕು. ಆದರೆ ಅದು ಅಂಥ ಪುಕ್ಕಲು ಅಲ್ಲ. ಅದು ಬಲಾಢ್ಯವಾದ, ನಿರ್ಭಯವಾದ, ಶಾಂತ ಮನೋಭಾವದ ಹಾಗೂ ದೃಢ ನಿಶ್ಚಯವುಳ್ಳ ಮೀನು. ಎಲ್ಲ ವಿಚಿತ್ರವಾಗಿದೆ.

''ವೃದ್ಧನೇ, ನೀನೀಗ ನಿರ್ಭಯ ಹಾಗೂ ದೃಢ ಚಿತ್ತದಿಂದಿರಬೇಕು. ಇದೀಗ ಮೀನನ್ನು ನಿಯಂತ್ರಿಸಬೇಕಾಗಿ ಬರಬಹುದು. ಆದರೆ ಹುರಿ ಕೈಗೆ ಸಿಗಲಿಕ್ಕಿಲ್ಲ. ಏನಿದ್ದರೂ ಮೀನು ವರ್ತುಲಾಕಾರವಾಗಿ ಸುತ್ತಲೇ ಬೇಕು'' ಆತ ತನ್ನಷ್ಟಕ್ಕೇ ಹೇಳಿಕೊಂಡ.

ಆತ ತನ್ನ ಭುಜ ಹಾಗೂ ಎಡಗೈಯಿಂದ ಹುರಿಯನ್ನು ಅಮುಕಿ ಹಿಡಿದು ಕೆಳಗೆ ಬಾಗಿ ನೀರು ಚಿಮುಕಿಸಿಕೊಂಡು ಮುಖಕ್ಕೆ ಅಂಟಿದ್ದ ಮಾಂಸವನ್ನು ತೊಳೆದುಕೊಂಡ. ಉಬ್ಬಳಿಕೆ ಬಂದು ವಾಂತಿಯಾಗಿ ತಾನೆಲ್ಲಿ ನಿಶ್ಯಕ್ತನಾಗುವೆನೋ ಎಂಬ ಭಯ ಆತನಿಗಿತ್ತು. ಮುಖ ತೊಳೆದಾದ ನಂತರ ಆತ ತನ್ನ ಬಲಗೈಯನ್ನು ತೊಳೆದುಕೊಂಡು, ಅದನ್ನು ಹಾಗೇ ಸಮುದ್ರದ ಉಪ್ಪು ನೀರಲ್ಲಿ ಅದ್ದಿ ಹಿಡಿದ.

ಅಷ್ಟರಲ್ಲಿ ಬೆಳಕು ಹರಿಯತೊಡಗಿತ್ತು. ತಾನು ಪೂರ್ವದ ಕಡೆಗೇ ಸಾಗುತ್ತಿರುವೆ ಎಂದುಕೊಂಡ. ಅದರರ್ಥ ಮೀನು ದಣಿದಿದೆ ಎಂದಾಯಿತು. ಆದ್ದರಿಂದಲೇ ಅದು ಪ್ರವಾಹದಗುಂಟ ಈಜುತ್ತಿದೆ. ಇಷ್ಟರಲ್ಲೇ ಅದು ವರ್ತುಲಾಕಾರವಾಗಿ ಸುತ್ತು ಹಾಕಲೇಬೇಕು. ನಿಜವಾದ ಹೋರಾಟ ಆರಂಭವಾಗುವುದೇ ಆಗ.

ಬಹಳ ಹೊತ್ತಿನವರೆಗೆ ನೀರಲ್ಲಿ ಅದ್ದಿ ಹಿಡಿದಿದ್ದ ಬಲಗೈಯನ್ನು ಹೊರಗೆ ತೆಗೆದು ನೋಡಿಕೊಂಡ.

''ಅಂಥ ತೊಂದರೆಯೇನಿಲ್ಲ. ಅಲ್ಲದೆ ಮನುಷ್ಯನಿಗೆ ನೋವು ಅಗಣ್ಯವಾದುದು'' ಎಂದುಕೊಂಡ.

ಕೊರೆತದ ಗಾಯಗಳಿಗೆ ತಾಕದಂತೆ ಹುರಿಯನ್ನು ಜಾಗರೂಕತೆಯಿಂದ ಬಲಗೈಗೆ ಬದಲಾಯಿಸಿ

ಕೊಂಡು, ದೋಣಿಯ ಇನ್ನೊಂದು ಬದಿಗೆ ಎಡಗೈಯನ್ನು ನೀರಲ್ಲಿ ಅದ್ದಿದ.

''ಅಮೂಲ್ಯವಾದ ವಸ್ತುವಿಗಾಗಿ ನೀನು ಪ್ರಸಂಗಕ್ಕೆ ತಕ್ಕಂತೆಯೇ ವರ್ತಿಸಿದೆ'' ಆತ ತನ್ನ ಎಡಗೈ ಉದ್ದೇಶಿಸಿ ಹೇಳಿದ. ''ಆದರೆ ಒಂದು ಸಂದರ್ಭದಲ್ಲಂತೂ ನೀನು ಚೆನ್ನಾಗಿಯೇ ಕೈ ಕೊಟ್ಟೆ.

ಸದೃಢ ಕೈಗಳನ್ನು ಪಡೆದುಕೊಂಡು ನಾನು ಹುಟ್ಟಬಾರದಿತ್ತೆ? ಬಹುಶಃ ಅದು ನನ್ನದೇ ತಪ್ಪು. ಎಡಗೈಗೆ ನಾನು ಸರಿಯಾದ ತರಬೇತಿ ನೀಡಲಿಲ್ಲ. ಆದರೆ ಕಲಿತುಕೊಳ್ಳಲು ಅದಕ್ಕೆ ಸಾಕಷ್ಟು ಅವಕಾಶಗಳಿದ್ದವು. ರಾತ್ರಿ ಅದು ಚೆನ್ನಾಗಿಯೇ ಕಾರ್ಯ ನಿರ್ವಹಿಸಿತು. ಕೇವಲ ಒಂದು ಸಲ ಮಾತ್ರ ಸೆಟೆದುಕೊಂಡಿತ್ತು. ಇನ್ನೊಮ್ಮೆ ಹಾಗೆ ಸೆಟೆದುಕೊಂಡಪ್ಪೇ ಆದರೆ ಹುರಿ ಅದನ್ನು ಕತ್ತರಿಸಿ ಹಾಕಲಿ ಬಿಡು.''

ಹೀಗೆಲ್ಲ ಯೋಚಿಸುವಾಗ ಆತ ಗಲಿಬಿಲಿಗೊಂಡಿದ್ದ. ಇನ್ನಷ್ಟು ಡಾಲ್ಫಿನ್ ತಿಂದರೊಳಿತು ಎಂದುಕೊಂಡ. ಆದರೆ ಉಬ್ಬಳಿಕೆ ವಾಂತಿ ಬಂದು ನಿಶ್ಯಕ್ತನಾಗುವುದಕ್ಕಿಂತ ಹಾಗೇ ಇದ್ದರೆ ಒಳಿತು. ಮಾಂಸವೆಲ್ಲ ಮುಖಕ್ಕೆ ಅಂಟಿಕೊಂಡು ಅವನಿಗಾಗಲೇ ಹೇಸಿಗೆ ಎನಿಸಿತ್ತು. ಈಗ ಅದನ್ನು ತಿಂದರೆ ವಾಂತಿಯಾಗುವುದು ನಿಶ್ಚಿತ. ತುರ್ತು ಸಂದರ್ಭಕ್ಕೆ ಅದನ್ನು ತೆಗೆದಿರಿಸಿದ ನಂತರ ಅದು ಕೆಡುವ ಮೊದಲೇ ತಿಂದರಾಯಿತು. ಆದರೆ ತಿಂದು ಅರಗಿಸಿಕೊಂಡು ಶಕ್ತಿ ಗಳಿಸಲು ಇದೀಗ ತುಂಬ ತಡವಾಯಿತು. ಆ ದೃಷ್ಟಿಯಿಂದ ನೀನು ಮೂರ್ಖನೇ ಸರಿ. ಇರಲಿ, ಬಾಕಿ ಉಳಿದ ಹಾರುವ ಮೀನನ್ನಾದರೂ ತಿನ್ನು, ಆತ ತನ್ನಷ್ಟಕ್ಕೇ ಹೇಳಿಕೊಂಡ.

ಸ್ವಚ್ಛಗೊಳಿಸಿ, ತಿನ್ನಲು ಸಿದ್ಧಪಡಿಸಿದ ಮೀನು ಅಲ್ಲಿತ್ತು. ಆತ ಅದನ್ನು ಎಡಗೈಯಿಂದ ಎತ್ತಿಕೊಂಡು ಬಾಯಲ್ಲಿಟ್ಟುಕೊಂಡು ಎಲುಬುಗಳನ್ನು ಜಾಗರೂಕತೆಯಿಂದ ಜಗಿಯತೊಡಗಿದ. ತಲೆಯಿಂದ ಬಾಲದವರೆಗೆ ಇಡೀ ಮೀನನ್ನು ತಿಂದು ಮುಗಿಸಿದ.

ಪಚನಕ್ಕೆ ಯೋಗ್ಯವಾದ ಮೀನು ಅದು. ಆದರಿಂದ ಅಗತ್ಯವಿರುವಷ್ಟು ಶಕ್ತಿಯಾದರೂ ದೊರಕಬಹುದು. ತನಗೇನು ಮಾಡಬೇಕಿತ್ತೋ ಅದನ್ನೆಲ್ಲ ಮಾಡಿರುವೆ. ಇನ್ನು ಮೀನು ಸುತ್ತು ಹಾಕಲಿ ಬಿಡು. ಸದ್ಯ ಹೋರಾಟ ಪ್ರಾರಂಭವಾದರೂ ಚಿಂತೆಯಿಲ್ಲ.

ಆತ ಸಮುದ್ರಕ್ಕಿಳಿದ ದಿನದಿಂದ ಮೂರನೆಯ ಬಾರಿ ಸೂರ್ಯ ಉದಯಿಸಿದ. ಅಷ್ಟೊತ್ತಿಗೆ ಮೀನು ವರ್ತುಳಾಕಾರವಾಗಿ ಸುತ್ತತೊಡಗಿತ್ತು.

ಹುರಿಯ ಅಲುಗಾಟವನ್ನು ಅನುಲಕ್ಷಿಸಿ ಆತ ಹಾಗೆ ಭಾವಿಸಲಿಲ್ಲ. ಬಲಗೈ ಮೇಲೆ ಬಿದ್ದ ಒಂದು ರೀತಿಯ ಒತ್ತಡದಿಂದ ಆತ ಮೀನು ಸುತ್ತು ಹಾಕುತ್ತಿರಬಹುದೆಂದುಕೊಂಡ. ಎಂದಿನಂತೆ ಸಹಜವಾಗಿ ಈಗ ಹುರಿಯು ಬಿಗಿತ ಹೆಚ್ಚತೊಡಗಿತು. ಅದರ ನಿಶ್ಯಕ್ತ ಭಾಗ ಕೈಗೆಟಕುತ್ತಿರುವಂತೆ ಅದು ಸರಾಗವಾಗಿ ಮೇಲೇರತೊಡಗಿತು.

ಭುಜಗಳ ಮೇಲಿದ್ದ ಹುರಿಯನ್ನು ತಲೆ ಬಾಗಿಸಿ ಬಿಡಿಸಿಕೊಂಡು, ನಂತರ ಭದ್ರವಾಗಿ ಕಾಲೂರಿ, ಎರಡು ಕೈಗಳಿಂದ ಅದನ್ನು ನಿಧಾನವಾಗಿ ಎಳೆದುಕೊಳ್ಳತೊಡಗಿದ. ಆತನ ಮುಪ್ಪುಗೊಂಡ ಕಾಲು ಹಾಗೂ ಭುಜಗಳು ಉಯ್ಯಾಲೆಯಾಡುತ್ತಿದ್ದ ಹುರಿಗೆ ಆಧಾರವಾಗಿದ್ದವು.

''ಅದೊಂದು ಬಹಳ ದೊಡ್ಡ ವರ್ತುಳ'' ಆತ ಹೇಳಿದ.

''ಆದರೆ ಮೀನು ವರ್ತುಳಾಕಾರವಾಗಿ ಸುತ್ತುತ್ತಿದೆಯಲ್ಲ ಅದು ಮುಖ್ಯ''

ನಂತರ ಆತ ಬಿಗಿ ಬರುವ ತನಕ ಹುರಿಯನ್ನು ಎಳೆದೇ ಎಳೆದ. ಕೊನೆಗೆ ಬಿಗಿತ ಹೆಚ್ಚಾಗಿ ಹುರಿಯಲ್ಲಿಯ ನೀರಿನ ಕಣಗಳು ಹೊರಗೆ ಸಿಡಿದವು. ಮತ್ತೆ ಮೀನು ದೂರ ಸರಿಯತೊಡಗಿದಾಗ ಆತ ಮೊಳಕಾಲೂರಿ ಕುಳಿತು ಕಪ್ಪು ನೀರಲ್ಲಿ ಕೊಸರಿಕೊಂಡು ಹೋಗುತ್ತಿದ್ದ ಹುರಿಯನ್ನು ಸಡಿಲುಬಿಟ್ಟ.

ಮೀನು ನಿಧಾನವಾಗಿ ಸುತ್ತುತ್ತಿತ್ತು. ಆತ ಬೆವರಿನಿಂದ ತೊಯ್ದು ತಪ್ಪಡಿಯಾಗಿದ್ದ. ಎರಡು ತಾಸುಗಳು ಗತಿಸಿದ ಮೇಲೆ ಆತ ತೀರ ದಣಿದು ಹೋಗಿದ್ದರಿಂದ ಎಲುಬುಗಳಲ್ಲಿ ನೋವು ಕಾಣಿಸಿಕೊಂ

ಡಿತ್ತು. ಆದರೆ ಮೀನಿನ ವರ್ತುಳಗಳು ಚಿಕ್ಕವಾಗುತ್ತ ನಡೆದಿದ್ದವು. ಹುರಿಯ ಉದ್ದಳತೆಯ ಮೇಲಿಂದ ಮೀನು ಮೇಲೆರುತ್ತಿದೆ ಎಂಬುದು ಆತನಿಗೆ ಖಾತ್ರಿಯಾಗಿತ್ತು.

ಸುಮಾರು ಒಂದು ತಾಸಿನವರೆಗೆ, ಆತನ ಕಣ್ಣಿಗೆ ಕತ್ತಲು ಕವಿದಂತಾಗಿ, ಕಣ್ಣ ಮುಂದೆ ಕಪ್ಪು ಚುಕ್ಕೆಗಳು ಕುಣಿಯತೊಡಗಿದ್ದವು. ಹಣೆಯ ಬೆವರು ಕಣ್ಣಲ್ಲಿ ಇಳಿದು ಕಣ್ಣುಗಳು ಉರಿಯತೊಡಗಿದ್ದವು. ಕಣ್ಣ ಮೇಲಿನ ಕೊರೆತದ ಗಾಯಕ್ಕೂ ಬೆವರು ಉಪ್ಪು ಸವರತೊಡಗಿತ್ತು.

ಕಣ್ಣಿಗೆ ಕತ್ತಲು ಬರುವುದು ಸಹಜವೇ! ಅದಕ್ಕೆಲ್ಲ ಆತ ಹೆದರಿರಲಿಲ್ಲ. ಎರಡು ಬಾರಿ ತಲೆ ಸುತ್ತಿ ಬೀಳುವಂತಾದಾಗ ಮಾತ್ರ ಆತ ಸ್ವಲ್ಪ ಚಿಂತಿತನಾಗಿದ್ದ.

''ತಾನು ಸೋಲಬಾರದು, ಈ ರೀತಿ ಮೀನಿಗಾಗಿ ಹಂಬಲಿಸಿ ಸಾಯಲೂಬಾರದು'' ಆತ ಅಂದುಕೊಂಡ, ''ಮೀನು ಎಷ್ಟು ಚೆನ್ನಾಗಿ ಮೇಲೇರುತ್ತಿದೆ, ದೇವರೇ, ನಾನು ತಾಳ್ಮೆಗೆಡದಿರಲಿ ನೂರು ಸಲ Our Fathers, Hail Mary ಎಂದು ಹೇಳುವೆ. ಆದರೆ ಸದ್ಯ ಹಾಗೆ ಹೇಳಲಾರೆ. ಅದಕ್ಕಾಗಿ ದೇವರು ನನ್ನನ್ನು ಮನ್ನಿಸಲಿ. ಈ ಹೋರಾಟ ಮುಗಿದ ಮೇಲೆ ನಾನು ಖಂಡಿತ ಪ್ರಾರ್ಥನೆ ಹೇಳುವೆ.''

ಅಷ್ಟರಲ್ಲಿ ಹುರಿಯ ಮೇಲೆ ಥಟ್ಟನೆ ಏನೋ ಅಪ್ಪಳಿಸಿದ ಸದ್ದು. ಆತ ಎರಡೂ ಕೈಗಳಿಂದ ಅದನ್ನು ಗಟ್ಟಿಯಾಗಿ ಹಿಡಿದುಕೊಂಡ. ಆ ಹೊಡೆತವು ಹರಿತವಾಗಿತ್ತು, ಬಿರುಸಾಗಿತ್ತು.

ಮೀನು ಭಲ್ಲೆಯಂಥ ತನ್ನ ಬಾಲದಿಂದ ಹುರಿಯನ್ನು ಹೊಡೆಯುತ್ತಿತ್ತು. ಅದು ಹಾಗೆ ಮಾಡಲೇ ಬೇಕು. ಅದಿನ್ನು ಮೇಲೆ ಜಿಗಿಯಬಹುದು. ಜಿಗಿದರೆ ಅದರ ಕೋಶಗಳಲ್ಲಿ ಗಾಳಿ ತುಂಬಿಕೊಳ್ಳುವುದು ನಿಜವಾದರೂ ಅದರಿಂದ ಕೊಕ್ಕೆಯ ಗಾಯ ಅಗಲವಾಗಿ, ನಂತರ ಹರಿದು ಮೀನು ಪಾರಾಗಬಹುದು. ಮೀನು ಇನ್ನಷ್ಟು ಸುತ್ತು ಹಾಕುತ್ತಿದ್ದರೇ ಒಳಿತೇನೋ!

''ಜಿಗಿಯಬೇಡ, ದಯವಿಟ್ಟು ಜಿಗಿಯಬೇಡ'' ಆತ ಮೀನಿಗೆ ಹೇಳಿದ.

ಮೀನು ಅನೇಕ ಬಾರಿ ಹುರಿಯನ್ನು ಜೋರಾಗಿ ಹೊಡೆಯಿತು. ಅಷ್ಟು ಸಲವೂ ಆತ ಹುರಿಯನ್ನು ಸಡಿಲುಬಿಟ್ಟ.

ಮೀನಿಗೆ ನೋವಾಗುವ ಹಾಗೆ ಜಗ್ಗಿ ಘಾಸಿಗೊಳಿಸಬೇಕು. ಎಷ್ಟೇ ನೋವಾದರೂ ನನಗೆ ಸಹಿಸಿಕೊಳ್ಳುವ ಸಾಮರ್ಥ್ಯವಿದೆ. ಆದರೆ ಮೀನು ಹಾಗಲ್ಲ. ನೋವು ಹೆಚ್ಚಾಗಿ ಅದು ಹುಚ್ಚೆದ್ದು ಬಿಡಬಹುದು.

ಸ್ವಲ್ಪ ಸಮಯದ ನಂತರ ಮೀನು ಶಾಂತವಾಗಿ ಮತ್ತೆ ವರ್ತುಳಾಕಾರವಾಗಿ ಸುತ್ತತೊಡಗಿತು. ಆತ ಒಂದೇ ಸಮನೆ ಹುರಿಯನ್ನು ಎಳೆದುಕೊಳ್ಳತೊಡಗಿದ. ಅವನಿಗೆ ಮತ್ತೆ ತಲೆ ತಿರುಗಿದಂತಾಯಿತು. ಎಡಗೈಯಿಂದ ಸಮುದ್ರದ ನೀರನ್ನು ಮಗುಚಿ ತಲೆಯ ಮೇಲೆ ಹಾಕಿಕೊಂಡ. ನಂತರ ತನ್ನ ಕುತ್ತಿಗೆಯ ಹಿಂಭಾಗವನ್ನು ನೀವಿಕೊಂಡ.

''ತನಗೀಗ ಸೆಡೆತಗಿಡಿತ ಏನೂ ಇಲ್ಲ, ಮೀನು ಇಷ್ಟರಲ್ಲೇ ಮೇಲೆ ಬರಬಹುದು. ತಾನು ಹಿಡಿದ ಕೆಲಸವನ್ನು ಕೊನೆಗಾಣಿಸಲೇಬೇಕು. ಸದ್ಯ ಸೆಡೆತದ ವಿಚಾರವಾಗಿ ಒಂದು ಮಾತನ್ನೂ ಆಡಬಾರದು'' ಆತ ಅಂದುಕೊಂಡ.

ಆತ ಮೊಳಕಾಲೂರಿ ಕುಳಿತು ಹುರಿಯನ್ನು ಮತ್ತೆ ಬೆನ್ನಿಗೇರಿಸಿಕೊಂಡ. ಮೀನು ಆಚೆ ಬದಿಗೆ ಹೋಗಿ ಇತ್ತ ಬರುವವರೆಗೆ ಹಾಯಾಗಿ ಕುಳಿತು, ನಂತರ ಎದ್ದು ನಿಂತು ಮುಂದಿನ ಚಟುವಟಿಕೆಯಲ್ಲಿ ತೊಡಗಬೇಕು ಎಂದೆಲ್ಲ ಆತ ನಿರ್ಧರಿಸಿದ.

ಮೀನು ಒಮ್ಮೆ ತನ್ನ ಮೈ ಸುತ್ತ ಸುತ್ತುತ್ತ ಉರುಳತೊಡಗಿದರೆ ದೊಡ್ಡ ಆಸೆಯೊಂದು ಚಿಗುರಿದಂತೆಯೇ! ಆದರೆ ನೋವೆನಿಸಿದ ಕೂಡಲೇ ಅದು ದೋಣಿಯತ್ತ ಬರತೊಡಗಿತು. ಆತ ಎದ್ದು ನಿಂತು, ನೀರು ಸೇದುವ ಹಾಗೆ ಎರಡೂ ಕೈಗಳಿಂದ ಹುರಿಯನ್ನು ಎಳೆದುಕೊಳ್ಳತೊಡಗಿದ.

ಎಂದಿಗಿಂತಲೂ ಈಗ ತಾನು ತುಂಬ ದಣಿದಿರುವೆ ಎಂದುಕೊಂಡ. ಅಷ್ಟರಲ್ಲಿ ವ್ಯಾಪಾರಿ ಗಾಳಿ

ಬೀಸತೊಡಗಿತ್ತು. ಮೀನನ್ನು ಎಳೆದುಕೊಳ್ಳಲು ಆ ಗಾಳಿ ತುಂಬ ಸಹಾಯಕಾರಿಯಾಗಿತ್ತು. ತನಗೆ ಗಾಳಿಯ ಅವಶ್ಯಕತೆ ಬಹಳವಿದೆ.

ಮೀನು ಇನ್ನೊಂದು ಸುತ್ತು ಹಾಕುವಾಗ ನಾನು ಸ್ವಲ್ಪ ವಿಶ್ರಮಿಸಿಕೊಳ್ಳುವೆ. ತನಗೀಗ ಅಂಥ ತೊಂದರೆಯೇನಿಲ್ಲ. ಎರಡು ಮೂರು ಸುತ್ತು ಹಾಕುವಷ್ಟರಲ್ಲಿ ಮೀನು ತನ್ನ ನಿಯಂತ್ರಣಕ್ಕೊಳಗಾಗ ಬಹುದು.

ಅವನ ಹ್ಯಾಟು ಜರಿದು ಈಗ ಬೆನ್ನ ಮೇಲೆ ಬಂದಿತ್ತು. ಮೀನು ಅತ್ತ ಹೊರಳತೊಡಗಿದಂತೆ ಒತ್ತಡ ಹೆಚ್ಚಾಗಿ ಆತ ಮುದ್ದೆಯಾಗಿ ಕುಳಿತು ಹುರಿಯನ್ನು ಜಗ್ಗಿ ಹಿಡಿದುಕೊಂಡ.

''ನೀನೀಗ ಎಳೆಯಲು ಸಿದ್ಧವಾಗು, ಈ ಕಡೆ ಬಂದು ಹೊರಳುವಷ್ಟರಲ್ಲಿ ನಿನ್ನನ್ನೊಂದು ಕೈ ನೋಡುವೆ'' ಆತ ಮೀನಿಗೆ ಹೇಳಿದ.

ಸಮುದ್ರ ಸಾಕಷ್ಟು ಉಕ್ಕೇರಿತ್ತು. ಕಡಲು ಗಾಳಿ ಆಹ್ಲಾದಕರವಾಗಿತ್ತು. ಮನೆಗೆ ಮರಳಲು ಇಂಥ ಗಾಳಿಯ ಅವಶ್ಯಕತೆಯಿತ್ತು.

''ಈಗ ದೋಣಿಯನ್ನು ನೈಋತ್ಯ ದಿಕ್ಕಿನತ್ತ ತಿರುಗಿಸುವೆ'' ಆತ ಹೇಳಿದ. ''ಆ ದ್ವೀಪ ಸಾಕಷ್ಟು ಉದ್ದವಾಗಿದ್ದರಿಂದ ಯಾರೂ ಸಮುದ್ರದಲ್ಲಿ ಕಳೆದುಕೊಳ್ಳುವ ಪ್ರಮೇಯವೇ ಇಲ್ಲ.''

ಮೂರನೆಯ ಸುತ್ತಿಗೆ ಆತನಿಗೆ ಮೀನು ಕಾಣಿಸಿತು.

ದೋಣಿಯ ಕೆಳಗಿನಿಂದ ನುಸುಳುವಾಗ ಮೀನು ಕಪ್ಪು ನೆಳಲಂತೆ ತೋರಿತು. ಅದು ಅಷ್ಟುದ್ದ ಇರಬಹುದೆಂದು ಆತ ಭಾವಿಸಿರಲಿಲ್ಲ.

''ಇಲ್ಲ, ಅದೇನು ಅಷ್ಟು ದೊಡ್ಡದಾಗಿರಲಿಕ್ಕಿಲ್ಲ'' ಎಂದುಕೊಂಡ.

ಆದರೆ ಅಂದುಕೊಂಡಂತೆ ಅದು ಬಲಾಢ್ಯವಾಗಿತ್ತು. ಕೇವಲ ಮೂವತ್ತು ಗಜ ಅಂತರದಲ್ಲಿ ಅದರ ಬಾಲ ಹೊರ ಬಂದುದನ್ನು ನೋಡಿದ. ದೊಡ್ಡ ಕುಡುಗೋಲಿನ ಅಲಗಿಗಿಂತಲೂ ಅದು ಎತ್ತರವಿತ್ತು. ಕಪ್ಪು ನೀರಿನ ಮೇಲ್ಗಡೆ ಅದು ಬಾಡಿದ ಲ್ಯಾವೆಂಡರ್ ಹೂವಿನಂತೆ ತೋರುತ್ತಿತ್ತು. ಹಿಂದಕ್ಕೂ ಮುಂದಕ್ಕೂ ಚಲಿಸುತ್ತ ಅದು ನೀರ ಪಾತಳಿಯ ಸ್ವಲ್ಪ ಕೆಳಗೆ ಈಜತೊಡಗಿತು. ಅದರ ಬಲಾಢ್ಯ ದೇಹ ಹಾಗೂ ಪಾರ್ಶ್ವ ರೇಖೆಗಳು ಆತನಿಗೆ ಸ್ಪಷ್ಟವಾಗಿ ಕಂಡವು. ಅದರ ಬೆನ್ನ ಮೇಲಿನ ಈಜು ರೆಕ್ಕೆ ಮುಚ್ಚಿಕೊಂಡಿತ್ತಾದರೂ ಮುಂಭಾಗದ ಈಜು ರೆಕ್ಕೆಗಳು ವಿಶಾಲವಾಗಿ ಬಿಚ್ಚಿಕೊಂಡಿದ್ದವು.

ಮೀನಿನ ವರ್ತುಳವೀಗ ಚಿಕ್ಕದಾಗುತ್ತ ಬಂದಿದ್ದರಿಂದ ಅದರ ಕಣ್ಣುಗಳನ್ನು ಹಾಗೂ ಅದರ ಬಳಿಯೇ ಅಡ್ಡಾಡುತ್ತಿದ್ದ ಬೂದು ವರ್ಣದ ಎರಡು ಮೀನುಗಳನ್ನು ನೋಡಬಹುದಾಗಿತ್ತು. ಕೆಲವು ಸಲ ಆ ಎರಡೂ ಮೀನುಗಳು ಪರಸ್ಪರ ಬೆಸೆದುಕೊಳ್ಳುತ್ತಿದ್ದವು. ಕೆಲವು ಸಲ ದೂರವಾಗುತ್ತಿದ್ದವು. ದೊಡ್ಡ ಮೀನಿನ ನೆರಳಲ್ಲಿ ಅವು ನಿರಾತಂಕವಾಗಿ ಓಡಾಡುತ್ತಿದ್ದವು. ಅವು ಮೂರು ಅಡಿಗಳಷ್ಟು ಉದ್ದವಾಗಿದ್ದವು. ಈಲ್ ಮೀನಿನಂತೆ ಮೈ ಹೊರಳಿಸುತ್ತ ಅವು ಈಜುತ್ತಿದ್ದವು.

ಬಿಸಿಲಗಷ್ಟೇ ಅಲ್ಲ, ಆತ ಬೇರಾವುದೋ ಕಾರಣಕ್ಕೆ ಬೆವೆತು ಹೋಗಿದ್ದ. ಪ್ರತಿ ಸುತ್ತಿಗೂ ಮತ್ತಷ್ಟು ಹುರಿ ಆತನ ಕೈ ಸೇರುತ್ತಿತ್ತು. ಬಹುಶಃ ಇನ್ನೆರಡು ಸುತ್ತುಗಳಲ್ಲಿ ಅದನ್ನು *ಹಾರ್ಪೂನಿನಿಂದ ಇರಿಯಬಹುದೆಂದುಕೊಂಡ.

ಆದರೆ ಅದು ಇನ್ನಷ್ಟು ಹತ್ತಿರ, ತೀರ ಹತ್ತಿರ ಬರುವ ತನಕ ಕಾಯಬೇಕು. ಅದರ ತಲೆಗೆ ಇರಿಯುವುದಕ್ಕಿಂತ ಎದೆಗೆ ಇರಿದರೇ ಒಳಿತು.

''ವೃದ್ಧನೇ, ದೃಢ ಚಿತ್ತನಾಗಿರು, ಶಾಂತವಾಗಿರು'' ಆತ ತನ್ನಷ್ಟಕ್ಕೇ ಹೇಳಿಕೊಂಡ.

---

* ಹಾರ್ಪೂನ - ಮೀನನ್ನು ಇಕ್ಕಲು ಉಪಯೋಗಿಸುವ ಸಾಧನ.

ಮತ್ತೊಂದು ಸುತ್ತು ಹಾಕುವಾಗ ಮೀನಿನ ಬೆನ್ನು ಗೋಚರಿಸಿತು. ಆದರೆ ದೋಣಿಯಿಂದ ಅದು ಸ್ವಲ್ಪ ದೂರದಲ್ಲಿತ್ತು. ಮುಂದಿನ ಸುತ್ತಿಗೆ ಅದು ಮೇಲಕ್ಕೇ ಬಂದಿತ್ತಾದರೂ ನಿಲುಕುವಂತಿರಲಿಲ್ಲ. ಸಾವಕಾಶವಾಗಿ ಎಳೆದು ಅದನ್ನು ದೋಣಿಯ ಬದಿಗೆ ತರಬಹುದೆಂದುಕೊಂಡ.

ಆತ ಹಾರ್ಪೂನಿನ ಒಂದು ತುದಿಗೆ ಹಗ್ಗ ಕಟ್ಟಿದ್ದ. ಅದನ್ನು ಸುತ್ತಿ ಬುಟ್ಟಿಯಲ್ಲಿಟ್ಟಿದ್ದ. ಅದರ ಒಂದು ತುದಿಯಿಂದ ದೋಣಿಯ ಹಲಗೆಯ ರಂಧ್ರದಲ್ಲಿ ಪೋಣಿಸಿ ಕಟ್ಟಿದ್ದ.

ಮೀನು ವರ್ತುಳಾಕಾರವಾಗಿ ಸುತ್ತ ಹಾಕಿ ಸಮೀಪಕ್ಕೆ ಬರತೊಡಗಿತ್ತು. ಅದರ ಮುಖದ ಮೇಲೆ ಶಾಂತ ಕಳೆಯಿತ್ತು. ಅದೀಗ ಬಹಳ ಚೆಂದವಾಗಿ ತೋರುತ್ತಿತ್ತು. ಅದರ ಬಾಲ ಮಾತ್ರ ಅತ್ತಿತ್ತ ಹೊಯ್ದಾಡುತ್ತಿತ್ತು. ಆತ ಅದನ್ನು ಸಮೀಪಕ್ಕೆ ಎಳೆದುಕೊಳ್ಳತೊಡಗಿದ. ಒಂದು ಕ್ಷಣ ಮೀನು ಅತ್ತ ಹೊರಳಿದಂತೆ ಮಾಡಿ ಮತ್ತೆ ಸುತ್ತು ಹಾಕತೊಡಗಿತು.

''ತಾನು ಅದನ್ನು ವಿಚಲಿತಗೊಳಿಸಿದೆ'' ಆತ ಅಂದುಕೊಂಡ.

ಆತನಿಗೆ ಮತ್ತೆ ತಲೆ ಸುತ್ತಿದಂತಾಗಿ ಹುರಿಯನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದ. ತಾನು ಅದನ್ನು ವಿಚಲಿತಗೊಳಿಸಿರುವೆ. ಬಹುಶಃ ಈ ಬಾರಿ ಅದನ್ನು ಎಳೆದು ಸಮೀಪಕ್ಕೆ ತರುವೆ. ಕೈಗಳೇ ಎಳೆದುಕೊಳ್ಳಿರಿ. ಕಾಲುಗಳೇ ಭದ್ರವಾಗಿ ನಿಂತುಕೊಳ್ಳಿರಿ, ತಲೆಯೇ ಸಿಡಿಯಬೇಡ, ಕೊನೆಯವರೆಗೆ ಸ್ವಲ್ಪ ತಾಳಿಕೋ.

ಈ ಬಾರಿ ಅದನ್ನು ಎಳೆದೇ ತೀರುವೆ. ತನ್ನೆಲ್ಲ ಶಕ್ತಿಯನ್ನೂ ಉಪಯೋಗಿಸಿ ಆತ ಎಳೆಯುತ್ತಿದ್ದಂತೆ ಮೀನು ದೋಣಿಯ ಬದಿಗೆ ಬಂದು ಮತ್ತೆ ಬಲಕ್ಕೆ ತಿರುಗಿ ಹೊರಟುಹೋಯಿತು.

''ಏನಿದ್ದರೂ ನೀನು ಸಾಯಲೇಬೇಕು'' ಆತ ಅಂದುಕೊಂಡ. ''ನಿನಗೂ ನನ್ನನ್ನು ಕೊಲ್ಲಬೇಕಾಗಿದೆಯೆ?'' ನಂತರ ಮೀನನ್ನು ಉದ್ದೇಶಿಸಿ ಕೇಳಿದ.

ಹಾಗೆ ನೋಡಿದರೆ ಇದುವರೆಗೆ ಏನನ್ನೂ ಸಾಧಿಸಲಾಗಿಲ್ಲವೆಂದುಕೊಂಡ. ಆತನ ಬಾಯಿ ಒಣಗಿ ಹೋಗಿತ್ತು. ಈಗ ಆತನಿಗೆ ಕುಡಿಯುವ ನೀರು ಕೈಗೆಟಕುತ್ತಿರಲಿಲ್ಲ. ಈ ಬಾರಿ ಮೀನನ್ನು ದೋಣಿಯ ಬದಿಗೆ ಎಳೆದು ತರಲೇಬೇಕೆಂದುಕೊಂಡ. ನನ್ನ ಬಳಿ ಬಹಳಷ್ಟು ಶಕ್ತಿ ಉಳಿದಿಲ್ಲ. ಆದರೆ ನೀನು ಮಾತ್ರ ಸಬಲವಾಗಿಯೇ ಇರುವೆ.

ಮುಂದಿನ ಸುತ್ತಿನಲ್ಲಿ ಇನ್ನೇನು ಇಕ್ಕಬೇಕು ಎನ್ನುವಷ್ಟರಲ್ಲಿ ಮೀನು ಮತ್ತೆ ಬಲಕ್ಕೆ ಹೊರಳಿ ದೂರ ಹೊರಟುಹೋಯಿತು.

''ನೀನು ನನ್ನನ್ನು ಕೊಲ್ಲುತ್ತಿರುವೆ'' ಆತ ಮೀನಿಗೆ ಹೇಳಿದ. ನಿನಗೆ ಆ ಅಧಿಕಾರವಿದೆ. ಸೋದರನೇ, ನಿನಗಿಂತ ಬಲಾಢ್ಯವಾದ, ಸುಂದರವಾದ, ಪ್ರಶಾಂತವಾದ, ಉದಾತ್ತವಾದ ಜೀವಿಯನ್ನು ನಾನು ಈ ಮೊದಲೆಂದೂ ಕಂಡಿಲ್ಲ. ಬಾ, ನನ್ನನ್ನು ಕೊಲ್ಲು. ಯಾರು ಯಾರನ್ನು ಕೊಲ್ಲುತ್ತಾರೋ ಆ ಪರಿವೆ ನನಗಿಲ್ಲ.

ಈಗ ನಿನ್ನ ತಲೆ ಗೊಂದಲದಿಂದ ತುಂಬಿಕೊಂಡಿದೆ. ಮೊದಲು ಆ ಎಲ್ಲ ಗೊಂದಲದಿಂದ ಮುಕ್ತನಾಗು. ಅನಂತರ ನಿಜವಾದ ಮಾನವನಂತೆ ಅಥವಾ ಮೀನಿನಂತೆ ಕಷ್ಟ ಅನುಭವಿಸುವುದನ್ನು ಕಲಿತುಕೊ.

''ಎಲ್ಲ ಗೊಂದಲಗಳನ್ನು ತಲೆಯಿಂದ ಹೊರ ಹಾಕು'' ಆತ ತನಗೇ ಕೇಳಿಸದಷ್ಟು ಇಳಿ ದನಿಯಲ್ಲಿ ಹೇಳಿದ. ''ಸದ್ಯ ನಿರ್ಮಲ ಚಿತ್ತನಾಗಿರು.''

ಮತ್ತೆರಡು ಸಲ ಅದೇ ರೀತಿ ಮೀನು ಸುತ್ತು ಹಾಕಿತು. ಪ್ರತಿ ಬಾರಿಯೂ ಅದನ್ನು ಇರಿಯಲು ಆತ ಪ್ರಯತ್ನಿಸಿದ. ಆದರೆ ನಿರ್ಧಾರ ಬದಲಿಸಿ ಹಾಗೇ ಕುಳಿತ. ಅದರ ಇನ್ನೊಮ್ಮೆ ಪ್ರಯತ್ನಿಸುವೆ.

ಮುಂದಿನ ಸಲವೂ ಮೀನು ಬಲಕ್ಕೆ ಹೊರಳುತ್ತಿದ್ದಂತೆ ಆತ ಇಕ್ಕಲು ಹೋಗಿ, ತಾನು ಅದರ ಜೊತೆಗೇ ಹೋದಂತೆ ಆತನಿಗೆ ಭಾಸವಾಯಿತು. ತನ್ನ ಬೃಹದಾಕಾರವಾದ ಬಾಲವನ್ನು ಅತ್ತಿತ್ತ ಹೊರಳಾಡಿಸುತ್ತ

ಮೀನು ಮತ್ತೆ ದೂರ ಸರಿಯಿತು.

ನಾನು ಮತ್ತೆ ಪ್ರಯತ್ನಿಸುವೆ. ಆತ ವಚನವೀಯುವ ಧಾಟಿಯಲ್ಲಿ ಹೇಳಿದ. ಆತನ ಕೈಗಳೀಗ ಮೆತ್ತಗಾಗಿದ್ದವು. ಕಣ್ಣುಗಳೂ ಮಂಜು ಮಂಜಾಗಿದ್ದವು.

ಆತ ಮತ್ತೆ ಪ್ರಯತ್ನಿಸಿದನಾದರೂ ಪ್ರಯೋಜನವಾಗಲಿಲ್ಲ. ಮೀನು ಹೊರಳುವ ಮೊದಲೇ ಆತ ಏಟು ಹಾಕುತ್ತಿದ್ದ. ಏನೇ ಆಗಲಿ ನಾನು ಪ್ರಯತ್ನವನ್ನು ಕೈ ಬಿಡುವುದಿಲ್ಲ.

ಆತ ತನ್ನೆಲ್ಲ ನೋವನ್ನು ಹತ್ತಿಕ್ಕಿ, ಶಕ್ತಿ ಹಾಗೂ ಸ್ವಾಭಿಮಾನವನ್ನು ಒಗ್ಗೂಡಿಸಿಕೊಂಡು ಮೀನಿನ ಎದುರು ಸಜ್ಜಾಗಿ ನಿಂತ. ಮೀನು ಆತನ ಬದಿಗೆ ಈಜುತ್ತ ಬಂತು. ಅದರ ಕೋರೆ ಹಲ್ಲುಗಳು ದೋಣಿಗೆ ತಾಕಿದರೂ ತಾಕಿರಬಹುದು. ಬೆಳ್ಳಿಯ ಹಾಗೂ ನೇರಿಳೆ ವರ್ಣದ ಪಟ್ಟೆಗಳುಳ್ಳ, ಉದ್ದವಾದ, ಅಗಲವಾದ, ಗಂಭೀರವಾದ ಆ ಜೀವಿ ನೀರಲ್ಲಿ ಅಲೆದು ಬೇಸತ್ತು ದೋಣಿಯನ್ನು ದಾಟಿ ಹೋಗಲು ಮೊದಲು ಮಾಡಿತು.

ಸಾಂಟಿಯಾಗೊ ಹುರಿಯನ್ನು ಕೆಳಗೆಸೆದು, ಅದರ ಮೇಲೆ ಪಾದವನ್ನಿಟ್ಟು, ತನಗೆಷ್ಟು ಸಾಧ್ಯವೋ ಅಷ್ಟು ಎತ್ತರಕ್ಕೆ ಕೈ ಎತ್ತಿ, ತನ್ನೆಲ್ಲ ಶಕ್ತಿಯನ್ನು ಒಗ್ಗೂಡಿಸಿ ಹಾರ್ಪೂನಿನಿಂದ ಬಲವಾಗಿ ಇಕ್ಕುವುದಕ್ಕೂ ಮೀನು ಎದೆ ಎತ್ತರಕ್ಕೆ ಹೊರಗೆ ಚಿಮ್ಮುವುದಕ್ಕೂ ಸರಿ ಹೋಯಿತು. ಹಾರ್ಪೂನು ಮೀನಿನ ದೇಹದೊಳಗೆ ಹೊಕ್ಕಿತ್ತು. ಆತ ಮುಂದೆ ಬಾಗಿ ಅದನ್ನು ಹೊರಗೆಳೆದುಕೊಂಡು, ಭಾರ ಹಾಕಿ ಮತ್ತೆ ತಿವಿದ.

ಮೀನು ಚಡಪಡಿಸುತ್ತ ತನ್ನೆತ್ತರಕ್ಕೆ ಗಾಳಿಯಲ್ಲಿ ಚಿಮ್ಮಿ ಸುಂದರವಾಗಿದ್ದ ತನ್ನ ಬಲಾಢ್ಯ ದೇಹವನ್ನು ಹಾಗೂ ಶಕ್ತಿಯನ್ನು ಪ್ರದರ್ಶಿಸಿತು. ಆಗ ಅದನ್ನು ಗಾಳಿಯಲ್ಲಿ ನೇತು ಹಾಕಿದಂತೆ ತೋರಿತು. ನಂತರ ಅದು ನೀರಿಗಪ್ಪಳಿಸುವಾಗ ದೋಣಿಯ ತುಂಬೆಲ್ಲ ನೀರು ಚಿಮ್ಮಿ ಆತನೂ ಒದ್ದೆಯಾದ.

ತಲೆ ಸುತ್ತಿದಂತಾಗಿ ಸಾಂಟಿಯಾಗೊ ನಿಶ್ಶಕ್ತನಾಗಿದ್ದ. ಆತನ ಕಣ್ಣು ಕೂಡ ಈಗ ಸರಿಯಾಗಿ ಕಾಣುತ್ತಿರಲಿಲ್ಲ. ಆತ ಹಾರ್ಪೂನಿಗೆ ಕಟ್ಟಿದ್ದ ಹಗ್ಗದ ತೊಡಕು ಬಿಡಿಸಿದ. ಸ್ವಲ್ಪ ಕಣ್ಣು ಕಾಣಿಸತೊಡಗಿದಾಗ ಮೀನು ತನ್ನ ಬೆಳ್ಳಿ ವರ್ಣದ ಹೊಟ್ಟೆಯನ್ನು ಮೇಲೆ ಮಾಡಿ ಬಿದ್ದುಕೊಂಡಿತ್ತು. ಹಾರ್ಪೂನಿನ ತುದಿ ಮೀನಿನ ದೇಹ ಹೊಕ್ಕು ಅದರ ಭುಜದಲ್ಲಿ ಪಾರಾಗಿತ್ತು. ಅದರ ಎದೆಯ ರಕ್ತ ಸಮುದ್ರದಲ್ಲಿ ಚೆಲ್ಲಿ ವರ್ಣಮಯವಾಗಿತ್ತು. ಒಂದು ಮೈಲಿನಷ್ಟು ಆಳವಾದ ನೀಲಿವರ್ಣದ ನೀರಲ್ಲಿ ಆ ರಕ್ತ ಮೊದಲು ಕಪ್ಪಾಗಿ ತೋರಿತು. ನಂತರ ಮೋಡದಂತೆ ಚದುರಿತು. ನಿಶ್ಚಲವಾಗಿದ್ದ ಬೆಳ್ಳಿವರ್ಣದ ಆ ಮೀನು ಅಲೆಗಳ ಮೇಲೆ ತೇಲುತ್ತಿತ್ತು.

ಕಣ್ಣು ಮಂಜಾಗಿದ್ದರೂ ಉಳಿದಷ್ಟೇ ದೃಷ್ಟಿಯಿಂದ, ತುಂಬ ಎಚ್ಚರದಿಂದ ಆತ ನಿಗಾ ಇರಿಸಿದ್ದ. ಹಾರ್ಪೂನಿಗೆ ಕಟ್ಟಿದ ಹಗ್ಗವನ್ನು ದೋಣಿಯ ಗೂಟಕ್ಕೆ ಎರಡು ಸುತ್ತು ಹಾಕಿ ಕಟ್ಟಿ ತನ್ನ ಎರಡೂ ಕೈಗಳ ಮೇಲೆ ತಲೆಯಿರಿಸಿ ಕುಳಿತ.

''ನನ್ನ ತಲೆ ಯೋಚನೆಗಳಿಂದ ಮುಕ್ತವಾಗಲಿ'' ಆತ ದೋಣಿಯ ಅಡ್ಡಮಣೆಗೆ ಒರಗಿ ಕುಳಿತು ಹೇಳಿದ. ''ತುಂಬ ದಣಿದ ವೃದ್ಧ ನಾನು. ನನ್ನ ಸೋದರನಂತಿದ್ದ ಮೀನನ್ನು ಈಗ ತಾನೇ ಕೊಂದಿರುವೆ. ಇನ್ನು ಉಳಿದದ್ದು ಹೊತ್ತೊಯ್ಯುವ ಹಮಾಲಿ ಕೆಲಸ ಮಾತ್ರ.''

ಸದ್ಯ ನಾನು ಹಗ್ಗದ ನೇಣುಗಳನ್ನು ಸಿದ್ಧಪಡಿಸಿ ಮೀನನ್ನು ಬದಿಗೆಳೆದುಕೊಂಡು ಏಟು ಹಾಕಬೇಕು. ನಾವು ಇಬ್ಬರಿಬ್ಬರೂ ಈ ಮೀನನ್ನು ದೋಣಿಯೊಳಗೆ ಹೇರಲು ಸಾಧ್ಯವಿರಲಿಲ್ಲ. ಅಲ್ಲದೆ ದೋಣಿ ಅದರ ಭಾರವನ್ನು ತಾಳಲಾರದು. ಸದ್ಯ ಎಲ್ಲವನ್ನೂ ಸಜ್ಜುಗೊಳಿಸಿ, ಮೀನನ್ನು ಎಳೆದು, ಚೆನ್ನಾಗಿ ಏಟು ಹಾಕಿ ಹಾಯಿ ಕಂಬವನ್ನು ನಿಲ್ಲಿಸಿ ಅದಕ್ಕೆ ಪಟ ಕಟ್ಟಿ ಮನೆಯ ಕಡೆ ಪ್ರಯಾಣ ಬೆಳೆಸಬೇಕು.

ಹೀಗೆಂದುಕೊಳ್ಳುತ್ತ ಆತ ಮೀನಿನ ಬಾಯಿ ಹಾಗೂ ಕಿವಿರುಗಳ ಮೂಲಕ ಹುರಿಯನ್ನು ಪೋಣಿಸಿ ದೋಣಿಯ ಬದಿಗೆ ಕಟ್ಟಲೆಂದು ಅದನ್ನು ಎಳೆದುಕೊಂಡ. ನಾನು ಅದನ್ನು ಕಣ್ತುಂಬ ನೋಡಬೇಕು,

ಸ್ಪರ್ಶಿಸಬೇಕು, ಅನುಭವಿಸಬೇಕು. ಅದು ತನ್ನ ಸೌಭಾಗ್ಯ.

ಅವನನ್ನು ಸ್ಪರ್ಶಿಸಬೇಕೆಂಬ ತನ್ನ ಬಯಕೆಗೆ ಕಾರಣ ಬೇರೆಯೇ ಇದೆ. ಎರಡನೇ ಬಾರಿ ಹಾರ್ಪೂನಿನಿಂದ ಮೀನನ್ನು ಇರಿವಾಗ ಅದರ ಹೃದಯದ ಯಾತನೆಗಳನ್ನು ತಾನು ಕೂಡ ಅನುಭವಿಸಿದ್ದೇನೆ. ಇದೀಗ ಅದರ ಬಾಲಕ್ಕೆ ನೇಣು ಹಾಕಿ ಅದರ ಹೊಟ್ಟೆಗೆ ಹಗ್ಗ ಬಿಗಿದು ದೋಣಿಗೆ ಕಟ್ಟಬೇಕು.

''ವೃದ್ಧನೇ, ಮುಂದಿನ ಕಾರ್ಯಕ್ಕಾಗಿ ಸಿದ್ಧವಾಗು'' ಆತ ತನ್ನಷ್ಟಕ್ಕೇ ಹೇಳಿಕೊಂಡ. ನಂತರ ಸ್ವಲ್ಪ ನೀರನ್ನು ಕುಡಿದ. ಹೋರಾಟ ಕೊನೆಗೊಂಡಿತ್ತು. ಆತನೆದುರು ಈಗ ಗುಲಾಮಗಿರಿ ಕೆಲಸ ಕಾದಿತ್ತು.

ಆಕಾಶದತ್ತ ದೃಷ್ಟಿ ಹಾಯಿಸಿ ನಂತರ ಮೀನಿನತ್ತ ನೋಡಿದ. ಸೂರ್ಯ ನೆತ್ತಿಯ ಮೇಲಿದ್ದ. ಮಧ್ಯಾಹ್ನ ದಾಟಿಲ್ಲ ಎಂದುಕೊಂಡ. ವ್ಯಾಪಾರಿ ಗಾಳಿ ಬೀಸತೊಡಗಿತ್ತು. ಸದ್ಯ ಗಾಳದ ಹುರಿಗಳ ಬಗ್ಗೆ ಯೋಚಿಸುವ ಕಾರಣವಿರಲಿಲ್ಲ. ಮನೆಗೆ ಮರಳಿದ ಮೇಲೆ ಹುಡುಗ ಹಾಗೂ ತಾನು ಜೊತೆಗೂಡಿ ಅವುಗಳನ್ನು ಹೊಸೆದರಾಯಿತು, ಎಂದುಕೊಂಡ.

''ಬಾ, ನನ್ನ ಬಳಿಗೆ ಬಾ'' ಆತ ಮೀನನ್ನು ಉದ್ದೇಶಿಸಿ ಹೇಳಿದ. ಆದರೆ ಮೀನು ಕದಲಲಿಲ್ಲ. ಅದು ಸಮುದ್ರದಲ್ಲಿ ತೇಲುತ್ತ ಮುಳುಗುತ್ತ ಬಿದ್ದುಕೊಂಡಿತ್ತು. ಆತ ದೋಣಿಯನ್ನು ಅದರ ಬಳಿಗೆ ಕೊಂಡೊಯ್ದ.

ಮೀನು ಇಷ್ಟು ಹತ್ತಿರವಾಗಿದ್ದರೂ ಅದರ ಗಾತ್ರದ ಬಗ್ಗೆ ಆತನಿಗೆ ನಂಬಿಗೆ ಹುಟ್ಟಿರಲಿಲ್ಲ. ಹಾರ್ಪೂನಿನ ಹುರಿಯನ್ನು ಬಿಚ್ಚಿ ಅದನ್ನು ಮೀನಿನ ಕಿವಿರುಗಳ ಮೂಲಕ ಬಾಯಿಯೊಳಗೆ ಪೋಣಿಸಿ, ಅದರ ಕೋರೆ ಹಲ್ಲುಗಳಿಗೆ ಒಂದು ಸುತ್ತು ಹಾಕಿ, ಇನ್ನೊಂದು ಬದಿಯ ಕಿವಿರು ಹಾಗೂ ದವಡೆಗಳ ಮೂಲಕ ಪೋಣಿಸಿ ಅದರ ಮೂತಿಗೆ ಗಂಟು ಹಾಕಿದ. ನಂತರ ಅದನ್ನೆಳೆದು ದೋಣಿಯ ಬದಿಗೆ ಬಿಗಿಯಾಗಿ ಕಟ್ಟಿದ. ಇನ್ನಷ್ಟು ಹಗ್ಗವನ್ನು ಕತ್ತರಿಸಿ ಅದರ ಬಾಲಕ್ಕೆ ನೇಣು ಬಿಗಿದು ದೋಣಿಯ ಹಿಂಭಾಗಕ್ಕೆ ಕಟ್ಟಿದ. ಮೀನು ಈ ಮೊದಲಿನ ಬೆಳ್ಳಿ ಹಾಗೂ ನೇರಿಳೆ ವರ್ಣದ ಬದಲು ಈಗ ಬರೀ ಬೆಳ್ಳಿ ವರ್ಣವಾಗಿ ತೋರಿತು. ಅದರ ಪಾರ್ಶ್ವ ರೇಖೆಗಳು ಹಾಗೂ ಬಾಲ ಮಂದ ನೇರಿಳೆ ವರ್ಣಕ್ಕೆ ತಿರುಗಿದ್ದವು. ಅವು ಅಂಗೈಗಿಂತ ಅಗಲವಾಗಿದ್ದವು. ಅದರ ಕಣ್ಣುಗಳು ಪೆರಿಸ್ಕೋಪದ ಗಾಜುಗಳಂತೆ ಅಥವಾ ಮೆರವಣಿಗೆಯಲ್ಲಿ ಹೊರಟ ಋಷಿಯ ದೃಷ್ಟಿಯಂತೆ ತೋರಿದವು.



''ಅದನ್ನು ಕೊಲ್ಲಲು ಇದಕ್ಕಿಂತ ಬೇರ ಉಪಾಯಗಳೇ ಇರಲಿಲ್ಲ'' ಆತನೆಂದುಕೊಂಡ. ಆತ ಈಗ ಸ್ಪಷ್ಟನಾಗಿದ್ದ. ಗಾತ್ರವನ್ನು ಪರಿಗಣಿಸಿದರೆ ಅದರ ತೂಕ ಪದಿನೈದು ನೂರು ಪೌಂಡುಗಳಿಗಿಂತ ಕಡಿಮೆ ಇರಲಿಕ್ಕಿಲ್ಲ. ಸ್ವಲ್ಪ ಹೆಚ್ಚೇ ಇದ್ದೀತು! ಮೂವತ್ತು ಸೆಂಟುಗಳಿಗೆ ಒಂದು ಪೌಂಡದಂತೆ ಅದರ ಎರಡು ಮೂರಾಂಶ ಭಾಗದ ಬೆಲೆ ಎಷ್ಟಾದೀತು!

''ಅದನ್ನು ಲೆಕ್ಕ ಹಾಕಲು ಪೆನ್ಸಿಲ್ಲು ಬೇಕು. ನನ್ನ ತಲೆ ಈಗ ಅಷ್ಟು ಸರಿಯಿಲ್ಲ. ಈ ದಿನ ಮಹಾನ್ ಆಟಗಾರ ಡಿಮ್ಯಾಗಿಯೊ ನನ್ನ ಬಗ್ಗೆ ಅಭಿಮಾನ ಪಡಬಹುದು. ನನ್ನ ಪಾದದ ಮೂಳೆ ಸರಿದಿಲ್ಲವಾದರೂ ಕೈಗಳಲ್ಲಿ ಹಾಗೂ ಬೆನ್ನಲ್ಲಿ ತುಂಬ ನೋವು ಇದೆ'' ಮೂಳೆ ಸರಿತದ ನೋವು ಹೇಗಿರಬಹುದೋ ಏನೋ. ಬಹುಶಃ ನಮಗೆ ಗೊತ್ತಾಗದಂತೆ ನಾವು ಅಂಥ ನೋವನ್ನು ಅನುಭವಿಸುತ್ತಿರಬೇಕು.''

ಆತ ಮೀನಿನ ತಲೆ, ಮಧ್ಯ ಭಾಗ ಹಾಗೂ ಬಾಲವನ್ನು ಭದ್ರವಾಗಿ ಬಿಗಿದು ದೋಣಿಗೆ ಕಟ್ಟಿದ. ಅದು ಎಷ್ಟು ದೊಡ್ಡದಾಗಿತ್ತೆಂದರೆ ದೋಣಿಯ ಬದಿಗೆ ಮತ್ತೊಂದು ದೊಡ್ಡ ದೋಣಿಯನ್ನು ತಳಕು ಹಾಕಿದಂತಿತ್ತು. ಆತ ಇನ್ನಷ್ಟು ಹುರಿಯನ್ನು ಕತ್ತರಿಸಿ, ಅದರ ಬಾಯಿ ತೆರೆಯದಂತೆ ಮೀನಿನ ಕೆಳದವಡೆಯನ್ನು ಎತ್ತಿ ಅದರ ಮೂತಿಗೆ ಕಟ್ಟಿದ. ದೋಣಿ ಸಲೀಸಾಗಿ ಚಲಿಸಲು ಅಡ್ಡಿಯಾಗಬಾರದೆಂದು ಹಾಗೆ ಮಾಡಿದ. ನಂತರ ಹಾಯಿ ಕಂಬವನ್ನು ನಿಲ್ಲಿಸಿ ಅದಕ್ಕೆ ಹಾಯಿ ಪಟ ಕಟ್ಟಿದೊಡನೆ ದೋಣಿ ಚಲಿಸತೊಡಗಿತು. ಆತ ದೋಣಿಯ ಪಕ್ಕಕ್ಕೆ ಅತು ವಿಶ್ರಮಿಸಿದ. ಅದು ನೈಋುತ್ಯ ದಿಕ್ಕಿನತ್ತ ಸಾಗಿತು.

ನೈಋುತ್ಯ ದಿಕ್ಕನ್ನು ತಿಳಿಯಲು ಆತನಿಗೆ ಕಂಪಾಸು ಬೇಕಿರಲಿಲ್ಲ. ಬೀಸುವ ವ್ಯಾಪಾರಿ ಗಾಳಿಗೆ ಹಾಯಿ ಪಟ ಹೊಯ್ದಾಡುವುದನ್ನು ಅನುಲಕ್ಷಿಸಿ ಆತ ದಿಕ್ಕನ್ನು ಅರಿತುಕೊಳ್ಳಬಲ್ಲ. ಸದ್ಯ ಚಿಕ್ಕ ಗಾಳಕ್ಕೆ ಚಮಚೆ ಕಟ್ಟಿ (Spoon bait) ನೀರಿಗೆಸೆದು ತಿನ್ನಲು-ಕುಡಿಯಲು ಏನಾದರೂ ದೊರಕಿಸಿಕೊಳ್ಳಬೇಕು. ಆದರೆ ಆತನ ಬಳಿ ಚಮಚವಿರಲಿಲ್ಲ. ಹಾಗೂ ಸಾರ್ಡೈನುಗಳು ಕೊಳೆತಿದ್ದವು. ಅದಕ್ಕಾಗಿ ಆತ ಗಲ್ಫ ಬಳ್ಳಿಯನ್ನು ಕೊಕ್ಕೆ ಹಾಕಿ ಎಳೆದುಕೊಂಡು ದೋಣಿಯ ಹಲಗೆಯ ಮೇಲೆ ಝಾಡಿಸಿದ. ಅದರೊಳಗಿದ್ದ ಒಂದು ಡಝನ್ನಿನಷ್ಟು ತಂತು ಮೀನುಗಳು (ಜಿಂಗೀ ಮೀನುಗಳು) ಕೆಳಗೆ ಬಿದ್ದು ಒದ್ದಾಡತೊಡಗಿದವು, ಆತ ಅವುಗಳ ತಲೆ ಕತ್ತರಿಸಿ, ತನ್ನ ತೋರು ಬೆರಳು ಹಾಗೂ ಹೆಬ್ಬೆರಳಿನಿಂದ ಹಿಡಿದು ಒಂದೊಂದಾಗಿ ತಿನ್ನತೊಡಗಿದ. ಅವು ಬಹಳ ಚಿಕ್ಕವು. ಆದರೆ ಪಚನಕ್ಕೆ ಹಿತಕರ ಹಾಗೂ ರುಚಿಯಾಗಿದ್ದವು.

ಬಾಟಲಿಯೊಳಗೆ ಇನ್ನೂ ಎರಡು ಗುಟುಕು ನೀರಿತ್ತು. ಅವುಗಳನ್ನು ತಿಂದಾದ ಮೇಲೆ ಆತ ಒಂದು ಗುಟುಕು ನೀರು ಕುಡಿದ. ಭಾರ ಹೆಚ್ಚಿದ್ದರೂ ದೋಣಿ ಸರಾಗವಾಗಿ ಸಾಗಿತ್ತು. ಆತ ತನ್ನ ಕಂಕುಳಲ್ಲಿ ಅಮುಕಿ ಹಿಡಿದಿದ್ದ ಚುಕ್ಕಾಣಿಯನ್ನು ತಿರುಗಿಸಿದ.

ಆತ ಕಣ್ಣೆದುರಿಗಿದ್ದ ಮೀನನ್ನು ಮತ್ತೆ ಮತ್ತೆ ನೋಡಿದ. ಇದೆಲ್ಲ ಬರೀ ಕನಸೋ ಅಥವಾ ವಾಸ್ತವವೋ ಎಂದರಿತುಕೊಳ್ಳಲು ಆತ ತನ್ನ ಕೈಗಳನ್ನು ಹಾಗೂ ಬೆನ್ನನ್ನು ಮುಟ್ಟಿ ನೋಡಿಕೊಂಡ. ಹೋರಾಟದ ಕೊನೆಯ ಗಳಿಗೆಯಲ್ಲಿ ಆತ ತುಂಬ ಅಸ್ವಸ್ಥನಾಗಿದ್ದ. ಒಂದು ಕ್ಷಣ ಅವನಿಗೆಲ್ಲವೂ ಭ್ರಮೆಯಂತೆ ತೋರಿತ್ತು.

ಮೀನು ನೀರಿನಿಂದ ಹೊರಗೆ ನೆಗೆದು ಗಾಳಿಯಲ್ಲಿ ನೇತಾಡುತ್ತಿದ್ದ ಆ ಗಳಿಗೆಯಲ್ಲಿ ಅದ್ಭುತವಾದುದೇನೋ ಘಟಿಸಲಿದೆ ಎನಿಸಿತ್ತು. ಆದರೆ ಆತನಿಗೆ ನಂಬಿಕೆಯಾಗಿರಲಿಲ್ಲ. ಆಗ ಆತನ ಕಣ್ಣಿಗೆ ಮಂಜು ಕವಿದು ಏನೂ ಕಾಣುತ್ತಿರಲಿಲ್ಲ. ಸದ್ಯ ಎಂದಿನಂತೆ ಆತನ ಕಣ್ಣುಗಳು ಕಾಣಿಸುತ್ತಿವೆ.

ಮೀನು ಆತನೆದುರಿಗಿತ್ತು. ತನ್ನ ಕೈಗಳು ಹಾಗೂ ಬೆನ್ನು ಇವು ಬರೀ ಭ್ರಮೆಯಲ್ಲ ಎಂಬ ಅರಿವು ಆತನಿಗಾಯಿತು. ಕೈಗಳು ಬೇಗ ಗುಣವಾಗುತ್ತವೆ ಎಂದುಕೊಂಡ. ಮಲಿನ ರಕ್ತವನ್ನು ಹೊರ ಹಾಕಿ ಗಾಯವನ್ನು ಚೆನ್ನಾಗಿ ತೊಳೆದಿರುವೆ. ಅಲ್ಲದೆ ಗಲ್ಫ ಸಮುದ್ರದ ಉಪ್ಪು ನೀರಿಗೆ ಗಾಯ ನಿವಾರಕ ಶಕ್ತಿಯಿದೆ. ಸದ್ಯ ತಾನು ನಿರ್ಮಲ ಚಿತ್ತನಾಗಿರುವುದು ಮುಖ್ಯ. ಕೈಗಳು ತಮ್ಮ ಕರ್ತವ್ಯವನ್ನು

ಚೆನ್ನಾಗಿಯೇ ನಿಭಾಯಿಸಿದವು. ಅಲ್ಲದೆ ನಾವು ಸರಾಗವಾಗಿ ಸಾಗುತ್ತಿದ್ದೇವೆ. ನಿಡಿದಾಗಿ ಚಾಚಿದ ಬಾಲವಿರುವ ಮೀನು ಹಾಗೂ ತಾನು ಪರಸ್ಪರ ಸೋದರರಂತೆ ಪಯಣಿಸುತ್ತಿದ್ದೇವೆ. ಮತ್ತೆ ಆತ ಸ್ವಲ್ಪ ಗಲಿಬಿಲಿಗೊಂಡ. ತಾನು ಮೀನನ್ನು ಕೊಂಡೊಯ್ಯುತ್ತಿರುವೆನೊ ಅಥವಾ ಮೀನು ತನ್ನನ್ನು ಕೊಂಡೊಯ್ಯುತ್ತಿದೆಯೋ? ತಾನು ಅದನ್ನು ಎಳೆದೊಯ್ಯುತ್ತಿದ್ದರೆ ಆ ಪ್ರತಿಷ್ಠೆ ತನ್ನದಾಗುತ್ತಿತ್ತು. ಆದರೆ ಅವರಿಬ್ಬರೂ ಪರಸ್ಪರ ಅಕ್ಕಪಕ್ಕದಲ್ಲಿ ತೇಲುತ್ತ ಸಾಗಿದ್ದಾರೆ. ಅದಕ್ಕೆ ಸಂತೋಷವಾಗುವ ಹಾಗಿದ್ದರೆ ಅದೇ ತನ್ನನ್ನು ಎಳೆದೊಯ್ಯಲಿ ಬಿಡು. ತನ್ನ ಬಳಿ ಯುಕ್ತಿಯಿದೆ ಎಂದೇ ತಾನು ಮೇಲುಗೈ ಸಾಧಿಸಿದ್ದೇನೆ, ಅಷ್ಟೆ. ಆದರೆ ಮೀನು ತನಗೆ ಯಾವುದೇ ರೀತಿಯ ಕೆಡಕು ಬಗೆದಿಲ್ಲ.

ಅವರು ತೇಲುತ್ತ ಸಾಗಿದ್ದಂತೆ ಸಾಂಟಿಯಾಗೊ ತನ್ನ ಕೈಗಳನ್ನು ಸಮುದ್ರದ ಉಪ್ಪು ನೀರಲ್ಲಿ ಅದ್ದಿದ. ಅಲ್ಲದೆ ತನ್ನ ತಲೆಯನ್ನು ನಿರಾಳವಾಗಿಡಲು ಪ್ರಯತ್ನಿಸಿದ. ಮೇಲೆ ತುಂಬ ಎತ್ತರದಲ್ಲಿ ಮೋಡಗಳು ಗೂಡುಗಟ್ಟುತ್ತಿದ್ದವು. ಅವುಗಳ ಆಚೆ ಇನ್ನಷ್ಟು ಮೀನುಗಳು ಗರಿಗೆದರಿದ್ದವು. ಅದರರ್ಥ ಇಡೀ ರಾತ್ರಿ ಕಡಲು ಗಾಳಿ ಬೀಸಬಹುದೆಂದು ಆತ ಅಂದಾಜು ಕಟ್ಟಿದ. ಆತ ಪದೇ ಪದೇ ಮೀನನ್ನು ನೋಡುತ್ತ ಅದು ದಿಟವಾದ ಮೀನು ಎಂದು ಖಾತ್ರಿಪಡಿಸಿಕೊಂಡ. ಇದಾದ ಒಂದು ತಾಸಿನ ನಂತರ ಶಾರ್ಕ್ ಮೀನೊಂದು ದಾಳಿಯಿಟ್ಟಿತು.

ಶಾರ್ಕ್ ಪ್ರವೇಶ ಆಕಸ್ಮಿಕವಾಗಿರಲಿಲ್ಲ. ಒಂದು ಮೈಲಿನಷ್ಟು ಆಳಕ್ಕೆ ಹರಡಿದ್ದ ಮೀನಿನ ರಕ್ತದ ವಾಸನೆಯ ಜಾಡು ಹಿಡಿದು ಅದು ಧೃತಿಗೆಟ್ಟು ಓಡಿ ಬಂದಿತ್ತು. ಅದರ ರಭಸಕ್ಕೆ ಪಾತಳಿಯ ನೀಲಿ ವರ್ಣದ ನೀರು ಅಲ್ಲೋಲ ಕಲ್ಲೋಲವಾಯಿತು. ಅದು ಮತ್ತೆ ರಕ್ತದ ವಾಸನೆಯ ಜಾಡು ಹಿಡಿದು ದೋಣಿಯ ಮಾರ್ಗದಗುಂಟ ಈಜತೊಡಗಿತು.

ಒಮ್ಮೊಮ್ಮೆ ಅದಕ್ಕೆ ಜಾಡು ತಪ್ಪುತ್ತಿತ್ತು. ಮತ್ತೆ ಅತ್ತ ಇತ್ತ ಸುತ್ತಾಡಿ ವಾಸನೆಯ ಸುಳಿವು ಹಿಡಿದು ವೇಗವಾಗಿ ಈಜುತ್ತಿತ್ತು. ಸಮುದ್ರದ ಅತಿ ವೇಗದ ಮೀನುಗಳಿಗೆ ಸರಿಸಮವಾಗಿ ಈಜಬಲ್ಲ ಮ್ಯಾಕೋ ಜಾತಿಯ ಬಲಾಢ್ಯ ಶಾರ್ಕ್ ಅದು. ಅದರ ದವಡೆಗಳನ್ನು ಬಿಟ್ಟರೆ ಅದು ನೋಡಲು ಚೆಂದವಾಗಿತ್ತು. ಕತ್ತಿ ಮೀನಿನ ಬೆನ್ನಿನಂತೆ ಅದರ ಬೆನ್ನು ಕೂಡ ನೀಲಿ ವರ್ಣದ್ದಾಗಿತ್ತು. ಅದರ ಹೊಟ್ಟೆ ಬೆಳ್ಳಿಯಂತೆ ಬೆಳ್ಳಗಿತ್ತು. ಅದರ ಚರ್ಮ ನುಣ್ಣಗೆ ಅಂದವಾಗಿತ್ತು. ಅದರ ಬೃಹದಾಕಾರದ ದವಡೆಗಳನ್ನು ಹೊರತು ಪಡಿಸಿದರೆ ಅದು ನೋಡಲು ಕತ್ತಿ ಮೀನಿನಂತೆಯೇ ಇತ್ತು. ಗಟ್ಟಿಯಾಗಿ ಬಾಯಿ ಮುಚ್ಚಿಕೊಂಡು, ತನ್ನ ಈಜು ರೆಕ್ಕೆಯಿಂದ ನೀರನ್ನು ಸೀಳುತ್ತ, ನೀರಿನ ಪಾತಳಿಯ ಕೆಳಗೆ ವೇಗವಾಗಿ ಈಜುತ್ತಿತ್ತು. ಮುಚ್ಚಿದ ಎರಡೂ ತುಟಿಗಳ ಒಳಗೆ ಎಂಟು ಸಾಲು ಹಲ್ಲುಗಳು ಒಳಗೆ ಬಾಗಿದ್ದವು. ಅವು ಸಾಮಾನ್ಯ ಶಾರ್ಕ್‌ಗಳಂತೆ ಪಿರಾಮಿಡ್ ಆಕಾರದ ಹಲ್ಲುಗಳಾಗಿರಲಿಲ್ಲ. ಮನುಷ್ಯನ ಬೆರಳಿನಾಕಾರದ ಅವು ಹಕ್ಕಿಗಳ ಕಾಲಿನ ಕೊಕ್ಕೆಯಂತೆ ಮೊನಚಾಗಿದ್ದವು. ಹೆಚ್ಚು ಕಡಿಮೆ ಅವನ ಬೆರಳುಗಳಷ್ಟೇ ಉದ್ದವಾಗಿದ್ದ ಅದರ ಹಲ್ಲುಗಳು ಎರಡೂ ಬದಿಗೆ ಅಲಗಿನಂತೆ ಹರಿತಾಗಿದ್ದವು. ಸಮುದ್ರದಲ್ಲಿರುವ ಇತರ ಎಲ್ಲ ಮೀನುಗಳನ್ನು ತಿನ್ನಲೆಂದೇ ಸೃಷ್ಟಿಯಾದ ಮೀನು ಅದು. ಬಲಾಢ್ಯವಾದ, ಶಸ್ತ್ರಸಜ್ಜಿತ ದೇಹದ, ವೇಗವಾಗಿ ಚಲಿಸುವ ಅವುಗಳಿಗೆ ಸಮುದ್ರದಲ್ಲಿ ವೈರಿಗಳೇ ಇಲ್ಲ. ವಾಸನೆಯ ತೀಕ್ಷ್ಣತೆ ಹೆಚ್ಚಿದಂತೆ ಅದು ನೀರನ್ನು ಸೀಳುತ್ತ ವೇಗವಾಗಿ ಈಜತೊಡಗಿತು.

ಶಾರ್ಕ್ ದೋಣಿಯತ್ತ ಬರುತ್ತಿರುವುದನ್ನು ಆತ ಗಮನಿಸಿದ. ಭಯವರಿಯದ ಆ ಬಲಾಢ್ಯ ಜೀವಿ ತನ್ನ ಮನಸ್ಸಿಗೆ ತಿಳಿದದ್ದನ್ನು ಮಾಡಬಲ್ಲದು. ಆತ ಹಾರ್ಪೂನಿಗೆ ಹಗ್ಗ ಪೋಣಿಸಿ ಸಿದ್ಧವಾಗಿ ಕುಳಿತ. ಹಗ್ಗ ಉದ್ದವಾಗಿರಲಿಲ್ಲ. ಅದನ್ನು ಕತ್ತರಿಸಿ ಮೀನು ಕಟ್ಟಲು ಉಪಯೋಗಿಸಿದ್ದ.

ಆತನೀಗ ಸ್ವಸ್ಥಚಿತ್ತನಾಗಿದ್ದ. ಆತನಲ್ಲಿ ಸಾಕಷ್ಟು ಮನೋಬಲವಿದ್ದರೂ ಭರವಸೆ ಕಡಿಮೆಯಾಗಿತ್ತು. ಆ ಮನೋಬಲ ಕೊನೆಯುವರೆಗೆ ಸಾಕಾಗುವಷ್ಟಿತ್ತು. ಆತ ಮೀನಿನತ್ತ ಒಂದು ಬಾರಿ ದೃಷ್ಟಿ ಹರಿಸಿ,

ತನ್ನತ್ತ ಬರುತ್ತಿದ್ದ ಶಾರ್ಕ್ ಮೇಲೆ ತನ್ನ ಲಕ್ಷ್ಯವನ್ನು ಕೇಂದ್ರೀಕರಿಸಿದ. ಅದೆಲ್ಲ ಅವನಿಗೆ ಕನಸಿನಂತೆ ಭಾಸವಾಯಿತು. ಅದರ ದಾಳಿಯನ್ನು ತಪ್ಪಿಸಲು ತನಗೆ ಶಕ್ಯವಿಲ್ಲವಾದರೂ ತಾನು ಪ್ರತಿ ದಾಳಿಗೆ ಸಿದ್ಧನಾಗಿರುವೆ ಎಂದುಕೊಂಡ. 'ಡೆಂಟುಸೊ' ನಿನ್ನ ತಾಯಿಯ ದೈವ ಚೆನ್ನಾಗಿಲ್ಲ.

ಶಾರ್ಕ್ ಮೀನು ತೀರ ಹತ್ತಿರ ಬಂತು. ಅದು ಅಲ್ಲಿ ಕಟ್ಟಿದ್ದ ಮಾರ್ಲಿನ್‌ನ್ನು ಬಲವಾಗಿ ಹೊಡೆಯಿತು. ಅದರ ಬಾಯಿ ಅಗಲವಾಗಿ ತೆರೆದುಕೊಂಡಿದ್ದನ್ನೂ ಅದರ ವಿಚಿತ್ರವಾದ ಕಣ್ಣುಗಳನ್ನೂ ಆತ ನೋಡಿದ. ಬಾಲದ ಮೇಲ್ಭಾಗದಲ್ಲಿದ್ದ ಮಾಂಸಲವಾದ ಭಾಗಕ್ಕೆ ಬಾಯಿ ಹಾಕುವ ಮುನ್ನ ಅದರ ಹಲ್ಲುಗಳ ಮಸೆತದ ಕಟಕಟ ಸದ್ದು ಆತನಿಗೆ ಕೇಳಿಸಿತು. ಶಾರ್ಕ್‌ದ ತಲೆ ನೀರಿನ ಮೇಲ್ಭಾಗಕ್ಕೆ ಬಂದಿತ್ತು. ಅದರ ಬೆನ್ನು ಕೂಡ ಕಾಣಿಸತೊಡಗಿತ್ತು. ಮೀನಿನ ಚರ್ಮ ಹಾಗೂ ಮಾಂಸವನ್ನು ಕತ್ತರಿಸುವ ಸದ್ದು ಆತನಿಗೆ ಕೇಳಿಸತೊಡಗಿತು. ಆತ ಅದರ ತಲೆಯ ಮಧ್ಯ ಭಾಗದ ರೇಖೆಯ ಮೇಲೆ ಹಾರ್ಪೂನಿನಿಂದ ಗುರಿಯಿಟ್ಟು ಬಲವಾಗಿ ಇರಿದ. ಅದರ ಮೂಗಿನ ನೇರಕ್ಕೆ ಅಂಥ ಯಾವ ರೇಖೆಗಳು ಇರಲಿಲ್ಲ. ಬೃಹದಾಕಾರವಾದ ನೀಲಿ ವರ್ಣದ ತಲೆ, ಕಣ್ಣುಗಳು ಹಾಗೂ ದವಡೆಗಳು ಅದಕ್ಕಿದ್ದವು. ಮಿದುಳು ಇರಬಹುದಾದ ಸ್ಥಳದಲ್ಲಿ ಆತ ಬಲವಾಗಿ ಇರಿದಿದ್ದ. ತನ್ನ ರಕ್ತಸಿಕ್ತ ಕೈಗಳಿಂದ ಆತ ತನ್ನೆಲ್ಲ ಶಕ್ತಿಯನ್ನು ಒಗ್ಗೂಡಿಸಿ ಇರಿದಿದ್ದ. ಅತ್ಯುಗ್ರ ಕೋಪ ಹಾಗೂ ಮನೋಬಲ ಪ್ರಕಟಿಸುತ್ತ ಇರಿದಿದ್ದನಾದರೂ ಆತನಲ್ಲಿ ಕಿಂಚಿತ್ತೂ ಆಸೆ ಉಳಿದಿರಲಿಲ್ಲ.

ಶಾರ್ಕ್ ಹುಚ್ಚೆದ್ದು ನೆಗೆದಾಡಿತು. ಅದರ ಕಣ್ಣಲ್ಲಿ ಜೀವವಿರಲಿಲ್ಲ. ಅದು ಸತ್ತು ಹೋಯಿತೆಂದುಕೊಂಡ. ಆದರೆ ಶಾರ್ಕ್ ಅದನ್ನು ಒಪ್ಪಿದಂತೆ ತೋರಲಿಲ್ಲ. ಬಾಲ ಅಪ್ಪಳಿಸುತ್ತ, ಕರಕರ ಹಲ್ಲು ತಿನ್ನುತ್ತ, ಮತ್ತೆರಡು ಸಲ ನೆಗೆದು ಕೆಳಗೆ ಬಿತ್ತು. ಬಾಲ ಅಪ್ಪಳಿಸಿದ ಸ್ಥಳದಲ್ಲಿ ನೀರು ಬೆಳ್ಳಗಾಗಿತ್ತು. ಹಾರ್ಪೂನಿನ ಹಗ್ಗದ ಜಗಿತ ಹೆಚ್ಚಾಗಿ ಅದು ಜಾರಿ ಹೋಯಿತು. ನೀರಿನ ಮೇಲ್ಗಡೆ ತೋರುತ್ತಿದ್ದ ಅದರ ದೇಹ ಲಕಲಕ ಹೊಳೆಯುತ್ತಿತ್ತು. ಸ್ವಲ್ಪ ಹೊತ್ತು ಅದು ನಿಸ್ತೇಜವಾಗಿ ಬಿದ್ದುಕೊಂಡು ನಂತರ ಅದು ನಿಧಾನವಾಗಿ ನೀರಲ್ಲಿ ಮುಳುಗತೊಡಗಿತು.

''ಸುಮಾರು ನಾಲ್ವತ್ತು ಪೌಂಡು ಮಾಂಸವನ್ನು ಅದು ಕಿತ್ತುಕೊಂಡಿದೆ'' ಆತ ದೊಡ್ಡ ದನಿಯಲ್ಲಿ ಹೇಳಿದ. ಅದು ತನ್ನೊಡನೆ ಹಾರ್ಪೂನನ್ನು ಹಗ್ಗ ಸಮೇತ ಒಯ್ದು ಬಿಟ್ಟಿತು. ಈಗ ನನ್ನ ಮಾರ್ಲಿನ್ ದೇಹದಿಂದ ಇನ್ನಷ್ಟು ರಕ್ತ ಸೋರಿ ಬೇರೆ ಮೀನುಗಳು ಬಂದರೂ ಬರಬಹುದು.

ಆತನಿಗೆ ಅಂಗಹೀನವಾದ ಮೀನನ್ನು ನೋಡುವ ಮನಸ್ಸಾಗಲಿಲ್ಲ. ಮಾರ್ಲಿನ್ ಮೇಲೆ ಶಾರ್ಕ್ ದಾಳಿ ಮಾಡುವಾಗ ಆತನಿಗೆ ಅದು ತನ್ನ ಮೇಲೆಯೇ ದಾಳಿ ಮಾಡಿದಂತೆನಿಸಿತ್ತು.

ನನ್ನ ಪ್ರೀತಿಯ ಮೀನನ್ನು ಘಾಸಿಗೊಳಿಸಿದ ಆ ಶಾರ್ಕ್‌ನ್ನು ಕೊಂದು ಬಿಟ್ಟೆ ಎಂದು ಆತ ಸಮಾಧಾನ ಪಟ್ಟುಕೊಂಡ. ಈ ಮೊದಲು ಎಂದೂ ಕಂಡಿರದಷ್ಟು ದೊಡ್ಡದಾದ ಶಾರ್ಕ್ ಅದು. ದೇವರ ಸಾಕ್ಷಿಯಾಗಿ, ತಾನು ಸಾಕಷ್ಟು ದೊಡ್ಡ ಮೀನುಗಳನ್ನು ನೋಡಿರುವೆ.

ಅದರ ಅಂದ ಚೆಂದ ಅದಕ್ಕೇ ಮುಳುವಾಯಿತೆಂದುಕೊಂಡ. ಮೀನು ಹಿಡಿದದ್ದು ಬರೀ ಕನಸು ಎಂದಾಗಿದ್ದರೆ ಎಷ್ಟೋ ಪಾಲು ಒಳ್ಳೆಯದಿತ್ತು. ಸುದ್ದಿ ಪತ್ರಿಕೆಗಳನ್ನು ಹಾಸಿಕೊಂಡು ಮನೆಯಲ್ಲಿ ಒಂಟಿಯಾಗಿ ಮಲಗುತ್ತಿದ್ದೆ.

''ಸೋಲು ಅನುಭವಿಸಲೆಂದು ಮನುಷ್ಯ ಜನ್ಮ ತಾಳಿಲ್ಲ. ಮನುಷ್ಯನನ್ನು ನಾಶಗೊಳಿಸಬಹುದು, ಆದರೆ ಸೋಲಿಸಲಾಗದು'' ಆತ ಹೇಳಿದ. ಹೀಗಿದ್ದೂ ಮೀನನ್ನು ಕೊಂದಿದ್ದಕ್ಕೆ ತಾನು ದುಃಖಿತನಾಗಿರುವೆ. ಈಗ ಕೆಟ್ಟ ಗಳಿಗೆ ಎದುರು ಕಾದಿದೆ. ನನ್ನ ಬಳಿ ಹಾರ್ಪೂನು ಕೂಡ ಇಲ್ಲ. ಶಾರ್ಕ್ ಕ್ರೂರವಾಗಿತ್ತು, ಸಮರ್ಥವಾಗಿತ್ತು, ಬಲಶಾಲಿಯಾಗಿತ್ತು ಹಾಗೂ ಬುದ್ಧಿಶಾಲಿಯಾಗಿತ್ತು. ಆದರೆ ತಾನು ಅದಕ್ಕಿಂತ ಬುದ್ಧಿಶಾಲಿಯಾಗಿದ್ದೆ. ಇಲ್ಲ, ಬುದ್ಧಿಶಾಲಿಯಾಗಿರಲಿಲ್ಲ. ಕೇವಲ ನನ್ನ ಬಳಿ ಆಯುಧಗಳಿದ್ದವು ಅಷ್ಟೆ.

''ವೃದ್ಧನೇ, ವ್ಯರ್ಥವಾಗಿ ಏನೇನೋ ಯೋಚಿಸಬೇಡ, ಹಿಡಿದ ಮಾರ್ಗದಲ್ಲಿ ಮುನ್ನಡೆ, ಬಂದಿದ್ದನ್ನು ಎದುರಿಸು'' ಆತ ಗಟ್ಟಿಯಾಗಿ ಹೇಳಿದ.

ಆದರೆ ತಾನು ಯೋಚಿಸಲೇಬೇಕಾಗಿದೆ. ಈಗ ತನ್ನ ಬಳಿ ಉಳಿದಿರುವುದು ಯೋಚನೆಯೊಂದೆ! ಯೋಚನೆ ಹಾಗೂ ಬೇಸ್ ಬಾಲ್. ತಾನು ಅದರ ಮಿದುಳಲ್ಲಿ ಇರಿದದ್ದಕ್ಕೆ ಡಿಮ್ಯಾಗಿಯೋನ ಭಾವನೆಗಳು ಹೇಗಿರಬಹುದು? ಅದೇನು ಅಂಥ ಮಹಾಕಾರ್ಯವಲ್ಲವೆಂದುಕೊಂಡ. ಯಾರು ಬೇಕಾದರೂ ಅದನ್ನು ಮಾಡಬಹುದು. ಮೂಳೆ ಸರಿತದ ನೋವಿಗೆ ನನ್ನ ಕೈಗಳ ನೋವು ಸರಿಸಮವಾಗಿರಬಹುದೇ? ನನಗೆ ಗೊತ್ತಿಲ್ಲ. ನನ್ನ ಹಿಂಬಡದಲ್ಲಿ ಈ ಮೊದಲೆಂದೂ ನೋವು ಕಾಣಿಸಿಕೊಂಡಿಲ್ಲ. ಒಮ್ಮೆ ಮಾತ್ರ ನೀರಲ್ಲಿ ಈಜುತ್ತಿದ್ದ ಕೊಂಡಿ ಮೀನಿನ ಮೇಲೆ ಕಾಲಿಟ್ಟಾಗ ಅದು ತನ್ನ ಕೊಂಡಿಯಿಂದ ಹಿಂಬಡಕ್ಕೆ ಹೊಡೆದಿತ್ತು. ಆಗ ತನ್ನ ಕಾಲು ಮರಗಟ್ಟು ಹೋಗಿ ಸಹಿಸಲಸಾಧ್ಯವಾದ ನೋವು ಕಾಣಿಸಿಕೊಂಡಿತ್ತು.

''ವೃದ್ಧನೇ, ನಿನ್ನಲ್ಲಿ ಧೈರ್ಯ ಉತ್ತೇಜನ ತುಂಬುವಂಥ ಸಂಗತಿಗಳ ಬಗ್ಗೆ ಒಂದಿಷ್ಟು ಯೋಚಿಸು'' ಆತ ತನ್ನಷ್ಟಕ್ಕೆ ಹೇಳಿಕೊಂಡ. ''ಪ್ರತಿ ಕ್ಷಣವೂ ನಿನಗೆ ಮನೆ ಹತ್ತಿರವಾಗುತ್ತಿರುತ್ತದೆ. ಹೇಗೂ ದೋಣಿಯ ಭಾರವೂ ಈಗ ನಾಲ್ವತ್ತು ಪೌಂಡು ಕಡಿಮೆಯಾಗಿದೆ.''

ಪ್ರವಾಹದ ಒಳ ಹೊಕ್ಕರೆ ಏನಾಗಬಹುದೆಂದು ಆತನಿಗೆ ಗೊತ್ತಿತ್ತು. ಆದರೆ ಈಗೇನೂ ಮಾಡುವಂತಿರಲಿಲ್ಲ. ''ಹಾಂ! ಇದೀಗ ಒಂದು ಉಪಾಯ! ಚಾಕುವನ್ನು ಹುಟ್ಟಿನ ತುದಿಗೆ ಬಿಗಿಯಾಗಿ ಕಟ್ಟಬೇಕು'' ಆತನೆಂದುಕೊಂಡ.

ಚುಕ್ಕಾಣಿಯನ್ನು ಕಂಕುಳಲ್ಲಿ ಗಟ್ಟಿಯಾಗಿ ಹಿಡಿದು, ಹಾಯಿ ಪಟದ ಒಂದು ಪದರನ್ನು ಕಾಲಲ್ಲಿ ಹಿಡಿದು ಆತ ಚಾಕುವನ್ನು ಹುಟ್ಟಿನ ತುದಿಗೆ ಕಟ್ಟಿದ.

''ತಾನು ವೃದ್ಧನೇನೋ ಸರಿಯೆ, ಆದರೆ ತನ್ನ ಬಳಿ ಈಗ ಶಸ್ತ್ರವಿದೆ.''

ಈಗ ಕಡಲು ಗಾಳಿ ಆಹ್ಲಾದಕರವಾಗಿತ್ತು. ದೋಣಿ ನಿರಾತಂಕವಾಗಿ ಚಲಿಸುತ್ತಿತ್ತು. ಮತ್ತೆ ಹೊಸ ಉತ್ತೇಜನ ಪಡೆಯಲೆಂದು ಆತ ಮೀನಿನ ಮುಂಭಾಗವನ್ನು ಮಾತ್ರ ನೋಡುತ್ತಿದ್ದ.

ಆಶಾವಾದಿಯಾಗಿರದವನು ದಡ್ಡನೇ ಸರಿ. ಅಷ್ಟೇ ಏಕೆ, ಅದೊಂದು ಪಾಪವೆಂದೇ ನನ್ನ ಭಾವನೆ. ಪಾಪದ ಬಗ್ಗೆ ಯೋಚಿಸಬೇಡ. ಪಾಪರಹಿತವಾಗಿದ್ದರೂ ಇಲ್ಲಿ ಅನೇಕ ಸಮಸ್ಯೆಗಳಿವೆ. ಅಲ್ಲದೆ ಪಾಪದ



ಪರಿಜ್ಞಾನವೂ ತನಗಿಲ್ಲ.

ಪಾಪವೆಂದರೇನು ತನಗೆ ಗೊತ್ತಿಲ್ಲ. ಅಂಥ ವಿಷಯಗಳಲ್ಲಿ ತನಗೆ ನಂಬಿಕೆಯಿದೆ ಎನಿಸುವುದಿಲ್ಲ. ಬಹುಶಃ ಮೀನನ್ನು ಕೊಲ್ಲುವುದು ಪಾಪವೆನಿಸಬಹುದು. ತಾನು ಬದುಕಲು ಹಾಗೂ ಇತರರನ್ನು ಬದುಕಿಸಲು ಆ ಪಾಪ ಮಾಡಬೇಕಾಯಿತು. ಹಾಗಿದ್ದರೆ ಎಲ್ಲವೂ ಪಾಪವೆಂದಾಯಿತು. ಪಾಪದ ಬಗ್ಗೆ ಯೋಚಿಸಬೇಡ. ಅದೀಗ ನಿನ್ನ ಕೈ ಮೀರಿ ಹೋಗಿದೆ. ಕೆಲವು ಜನರಿಗೆ ಪಾಪದ ಬಗ್ಗೆ ಯೋಚಿಸುವುದೇ ಒಂದು ಕಾಯಕವಾಗಿದೆ. ಅಂಥವರು ಆ ಬಗ್ಗೆ ತಲೆ ಕೆಡಿಸಿಕೊಳ್ಳಲಿ. ನಿನ್ನದು ಮೀನುಗಾರನ ಜನ್ಮ, ಆದ್ದರಿಂದ ನೀನು ಮೀನುಗಾರ. ಮೀನಿಗೆ ಮೀನಿನ ಜನ್ಮ ಆದ್ದರಿಂದ ಅದು ಮೀನು. ಸ್ಯಾನ್ ಪೆಡ್ರೊ ಒಬ್ಬ ಮೀನುಗಾರನಾಗಿದ್ದ. ಅದರಂತೆ ಡಿಮ್ಯಾಗಿಯೋನ ತಂದೆಯೂ ಕೂಡ.

ಆತನ ಬಳಿ ಓದಲು ಏನೂ ಇರಲಿಲ್ಲ. ಕೇಳಲು ರೇಡಿಯೋ ಕೂಡ ಇರಲಿಲ್ಲವಾದ್ದರಿಂದ ಎಲ್ಲ ವಿಷಯಗಳ ಬಗ್ಗೆ ಚಿಂತನೆಗೆ ತೊಡಗುವುದು ಆತನಿಗೀಗ ಇಷ್ಟವೆನಿಸಿತ್ತು. ಮತ್ತೆ ಪಾಪದ ಬಗ್ಗೆ ಯೋಚಿಸತೊಡಗಿದ. ನೀನು ಬರೀ ಹೊಟ್ಟೆಗಾಗಿ ಅಥವಾ ಮಾರಾಟಕ್ಕಾಗಿ ಮೀನನ್ನು ಕೊಲ್ಲಲಿಲ್ಲ. ಮೀನುಗಾರನೆಂಬ ಕಾರಣಕ್ಕಾಗಿ ಹಾಗೂ ಆ ಅಹಮಿಕೆಯಿಂದ ಅದನ್ನು ಕೊಂದೆ. ಜೀವಂತವಾಗಿದ್ದಾಗ ಅದನ್ನು ಪ್ರೀತಿಸಿದೆ. ನೀನು ಅದನ್ನು ಪ್ರೀತಿಸುವೆ ಎಂದ ಮೇಲೆ ಕೊಲ್ಲುವುದು ಪಾಪವಲ್ಲ. ಅಥವಾ ಇದೆಲ್ಲ ಅತಿಯಾಯಿತೆ?

''ವೃದ್ಧನೇ, ನೀನು ಅತಿಯಾಗಿ ಯೋಚಿಸುವೆ'' ಆತ ದೊಡ್ಡ ದನಿಯಲ್ಲಿ ಹೇಳಿದ.

ಶಾರ್ಕ್ ಕೊಲ್ಲುವಾಗ ನೀನು ಸಂತೋಷ ಅನುಭವಿಸಿದೆ. ಅದು ನಿನ್ನಂತೆ ಜೀವಂತ ಮೀನುಗಳನ್ನು ತಿಂದು ಬದುಕುತ್ತದೆ. ಹಲವು ಶಾರ್ಕ್‌ಗಳಂತೆ ಅದು ಕೇವಲ ಹೊಲಸು ತಿನ್ನುವ ಅಥವಾ ಹೊಟ್ಟೆಬಾಕ ಜೀವಿಯಲ್ಲ. ಅದು ಚೆಂದವಾಗಿದ್ದಂತೆ ಉದಾತ್ತವೂ ಆಗಿತ್ತು. ಅದಕ್ಕೆ ಭಯವೆಂದರೇನು ಗೊತ್ತಿರಲಿಲ್ಲ.

''ಸ್ವರಕ್ಷಣೆಗಾಗಿ ನಾನು ಅದನ್ನು ಕೊಂದೆ, ಚೆನ್ನಾಗಿಯೇ ಕೊಂದೆ'' ಆತ ಗಟ್ಟಿಯಾಗಿ ಹೇಳಿದ.

ಹಾಗೆ ನೋಡಿದರೆ ಒಂದು ಇನ್ನೊಂದನ್ನು ಕೊಲ್ಲುವುದು ಈ ಜಗದ ವ್ಯವಹಾರವಾಗಿದೆ. ನನಗೆ ಬದುಕು ನೀಡುವ ಮೀನುಗಾರಿಕೆಯೇ ನನ್ನನ್ನು ಕೊಲ್ಲುತ್ತದೆ. ಹುಡುಗ ಮನೋಲಿನ್ ನನ್ನ ಬದುಕಿಗೆ ಪ್ರೇರಣೆಯಾಗಿದ್ದಾನೆ. ನಾನು ಬಹಳಷ್ಟು ಆತ್ಮವಂಚನೆ ಮಾಡಿಕೊಳ್ಳಕೂಡದು.

ಆತ ಕೆಳಗೆ ಬಾಗಿ ಶಾರ್ಕ್ ಕಚ್ಚಿದ ಭಾಗದಿಂದ ಮೀನಿನ ಒಂದು ತುಂಡು ಮಾಂಸವನ್ನು ಕಿತ್ತುಕೊಂಡ. ಅದನ್ನು ಬಾಯಲ್ಲಿಟ್ಟುಕೊಂಡು ಜಗಿಯುತ್ತ ಅದರ ಗುಣಮಟ್ಟ ಹಾಗೂ ರುಚಿಯನ್ನು ಪರೀಕ್ಷಿಸಿದ. ಅದು ಕೆಂಪಗಿರಲಿಲ್ಲ. ಕರಣೆ ಕರಣೆಯಾಗಿ ರಸರಸವಾಗಿತ್ತು. ಅಲ್ಲದೆ ಗುಂಜು ಗುಂಜಾಗಿರಲಿಲ್ಲ. ಪೇಟೆಯಲ್ಲಿ ಅದಕ್ಕೆ ಅಧಿಕ ಬೆಲೆ ದೊರಕುವುದೆಂದುಕೊಂಡ. ಆದರೆ ನೀರಲ್ಲಿ ರಕ್ತದ ವಾಸನೆ ತೊಳೆದು ಹೋಗದಂತೆ ತಡೆಯಲು ಬೇರೆ ಯಾವ ಉಪಾಯಗಳೂ ಇರಲಿಲ್ಲ. ಕೆಟ್ಟ ಗಳಿಗೆ ಕಾದಿದೆ ಎಂದುಕೊಂಡ.

ಕಡಲು ಗಾಳಿ ಏಕಪ್ರಕಾರವಾಗಿ ಬೀಸುತ್ತಿತ್ತು. ಅದು ಸ್ವಲ್ಪ ಈಶಾನ್ಯದತ್ತ ವಾಲುತ್ತಿದೆಯಾದ್ದರಿಂದ ಅದು ಬಲಗುಂದಲಿಕ್ಕಿಲ್ಲ. ಆತ ದೂರದವರೆಗೆ ದೃಷ್ಟಿ ಹರಿಸಿದ. ಹಾಯಿ ದೋಣಿಗಳಾಗಲಿ, ಹಡಗು ಅಥವಾ ಹಡಗಿನಿಂದೇಳುವ ಹೊಗೆಯಾಗಲಿ ಆತನ ಕಣ್ಣಿಗೆ ಬೀಳಲಿಲ್ಲ. ದೋಣಿಯ ಇಬ್ಬದಿಗಳಲ್ಲಿ ಮೇಲೆ ನೆಗೆಯುತ್ತಿದ್ದ ಹಾರುವ ಮೀನುಗಳು ಮಾತ್ರ ಕಣ್ಣಿಗೆ ಬಿದ್ದವು. ಅಲ್ಲಿ ಗಲ್ಫ್ ಸಮುದ್ರದ ಹಳದೀ ಕಸದ (ಸರ್ಗ್ಯಾಸೊ ಬಳ್ಳಿ) ಜೊಂಡು ತೇಪೆ ತೇಪೆಯಾಗಿ ಹರಡಿಕೊಂಡಿತ್ತು. ಒಂದು ಹಕ್ಕಿ ಕೂಡ ಆತನ ಕಣ್ಣಿಗೆ ಬೀಳಲಿಲ್ಲ.

ದೋಣಿಯ ಬದಿಗೆ ಆತು ಕುಳಿತು ವಿಶ್ರಾಂತಿ ಪಡೆಯುತ್ತ ಆತ ಆಗಾಗ ಮಾರ್ಲಿನ್ ಮಾಂಸದ ರುಚಿ ನೋಡುತ್ತಿದ್ದ. ಸುಮಾರು ಎರಡು ತಾಸು ಹೀಗೇ ಪಯಣಿಸಿರಬೇಕು. ಅಷ್ಟರಲ್ಲಿ ಮತ್ತೆರಡು ಶಾರ್ಕ್‌ಗಳು ಅಲ್ಲಿ ಪ್ರತ್ಯಕ್ಷವಾದವು.

''ಏ'' ಎಂದು ಜೋರಾಗಿ ಚೀರಿದ. ಆ ಶಬ್ದಕ್ಕೆ ಸಮವಾದ ಪರಿಭಾಷೆಯೇ ಬೇರೊಂದಿಲ್ಲ. ತನ್ನ ಅಂಗೈಯಲ್ಲಿ ಮೊಳೆ ನೆಟ್ಟು ಪಾರಾಗುವಾಗ ಮನುಷ್ಯ ತನಗೆ ಗೊತ್ತಿರದಂತೆ ಹೊರಡಿಸುವ ಒಂದು ಬಗೆಯ ಚೀತ್ಕಾರ ಅದು.

''ಗ್ಯಾಲನೋಸ್'' ಆತ ಜೋರಾಗಿ ಕೂಗಿದ. ಸಲಿಕೆಯಂತೆ ಚಪ್ಪಟೆ ಮೂತಿಯ, ಕಂದು ವರ್ಣದ, ತ್ರಿಕೋನಾಕಾರದ ಈಜು ರೆಕ್ಕೆಯುಳ್ಳ ಎರಡು ಶಾರ್ಕ್‌ಗಳು ಬಾಲ ಅಲ್ಲಾಡಿಸುತ್ತ ಒಂದರ ಹಿಂದೆ ಒಂದು ಬರುತ್ತಿದ್ದವು. ಮಧುರ ರಕ್ತದ ವಾಸನೆಯ ಪ್ರಚೋದನೆಗೊಳಗಾಗಿ, ಹಸಿವು ತಾಳದೆ ಹುಚ್ಚೆದ್ದು, ಆ ಉನ್ಮಾದದಲ್ಲಿ ದಾರಿ ತಪ್ಪುತ್ತ, ಮತ್ತೆ ಹುಡುಕುತ್ತ ಅವು ಹತ್ತಿರಕ್ಕೆ ಬರುತ್ತಿದ್ದವು.

ಆತ ಹಾಯಿ ಪಟವನ್ನು ಪೋಣಿಸಿ ಕಟ್ಟಿ, ಚುಕ್ಕಾಣಿಯನ್ನು ಅದುಮಿ ಬಿಗಿಗೊಳಿಸಿದ. ನಂತರ ಚಾಕು ಕಟ್ಟಿದ್ದ ಹುಟ್ಟನ್ನು ಹಗುರವಾಗಿ ಮೇಲೆತ್ತಿದ. ನೋವಿನಿಂದ ಆತನ ಕೈಗಳು ಪ್ರತಿಭಟಿಸಿದವು. ಕೈಗಳನ್ನು ಮುಚ್ಚಿ ತೆರೆದು ಮಾಡಿ ಸಡಿಲುಗೊಳಿಸಿಕೊಂಡ. ಆಮೇಲೆ ಮುಷ್ಟಿ ಬಿಗಿ ಮಾಡಿ ಹಿಡಿದು ಶಾರ್ಕ್‌ಗಳಿಗಾಗಿ ಕಾದ. ಅವುಗಳ ಸಲಿಕೆಯಾಕಾರದ ಮೂತಿ ಹಾಗೂ ಬಿಳಿ ಅಂಚಿನ ಈಜು ರೆಕ್ಕೆಗಳು ಆತನಿಗೆ ಕಾಣಿಸಿದವು. ಹೊಲಸು ತಿನ್ನುವ, ಗಬ್ಬು ವಾಸನೆಯ, ಕೊಲೆಗಡುಕ ಹಾಗೂ ಹೇಸಿಗೆ ಬರಿಸುವ ಜಾತಿಯ ಶಾರ್ಕ್‌ಗಳವು. ಅವು ಹಸಿದಾಗ ಹುಟ್ಟುಗಳಿಗೆ ಹಾಗೂ ದೋಣಿಯ ಚುಕ್ಕಾಣಿಗೇ ಬಾಯಿ ಹಾಕುತ್ತವೆ. ಈ ಶಾರ್ಕ್‌ಗಳು ಆಮೆಗಳ ಕಾಲುಗಳನ್ನು ತಿನ್ನುತ್ತವೆ. ನೀರ ಮೇಲೆ ತೇಲುತ್ತ ಆಮೆಗಳು ನಿದ್ರಿಸುವಾಗ ಅವುಗಳನ್ನು ಹೊಡೆದುಬಿಡುತ್ತವೆ. ಮನುಷ್ಯನಿಗೆ ಮೀನಿನ ವಾಸನೆಯಿರದಿದ್ದರೂ ಅವು ನೀರಿಗಿಳಿದ ಮನುಷ್ಯನ ಮೇಲೆ ದಾಳಿ ಮಾಡುತ್ತವೆ.

''ಏ'' ಎಂದು ಆತ ಚೀತ್ಕರಿಸಿದ. ''ಬನ್ನಿ, ಗ್ಯಾಲನೋಸ್, ಬನ್ನಿ.''

ಅವು ಬಂದೇ ಬಿಟ್ಟವು. ಆದರೆ ಅವು ಮ್ಯಾಕೋ ಬಂದ ರೀತಿಯಲ್ಲಿ ಬರಲಿಲ್ಲ. ಒಂದು ಹೊರಳಿ ದೋಣಿಯ ತಳಭಾಗ ಸೇರಿತು. ದೋಣಿ ಅಲ್ಲಾಡತೊಡಗಿತು. ಇನ್ನೊಂದು ತನ್ನ ಹಳದೀ ವರ್ಣದ ಸೀಳು ಗಣ್ಣುಗಳಿಂದ ಆತನನ್ನು ನೋಡುತ್ತ, ತನ್ನ ಅರ್ಧ ವೃತ್ತಾಕಾರದ ದವಡೆಯ ಹಲ್ಲುಗಳನ್ನು ಪ್ರದರ್ಶಿಸಿತು. ಈ ಮೊದಲೇ ಮುಕ್ಕಾಗಿದ್ದ ಮಾರ್ಲಿನ್ ಮೇಲೆ ದಾಳಿಯಿಡಲು ಅಣಿಯಾಯಿತು. ಅದರ ಕಂದು ವರ್ಣದ ತಲೆ ಹಾಗೂ ಬೆನ್ನ ಮೇಲಿದ್ದ ರೇಖೆ ಸ್ಪಷ್ಟವಾಗಿ ಕಾಣಿಸಿತು. ಅದರ ಬೆನ್ನೆಲುಬಿನ ನೇರಕ್ಕೇ ಮಿದುಳು ಇತ್ತು. ಆತ ಚಾಕು ಕಟ್ಟಿದ್ದ ಹುಟ್ಟಿನಿಂದ ಸಂಧಿ ಸ್ಥಳಕ್ಕೆ ಬಲವಾಗಿ ಏಟು ಹಾಕಿದ. ನಂತರ ಹೊರ ತೆಗೆದು ಮತ್ತೆ ಮತ್ತೆ ಇರಿದ. ಕಚ್ಚಿದ್ದಷ್ಟೇ ಮಾಂಸವನ್ನು ಬಾಯಲ್ಲಿರಿಸಿಕೊಂಡು ಶಾರ್ಕ್ ಕುಸಿದು ಬಿದ್ದು, ಸತ್ತು ಹೋಯಿತು.

ದೋಣಿಯ ತಳದಲ್ಲಿದ್ದ ಇನ್ನೊಂದು ಶಾರ್ಕ್ ಮಾರ್ಲಿನ್ ಮೀನನ್ನು ಕಚ್ಚುತ್ತಿದ್ದರಿಂದ ದೋಣಿ ಹೊಯ್ದಾಡುತ್ತಲೇ ಇತ್ತು. ಆತ ಹಾಯಿ ಪಟವನ್ನು ಸಡಿಲುಗೊಳಿಸಿ, ದೋಣಿ ಅಡ್ಡ ಚಲಿಸುವಂತೆ ಮಾಡಿ ಅದು ಹೊರಗೆ ಬರುವಂತೆ ಮಾಡಿದ. ಅದು ಕಣ್ಣಿಗೆ ಬಿದ್ದೊಡನೆ ಆತ ಮುಂದಕ್ಕೆ ಬಾಗಿ ಒಂದೇಟು ಹಾಕಿದ. ಆದರೆ ಅದು ಮಾಂಸಲ ದೇಹದ ಬಿರುಸು ಚರ್ಮದಲ್ಲಿ ಸ್ವಲ್ಪ ಮಾತ್ರ ಒಳ ಹೊಕ್ಕಿತು. ಆತನ ಕೈ ಹಾಗೂ ಭುಜಗಳಲ್ಲಿ ನೋವು ಕಾಣಿಸಿಕೊಂಡಿತು. ಅಷ್ಟರಲ್ಲಿ ಶಾರ್ಕ್ ರಭಸದಿಂದ ಮೇಲೆದ್ದು ಬಂತು. ಆತ ಅದರ ಚಪ್ಪಟೆ ತಲೆಯ ಸಂಧಿ ಸ್ಥಳದಲ್ಲಿ ಇರಿದ. ಅದು ಮೂತಿಯನ್ನು ಮೀನಿನ ಬಳಿ ಚಾಚಿತು. ಆತ ಹುಟ್ಟಿಗೆ ಕಟ್ಟಿದ್ದ ಚಾಕುವನ್ನು ಹೊರಗೆಳೆದು ಅದೇ ಭಾಗವನ್ನು ಮತ್ತೆ ಮತ್ತೆ ಇರಿದ. ಅದು ತನ್ನ ದವಡೆಯಲ್ಲಿ ಮೀನನ್ನು ಕಚ್ಚಿ ಹಿಡಿದುಕೊಂಡಿತ್ತು. ಆತ ಅದರ ಎಡಗಣ್ಣಿಗೆ ಇರಿದ. ಆದರೂ ಅದು ಅಲ್ಲಿಯೇ ಅಂಟಿಕೊಂಡಿತ್ತು.

''ಇಲ್ಲ, ಸಾಯಲಿಲ್ಲ'' ಎಂದುಕೊಳ್ಳುತ್ತ ಆತ ಮಿದುಳು ಹಾಗೂ ಬೆನ್ನು ಹುರಿಯ ಮಧ್ಯ ಭಾಗದಲ್ಲಿ ಇರಿದ. ಅದು ಸಲೀಸಾಗಿ ಚರ್ಮ ಭೇದಿಸಿತು. ಈಗ ಅದರ ಮಧ್ಯ ಭಾಗದ ಎಲುಬುಗಳು ಬೇರ್ಪಟ್ಟವು.

ಆತ ಹುಟ್ಟನ್ನು ತಲೆ ಕೆಳಗಾಗಿ ಹಿಡಿದು ಚುಚ್ಚಿ ಅದರ ದವಡೆಗಳನ್ನು ಬೇರ್ಪಡಿಸಲು ನೋಡಿದ. ಆತ ಹುಟ್ಟಿನ ಅಲಗನ್ನು ಅತ್ತ ಇತ್ತ ತಿವಿಯುತ್ತಿದ್ದಾಗ ಅದು ದವಡೆಯನ್ನು ಸಡಿಲುಗೊಳಿಸುತ್ತಿರುವಂತೆ ಆತ ಹೇಳಿದ. ''ಹೋಗು ಗ್ಯಾಲನೋ ಹೋಗು. ನಿನ್ನ ಗೆಳೆಯನನ್ನು ಕೂಡು ಹೋಗು, ಅಥವಾ ಅದು ನಿನ್ನ ತಾಯಿ ಇದ್ದರೂ ಇರಬೇಕು.''

ಆತ ಚಾಕುವಿನ ಅಲಗನ್ನು ಒರೆಸಿ ಹುಟ್ಟನ್ನು ಕೆಳಗಿಟ್ಟ. ಅಷ್ಟರಲ್ಲಿ ಹಾಯಿಯಲ್ಲಿ ಗಾಳಿ ತುಂಬಿಕೊಳ್ಳ ತೊಡಗಿ ದೋಣಿ ಮುಂದೆ ಸಾಗಿತು.

''ಅವು ಅದರ ದೇಹದ ಕಾಲು ಭಾಗ ಉತ್ಕೃಷ್ಟವಾದ ಮಾಂಸವನ್ನು ಕಿತ್ತುಕೊಂಡಿರಬೇಕು'' ಆತ ದೊಡ್ಡ ದನಿಯಲ್ಲಿ ಹೇಳಿದ. ''ನಾನು ಮೀನು ಹಿಡಿದದ್ದು ಬರೀ ಕನಸಾಗಿದ್ದರೆ ಒಳ್ಳೆಯದಿತ್ತು. ಮಾರ್ಲಿನ್, ನಡೆದು ಹೋದುದರ ಬಗ್ಗೆ ನಾನು ದುಃಖಿತನಾಗಿರುವೆ. ಅದರಿಂದ ನನ್ನ ವಿವೇಚನೆಯೇ ಹಾಳಾಗಿ ಹೋಗುತ್ತದೆ'' ಆತನಿಗೆ ಮೀನನ್ನು ನೋಡುವ ಇಚ್ಛೆಯಿರಲಿಲ್ಲ. ರಕ್ತ ಬಸಿದು ಸ್ವಚ್ಛವಾದ ಅದರ ದೇಹ ಹಾಗೂ ಅದರ ಪಾರ್ಶ್ವ ರೇಖೆಗಳು ಕನ್ನಡಿಯ ಹಿಂಬದಿಯ ಪಾರಜದಂತೆ ಕಂಡಿತು.

''ನಾನು ಬಹಳ ದೂರ ಹೋಗಬಾರದಿತ್ತು, ಮಾರ್ಲಿನ್'' ಆತ ನುಡಿದ. ''ನನ್ನ ಹಿತದೃಷ್ಟಿಯಿಂದ ಅಥವಾ ನಿನ್ನ ಹಿತ ದೃಷ್ಟಿಯಿಂದ ನಾನು ಬಹಳ ದೂರಕ್ಕೆ ಹೋಗಬಾರದಿತ್ತು. ಕ್ಷಮಿಸು, ಮಾರ್ಲಿನ್''

ಈಗ ಆತ ತನ್ನಷ್ಟಕ್ಕೇ ಹೇಳಿಕೊಂಡ. ಹುಟ್ಟಿಗೆ ಕಟ್ಟಿದ್ದ ಚಾಕು ಮುರಿದು ಹೋಗಿದೆಯೋ ಹೇಗೆ ನೋಡು. ನಂತರ ಕೈಗಳನ್ನು ಸರಿಪಡಿಸಿಕೊ. ಇನ್ನೂ ಏನೇನು ಬರಲಿದೆಯೊ?

''ಚಾಕು ಮಸೆಯಲು ಕಲ್ಲು ಇದ್ದರೆ ಚೆನ್ನಾಗಿತ್ತು'' ಆತ ಹುಟ್ಟಿಗೆ ಕಟ್ಟಿದ್ದ ಚಾಕುವನ್ನು ಪರೀಕ್ಷಿಸುತ್ತ ಹೇಳಿದ. ''ನಾನು ಮಸೆಗಲ್ಲು ತರಬೇಕಿತ್ತು.'' ವೃದ್ಧನೇ, ತರಬೇಕಾದುದು ಬಹಳವಿತ್ತು. ಆದರೆ ಈಗ ಚಿಂತಿಸಿ ಫಲವಿಲ್ಲ ಎಂದುಕೊಂಡ. ನಿನ್ನ ಬಳಿ ಇರದ ವಸ್ತುವಿಗಾಗಿ ಚಿಂತಿಸುವ ಸಮಯವಲ್ಲವಿದು. ನಿನ್ನ ಬಳಿ ಇದ್ದದ್ದನ್ನು ಹೇಗೆ ಉಪಯೋಗಿಸಬಹುದೆಂಬುದರ ಬಗ್ಗೆ ಮಾತ್ರ ಈಗ ಯೋಚಿಸು.

''ನಿನ್ನ ಉಪದೇಶ ಬಹಳವಾಯಿತು, ಕೇಳಿ ಕೇಳಿ ಬೇಸತ್ತು ಹೋಗಿರುವೆ'' ಆತ ಗಟ್ಟಿಯಾಗಿ ಹೇಳಿದ.

ಕಂಕುಳಲ್ಲಿ ಚುಕ್ಕಾಣಿಯನ್ನು ಹಿಡಿದುಕೊಂಡು ಆತ ಎರಡೂ ಕೈಗಳನ್ನು ನೀರಲ್ಲಿ ಅದ್ದಿದ. ದೋಣಿ ಮುಂದೆ ಸಾಗಿತ್ತು.

''ಕೊನೆಯ ಶಾರ್ಕ್ ಎಷ್ಟು ಮಾಂಸವನ್ನು ಕಿತ್ತುಕೊಂಡಿತೋ, ದೇವರಿಗೇ ಗೊತ್ತು. ಆದರೆ ದೋಣಿಯ ಭಾರ ಈಗ ಕಡಿಮೆಯಾಗಿದೆ.'' ಆತನಿಗೆ ಮೀನು ಊನವಾಗಿದ್ದನ್ನು ಯೋಚಿಸುವ ಮನಸ್ಸಿರಲಿಲ್ಲ. ಶಾರ್ಕ್‌ಗಳು ಮಾಂಸವನ್ನು ಹರಿದುಕೊಳ್ಳುವಾಗ ಅದರ ತುಂಡುಗಳು ಹೆದ್ದಾರಿಯಷ್ಟು ಅಗಲಕ್ಕೆ ಸಮುದ್ರದಲ್ಲಿ ಹರಡಿಕೊಂಡಿರಬೇಕು. ಇದು ಎಲ್ಲ ಶಾರ್ಕ್‌ಗಳಿಗೆ ಆಮಂತ್ರಣ ನೀಡಿದಂತೆಯೇ ಸರಿ.

ಇಡೀ ಚಳಿಗಾಲಕ್ಕೆ ಸಾಕಾಗುವಂಥ ಮೀನು ಅದು. ಅದರ ಬಗ್ಗೆ ಯೋಚಿಸಬೇಡ. ಸದ್ಯ ವಿಶ್ರಮಿಸಿಕೊ. ಉಳಿದಷ್ಟು ಮೀನನ್ನು ರಕ್ಷಿಸಲು ಕೈಗಳು ಆರೋಗ್ಯವಾಗಿರುವಂತೆ ನೋಡಿಕೊ. ಸಮುದ್ರದ ತುಂಬ ಹರಡಿ ಹೋದ ವಾಸನೆಗಿಂತ ಕೈಗಳಿಗೆ ಅಂಟಿದ ರಕ್ತದ ವಾಸನೆ ಅಷ್ಟು ಮುಖ್ಯವಲ್ಲ. ಕೈಗಳಲ್ಲಿ ಒಹಳಷ್ಟು ರಕ್ತಸ್ರಾವವಾಗಿಲ್ಲ. ರಕ್ತಸ್ರಾವವಾಗದ್ದರಿಂದ ಎಡಗೈ ಸೆಟೆದುಕೊಳ್ಳಲಿಕ್ಕಿಲ್ಲ.

ಈಗ ಯಾವುದರ ಬಗ್ಗೆ ಯೋಚಿಸಲಿ ಎಂದುಕೊಂಡ, ಯೋಚಿಸಲು ಏನೂ ಉಳಿದಿಲ್ಲ. ಸದ್ಯ ಯೋಚಿಸುವುದನ್ನು ಬಿಟ್ಟು ಇನ್ನೊಂದು ಶಾರ್ಕ್ ಬರುವುದೋ ಹೇಗೇ, ಕಾದು ನೋಡಬೇಕು. ಇದೆಲ್ಲ ಬರೀ ಕನಸಾಗಿದ್ದರೆ ಎಷ್ಟು ಒಳ್ಳೆಯದಿತ್ತು ಎಂದುಕೊಂಡ. ಆದರೆ ಯಾರಿಗೆ ಗೊತ್ತು? ಮುಂದೆ ಎಲ್ಲವೂ ಸರಿ ಹೋಗಬಹುದು.

ಅಲ್ಲಿಗೆ ಬಂದ ಇನ್ನೊಂದು ಶಾರ್ಕ್‌ದ ಮ[illegible]ಯೂ ಸಲಿಕೆಯಾಕಾರವಾಗಿತ್ತು. ಹಂದಿಯ ಹಾಗೆ

ದೋಣಿಯ ಬಳಿಗೆ ಬಂತು. ಹಂದಿಯ ಬಾಯಿ ಅದರಷ್ಟು ಅಗಲವಾಗಿದ್ದರೆ ನೀನು ನಿನ್ನ ತಲೆಯನ್ನು ಅದರಲ್ಲಿರಿಸಬಹುದಿತ್ತು. ಅದು ಬಳಿಗೆ ಬರುವವರೆಗೂ ಕಾದು ಚಾಕುವಿನಿಂದ ಅದರ ಮಿದುಳಿಗೆ ಇರಿದ. ಅದು ಒದ್ದಾಡುತ್ತ ಹಿಂದಕ್ಕೆ ಸರಿದಾಗ ಚಾಕುವಿನ ಅಲಗು ಮುರಿದು ಹೋಯಿತು.

ಆತ ಗಟ್ಟಿಯಾಗಿ ಕಾಲೂರಿ ಚುಕ್ಕಾಣಿ ತಿರುಗಿಸಲು ನೋಡಿದ. ಬೃಹತ್ ಶಾರ್ಕ್ ಮುಳುಗುವಾಗ ಆಳಕ್ಕಿಳಿದಂತೆ ಅದರ ಗಾತ್ರ ಚಿಕ್ಕದಾಗುತ್ತ ಹೋಯಿತು. ಸಮುದ್ರದಲ್ಲಿ ವಸ್ತುಗಳು ಮುಳುಗುವ ರೀತಿಗೆ ಆತ ಯಾವಾಗಲೂ ಆಕರ್ಷಿತನಾಗುತ್ತಿದ್ದ. ಆದರೆ ಈಗ ಆತ ಅತ್ತ ಕಡೆ ನೋಡಲಿಲ್ಲ ಕೂಡ.

''ನನ್ನ ಬಳಿ ಈಗ ಈಟಿ ಇದೆ. ಆದರೆ ಅದು ಅಷ್ಟೊಂದು ಪ್ರಯೋಜನಕಾರಿ ಅಲ್ಲ. ಈಗ ಉಳಿದಿರುವುದು ದೋಣಿಯ ಎರಡು ಹುಟ್ಟುಗಳು ಹಾಗೂ ಒಂದು ಚುಕ್ಕಾಣಿ ಹಾಗೂ ಒಂದು ದೊಣ್ಣೆ ಮಾತ್ರ.''


ಈಗ ಅವು ನನ್ನನ್ನು ಸೋಲಿಸಿದಂತೆಯೇ ಎಂದುಕೊಂಡ. ಶಾರ್ಕ್‌ಗಳನ್ನು ದೊಣ್ಣೆಯಿಂದ ಹೊಡೆಯುವುದಷ್ಟು ಶಕ್ತಿ ನನ್ನ ಬಳಿಯಿಲ್ಲ. ಏನೇ ಆಗಲಿ, ಹುಟ್ಟುಗಳು, ಚುಕ್ಕಾಣಿ ಹಾಗೂ ಸಣ್ಣ ದೊಣ್ಣೆ ನನ್ನ ಬಳಿ ಇರುವವರೆಗೂ ನಾನು ಹೋರಾಡುವೆ.

ಆತ ಮತ್ತೆ ಕೈಗಳನ್ನು ನೀರಲ್ಲಿ ಅದ್ದಿದ. ಇಳಿ ಹೊತ್ತು ಸರಿದು ಸಂಜೆಯಾಗುತ್ತಿತ್ತು. ಸಮುದ್ರ ಹಾಗೂ ಆಕಾಶದ ಹೊರತು ಆತನಿಗೇನೂ ಕಾಣುತ್ತಿರಲಿಲ್ಲ. ಆಕಾಶದಲ್ಲಿ ಗಾಳಿಯ ರಭಸ ಅಧಿಕವಾಗಿತ್ತು. ಇಷ್ಟರಲ್ಲಿ ಭೂಮಿ ಕಂಡರೂ ಕಾಣಬಹುದು ಎಂದುಕೊಂಡ.

''ವೃದ್ಧನೇ, ನೀನು ಬಹಳ ದಣಿದಿರುವೆ. ನಿನ್ನ ಮನಸ್ಸೂ ದಣಿದಿದೆ'' ಆತ ಹೇಳಿದ.

ಸೂರ್ಯ ಮುಳುಗಲು ಇನ್ನೂ ಸ್ವಲ್ಪ ಸಮಯ ಬಾಕಿ ಇತ್ತು. ಅದುವರೆಗೆ ಮತ್ತೆ ಯಾವ ಶಾರ್ಕ್‌ಗಳೂ ಸುಳಿದಿರಲಿಲ್ಲ.

ಅಷ್ಟರಲ್ಲಿ ಕಂದು ವರ್ಣದ ಈಜು ರೆಕ್ಕೆಗಳು ಕಾಣಿಸಿಕೊಳ್ಳುತ್ತಿದ್ದಂತೆ ನೀರಿನ ಕಲಕಲ ನಾದವೂ ಕೇಳಿಸಿತು. ಅವುಗಳಿಗಿನ್ನೂ ರಕ್ತದ ವಾಸನೆಯ ಜಾಡು ಸಿಕ್ಕಿರಲಿಲ್ಲ. ಅವು ಒಂದರ ಬದಿಗೊಂದು ಸಮಾಂತರವಾಗಿ ಈಜುತ್ತ ನೇರವಾಗಿ ದೋಣಿಯತ್ತ ಬರುತ್ತಿದ್ದವು.



ಆತ ಚುಕ್ಕಾಣಿಯನ್ನು ಒತ್ತಿ ಹಿಡಿದ. ಹಾಯಿಪಟವನ್ನು ಪೋಣಿಸಿದ ನಂತರ ದೋಣಿಯ ಒಳಭಾಗದಲ್ಲಿದ್ದ ದೊಣ್ಣೆಯನ್ನು ಕೈಗೆತ್ತಿಕೊಂಡ. ಅದು ಮುರಿದ ಹುಟ್ಟಿನ ಹಿಡಿಕೆಯಾಗಿತ್ತು. ಆ ಹುಟ್ಟನ್ನೇ ಕೊರೆದು ಎರಡೂವರೆ ಅಡಿ ಉದ್ದದ ದೊಣ್ಣೆ ತಯಾರಿಸಲಾಗಿತ್ತು. ಅದು ಹಿಡಿಯಲು ಅನುಕೂಲವಾಗಿದ್ದರಿಂದ ಪರಿಣಾಮಕಾರಿಯಾಗಿ ಬಳಸಬಹುದಿತ್ತು. ಆತ ಬಲಗೈಯಿಂದ ದೊಣ್ಣೆಯನ್ನು ಗಟ್ಟಿಯಾಗಿ ಹಿಡಿದುಕೊಂಡು ಮೀನುಗಳು ಬರುವುದನ್ನೇ ಕಾಯತೊಡಗಿದ. ಅವೆರಡೂ ಶಾರ್ಕ್‌ಗಳಾಗಿದ್ದವು.

ಮೊದಲನೆಯ ಶಾರ್ಕ್‌ನ ಮೂಗಿನ ಮೇಲೆ ಅಥವಾ ನೇರವಾಗಿ ತಲೆಗೇ ಏಟು ಹಾಕಿದರಾಯಿತು ಎಂದುಕೊಂಡ.

ಎರಡೂ ಶಾರ್ಕ್‌ಗಳು ಪರಸ್ಪರ ಅಕ್ಕಪಕ್ಕದಲ್ಲಿ ಒತ್ತೊತ್ತಾಗಿ ಬರುತ್ತಿದ್ದವು. ಆತನಿಗೆ ಹತ್ತಿರವಿದ್ದ ಶಾರ್ಕ್ ಬಾಯಿ ತೆರೆದು ತನ್ನ ಹಲ್ಲುಗಳಿಂದ ಮೀನಿನ ಹೊಟ್ಟೆಯನ್ನು ಕಚ್ಚಿತು. ಆತ ದೊಣ್ಣೆಯನ್ನೆತ್ತಿ ಅದರ ಅಗಲವಾದ ತಲೆಯ ಮೇಲೆ ಬಲವಾಗಿ ಏಟು ಹಾಕಿದ. ಅದರ ಚರ್ಮ ರಬ್ಬರಿನಂತೆ ಗಡುಸಾಗಿತ್ತು. ದೊಣ್ಣೆ ಜಾರಿ ಕೆಳಗೆ ಸರಿಯಿತು. ಮಾಂಸ ತಿನ್ನುವುದನ್ನು ಬಿಟ್ಟು ಅದು ಬದಿಗೆ ಬರುತ್ತಿದ್ದಂತೆ ಅದರ ಮೂಗಿನ ಮೇಲೊಂದು ಏಟು ಹಾಕಿದ.

ಇನ್ನೊಂದು ಬರಲೋ ಬೇಡವೋ ಎಂದು ಅನುಮಾನಿಸುತ್ತ ಬಾಯಿ ತೆರೆದುಕೊಂಡು ಬಂದೇ ಬಿಟ್ಟಿತು. ಅದರ ದವಡೆಯೊಳಗಿಂದ ಮಾಂಸದ ತುಂಡುಗಳು ಬಿಳಿಯ ಕಣಗಳಾಗಿ ಹೊರಗೆ ಚೆಲ್ಲುತ್ತಿದ್ದವು. ಆತ ಅದರ ತಲೆಯ ಮೇಲೆ ಬಲವಾಗಿ ಏಟು ಹಾಕಿದಾಗ ಅದು ಅವನತ್ತ ನೋಡಿ, ಕಚ್ಚಿ ಹಿಡಿದ ಮಾಂಸವನ್ನು ಸಡಿಲು ಬಿಟ್ಟಿತು. ಮತ್ತೆ ಅದು ಮಾಂಸ ತಿನ್ನಲು ಹವಣಿಸುತ್ತಿದ್ದಂತೆ ಆತ ದೊಣ್ಣೆ ಬೀಸಿದ.

''ಬಾ, ಮತ್ತೆ ಬಾ.'' ಆತ ಅದನ್ನು ಆಹ್ವಾನಿಸಿದ. ಶಾರ್ಕ್ ಮತ್ತೆ ರಭಸದಿಂದ ಬಂದು ತನ್ನ ದವಡೆಗಳನ್ನು ಮುಚ್ಚಿಕೊಳ್ಳುತ್ತಿದ್ದಂತೆ ಆತ ತನಗೆ ಎಷ್ಟು ಸಾಧ್ಯವೋ ಅಷ್ಟು ದೊಣ್ಣೆಯನ್ನೆತ್ತಿ ಬಲವಾಗಿ ಹೊಡೆದ. ಅದು ತಾನು ಕಿತ್ತುಕೊಂಡ ಮಾಂಸವನ್ನು ಬಿಟ್ಟು ಅಲ್ಲಿಂದ ಹೊರಟುಹೋಯಿತು.

ಅದು ಮತ್ತೆ ಬರಬಹುದೆಂದು ಕಾದ. ಆದರೆ ಒಂದೂ ಸನಿಹಕ್ಕೆ ಬರಲಿಲ್ಲ. ಅದರಲ್ಲಿ ಒಂದು ಮೀನು ವರ್ತುಳಾಕಾರವಾಗಿ ಸುತ್ತುತ್ತಿತ್ತು. ಇನ್ನೊಂದರ ಸುಳಿವು ಹತ್ತಲಿಲ್ಲ.

ಅವುಗಳನ್ನು ಕೊಲ್ಲುವುದು ತನಗೆ ಸಾಧ್ಯವಿರಲಿಲ್ಲ. ತಾನು ತರುಣನಾಗಿದ್ದಾಗಿನ ಮಾತೇ ಬೇರೆ. ಆದರೆ ಅವುಗಳನ್ನು ಚೆನ್ನಾಗಿ ಇಕ್ಕಿದ್ದೇನೆ. ಈಗ ಅವುಗಳ ಪರಿಸ್ಥಿತಿ ನೆಟ್ಟಗಿರಲಿಕ್ಕಿಲ್ಲ. ನನ್ನ ಬಳಿ ಬ್ಯಾಟು ಇದ್ದರೆ ಎರಡೂ ಕೈಗಳಿಂದ ಮೊದಲನೆಯ ಶಾರ್ಕ್‌ನ್ನು ಹೊಡೆದು ಕೊಲ್ಲುತ್ತಿದ್ದೆ. ಈಗಲೂ ಕೂಡ.

ಆತನಿಗೆ ಮೀನಿನ ಕಡೆಗೆ ನೋಡುವ ಮನಸ್ಸಾಗಲಿಲ್ಲ. ಅದರ ದೇಹದ ಅರ್ಧ ಭಾಗ ನಾಶವಾಗಿತ್ತು. ಶಾರ್ಕ್‌ಗಳ ಕೂಡ ಹೋರಾಡುವಾಗಲೇ ಸೂರ್ಯ ಮುಳುಗಿದ್ದ.

''ಇಷ್ಟರಲ್ಲೇ ಕತ್ತಲಾಗಬಹುದು. ಹವಾನಾ ದ್ವೀಪದ ಬೆಳಕು ಕಂಡರೂ ಕಾಣಬಹುದು. ತಾನು ಪೂರ್ವದ ಕಡೆಗಿದ್ದರೆ ಹೊಸ ಬೀಚಿನ ದೀಪಗಳೂ ಗೋಚರಿಸಬಹುದು.

ತೀರದಿಂದ ತಾನು ಬಹಳ ದೂರವೇನಿಲ್ಲ. ಯಾರೂ ತನ್ನ ಬಗ್ಗೆ ಅಷ್ಟೇನೂ ಚಿಂತಿಸಿರಲಿಕ್ಕಿಲ್ಲ. ಆದರೆ ನನ್ನ ಬಗ್ಗೆ ಚಿಂತಿಸಲು ಹುಡುಗನೊಬ್ಬನಿದ್ದಾನಲ್ಲ! ನನ್ನ ಸಾಮರ್ಥ್ಯದ ಬಗ್ಗೆ ಆತನಲ್ಲಿ ದೃಢ ನಂಬಿಕೆಯಿದೆ. ವಯಸ್ಸಾದ ಮೀನುಗಾರರು ಚಿಂತೆ ಮಾಡುತ್ತಿರಬೇಕು. ಇತರ ಎಲ್ಲರಿಗೂ ಚಿಂತೆಯಾಗಿರಬೇಕು. ತಾನು ವಾಸಿಸುವ ಪಟ್ಟಣ ತುಂಬ ಒಳ್ಳೆಯದು ಎಂದುಕೊಂಡ.

ಇನ್ನು ಆತ ಮೀನಿನ ಜೊತೆ ಮಾತನಾಡಲಾರ. ಅದು ತುಂಬ ಜರ್ಜರಿತವಾಗಿತ್ತು. ಅಷ್ಟರಲ್ಲಿ ಅವನ ತಲೆಯಲ್ಲಿ ಏನೋ ವಿಚಾರ ಸುಳಿಯಿತು.

''ಅರ್ಧ ಮೀನು! ನಿನಗಿಂಥ ಸ್ಥಿತಿ ಬಂದೊದಗಿತೆ? ಬಹಳ ದೂರ ಹೋಗಿದ್ದಕ್ಕೆ ಹೀಗಾಯಿತು.

ದಯವಿಟ್ಟು ಕ್ಷಮೆ ಇರಲಿ. ನಮ್ಮಿಬ್ಬರನ್ನೂ ನಾನು ನಾಶಗೊಳಿಸಿದೆ. ಆದರೆ ನಾವಿಬ್ಬರೂ ಎಷ್ಟೋ ಶಾರ್ಕ್‌ಗಳನ್ನು ಕೊಂದೆವು. ಹೌದು ನಾನು ಹಾಗೂ ನೀನು. ಮುದಿ ಮೀನು ಪ್ರಾಣಿಯೇ, ನೀನೆಷ್ಟು ಮೀನುಗಳನ್ನು ಕೊಂದಿದ್ದೆ? ಇತರ ಮೀನುಗಳಂತೆ ನಿನ್ನ ತಲೆಯ ಮೇಲೆ ಕೊಂಬು ಮೂಡಿಲ್ಲವಲ್ಲ.''

ಮೀನಿನ ಬಗ್ಗೆ ಯೋಚಿಸುತ್ತ ಕಾಲ ಕಳೆಯುವುದು ಅವನಿಗೆ ಇಷ್ಟವಾಗಿತ್ತು. ತಮ್ಮಷ್ಟಕ್ಕೆ ತಾವು ಸ್ವತಂತ್ರವಾಗಿ ಈಜುತ್ತಿರುವ ಶಾರ್ಕ್‌ಗಳ ಗೊಡವೆ ತನಗೇಕೆ ಎಂದುಕೊಂಡ. ಅವುಗಳ ಮೂತಿಯ ಮೇಲಿರುವ ಕೊಂಬನ್ನು ಕತ್ತರಿಸಿ ಹಾಕುತ್ತಿದ್ದೆ. ಆದರೆ ತನ್ನ ಬಳಿ ಕೈ ಕೊಡಲಿಯಾಗಲಿ, ಚಾಕುವಾಗಲಿ ಇರಲಿಲ್ಲ.

ಒಂದು ವೇಳೆ ಕೈ ಕೊಡಲಿ ಅಥವಾ ಚಾಕು ತನ್ನ ಬಳಿ ಇದ್ದರೆ ಅವುಗಳನ್ನು ಹುಟ್ಟಿನ ತುದಿಗೆ ಕಟ್ಟುತ್ತಿದ್ದೆ. ಎಂಥ ಆಯುಧ ಅದು! ಆಗ ನಾವಿಬ್ಬರೂ ಜೊತೆಗೂಡಿ ಅವುಗಳ ಕೂಡ ಹೋರಾಡುತ್ತಿದ್ದೆವು. ಒಂದು ವೇಳೆ ರಾತ್ರಿಯಾದ ಮೇಲೆ ಅವು ದಾಳಿಯಿಟ್ಟರೆ ಏನು ಮಾಡುವೆ ಹೇಳು?

''ಅವುಗಳ ಜೊತೆ ಹೋರಾಡುವೆ, ಜೀವ ಇರುವವರೆಗೂ ಹೋರಾಡುವೆ'' ಆತ ದೃಢ ನಿಶ್ಚಯದ ಧಾಟಿಯಲ್ಲಿ ಹೇಳಿದ.

ಈಗ ಸುತ್ತೆಲ್ಲ ಕತ್ತಲು. ಎಲ್ಲಿಯೂ ಬೆಳಕಿನ ಸುಳಿವು ಇಲ್ಲ. ದೀಪಗಳೂ ಕಾಣುತ್ತಿಲ್ಲ. ಬರೀ ಗಾಳಿ ಹಾಗೂ ಹಾಯಿ ಪಟದ ಸದ್ದು ಮಾತ್ರ ಅನುಭವಕ್ಕೆ ಬರುತ್ತಿದೆ. ಆಗಲೇ ತಾನು ಸತ್ತು ಹೋಗಿರಬಹುದೇ ಎಂದುಕೊಂಡ. ಆತ ತನ್ನ ಎರಡೂ ಅಂಗೈಗಳನ್ನು ಜೋಡಿಸಿದ. ಅವು ಜೀವಂತವಾಗಿದ್ದವು. ಅವುಗಳನ್ನು ಮುಚ್ಚಿ ತೆರೆಯುತ್ತ ನೋವು ಅನುಭವಿಸಿದ. ಹಿಂದಕ್ಕೆ ಬಾಗಿ ದೋಣಿಗೆ ಆತು ಕುಳಿತು ತಾನಿನ್ನೂ ಜೀವಂತವಾಗಿರುವೆ ಎಂದುಕೊಂಡ. ಆತನ ಭುಜಗಳು ಅದನ್ನು ಆತನಿಗೆ ಹೇಳಿದವು.

ಮೀನು ಹಿಡಿದರೆ ಪ್ರಾರ್ಥನೆ ಹೇಳುವೆ ಎಂದು ವಚನವಿತ್ತಿದ್ದೆ. ಆದರೆ ತಾನೀಗ ಬಹಳ ದಣಿದಿದ್ದರಿಂದ ಪ್ರಾರ್ಥನೆ ಹೇಳಲಾರೆ. ಸದ್ಯ ಅರಿವೆಯ ಚೀಲವನ್ನು ತೆಗೆದುಕೊಂಡು ಭುಜಗಳ ಮೇಲೆ ಹೊದ್ದುಕೊಳ್ಳಬೇಕು.

ಆತ ಚುಕ್ಕಾಣಿ ಆಡಿಸುತ್ತ ಬೆಳಕಿನ ಸೆಳಕುಗಳಿಗಾಗಿ ಆಗಸದತ್ತ ನೋಡಿದ. ತನ್ನ ಬಳಿ ಅರ್ಧ ಮೀನು ಮಾತ್ರ ಉಳಿದಿದೆ. ಅಷ್ಟನ್ನಾದರೂ ಕೊಂಡೊಯ್ಯುವ ಭಾಗ್ಯ ತನ್ನದಾಗಬಹುದೆ ಎಂದುಕೊಂಡ. ಯಾವುದಕ್ಕೂ ಸ್ವಲ್ಪ ದೈವದ ಸಹಾಯ ಬೇಕು. ಇಲ್ಲ, ಬಹಳ ದೂರಕ್ಕೆ ಹೋಗಿ ನೀನು ದೈವವನ್ನು ಎದುರು ಹಾಕಿಕೊಂಡಿರುವೆ.

''ಮೂರ್ಖರಂತೆ ಮಾತನಾಡಬೇಡ, ಇನ್ನಾದರೂ ಎಚ್ಚರಾಗು, ಚೆನ್ನಾಗಿ ಚುಕ್ಕಾಣಿ ಹಿಡಿದುಕೊ, ನಿನಗಿನ್ನೂ ಒಳ್ಳೆಯ ದೈವ ಕಾದಿದೆ'' ಆತ ಗಟ್ಟಿಯಾಗಿ ಹೇಳಿದ.

''ದೈವವೆನ್ನುವುದು ಮಾರುಕಟ್ಟೆಯಲ್ಲಿ ಸಿಗುವಂತಿದ್ದರೆ ಕೊಳ್ಳಬೇಕೆಂದಿರುವೆ'' ಆತ ಹೇಳಿದ.

''ಏನು ಕೊಟ್ಟು ಅದನ್ನು ಕೊಂಡುಕೊಳ್ಳಲಿ?'' ಆತ ತನ್ನನ್ನೇ ಕೇಳಿಕೊಂಡ, ''ಕಳೆದು ಹೋದ ಹಾರ್ಪೂನು, ಮುರಿದ ಚಾಕು ಹಾಗೂ ಈ ಎರಡು ದರಿದ್ರ ಕೈಗಳನ್ನು ಕೊಟ್ಟು ಅದನ್ನು ಕೊಂಡುಕೊಳ್ಳಲೆ?''

''ಹಾಗೇ ಮಾಡು'' ಆತ ಹೇಳಿದ. ''ಎಂಭತ್ನಾಲ್ಕು ದಿನಗಳನ್ನು ದಂಡ ತೆತ್ತು ನೀನು ಅದನ್ನು ಕೊಳ್ಳಲು ಪ್ರಯತ್ನಿಸಿದೆ. ವ್ಯಾಪಾರ ಕುದುರಿತ್ತು ಕೂಡ.''

ಅಸಂಬದ್ಧವಾಗಿ ಯೋಚಿಸುವುದು ಬೇಡ ಎಂದುಕೊಂಡ. ದೈವವೆನ್ನುವುದು ವಿವಿಧ ರೂಪಗಳಲ್ಲಿ ಕಾಣಿಸಿಕೊಳ್ಳುತ್ತವೆ. ಅದನ್ನಾರು ಗುರುತಿಸಬಲ್ಲರು? ದೈವ ಯಾವುದೇ ರೂಪದಲ್ಲಿದ್ದರೂ ಅವರು ಹೇಳಿದಷ್ಟು ಕೊಟ್ಟು ಅದನ್ನು ಕೊಂಡುಕೊಳ್ಳುವೆ. ತಾನೀಗ ಬೆಳಕಿನ ಪ್ರತೀಕ್ಷೆಯಲ್ಲಿರುವೆ. ತನ್ನ ಬಯಕೆಗಳು ಒಂದೋ ಎರಡೋ! ಅದೇನೇ ಇರಲಿ ತನಗೀಗ ಬೇಕಾಗಿರುವುದು ಬೆಳಕು. ಆತ ನೆಟ್ಟಗೆ

ಕುಳಿತು ಚುಕ್ಕಾಣಿ ಆಡಿಸಲು ಅಣಿಯಾದ. ನೋವಿನ ಅನುಭವವಾಗಿ ತಾನಿನ್ನೂ ಜೀವಂತವಾಗಿರುವೆ ಎಂದುಕೊಂಡ.

ಸುಮಾರು ರಾತ್ರಿಯ ಹತ್ತು ಗಂಟೆಯಾಗಿರಬಹುದು. ಪಟ್ಟಣದ ದೀಪಗಳ ಚದುರಿದ ಬೆಳಕು ನೀರಲ್ಲಿ ಪ್ರತಿಫಲನಗೊಂಡದ್ದು ಕಾಣಿಸಿತು. ಚಂದ್ರೋದಯಕ್ಕೆ ಮುನ್ನಿನ ಚುಕ್ಕೆಗಳ ಟಿಮಿ ಟಿಮಿ ಬೆಳಕು ಆಗಸವನ್ನು ತುಂಬಿಕೊಂಡಿದ್ದರಿಂದ ಪಟ್ಟಣದ ಬೆಳಕನ್ನು ಗ್ರಹಿಸುವುದು ಕಷ್ಟವಾಗಿತ್ತು. ನಂತರ ಆ ದೀಪಗಳು ತೀರದ ಗುಂಟ ಸ್ಪಷ್ಟವಾಗಿ ಗೋಚರಿಸತೊಡಗಿದವು. ಈಗ ಕಡಲು ಗಾಳಿ ಹೆಚ್ಚಿದ್ದರಿಂದ ಸಮುದ್ರ ಕ್ಷೋಭೆಗೊಂಡಿತ್ತು. ಆತ ಬೆಳಕಿನೆಡೆಗೆ ದೋಣಿಯನ್ನು ತಿರುಗಿಸಿದ. ಈಗ ಪ್ರವಾಹದ ಸೆಳೆತವನ್ನು ಭೇದಿಸಬೇಕಿತ್ತು.

ಹೋರಾಟವೀಗ ಕೊನೆಗೊಂಡಿತು. ಬಹುಶಃ ಅವು ಮತ್ತೆ ದಾಳಿ ಮಾಡಬಹುದು. ಈ ಕತ್ತಲೆಯಲ್ಲಿ ನಿರಾಯುಧನಾದ ಒಬ್ಬ ಮನುಷ್ಯ ಏನು ತಾನೆ ಮಾಡಬಲ್ಲ?

ಅವನ ದೇಹ ಹಣ್ಣು ಹಣ್ಣಾಗಿತ್ತು. ರಾತ್ರಿಯ ಚಳಿಗೆ ಅವನ ದೇಹದ ಅಂಗಾಂಗಗಳು ಹಾಗೂ ಗಾಯಗಳು ವಿಪರೀತವಾಗಿ ನೋಯುತ್ತಿದ್ದವು. ಮತ್ತೆ ತನಗೆ ಹೋರಾಡುವ ಪ್ರಸಂಗ ಬರಲಿಕ್ಕಿಲ್ಲವೆಂದುಕೊಂಡ. ಅದೇ ತನ್ನ ಪ್ರಬಲ ಆಸೆಯಾಗಿದೆ.

ಆದರೆ ಮಧ್ಯರಾತ್ರಿಯ ಸುಮಾರಿಗೆ ಆತ ಮತ್ತೆ ಹೋರಾಡಬೇಕಾಯಿತು. ಆ ಹೋರಾಟ ನಿರರ್ಥಕವಾಗಿತ್ತು. ಏಕೆಂದರೆ ಅವು ಗುಂಪುಗೂಡಿ ಬಂದು ದಾಳಿಯಿಟ್ಟಿದ್ದವು. ಈಜು ರೆಕ್ಕೆಗಳಿಂದ ನೀರನ್ನು ಸೀಳುತ್ತ ಬರುವಾಗ ಉಂಟಾಗುತ್ತಿದ್ದ ನೀರಿನ ಧಾರೆ ಹಾಗೂ ಅವುಗಳ ದೇಹದ ಥಳಕು ಮಾತ್ರ ಆತನಿಗೆ ಕಾಣುತ್ತಿತ್ತು. ಆತ ಅವುಗಳ ತಲೆಗೆ ಇಕ್ಕಿದ. ಅವುಗಳ ದವಡೆಗಳ ಕರಕರ ಸದ್ದನ್ನು ಆತ ಆಲಿಸಿದ. ಕೆಳಬದಿಯಿಂದ ಮೀನನ್ನು ಹರಿದು ತಿನ್ನುವಾಗ ದೋಣಿ ಹೊಯ್ದಾಡತೊಡಗಿತ್ತು. ಹತಾಶನಾಗಿ ಕೇವಲ ಅಂದಾಜಿನ ಮೇಲೆ ಆತ ದೊಣ್ಣೆಯಿಂದ ಹೊಡೆಯತೊಡಗಿದ. ಯಾವುದೋ ಏನೋ ದೊಣ್ಣೆಯನ್ನು ಹಿಡಿದೆಳೆದುಕೊಂಡು ಅಲ್ಲಿಂದ ಮಾಯವಾಯಿತು.

ಈಗ ಆತ ಚುಕ್ಕಾಣಿಯನ್ನೇ ಹೊರಗೆಳೆದುಕೊಂಡು ಎರಡೂ ಕೈಗಳಿಂದ ಒಂದೇ ಸಮನೇ ಜಜ್ಜತೊಡಗಿದ. ಆದರೆ ಅವು ದೋಣಿಯ ಮೇಲೆ ಮುಗಿದು ಬಿದ್ದವು. ಒಂದರ ಮೇಲೊಂದು ಬಿದ್ದು ದಡಪಡಿಸುತ್ತ ಮಾಂಸವನ್ನು ಹರಿದು ಚೂರು ಚೂರು ಮಾಡುತ್ತಿದ್ದವು.

ಕೊನೆಗೊಂದು ಶಾರ್ಕ್ ಬಂದು ಮೀನಿನ ತಲೆಗೆ ಬಾಯಿ ಹಾಕಿತು. ಆತ ಚುಕ್ಕಾಣಿಯನ್ನೆತ್ತಿ ಅದರ ತಲೆಗೆ ಹಾಕಿದ. ತಲೆ ಬಿರುಸಾಗಿದ್ದರಿಂದ ಅದನ್ನು ಕಚ್ಚಲು ಅದಕ್ಕೆ ಸಾಧ್ಯವಾಗಿರಲಿಲ್ಲ. ಆತ ಮತ್ತೆ ಮತ್ತೆ ಏಟು ಹಾಕುತ್ತಿರುವಂತೆ ಚುಕ್ಕಾಣಿಯ ತುದಿ ಮುರಿದು ಹೋಯಿತು. ಈಗ ಸಿಬುರೆದ್ದ ಚುಕ್ಕಾಣಿಯ ತುದಿಯಿಂದಲೇ ಆತ ಶಾರ್ಕದ ದೇಹವನ್ನು ತಿವಿದ. ಅದು ಅದರ ಚರ್ಮದಲ್ಲಿ ನಾಟಿತು. ಆತ ಮತ್ತೊಂದು ಸಲ ತಿವಿದೊಡನೆ ಶಾರ್ಕ್ ಹೊರಟುಹೋಯಿತು. ಆ ಗುಂಪಿನ ಕೊನೆಯ ಶಾರ್ಕ್ ಅದು. ಇನ್ನು ತಿನ್ನಲು ಏನೂ ಉಳಿದಿರಲಿಲ್ಲ.

ಆತನಿಗೆ ಉಸಿರಾಡಲೂ ಕಷ್ಟವಾಗತೊಡಗಿತು. ತಾಮ್ರದ ವಾಸನೆ ಹಾಗೂ ಸಿಹಿ ಮಿಶ್ರಿತ ವಿಚಿತ್ರ ದ್ರವ ಆತನ ಬಾಯಿಗೆ ಬಂತು. ಒಂದು ಕ್ಷಣ ಆತನಿಗೆ ಗಾಬರಿಯಾಯಿತು. ಆದರೆ ಅದು ಅಷ್ಟಕ್ಕೇ ನಿಂತಿತು.

ಆತ ಸಮುದ್ರದಲ್ಲಿ ಉಗುಳಿ ಹೇಳಿದ. ''ಶಾರ್ಕಗಳೇ, ಅದನ್ನು ತಿಂದು ಬಿಡಿ. ಓರ್ವ ಮನುಷ್ಯನನ್ನು ಕೊಂದುಬಿಟ್ಟೆವು ಎಂದು ಕನಸು ಕಾಣುತ್ತ ಸಂಭ್ರಮದಿಂದ ನಲಿಯಿರಿ.''

ಆತನಿಗೆ ತನ್ನ ಸೋಲಿನ ಅರಿವಾಗಿತ್ತು. ಉಪಾಯವಿಲ್ಲದೆ ದೋಣಿಯ ಹಿಂಭಾಗಕ್ಕೆ ಬಂದು, ಸಿಬುರೆದ್ದ ಚುಕ್ಕಾಣಿಯನ್ನು ಮತ್ತೆ ದೋಣಿಗೆ ಅಳವಡಿಸಿದ. ತನ್ನ ಭುಜಗಳ ಮೇಲೆ ಅರಿವೆಯ

ಚೀಲವನ್ನು ಹೊದ್ದುಕೊಂಡು, ಚುಕ್ಕಾಣಿಯನ್ನು ತಿರುಗಿಸಿ, ದೋಣಿ ಮುಂದೆ ಸಾಗಲು ಬಿಟ್ಟ. ದೋಣಿ ಹಗುರಾಗಿ ತೇಲತೊಡಗಿತು. ಈಗ ಅವನ ತಲೆಯಲ್ಲಿ ಯೋಚನೆಗಳಾಗಲಿ, ಮನಸ್ಸಿನಲ್ಲಿ ಭಾವನೆಗಳಾಗಲಿ ಇರಲಿಲ್ಲ. ಅವೆಲ್ಲ ಗತಿಸಿ ಹೋದ ಸಂಗತಿ ಎಂದುಕೊಂಡು ಜಾಣತನದಿಂದ ದೋಣಿಯನ್ನು ಬಂದರಿನತ್ತ ಸಾಗಿಸಿದ.

ರಾತ್ರಿಯಿಡೀ ಶಾರ್ಕ್‌ಗಳು ಮೀನಿನ ಅಸ್ಥಿಪಂಜರದ ಮೇಲೆ ಎರಗಿದವು. ಅವು ಎಲುಬುಗಳನ್ನು ಕಚ್ಚುವಾಗ ಕಟಕು ಸಂಡಿಗೆಗಳಂತೆ ಕುರು ಕುರು ಸದ್ದು ಹೊರಡುತ್ತಿತ್ತು. ಆತ ಅದರತ್ತ ಲಕ್ಷ್ಯ ಕೊಡಲಿಲ್ಲ. ಚುಕ್ಕಾಣಿ ಆಡಿಸುವುದನ್ನುಳಿದು ಆತ ಬೇರೆ ಯಾವ ಕಡೆಗೂ ಲಕ್ಷ್ಯ ಹಾಕಲಿಲ್ಲ. ದೋಣಿ ಹಗುರವಾಗಿ ಹಾಗೂ ಸರಾಗವಾಗಿ ಸಾಗುತ್ತಿರುವುದನ್ನು ನೋಡುತ್ತ ಕುಳಿತ.

ದೋಣಿಯ ಸ್ಥಿತಿ ಮಾತ್ರ ಚೆನ್ನಾಗಿದೆ. ಚುಕ್ಕಾಣಿಯೊಂದನ್ನು ಬಿಟ್ಟರೆ ಅದರ ಯಾವ ಭಾಗಕ್ಕೂ ಧಕ್ಕೆಯಾಗಿಲ್ಲ. ಚುಕ್ಕಾಣಿ ಹಾಳಾದರೆ ತೊಂದರೆಯಿಲ್ಲ. ಅದನ್ನು ಸುಲಭವಾಗಿ ಬದಲಿಸಬಹುದು.

ಪ್ರವಾಹದ ಸೆಳವು ದಾಟಿದ್ದರ ಅರಿವು ಅವನಿಗಾಯಿತು. ಬೀಚಿನಲ್ಲಿರುವ ಓಣಿಗಳ ದೀಪಗಳು ಈಗ ಕಾಣತೊಡಗಿದ್ದವು. ತಾನೆಲ್ಲಿದ್ದೇನೆ ಎಂಬುದು ಆತನಿಗೆ ಗೊತ್ತಿತ್ತು. ಮನೆ ತಲುಪುವುದು ಕಷ್ಟವಾಗಿರಲಿಲ್ಲ.

ಏನೇ ಆಗಲಿ, ಒಮ್ಮೊಮ್ಮೆ ಗಾಳಿ ನಮ್ಮ ಗೆಳೆಯನೇ ಸರಿ. ಅಲ್ಲದೆ ಈ ಮಹಾ ಸಮುದ್ರ ನಮ್ಮ ಗೆಳೆಯರಿಂದ ಹಾಗೂ ವೈರಿಗಳಿಂದ ತುಂಬಿ ಹೋಗಿದೆ. ಹಾಸಿಗೆ ಕೂಡ ನನ್ನ ಗೆಳೆಯ. ಹೌದು, ಹಾಸಿಗೆ ಸಾಮಾನ್ಯ ವಸ್ತುವಲ್ಲ. ಸೋತು ಬಸವಳಿದು ಮನೆ ಸೇರಿದಾಗ ನೀವು ಸುಲಭವಾಗಿ ಹಾಸಿಗೆಯ ಮೇಲೊರಗಬಹುದು. ಹಾಸಿಗೆ ಸುಖದ ಮಹತ್ವ ತನಗೆ ಗೊತ್ತೇ ಇರಲಿಲ್ಲ. ಇರಲಿ, ನಿನ್ನನ್ನು ಯಾರು ಸೋಲಿಸಿದರು ಗೊತ್ತೆ ಎಂದು ಆತ ತನ್ನನ್ನೇ ಕೇಳಿಕೊಂಡ.

''ನನ್ನನ್ನು ಯಾರೂ ಸೋಲಿಸಲಿಲ್ಲ'' ಆತ ಕೂಗಿ ಹೇಳಿದ. ''ನಾನು ಬಹಳ ದೂರ ಹೋಗಿದ್ದೆ, ಅಷ್ಟೆ.''

ಆತ ಆ ಪುಟ್ಟ ಬಂದರು ತಲುಪಿದಾಗ ಟೆರೇಸ್ ಹೋಟೇಲಿನ ದೀಪಗಳು ಆರಿದ್ದವು. ಎಲ್ಲರೂ ಮಲಗಿದ್ದಾರೆಂದುಕೊಂಡ. ಕಡಲು ಗಾಳಿಯು ರಭಸ ಈಗ ಹೆಚ್ಚತೊಡಗಿತ್ತು. ಬಂದರಿನ ತುಂಬೆಲ್ಲ ಮೌನ ಆವರಿಸಿತ್ತು. ಆತ ಬಂಡೆಗಲ್ಲಿನ ಬಳಿ ಇದ್ದ ಕಲ್ಲು ಮೆಟ್ಟಲುಗಳ ಬಳಿಗೆ ದೋಣಿಯನ್ನು ಕೊಂಡೊಯ್ದು. ಅಲ್ಲಿ ಆತನಿಗೆ ಸಹಾಯ ಮಾಡಲು ಯಾರೂ ಇರಲಿಲ್ಲ. ಆದ್ದರಿಂದ ಆತ ದೋಣಿಯನ್ನು ಸಾಧ್ಯವಾದಷ್ಟು ಮುಂದೆ ನೂಕಿ, ಕೆಳಗಿಳಿದು, ಬಂಡೆಗಲ್ಲಿಗೆ ಅದನ್ನು ಕಟ್ಟಿದ.

ಆತ ಹಾಯಿ ಕಂಬವನ್ನು ಕೆಳಗಿಳಿಸಿ ಹಾಯಿ ಪಟವನ್ನು ಸುತ್ತಿ, ಕಟ್ಟಿದ. ನಂತರ ಅದನ್ನು ಹೆಗಲ ಮೇಲೆ ಹೊತ್ತುಕೊಂಡು ದಿಬ್ಬ ಏರತೊಡಗಿದ. ಅಬ್ಬಾ, ತಾನೆಷ್ಟು ದಣಿದಿರುವೆ ಎಂದುಕೊಂಡ. ಒಂದು ಕ್ಷಣ ಅಲ್ಲಿಯೇ ನಿಂತು ಹಿಂದಿರುಗಿ ನೋಡಿದ. ಬೀದಿ ದೀಪಗಳ ಪ್ರತಿಫಲನದ ಬೆಳಕಲ್ಲಿ ಬೃಹದಾಕಾರದ ಬಾಲ ದೋಣಿಯ ಹಿಂಬದಿಗೆ ಸೆಟೆದು ನಿಂತುಕೊಂಡಿತ್ತು. ಅದರ ಬೆನ್ನಿನ ಅಸ್ಥಿಪಂಜರದ ಬಿಳಿ ಗೆರೆಗಳು ಹಾಗೂ ಮುಂದೆ ಚಾಚಿದ ಕೊಕ್ಕೆಯುಳ್ಳ ಅದರ ತಲೆಯನ್ನು ಆತ ಗಮನಿಸಿದ. ಬಾಲ ಹಾಗೂ ತಲೆಯ ಮಧ್ಯ ಭಾಗದಲ್ಲಿ ಎಲ್ಲವೂ ಪೊಳ್ಳಾಗಿತ್ತು.

ಆತ ಮತ್ತೆ ದಿಬ್ಬ ಏರತೊಡಗಿದ. ಮೇಲೆ ಏರುತ್ತಿದ್ದಂತೆ ಕುಸಿದು ಬಿದ್ದ. ನಂತರ ಸ್ವಲ್ಪ ಹೊತ್ತು ಅಲ್ಲಿಯೇ ಕುಳಿತ. ಭುಜದ ಮೇಲೆ ಹಾಯಿ ಕಂಬ ಹಾಗೇ ಇತ್ತು. ಈಗ ಮೇಲೇಳಲು ಪ್ರಯತ್ನಿಸಿದ. ಸಾಧ್ಯವಾಗದೇ ಹಾಯಿ ಕಂಬವನ್ನು ಹೊತ್ತು ಅಲ್ಲಿಯೇ ಕುಳಿತು ರಸ್ತೆಯ ಕಡೆಗೆ ನೋಡಿದ. ದೂರದಲ್ಲಿ ಬೆಕ್ಕೊಂದು ತನ್ನ ಕಾಯಕಕ್ಕಾಗಿ ರಸ್ತೆಯ ಬದಿಯಿಂದ ಹೊರಟಿತ್ತು. ಅನಂತರ ಆತ ರಸ್ತೆಯನ್ನೇ ನೋಡತೊಡಗಿದ.

ಕೊನೆಗೆ ಆತ ಹಾಯಿ ಕಂಬವನ್ನು ಕೆಳಗಿಳಿಸಿ, ಎದ್ದು ನಿಂತ. ನಂತರ ಅದನ್ನೆತ್ತಿ ಹೆಗಲ ಮೇಲಿರಿಸಿಕೊಂಡು ಮುನ್ನಡೆದ. ಆತ ಮನೆ ತಲುಪುವುದಕ್ಕೆ ಮುನ್ನ ಐದು ಬಾರಿ ಕುಳಿತುಕೊಳ್ಳಬೇಕಾಯಿತು.

ಮನೆ ಸೇರಿದ ಮೇಲೆ ಆತ ಹಾಯಿ ಕಂಬವನ್ನು ಗೋಡೆಗಾನಿಸಿ ಇಟ್ಟ. ಕತ್ತಲಲ್ಲೇ ಕೈಯಾಡಿಸಿ ಬಾಟಲಿಯನ್ನು ಹುಡುಕಿ ನೀರು ಕುಡಿದ. ನಂತರ ಹಾಸಿಗೆಯ ಮೇಲೊರಗಿದ. ತನ್ನ ಭುಜಗಳ ಮೇಲೆ ರಗ್ಗನ್ನು ಎಳೆದುಕೊಂಡು, ಬೆನ್ನು, ಕಾಲು ಮುಚ್ಚಿಕೊಂಡು, ಎರಡೂ ಕೈಗಳನ್ನು ಹೊರಚಾಚಿ, ಅಂಗೈ ಮೇಲೆ ಮಾಡಿ, ಜೋರಲಾಗಿ ಮಲಗಿಕೊಂಡ.

ಮುಂಜಾನೆ ಹುಡುಗ ಬಂದು ಬಾಗಿಲಲ್ಲಿ ಇಣಕಿದಾಗ ಆತ ಇನ್ನೂ ಮಲಗಿದ್ದ. ಅಂದು ಗಾಳಿಯ ರಭಸ ತೀವ್ರವಾಗಿದ್ದರಿಂದ ದೋಣಿಗಳು ಸಮುದ್ರ ಸೇರುವಂತಿರಲಿಲ್ಲ. ಹುಡುಗ ನಿನ್ನಿನ ರಾತ್ರಿ ತಡವಾಗಿ ಮಲಗಿದ್ದ. ಎಂದಿನಂತೆ ಬೇಗ್ಗೆ ಎದ್ದು ವೃದ್ಧನ ಮನೆಗೆ ಬಂದಿದ್ದ.

ಹುಡುಗ ಆತನ ಉಸಿರಾಟವನ್ನು ಗಮನಿಸಿದ. ನಂತರ ಅವನ ಕೈಗಳನ್ನು ನೋಡಿ ಹುಡುಗ ಅಳತೊಡಗಿದ. ಆಮೇಲೆ ಕಾಫಿ ತರಲೆಂದು ಸುಮ್ಮನೆ ಎದ್ದು ಹೊರ ನಡೆದ. ದಾರಿಯುದ್ದಕ್ಕೂ ಆತ ಅಳುತ್ತಲೇ ಇದ್ದ.

ಎಷ್ಟೋ ಮೀನುಗಾರರು ದೋಣಿಯ ಬಳಿ ಗುಂಪುಗೂಡಿದ್ದರು. ದೋಣಿಯ ಬದಿಗೆ ಏನು ಕಟ್ಟಲಾಗಿದೆ ಎಂದು ಅವರು ವಿಸ್ಮಯದಿಂದ ನೋಡುತ್ತಿದ್ದರು. ಅದರಲ್ಲೊಬ್ಬ ಹಗ್ಗದ ಹುರಿಯಿಂದ ಮೀನಿನ ಅಸ್ಥಿಪಂಜರವನ್ನು ಅಳೆಯುತ್ತಿದ್ದ.

ಹುಡುಗ ಕೆಳಗಿಳಿದು ಹೋಗಲಿಲ್ಲ. ಆತ ಈ ಮೊದಲೇ ಅಲ್ಲಿಗೆ ಹೋಗಿ ಬಂದಿದ್ದ. ಆತನ ಜಾಗದಲ್ಲಿ ಮೀನುಗಾರನೊಬ್ಬ ಕಾವಲು ಕಾಯುತ್ತಿದ್ದ.

''ಅವನು ಹೇಗಿದ್ದಾನೆ?'' ಓರ್ವ ಮೀನುಗಾರ ಕೂಗಿ ಕೇಳಿದ.

''ಮಲಗಿದ್ದಾನೆ'' ಹುಡುಗ ಗಟ್ಟಿಯಾಗಿ ಕೂಗಿ ಹೇಳಿದ. ತಾನು ಅಳುವುದನ್ನು ಅವರು ನೋಡಿದರೆ ನೋಡಲಿ ಎಂದುಕೊಂಡ. ''ಯಾರೂ ಆತನಿಗೆ ತೊಂದರೆ ಕೊಡಬೇಡಿ.''

''ಅಡಿಯಿಂದ ಮುಡಿಯವರೆಗೆ ಅದು ಹದಿನೆಂಟು ಅಡಿ ಉದ್ದವಾಗಿದೆ.'' ಅದನ್ನು ಅಳತೆ ಮಾಡುತ್ತಿದ್ದ ಮೀನುಗಾರ ಕೂಗಿ ಹೇಳಿದ.

''ನಿನ್ನ ಮಾತಿನಲ್ಲಿ ನನಗೆ ನಂಬಿಕೆಯಿದೆ'' ಹುಡುಗ ಉತ್ತರಿಸಿದ.

ಆತ ಟೆರೇಸ್‌ಗೆ ಹೋಗಿ ಒಂದು ಕ್ಯಾನು ಕಾಫಿ ಕೊಡುವಂತೆ ಕೇಳಿದ.

''ಚೆನ್ನಾಗಿ ಹಾಲು ಸಕ್ಕರೆ ಬೆರೆಸು, ಬಿಸಿಯಾಗಿರಲಿ''

''ಮತ್ತೇನಾದರೂ ಬೇಕೆ?''

''ಸದ್ಯ ಬೇಡ, ಅನಂತರ ಆತ ಏನು ತಿನ್ನುತ್ತಾನೋ ನೋಡೋಣ.''

''ಅದೆಂಥ ಅದ್ಭುತ ಮೀನು!'' ಹೊಟೇಲಿನ ಮಾಲಿಕ ಉದ್ಗರಿಸಿದ. ''ಈವರೆಗೆ ಅಂಥ ಮೀನನ್ನು ಕಂಡದ್ದೇ ಇಲ್ಲ. ನಿನ್ನೆ ನೀನು ಹಿಡಿದ ಮೀನುಗಳೂ ಅತ್ಯುತ್ತಮವಾಗಿವೆ.''

''ನನ್ನ ಮೀನುಗಳು ಹಾಳಾಗಿ ಹೋಗಲಿಬಿಡು'' ಎನ್ನುತ್ತ ಹುಡುಗ ಮತ್ತೆ ಅಳತೊಡಗಿದ.

''ಕುಡಿಯಲು ಯಾವುದಾದರೂ ಪಾನೀಯ ಬೇಕೇ?'' ಹೊಟೇಲು ಮಾಲಿಕ ಕೇಳಿದ.

''ಬೇಡ, ಸಾಂಟಿಯಾಗೊನನ್ನು ಪೀಡಿಸದಿರಲು ಅವರಿಗೆ ಹೇಳು. ನಾನು ಇಷ್ಟರಲ್ಲೇ ಬಂದು ಬಿಡುವೆ.''

''ನನಗಾದ ದುಃಖವನ್ನು ಅವನಿಗೆ ತಿಳಿಸು'' ಹೊಟೇಲು ಮಾಲಿಕ ಹೇಳಿದ.

''ಆಗಲಿ, ಧನ್ಯವಾದಗಳು'' ಹುಡುಗ ಹೇಳಿದ.

ಹುಡುಗ ಕ್ಯಾನಿನಲ್ಲಿ ಬಿಸಿಯಾದ ಕಾಫಿ ತುಂಬಿಕೊಂಡು ಸಾಂಟಿಯಾಗೊನ ಮನೆಗೆ ಬಂದ. ಆತ

ಏಳುವವರೆಗೂ ಅಲ್ಲಿಯೇ ಕುಳಿತ. ಒಮ್ಮೆ ಆತನಿಗೆ ಎಚ್ಚರವಾಗಿರಬೇಕೆನಿಸಿತು. ಆದರೆ ಆತ ಮತ್ತೆ ಗಾಢವಾಗಿ ನಿದ್ರಿಸತೊಡಗಿದ. ಕಾಫಿ ಬಿಸಿ ಮಾಡಲು ಕಟ್ಟಿಗೆ ತರಲೆಂದು ಹುಡುಗ ರಸ್ತೆ ಹಿಡಿದು ಹೋದ.

ಕೊನೆಗೆ ಸಾಂಟಿಯಾಗೊನಿಗೆ ಎಚ್ಚರವಾಯಿತು.

''ಹಾಗೇ ಕುಳಿತುಕೊಳ್ಳಬೇಡ, ಕುಡಿ ಇದನ್ನು'' ಎನ್ನುತ್ತ ಹುಡುಗ ಗ್ಲಾಸಿನೊಳಗೆ ಕಾಫಿ ಸುರಿದ.

ಆತ ಅದನ್ನೆತ್ತಿಕೊಂಡು ಕುಡಿದ.

''ಮನೋಲಿನ್, ಅವು ನನ್ನನ್ನು ಸೋಲಿಸಿದವು'' ಆತ ಖಿನ್ನನಾಗಿ ಹೇಳಿದ, ''ನಿಜವಾಗಿಯೂ, ಅವು ನನ್ನನ್ನು ಸೋಲಿಸಿಬಿಟ್ಟವು''

''ಮೀನು ನಿನ್ನನ್ನು ಸೋಲಿಸಲಿಲ್ಲ. ಮಾರ್ಲಿನ್ ನಿನ್ನನ್ನು ಸೋಲಿಸಲಿಲ್ಲವಲ್ಲ''

''ಇಲ್ಲ, ನಿಜವಾಗಿಯೂ ಮಾರ್ಲಿನ್ ನನ್ನನ್ನು ಸೋಲಿಸಲಿಲ್ಲ. ಅದೆಲ್ಲ ಅನಂತರ ಸಂಭವಿಸಿದ್ದು''

''ಪೆಡ್ರಿಕೊ ದೋಣಿಯನ್ನು ಹಾಗೂ ಅದರಲ್ಲಿಯ ಸರಂಜಾಮುಗಳನ್ನು ಕಾಯುತ್ತಿದ್ದಾನೆ. ಮೀನಿನ ತಲೆಯನ್ನು ತೆಗೆದುಕೊಂಡು ಏನು ಮಾಡುವೆ?''

''ಅದನ್ನು ಕತ್ತರಿಸಿ, ಪೆಡ್ರಿಕೊ ಬಲೆಗಳಿಗಾಗಿ ಉಪಯೋಗಿಸಿಕೊಳ್ಳಲಿ ಬಿಡು''

''ಮತ್ತೆ ಈಟಿಯನ್ನು?''

''ಬೇಕಾದರೆ ಅದನ್ನು ನೀನೇ ಇಟ್ಟುಕೊ''

''ನನಗದು ಬೇಕು'' ಹುಡುಗ ಹೇಳಿದ, ''ಈಗ ನಾವು ಹೊಸ ಯೋಜನೆಗಳನ್ನು ಹಾಕಿಕೊಳ್ಳಬೇಕು''

''ನನಗಾಗಿ ಎಲ್ಲರೂ ಹುಡುಕಿದರೆ?''

''ಹೌದು, ಕರಾವಳಿಯ ಪಹರೆಗಾರರು ಹಾಗೂ ವಿಮಾನಗಳ ಮೂಲಕ ನಿನಗಾಗಿ ಹುಡುಕಿದರು.''

''ಸಾಗರವು ತುಂಬ ವಿಶಾಲವಾಗಿದೆ. ಅಲ್ಲದೆ ದೋಣಿ ತೀರ ಚಿಕ್ಕದಾಗಿದ್ದರಿಂದ ಸುಲಭವಾಗಿ ಕಾಣಿಸುವುದಿಲ್ಲ'' ಆತ ಹೇಳಿದ. ಸಾಗರದಲ್ಲಿರುವಾಗ ಒಬ್ಬನೇ ಮಾತಾಡುತ್ತ ಕುಳಿತುಕೊಳ್ಳುವ ಬದಲಾಗಿ ಜೊತೆಗೆ ಯಾರಾದರೂ ಇದ್ದರೆ ಬಹಳ ಒಳ್ಳೆಯದು ಎಂದ. ''ನಿನ್ನ ಅನುಪಸ್ಥಿತಿ ಒಂದು ದೊಡ್ಡ ಕೊರತೆ ಎನಿಸಿತು. ನೀನು ಏನನ್ನು ಹಿಡಿದೆ?''

''ಮೊದಲನೆಯ ದಿನ ಒಂದು, ಎರಡನೆಯ ದಿನ ಒಂದು ಹಾಗೂ ಮೂರನೆಯ ದಿನ ಎರಡು ಮೀನುಗಳನ್ನು ಹಿಡಿದೆ''

''ಶಹಭಾಷ್, ತುಂಬ ಸಂತೋಷ''

''ಮೀನು ಹಿಡಿಯಲು ನಾವು ಮತ್ತೆ ಜೊತೆಯಾಗಿ ಹೋಗೋಣ.''

''ಬೇಡ, ನಾನು ಸುದೈವಿಯಲ್ಲ. ನನ್ನ ಬಳಿ ಸುದೈವ ಎಂಬುದೇ ಇಲ್ಲ''

''ದೈವ ಹಾಳಾಗಿ ಹೋಗಲಿ, ಬೇಕಾದರೆ ಅದನ್ನು ನನ್ನ ಜೊತೆ ಕರ ತರುವೆ''

''ನಿನ್ನ ತಂದೆ ತಾಯಿ ಏನನ್ನುತ್ತಾರೋ?''

''ಅದರ ಗೊಡವೆ ನನಗಿಲ್ಲ. ನಿನ್ನೆ ಎರಡು ಮೀನು ಹಿಡಿದಿರುವೆ. ನಾವೀಗ ಕೂಡಿಯೇ ಮೀನು ಹಿಡಿಯಲು ಹೋಗೋಣ. ನನಗಿನ್ನೂ ಬಹಳ ಕಲಿತುಕೊಳ್ಳಬೇಕಿದೆ.''

''ಮೀನುಗಳನ್ನು ಕೊಲ್ಲಲು ನಮ್ಮ ಬಳಿ ಒಳ್ಳೆಯ ಆಯುಧವಿದ್ದರೆ ಒಳಿತು. ಅದನ್ನು ಯಾವಾಗಲೂ ದೋಣಿಯಲ್ಲಿಟ್ಟಿರಬೇಕು. ಹಳೆಯ ಫೋರ್ಡ್ ಗಾಡಿಯ ಸ್ಪ್ರಿಂಗ್ ತಟ್ಟೆಗಳಿಂದ ನೀನು ಅಲಗನ್ನು ಮಾಡಿಸಬಹುದು. ಗ್ವಾನಾ ಬಾಕೋವಾದಲ್ಲಿ ಅದನ್ನು ಮಸೆಯಲು ಕೊಡೋಣ. ಅದು ಮೊನಚಾಗಿರಬೇಕು. ಹಾಗೂ ಮುರಿಯದಂತೆ ಗಡುಸಾಗಿರಬೇಕು. ನನ್ನ ಚಾಕು ಮುರಿದು ಹೋಯಿತು, ಗೊತ್ತೆ?''

''ಮತ್ತೊಂದು ಚಾಕು ತಂದು ಸ್ಪ್ರಿಂಗ್ ತಟ್ಟೆಯ ಅಲಗು ಕೂಡ್ರಿಸುವೆ. ಈ ಭಯಂಕರ ಬಿರುಗಾಳಿ ಇನ್ನು ಎಷ್ಟು ದಿನ ಬೀಸಬಹುದು?''

''ಬಹುಶಃ ಮೂರು-ನಾಲ್ಕು ದಿನ ಅಥವಾ ಅದಕ್ಕೂ ಹೆಚ್ಚು.''

''ಈ ಮಧ್ಯೆ ನಾನು ಎಲ್ಲವನ್ನೂ ದುರಸ್ತಿ ಮಾಡಿ ಇಟ್ಟುಕೊಳ್ಳುವೆ. ನೀನು ನಿನ್ನ ಕೈಗಳನ್ನು ಗುಣಪಡಿಸಿಕೊ'' ಹುಡುಗ ಹೇಳಿದ.

''ಅವುಗಳನ್ನು ಹೇಗೆ ಉಪಚರಿಸಬೇಕೆಂಬುದು ತನಗೆ ಗೊತ್ತಿದೆ. ರಾತ್ರಿ ವಿಚಿತ್ರವಾದ ದ್ರವವನ್ನು ಕಾರಿಕೊಂಡೆ. ಎದೆಯೊಳಗೇನೋ ಚುಚ್ಚಿದ ಅನುಭವ ನನಗಾಯಿತು.''

''ಅದನ್ನೂ ಗುಣಪಡಿಸಿಕೊ, ಸದ್ಯ ಇನ್ನಷ್ಟು ಮಲಗು. ನಾನು ಹೋಗಿ ಸ್ವಚ್ಛವಾದ ಬಟ್ಟೆಗಳನ್ನು ಹಾಗೂ ತಿನ್ನಲು ಏನಾದರೂ ತರುವೆ.''

''ನಾನು ಓದಿರದ ಸುದ್ದಿ ಪತ್ರಿಕೆಗಳನ್ನು ತೆಗೆದುಕೊಂಡು ಬಾ'' ಆತ ಹೇಳಿದ.

''ನೀನು ಬೇಗ ಗುಣ ಹೊಂದು. ನಿನ್ನಿಂದ ಕಲಿತುಕೊಳ್ಳಬೇಕಾದ್ದು ಇನ್ನೂ ಬಹಳವಿದೆ. ನೀನೆಷ್ಟು ತೊಂದರೆ ಅನುಭವಿಸಿದೆ?''

''ಲೆಕ್ಕವಿಲ್ಲದಷ್ಟು'' ಆತ ಹೇಳಿದ.

''ನಾನು ಊಟ ಹಾಗೂ ಸುದ್ದಿ ಪತ್ರಿಕೆಗಳನ್ನು ತರುವೆ, ನೀನು ಚೆನ್ನಾಗಿ ವಿಶ್ರಮಿಸಿಕೊ. ಬರುವಾಗ ನಿನ್ನ ಕೈಗಳಿಗೆ ಏನಾದರೂ ಔಷಧಿ ತರುವೆ.

''ಮೀನಿನ ತಲೆ ತೆಗೆದುಕೊಳ್ಳಲು ಪೆಡ್ರಿಕೋಗೆ ಹೇಳಲು ಮರೆಯಬೇಡ.''

''ಇಲ್ಲ, ಮರೆಯುವುದಿಲ್ಲ.''

ಹುಡುಗ ಬಾಗಿಲು ದಾಟಿ, ಬೆಣಚುಗಲ್ಲುಗಳನ್ನು ತುಳಿಯುತ್ತ ಸಾಗಿದ್ದಂತೆ ಮತ್ತೆ ಅಳತೊಡಗಿದ್ದ.

ಆ ಮಧ್ಯಾಹ್ನ ಟೆರೇಸ್ ಹೊಟೇಲಿನಲ್ಲಿ ಪ್ರವಾಸಿಗರ ಔತಣ ಕೂಟವಿತ್ತು. ಸಮುದ್ರ ತೀರದಲ್ಲಿದ್ದ ಖಾಲಿ ಬೀರು ಕ್ಯಾನುಗಳು ಹಾಗೂ ಎಲುಬು ರಾಶಿಯ ಗುಡ್ಡೆಗಳ ಮಧ್ಯೆ ಮಹಿಳೆಯೊಬ್ಬಳು ತನ್ನ ದೃಷ್ಟಿ ತೂರಿಸಿ ಕುಳಿತಿದ್ದಳು. ಮೂಡಣ ಗಾಳಿಗೆ ಅಲ್ಲೋಲ ಕಲ್ಲೋಲವಾಗಿ ಹೊರ ಚೆಲ್ಲುತ್ತಿದ್ದ ಸಮುದ್ರದ ನೀರಲ್ಲಿ ಹೊಯ್ದಾಡುತ್ತಿದ್ದ ಬೃಹದಾಕಾರದ ಬಾಲವುಳ್ಳ, ಉದ್ದವಾದ, ಬಲಾಢ್ಯವಾದ ಅಸ್ಥಿಪಂಜರವನ್ನು ಕಂಡು ಆ ಮಹಿಳೆ ಅದರತ್ತ ಕೈ ಮಾಡಿ ಅಲ್ಲಿದ್ದ ಪರಿಚಾರಕನನ್ನು ಕೇಳಿದಳು, ''ಏನದು?''


''ಟೈಬುರಾನ್, ಶಾರ್ಕ್'' ಪರಿಚಾರಕ ನಡೆದುದನ್ನು ವಿವರಿಸಲು ಪ್ರಯತ್ನಿಸಿದ.

''ಶಾರ್ಕ್‌ಗಳಿಗೆ ಇಷ್ಟು ಚೆಂದದ ಬಾಲ ಇರುತ್ತದೆಂದು ತನಗೆ ಗೊತ್ತಿರಲಿಲ್ಲ.''

''ನನಗೂ ಗೊತ್ತಿರಲಿಲ್ಲ'' ಆ ಮಹಿಳೆಯ ಸಹಚರ ಹೇಳಿದ.

ರಸ್ತೆಯ ಮೇಲ್ಗಡೆಯಿದ್ದ ತನ್ನ ಮನೆಯಲ್ಲಿ ವೃದ್ಧ ಸಾಂಟಿಯಾಗೊ ಮತ್ತೆ ನಿದ್ದೆ ಹೋಗಿದ್ದ. ಆತನ ಮುಖದ ಮೇಲಿನ್ನೂ ನಿದ್ರೆಯ ಮಂಪರು ಇತ್ತು. ಹುಡುಗ ಆತನ ಬದಿಗೆ ಕುಳಿತು ಅವನನ್ನೇ ನೋಡುತ್ತಿದ್ದ. ವೃದ್ಧ ಸಾಂಟಿಯಾಗೊ, ಸಿಂಹಗಳ ಬಗ್ಗೆ ಕನಸು ಕಾಣುತ್ತಿದ್ದ. ●

Printed and Published by **B.S.SAVANOOR** on behalf of Loka Shikshana Trust at 'Samyukta Karnataka Press', Koppikar Road, Hubli - 580 020. (Phone: 64303), No. 2, Residency Road, Bangalore - 560 025 (Phone: 213265).
Managing Editor: K.SHAMARAO
Representatives:
Madras: S.K.Murthi (Phone: 414870)
New Delhi: V.K.Chopra (Phone: 7114785)
Registered with the Registrar of Newspapers for India
under No. 3633/57.


ಸುವಾಸಿತ ಹಾಗೂ ಸ್ವಾದಿಷ್ಟ
ಮುಖಶುದ್ಧಿಗಾಗಿ
CHAMAN
ಚಮನ್
ಚಮನ್ ಇದು ಅತ್ಯಂತ ಸ್ವಾದಿಷ್ಟ ಹಾಗೂ ರುಚಿಕರವಾದ ಚೂರ್ಣವಾಗಿದೆ. ಇದನ್ನು ಸೇವಿಸುವದರಿಂದ ಬಾಯಿಯು ಸುವಾಸಿತವಾಗುತ್ತದೆ.
ಚಮನದಲ್ಲಿ ಏನೆಲ್ಲ ಇದೆ?
ಈ ಚಮನದಲ್ಲಿ ಜೇಷ್ಠಮಧು, ಕೇಶರ, ಏಲಕ್ಕಿ. ಲವಂಗ, ಪತ್ರಿ, ಜಾಜಿಕಾಯಿ, ಬಡೆಸೋಪ್, ಮೆಂಥಾಲ್‌ಗಳಂಥ ಅನೇಕ ಬಗೆಯ ಸುಗಂಧಿತ ಹಾಗೂ ರುಚಿಕರ ವಸ್ತುಗಳು ಒಳಗೊಂಡಿರುವವು. ಅದಕ್ಕೆಂದೇ ಇದು ಚಿಕ್ಕಮಕ್ಕಳಿಂದ ವೃದ್ಧರವರೆಗೆ ಎಲ್ಲರಿಗೂ ಅಚ್ಚುಮೆಚ್ಚು.
ಸ್ಟಾರ್ ಕಂಪನಿ, ಬೆಳಗಾಂವ್

COVER PRINTED AT BHARAT PHOTO OFFSET WORKS, DHARWAD